ಶನಿವಾರ, ಸೆಪ್ಟೆಂಬರ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 254 | ಪುಟ 20

prajavani.net prajavani ● www.prajavani.net

ಯಕ್ಷಗಾನ ಪರಂಪರೆಯ ಅಸ್ಮಿತೆ

ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಗಮನ ದ್ವಾರದ ಸಮೀಪ ಗ್ರಾನೈಟ್‌ನಲ್ಲಿ ನಿರ್ಮಿಸಲಾದ ಯಕ್ಷಗಾನ ಪಾತ್ರದ ಪ್ರತಿಮೆಯನ್ನು ಶುಕ್ರವಾರ ಅನಾವರಣ ಮಾಡಲಾಯಿತು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದುರ್ಗಾ ಉತ್ಸವಕ್ಕೆ ಸಿದ್ಧತೆ

ಹರಿಯಾಣದ ಗುರುಗ್ರಾಮದಲ್ಲಿ ದುರ್ಗಾ ಪೂಜಾ ಉತ್ಸವಕ್ಕಾಗಿ ದುರ್ಗಾ ಮೂರ್ತಿಗೆ ಕಲಾವಿದರೊಬ್ಬರು ಅಂತಿಮ ರೂಪ ನೀಡಿದರು

ಸೆನ್ಸೆಕ್ಸ್ 81,904 | ನಿಫ್ಟಿ 25,114 | $/₹ 88.26 | ಚಿನ್ನ (Std. 10g) ₹1,15,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,35,600 (ಬೆಂಗಳೂರು)

‘ಮತಾಂತರಗೊಂಡವರು ಕ್ರೈಸ್ತರೇ’

16 ದಿನಗಳಲ್ಲಿ 7 ಕೋಟಿ ಜನರ ಸಮೀಕ್ಷೆಗೆ ತಯಾರಿ ● 1.75 ಲಕ್ಷ ಶಿಕ್ಷಕರು ಭಾಗಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರುಬ, ಬ್ರಾಹ್ಮಣ, ಲಿಂಗಾಯತ, ದಲಿತ, ವೈಶ್ಯ ಮತ್ತು ಒಕ್ಕಲಿಗರಲ್ಲಿ ಯಾರೇ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದರೂ ಅವರೆಲ್ಲರೂ ಕ್ರೈಸ್ತರೇ ಆಗುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಮೀಕ್ಷಾ ಕೈಪಿಡಿ ಬಿಡುಗಡೆ ಮಾಡಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮತಾಂತರಗೊಂಡವರ ಧರ್ಮವನ್ನು ಉಲ್ಲೇಖಿಸುವಾಗ ಅವರ ಮೂಲ ಜಾತಿಯ ಹೆಸರು ಸೇರಿಸಿರುವ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆಯಲ್ಲ’ ಎಂಬ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, ‘ಮತಾಂತರಗೊಂಡವರು ಕ್ರೈಸ್ತರೇ ಆಗುತ್ತಾರೆ’ ಎಂದರು.

‘ಸಮೀಕ್ಷೆಗೆ ಬಂದಾಗ ಏನು ಬರೆಯುತ್ತಾರೋ ಬರೆಯಲಿ. ಮತಾಂತರಗೊಂಡವರು ಅಥವಾ ಜಾತಿ-ಧರ್ಮದ ಹೆಸರಿನ ಗೊಂದಲ ಇದ್ದರೆ ಅದನ್ನು ಹಿಂದುಳಿದ ವರ್ಗಗಳ ಆಯೋಗ ವಿಶ್ಲೇಷಣೆ ನಡೆಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತದೆ. ನಾವು ಸಾಮಾಜಿಕ ಮತ್ತು ಶೈಕ್ಷಣಿಕ ಮಾಹಿತಿ ಮಾತ್ರ ಸಂಗ್ರಹಿಸುತ್ತಿದ್ದೇವೆ’ ಎಂದು ಹೇಳಿದರು.

ಮುಖ್ಯಾಂಶಗಳು

- ಸಾಮಾಜಿಕ, ಶೈಕ್ಷಣಿಕ ಮಾಹಿತಿ ಮಾತ್ರ ಸಂಗ್ರಹ
- ಗೊಂದಲ ಇದ್ದರೆ ಆಯೋಗ ವಿಶ್ಲೇಷಿಸಲಿದೆ

‘ಹಿಂದುಳಿದ ವರ್ಗಗಳ ಆಯೋಗ ಪ್ರಕಟಿಸಿದ್ದ ಜಾತಿ ಪಟ್ಟಿಯಲ್ಲಿ ಕುರುಬ ಕ್ರಿಶ್ಚಿಯನ್. ಕುಂಬಾರ ಕ್ರಿಶ್ಚಿಯನ್, ಮಡಿವಾಳ ಕ್ರಿಶ್ಚಿಯನ್, ನೇಕಾರ ಕ್ರಿಶ್ಚಿಯನ್ ಸೇರಿ 100ಕ್ಕೂ ಹೆಚ್ಚು ಜಾತಿಗಳನ್ನು ಕ್ರಿಶ್ಚಿಯನ್ ಧರ್ಮದ ಹೆಸರಿನಲ್ಲಿ ಸೇರಿಸಲಾಗಿದೆ’ ಎಂದು ಬಿಜೆಪಿ ನಾಯಕರು ಆರೋಪಿಸಿದ್ದರು.

‘ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರು ನಮ್ಮ ಜಾತಿಯೊಳಗೆ ನುಸುಳಿ ನಮ್ಮ ಪಾಲಿನ ಮೀಸಲಾತಿಯನ್ನು ಕಬಳಿಸುವ ಹುನ್ನಾರಕ್ಕೆ ಸರ್ಕಾರವೇ ಪ್ರೋತ್ಸಾಹ ನೀಡುತ್ತಿದೆ. ಸರ್ಕಾರ ಬಿಡುಗಡೆಗೊಳಿಸಿದ ಪಟ್ಟಿಯಲ್ಲಿ ಕ್ಯಾಥೋಲಿಕ್, ಪ್ರೊಟೆಸ್ಟಂಟ್, ಪೆಂಟಕೋಸ್ಟ್ ಇತ್ಯಾದಿ ಮೂಲ ಕ್ರೈಸ್ತ ಪಂಗಡಗಳ ಹೆಸರೇ ಇಲ್ಲ. ಅವರಿಗೆ ಕೇವಲ ಕ್ರೈಸ್ತರೆಂದು ಗುರುತಿಸಿಕೊಳ್ಳಲು ಅವಕಾಶ ನೀಡಿದೆ’ ಎಂದು ಬಿಜೆಪಿ ನಾಯಕರು ದೂರಿದ್ದರು.

‘ಈ ರೀತಿಯ ಜಾತಿ ಪಟ್ಟಿಗಳು ಸರ್ಕಾರದ ಅಧಿಕೃತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಪಟ್ಟಿಯಲ್ಲಿ ಇವೆಯೇ? ಈ ಪಟ್ಟಿ ಕಾಂತರಾಜ, ನಾಗಮೋಹನದಾಸ್ ಸಮೀಕ್ಷೆಯಲ್ಲಿ ಏಕೆ ಇರಲಿಲ್ಲ. ಯಾವ ಉದ್ದೇಶದಿಂದ ಈಗ ಈ ರೀತಿ ಕ್ರೈಸ್ತ ಜಾತಿಗಳನ್ನು ಸೇರಿಸಲಾಗಿದೆ. ತಕ್ಷಣ ಈ ಪಟ್ಟಿ ಕೈಬಿಡಬೇಕು’ ಎಂದು ಬಿಜೆಪಿ ನಾಯಕರ ನಿಯೋಗ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್ ಅವರನ್ನು ಒತ್ತಾಯಿಸಿತ್ತು.

ವೀರಶೈವ- ಲಿಂಗಾಯತ.. ಏನಾದರೂ ಬರೆಯಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ವೀರಶೈವ–ಲಿಂಗಾಯತರು ಧರ್ಮ ಮತ್ತು ಜಾತಿಯನ್ನು ತಮಗೆ ಹೇಗೆ ಬೇಕೋ ಹಾಗೆ ಬರೆಸಿಕೊಳ್ಳಲಿ’ ಎಂದು ಸಿದ್ದರಾಮಯ್ಯ ಹೇಳಿದರು.

‘ವೀರಶೈವ ಲಿಂಗಾಯತರು ಹಿಂದೂ ಧರ್ಮ ಎಂಬುದನ್ನು ಬಳಸದೇ ಲಿಂಗಾಯತ ಧರ್ಮ ಎಂದೇ ನಮೂದಿಸಬೇಕು ಎಂದು ಕೆಲವರು ಪ್ರಚಾರ ಮಾಡುತ್ತಿದ್ದಾರೆ. ಆದರೆ, ಧರ್ಮದ ಪಟ್ಟಿಯಲ್ಲಿ ಲಿಂಗಾಯತ ಧರ್ಮದ ಉಲ್ಲೇಖ ಇಲ್ಲ. ಹೀಗಾಗಿ ಏನೆಂದು ಬರೆಸಬೇಕೆಂಬ ಗೊಂದಲಕ್ಕೆ ಆ ಸಮುದಾಯದ ಜನ ಸಿಲುಕಿದ್ದಾರೆ’ ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಉತ್ತರಿಸಿದರು.

‘ಅವರು ‘ವೀರಶೈವ–ಲಿಂಗಾಯತ’ ಧರ್ಮ ಅಂತ ಬರೆಯಿಸಲಿ, ‘ವೀರಶೈವ’ ಧರ್ಮ ಅಂತಾನೆ ಬರೆಯಿಸಲಿ, ಕೇವಲ ವೀರಶೈವ ಅಥವಾ ಲಿಂಗಾಯತ ಅಂತ ಬೇಕಾದರೂ ಬರೆಯಿಸಿಕೊಳ್ಳಲಿ. ನಮಗೆ ಬೇಕಾಗಿರುವುದು ಅವರ ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ ಮಾತ್ರ. ಏನು ಬೇಕಾದರೂ ಬರೆಯಿಸಿಕೊಳ್ಳಲಿ’ ಎಂದು ಹೇಳಿದರು. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಲಿಂಗಾಯತ ಧರ್ಮ ಎಂದೇ ಬರೆಯಿಸಬೇಕು ಎಂದು ಆ ಸಮುದಾಯದ ಕೆಲವು ಮಠಾಧೀಶರು ಮತ್ತು ಪ್ರಮುಖರು ಪ್ರಚಾರ ನಡೆಸುತ್ತಿದ್ದಾರೆ.

ಆದರೆ, ಹಿಂದುಳಿದ ವರ್ಗಗಳ ಆಯೋಗ ಪ್ರಕಟಿಸಿರುವ ಸಮೀಕ್ಷೆಯ ಕೈಪಿಡಿಯಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ತ, ಜೈನ, ಸಿಖ್, ಬೌದ್ಧ, ಪಾರ್ಸಿ, ನಾಸ್ತಿಕ, ಗೊತ್ತಿಲ್ಲ, ತಿಳಿಸಲು ನಿರಾಕರಿಸುತ್ತಾರೆ ಮತ್ತು ಇತರೆ ಎಂದು ಇದೆ. ‘ಪ್ರಮುಖ 7 ಧರ್ಮಗಳ ಹೊರತಾಗಿ ಇತರೆ ಧರ್ಮಗಳಿದ್ದಲ್ಲಿ, ಅವುಗಳನ್ನು ಇತರೆ ವಿಭಾಗದಲ್ಲಿ ಕೋಡ್ ಸಂಖ್ಯೆ 11ರಲ್ಲಿ ನಮೂದಿಸಬಹುದು’ ಎಂದು ಸೂಚಿಸಲಾಗಿದೆ.

ಇದೇ 22ರಿಂದ ಸಮೀಕ್ಷೆ ಆರಂಭವಾಗಲಿದ್ದು, ಶೇ 100ರಷ್ಟು ಸಮೀಕ್ಷೆ ನಡೆಸುವ ಉದ್ದೇಶವಿದೆ. ಯಾರೊಬ್ಬರೂ ಸಮೀಕ್ಷೆಯನ್ನು ತಪ್ಪಿಸಿಕೊಳ್ಳಬಾರದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ನೂತನ ಪ್ರಧಾನಿ...

ಪಿಟಿಐ ಚಿತ್ರ

ನೇಪಾಳದಲ್ಲಿ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಸುಶೀಲಾ ಕಾರ್ಕಿ ಅವರು ನೂತನ ಪ್ರಧಾನಿಯಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡರು. ಅಧ್ಯಕ್ಷ ರಾಮಚಂದ್ರ ಪೌದೆಲ್ ಅವರು ಪ್ರಮಾಣ ವಚನ ಬೋಧಿಸಿದರು

▶10

ಮಣಿಪುರಕ್ಕೆ ಇಂದು ಮೋದಿ

₹8,500 ಕೋಟಿ ಮೊತ್ತದ 31 ಯೋಜನೆಗಳಿಗೆ ಚಾಲನೆ

ಇಂಫಾಲ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಆರಂಭಗೊಂಡು ಎರಡಕ್ಕೂ ಹೆಚ್ಚು ವರ್ಷಗಳ ಬಳಿಕ ಅಲ್ಲಿಗೆ ಶನಿವಾರ ಭೇಟಿಕೊಡಲಿದ್ದಾರೆ.

ಅಲ್ಲಿ ಅಂದಾಜು ₹8,500 ಕೋಟಿ ಮೊತ್ತದ 31 ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ಅವರು ನೆರವೇರಿಸಲಿದ್ದಾರೆ.

ರಾಜ್ಯದಲ್ಲಿ ಬುಡಕಟ್ಟು ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವೆ 2023ರಲ್ಲಿ ನಡೆದ ಜನಾಂಗೀಯ ಸಂಘರ್ಷ ದಲ್ಲಿ ಸುಮಾರು 260 ಮಂದಿ ಮೃತಪಟ್ಟಿದ್ದರು. ಇಷ್ಟೆಲ್ಲಾ ಹಿಂಸಾಚಾರ ನಡೆದರೂ ಪ್ರಧಾನಿ ಮೋದಿ ಅವರು ಸಂಘರ್ಷ ಪೀಡಿತ ರಾಜ್ಯಕ್ಕೆ ಭೇಟಿ ನೀಡಲು ಮನಸ್ಸು ಮಾಡುತ್ತಿಲ್ಲ ಎಂದು ವಿರೋಧ ಪಕ್ಷಗಳು ಟೀಕೆ ಮಾಡಿದ್ದವು.

ಎರಡು ಕಾರ್ಯಕ್ರಮ: ಕುಕಿ ಸಮುದಾಯದ ಜನರು ಹೆಚ್ಚಿರುವ ಚುರಾಚಾಂದಪುರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಅವರು ₹7,300 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

‘ಮೋದಿ ಭೇಟಿ ದೊಡ್ಡ ವಿಷಯವಲ್ಲ’

ಜುನಾಗಢ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡುತ್ತಿರುವುದು ಮತ ಕಳವಿಗಿಂತ ಪ್ರಮುಖ ವಿಷಯವಲ್ಲ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಪ್ರತಿಕ್ರಿಯಿಸಿದ್ದಾರೆ.

ಗುಜರಾತ್‌ನ ಜುನಾಗಢ ಜಿಲ್ಲೆಯ ಕೆಶೋದ್ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್, ‘ಮಣಿಪುರ ತೊಂದರೆಯಲ್ಲಿದೆ ಎನ್ನುವುದು ನಿಜ. ಆದರೆ ಪ್ರಧಾನಿ ಈಗ ಅಲ್ಲಿಗೆ ಹೋಗಲು ನಿರ್ಧರಿಸಿದ್ದಾರೆ. ಅದಕ್ಕಿಂತಲೂ ಸದ್ಯಕ್ಕೆ ‘ಮತ ಕಳವು’ ದೇಶದ ಪ್ರಮುಖ ವಿಷಯವಾಗಿದೆ’ ಎಂದರು.

‘ಕೀಲಿಕೈ, ಬಾಟಲಿ ತರಬೇಡಿ’

ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸುವ ಕಾರ್ಯಕ್ರಮಗಳಿಗೆ ಬರುವ ಸಾರ್ವಜನಿಕರು ಕೀಲಿಕೈ, ನೀರಿನ ಬಾಟಲಿ, ಕೈಚೀಲ, ಕರವಸ್ತ್ರ, ಛತ್ರಿ, ಲೈಟರ್, ಬೆಂಕಿಪೆಟ್ಟಿಗೆ, ಬಟ್ಟೆಯ ತುಣುಕು, ಚೂಪಾದ ವಸ್ತು, ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ತರಬಾರದು ಎಂದು ಮಣಿಪುರ ಆಡಳಿತ ಸೂಚನೆ ನೀಡಿದೆ.

ಕಾರ್ಯಕ್ರಮಗಳು ನಡೆಯುವ ಸ್ಥಳಗಳಿಗೆ 12 ವರ್ಷದೊಳಗಿನ ಮಕ್ಕಳು ಮತ್ತು ಆರೋಗ್ಯ ಸಮಸ್ಯೆ ಇರುವವರನ್ನು ಕರೆದುಕೊಂಡು ಬಾರದಂತೆ ಜನರಿಗೆ ಸಲಹೆ ನೀಡಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಗಣೇಶಮೂರ್ತಿ ವಿಸರ್ಜನೆ ವೇಳೆ ಅವಘಡ: 25ಕ್ಕೂ ಹೆಚ್ಚು ಜನರಿಗೆ ಗಾಯ

ಮೆರವಣಿಗೆಯತ್ತ ಲಾರಿ ನುಗ್ಗಿ 8 ಸಾವು

ಪ್ರಜಾವಾಣಿ ವಾರ್ತೆ

ಹಾಸನ: ತಾಲ್ಲೂಕಿನ ಮೊಸಳೆ ಹೊಸಹಳ್ಳಿಯಲ್ಲಿ ಶುಕ್ರವಾರ ರಾತ್ರಿ ಗಣೇಶ ವಿಸರ್ಜನಾ ಮೆರವಣಿಗೆ ಮೇಲೆ ಕ್ಯಾಂಟರ್ ನುಗ್ಗಿದ್ದು, 8 ಮಂದಿ ಮೃತಪಟ್ಟಿದ್ದಾರೆ.

‘25ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ‘ಮೃತರ ಸಂಖ್ಯೆ ಹೆಚ್ಚಾಗಬಹುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಹೆದ್ದಾರಿ 373ರಲ್ಲಿ ಮೆರವಣಿಗೆ ಸಾಗುತ್ತಿರುವಾಗ ಅಪಘಾತ ಸಂಭವಿಸಿದೆ. ಹೆದ್ದಾರಿಯಲ್ಲಿ ಸಾಗುತ್ತಿದ್ದ ಕ್ಯಾಂಟರ್‌ಗೆ ಅಡ್ಡ ಬಂದ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಚಾಲಕ ಯತ್ನಿಸಿದಾಗ ನಿಯಂತ್ರಣ ತಪ್ಪಿ ರಸ್ತೆ ವಿಭಜಕ ದಾಟಿದ ಕ್ಯಾಂಟರ್, ಮೆರವಣಿಗೆ ಮೇಲೆ ಎರಗಿ ಅಪಘಾತವಾಗಿದೆ.

ಮೆರವಣಿಗೆ ಮೇಲೆ ಹರಿದ ಕ್ಯಾಂಟರ್

ಗಾಯಾಳುಗಳನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಐವರ ಸ್ಥಿತಿ ಗಂಭೀರವಾಗಿದೆ. ಅಪಘಾತದಿಂದಾಗಿ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಅಪಘಾತದಿಂದಾಗಿ ಸ್ಥಳದಲ್ಲಿ ಗೊಂದಲ ಏರ್ಪಟ್ಟಿತ್ತು.

ಸ್ಥಳಕ್ಕೆ ಭೇಟಿ ನೀಡಿದ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ‘ಇದೊಂದು ದುರದೃಷ್ಟಕರ ಘಟನೆ. ನಡೆಯಬಾರದಿತ್ತು. ಸೂಕ್ತ ತನಿಖೆಯ ನಂತರ ಸ್ಪಷ್ಟ ಕಾರಣ ತಿಳಿಯಲಿದೆ’ ಎಂದರು.

ಸ್ಥಳಕ್ಕೆ ಶಾಸಕ ಎಚ್‌.ಡಿ. ರೇವಣ್ಣ ಭೇಟಿ ನೀಡಿ ಪರಿಶೀಲಿಸಿದರು.

₹5 ಲಕ್ಷ ಪರಿಹಾರ: ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ‘ಎಕ್ಸ್’ನಲ್ಲಿ ಪ್ರಕಟಿಸಿದ್ದಾರೆ. ‘ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ’ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಲತಾಕುಮಾರಿ, ಎಸ್‌ಪಿ ಮೊಹಮ್ಮದ್ ಸುಜೀತಾ ಭೇಟಿ ನೀಡಿದ್ದಾರೆ. ಕ್ಯಾಂಟರ್ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಲಾಗುತ್ತಿದೆ.

If you believe an education should offer more than just a degree.
If you seek holistic learning that challenges convention.
If you dream of leaving the world better than you found it.
If you seek mentors who inspire, not just instruct.

If you're restless for opportunities that match your ambition.
If you want to master your field, not just graduate in it.
If you're driven by a higher purpose, this is for you.

Azim Premji University

Campuses: **Bengaluru | Bhopal | Ranchi**   Programmes: **Undergraduate | Postgraduate | Diplomas & Certificates**

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ

ಕಾವೇರಿ ನೀರು: ಸೆ.15ರಿಂದ 3 ದಿನ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಸೆ.15, 16 ಮತ್ತು 17ರಂದು ಕಾವೇರಿ ನೀರು ಪೂರೈಕೆ ಹಾಗೂ ಸಂಚಾರಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಸ್ಥಗಿತಗೊಳ್ಳಲಿದೆ.

ವಿವಿಧ ಹಂತಗಳ ಜಲರೇಚಕ ಯಂತ್ರಾಗಾರ ಸ್ಥಗಿತಗೊಳ್ಳುವುದರಿಂದ ಬೆಂಗಳೂರು ನಗರಾದ್ಯಂತ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ತುರ್ತು ಸಂದರ್ಭದಲ್ಲಿ ಮಾತ್ರ ಸಂಚಾರಿ ಕಾವೇರಿ ಯೋಜನೆ ಟ್ಯಾಂಕರ್‌ಗಳನ್ನು ನೀರು ಸರಬರಾಜಿಗಾಗಿ ಬಳಸಿಕೊಳ್ಳಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಾವೇರಿ 5ನೇ ಹಂತದ ಜಲರೇಚಕ ಯಂತ್ರಾಗಾರಗಳು(ಪಂಪಿಂಗ್ ಸ್ಟೇಶನ್) ಸೆ.15ರ ಬೆಳಿಗ್ಗೆ 1ರಿಂದ ಸೆ.17ರ ಮಧ್ಯಾಹ್ನ 1ರವರೆಗೆ, ಕಾವೇರಿ ನೀರು ಸರಬರಾಜು ಯೋಜನೆಯ ಹಂತ-1, ಹಂತ-02, ಹಂತ-3, ಹಂತ-4ರ 1ನೇ ಘಟ್ಟ ಮತ್ತು 2ನೇ ಘಟ್ಟಗಳ ಜಲರೇಚಕ ಯಂತ್ರಾಗಾರಗಳನ್ನು ಸೆ.16ರ ಬೆಳಿಗ್ಗೆ 6ರಿಂದ ಸೆ.17ರ ಬೆಳಿಗ್ಗೆ 6ರವರೆಗೆ ಸ್ಥಗಿತಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ.

ಈ ವೇಳೆ ಟ್ಯಾಂಕರ್ ಸೇವೆಯೂ ಸಿಗದೇ ಇರುವುದರಿಂದ ಕಾವೇರಿ ನೀರು ಸರಬರಾಜಾಗುವ ಪ್ರದೇಶಗಳ ನಾಗರಿಕರು ಮುಂಜಾಗ್ರತೆಯಾಗಿ ಅಗತ್ಯವಿರುವ ನೀರನ್ನು ಸಂಗ್ರಹಣೆ ಮಾಡಿಕೊಳ್ಳಲು ಸೂಚಿಸಿದ್ದಾರೆ.

ಸ್ವಚ್ಛತೆ, ಒತ್ತುವರಿ ತೆರವು ಕಾರ್ಯ

ಐದೂ ನಗರ ಪಾಲಿಕೆಗಳ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

4,822 ಸಂಚಾರ ಪೊಲೀಸ್ ವಿಭಾಗದಿಂದ ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿ

1,861 ಇದುವರೆಗೆ ಮುಚ್ಚಲಾಗಿರುವ ರಸ್ತೆ ಗುಂಡಿ

2,961 ಇನ್ನೂ ಮುಚ್ಚಬೇಕಿರುವ ರಸ್ತೆ ಗುಂಡಿ

ಬೆಂಗಳೂರು: ಐದೂ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರ ನಡೆಯಿತು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಚಿಕ್ಕಪೇಟೆ, ದೊಮ್ಮಲೂರು ಮೇಲ್ಸೇತುವೆ, ಚಾಮರಾಜಪೇಟೆ, ದೊಮ್ಮಲೂರು ಮೊದಲನೇ ಹಂತ, ಗಾಂಧಿನಗರ, ಮೆಜೆಸ್ಟಿಕ್ ಸುತ್ತಲಿನ ಪ್ರದೇಶ, ಇಂದಿರಾನಗರದ 80 ಅಡಿ ರಸ್ತೆ (ವಿವೇಕಾನಂದ ಮೆಟ್ರೊ ನಿಲ್ದಾಣದ ಕಡೆ) ಹಾಗೂ ವಸಂತನಗರ ಉಪ ವಿಭಾಗ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಾಚರಣೆ ನಡೆಯಿತು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಮೂಡಲ ಪಾಳ್ಯ, ಕಿತ್ತೂರು ರಾಣಿ ಚನ್ನಮ್ಮ ಉದ್ಯಾನ ಹತ್ತಿರ, ಹೇರೋಹಳ್ಳಿ ಉಪ ವಿಭಾಗದ ವ್ಯಾಪ್ತಿ, ಕಾವೇರಿಪುರ, ಕೊಮ್ಮಘಟ್ಟ ರಸ್ತೆ ಹಾಗೂ ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಾಚರಣೆ ನಡೆಸಲಾಯಿತು. ಏಕಬಳಕೆ ಪ್ಲಾಸ್ಟಿಕ್ ತಪಾಸಣೆ ನಡೆಸಿ, ಎರಡು ಪ್ರಕರಣಗಳಲ್ಲಿ ₹80 ಸಾವಿರ ದಂಡ ವಸೂಲಿ ಮಾಡಿ, 650 ಕೆ.ಜಿ ಪ್ಲಾಸ್ಟಿಕ್ ವಶಕ್ಕೆ ಪಡೆಯಲಾಯಿತು.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಎಚ್‌ಬಿಆರ್ ಲೇಔಟ್ ಉಪ ವಿಭಾಗದಲ್ಲಿ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಯಿತು. ಏಕಬಳಕೆ ಪ್ಲಾಸ್ಟಿಕ್ ತಪಾಸಣೆ ನಡೆಸಿ, ₹1 ಲಕ್ಷ ದಂಡ ವಸೂಲಿ ಮಾಡಿ 414 ಕೆ.ಜಿ ಏಕಬಳಕೆ ಪ್ಲಾಸ್ಟಿಕ್ ವಶಕ್ಕೆ ಪಡೆದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಅವಲಹಳ್ಳಿ 80 ಅಡಿ ರಸ್ತೆಯ ಟಿಪ್ಪು ವೃತ್ತದಿಂದ ಅಂಜನಾಪುರದ 80 ಅಡಿ ರಸ್ತೆಯವರೆಗೆ, ಜಯನಗರದ 32ನೇ ಇ-ಅಡ್ಡರಸ್ತೆಯ 18ನೇ ಮುಖ್ಯ-ರಸ್ತೆಯಿಂದ ಈಸ್ಟ್ ಎಂಡ್ ಮುಖ್ಯ-ರಸ್ತೆಯವರೆಗೆ, ಪದ್ಮನಾಭನಗರದ ಪುಟ್ಟಲಿಂಗಯ್ಯ ರಸ್ತೆಯ ದೇವೇಗೌಡ ಪೆಟ್ರೋಲ್ ಬಂಕ್‌ನಿಂದ ಗೌಡನಪಾಳ್ಯದ ಶ್ರೀನಿವಾಸ ಟಾಕೀಸ್‌ವರೆಗೆ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಯಿತು. ಏಕಬಳಕೆ ಪ್ಲಾಸ್ಟಿಕ್ ತಪಾಸಣೆ ನಡೆಸಿ, 19 ಪ್ರಕರಣಗಳಲ್ಲಿ ₹1.40 ದಂಡ ವಸೂಲಿ ಮಾಡಿ, 120 ಕೆ.ಜಿ ಏಕಬಳಕೆ ಪ್ಲಾಸ್ಟಿಕ್ ವಶಕ್ಕೆ ಪಡೆಯಲಾಯಿತು.

ರಸ್ತೆ ಗುಂಡಿ ಮುಚ್ಚಿ: ವೆಟ್ ಮಿಕ್ಸ್ ಮ್ಯಾಕಡಮ್ ಬಳಸಿ ರಸ್ತೆ ಗುಂಡಿ ಮುಚ್ಚುವಂತೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿ ಕಾಮಗಾರಿಗಳ ಸ್ಥಿತಿಯನ್ನು ಪರಿಶೀಲಿಸಿದ ಆಯುಕ್ತರು, ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳ ಸಂಪೂರ್ಣ ವರದಿ ನೀಡಲು ತಿಳಿಸಿದರು.

ಕೆಂಗೇರಿಯಲ್ಲಿ ನಗರ ಪಾಲಿಕೆಗಳ ಸಿಬ್ಬಂದಿ ಸ್ವಚ್ಛತಾ ಕಾರ್ಯ ನಡೆಸಿದರು

ರಸ್ತೆ ದುರಸ್ತಿಗೆ ಸೂಚನೆ

ಜಿಬಿಎ ವ್ಯಾಪ್ತಿಯಲ್ಲಿ ವೈಟ್ ಟಾಪಿಂಗ್, ಬ್ಲ್ಯಾಕ್ ಟಾಪಿಂಗ್ ಪ್ರಗತಿಯಲ್ಲಿರುವ ರಸ್ತೆಗಳಲ್ಲಿ ಗುತ್ತಿಗೆ ಪಡೆದಿರುವವರಿಂದಲೇ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು. 400 ಕಿ.ಮೀ ಉದ್ದದ ರಸ್ತೆಯಲ್ಲಿ ಬ್ಲ್ಯಾಕ್ ಟಾಪಿಂಗ್ ಹಾಗೂ 150 ಕಿ.ಮೀ ಉದ್ದದ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಂಡಿದ್ದು, ಆ ಎಲ್ಲಾ ರಸ್ತೆಗಳನ್ನು ಗುಂಡಿಗಳಿಲ್ಲದಂತೆ ನಿರ್ವಹಣೆ ಮಾಡಲು ಗುತ್ತಿಗೆದಾರರಿಗೆ ಜವಾಬ್ದಾರಿ ನೀಡಬೇಕು ಎಂದರು.

ಕಟ್ಟಡ ಧ್ವಂಸ: ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶುಕ್ರವಾರ ಕಾರ್ಯಾಚರಣೆ ನಡೆಸಿ, ಎಚ್.ಎ.ಎಲ್. 2ನೇ ಹಂತದಲ್ಲಿ ₹3.24 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ದೂಕನಹಳ್ಳಿ ಗ್ರಾಮದ ಸರ್ವೆ ನಂ. 51ರಲ್ಲಿನ ನಿವೇಶನ ಸಂಖ್ಯೆ 777/ಯುನಲ್ಲಿದ್ದ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ, 1080 ಚದರ ಅಡಿ ವಿಸ್ತೀರ್ಣದ ಕೋಟ್ಯಂತರ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಸ್ಥಳೀಯ ಪೊಲೀಸರ ಸಹಾಕರದೊಂದಿಗೆ ನಡೆಸಿದ ಕಾರ್ಯಾಚರಣೆ ವೇಳೆ ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪೂರ್ವ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಜರಿದ್ದರು.

ಎಚ್.ಎ.ಎಲ್ 2ನೇ ಹಂತದಲ್ಲಿ ಜೆಸಿಬಿ ಮೂಲಕ ಕಟ್ಟಡ ತೆರವು ಕಾರ್ಯಾಚರಣೆ ನಡೆಯಿತು

ಸಮೀಕ್ಷೆ: ‘ಹಿಂದೂ ಸ್ವಕುಳಸಾಳಿ’ ಎಂದು ನಮೂದಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆ.22ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಹಮ್ಮಿಕೊಂಡಿದೆ. ಈ ಸಂದರ್ಭದಲ್ಲಿ ಸ್ವಕುಳಸಾಳಿ ಸಮಾಜದವರು ‘ಹಿಂದೂ ಸ್ವಕುಳಸಾಳಿ’ ಎಂದೇ ನಮೂದಿಸಬೇಕು ಎಂದು ‘ಕರ್ನಾಟಕ ರಾಜ್ಯ ಸ್ವಕುಳಸಾಳಿ ಸಮಾಜ ನೇಕಾರ’ ಸಂಘಟನೆ ಮನವಿ ಮಾಡಿದೆ.

ಧರ್ಮದ ಕಾಲಂನಲ್ಲಿ ‘ಹಿಂದೂ’, ಜಾತಿ ಕಾಲಂನಲ್ಲಿ ‘ಸ್ವಕುಳಸಾಳಿ’, ಕುಲಕಸುಬು ಕಾಲಂನಲ್ಲಿ ‘ನೇಕಾರಿಕೆ’ ನಮೂದಿಸಲು ಸಂಘಟನೆಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಂಘಟನೆಯ ಅಧ್ಯಕ್ಷ ಚಂದ್ರಕಾಂತ ಭಂಡಾರೆ ತಿಳಿಸಿದ್ದಾರೆ.

‘ಪ್ಲಾಸ್ಟಿಕ್ ಮುಕ್ತ ನಗರಕ್ಕೆ ನಿತ್ಯ ಕಾರ್ಯಾಚರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರವನ್ನು ಪ್ಲಾಸ್ಟಿಕ್ ಮುಕ್ತವನ್ನಾಗಿ ಮಾಡುವ ಉದ್ದೇಶದಿಂದ 27 ತಂಡಗಳನ್ನು ರಚಿಸಿ ನಿತ್ಯ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

‘ಬಿಎಸ್‌ಡಬ್ಲ್ಯು ಎಂಎಲ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರ ನೇತೃತ್ವದಲ್ಲಿ ರಚಿಸಿರುವ ತಂಡಗಳು ಪ್ಲಾಸ್ಟಿಕ್ ತಯಾರಕರು, ಸಗಟು ಮಾರಾಟದ ಸ್ಥಳಗಳ ಮೇಲೆ ದಾಳಿ ಮಾಡಿ ಏಕ ಬಳಕೆಯ ಪ್ಲಾಸ್ಟಿಕ್ ವಶಪಡಿಸಿಕೊಂಡಿವೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾಹಿತಿ ನೀಡಿದರು.

ಸೆ.3ರಿಂದ ಕಾರ್ಯಾಚರಣೆ ಆರಂಭವಾಗಿದ್ದು, 281 ಸಗಟು ಮಾರಾಟಗಾರರಿಂದ ₹19.66 ಲಕ್ಷ ದಂಡ, 2,842 ಚಿಲ್ಲರೆ ವ್ಯಾಪಾರಿಗಳಿಂದ ₹18.41 ಲಕ್ಷ ದಂಡ ವಸೂಲಿ ಮಾಡಲಾಗಿದೆ. ₹49.14 ಲಕ್ಷ ಮೌಲ್ಯದ 24.57 ಟನ್ ಏಕಬಳಕೆಯ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದು, ಒಟ್ಟು ₹38.07 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ತಿಳಿಸಿದರು.

‘ವಾರ್ಡ್ ಮಟ್ಟದಲ್ಲಿ ವಾರ್ಡ್ ಮಾರ್ಷಲ್ ಮತ್ತು ವಾರ್ಡ್ ಕಿರಿಯ ಆರೋಗ್ಯ ಪರಿವೀಕ್ಷಕರು ಪ್ರತಿದಿನ ‘ಪ್ಲಾಸ್ಟಿಕ್ ರೈಡ್’ ನಡೆಸಿ, ಒಬ್ಬರಿಗೆ ಕನಿಷ್ಠ ₹2,000 ದಂಡ ವಿಧಿಸುವಂತೆ ಆದೇಶಿಸಲಾಗಿದೆ’ ಎಂದರು.

ಸಮಯ ಪರಿಷ್ಕರಣೆ ಯಶಸ್ವಿ: ನಗರದಲ್ಲಿ ಸ್ವಚ್ಛತಾ ಕಾರ್ಯಗಳ ಗುಣಮಟ್ಟವನ್ನು ಹೆಚ್ಚಿಸಲು ವಿವಿಧ ವಾರ್ಡ್‌ಗಳಲ್ಲಿ ಆಟೊ ಟಿಪ್ಪರ್‌ಗಳ ಮಸ್ಟರಿಂಗ್ (ಹಾಜರಾತಿ ದಾಖಲೆ) ಸಮಯ ಪರಿಷ್ಕರಿಸಲಾಗಿದೆ. ಆಗಸ್ಟ್ 25ರಿಂದ ವಾಹನಗಳ ಸ್ಕ್ಯಾನಿಂಗ್ ಸಮಯವನ್ನು ಬೆಳಿಗ್ಗೆ 5.30ರಿಂದ 6.30ರವರೆಗೆ ನಿಗದಿಪಡಿಸಲಾಗಿದೆ.

ಒಂದು ಗಂಟೆ ಮುಂಚಿತವಾಗಿ ತ್ಯಾಜ್ಯ ಸಂಗ್ರಹಣೆ ಆರಂಭವಾಗುವುದರಿಂದ, ಜನರು ಕೆಲಸಕ್ಕೆ ಹೊರಡುವ ಮೊದಲು ತ್ಯಾಜ್ಯವನ್ನು ಆಟೊ ಟಿಪ್ಪರ್‌ಗಳಿಗೆ ನೀಡುವುದರ ಮೂಲಕ ಎಲ್ಲೆಂದರಲ್ಲಿ ಎಸೆಯುವುದನ್ನು ತಡೆಗಟ್ಟುವುದಕ್ಕೆ ಸಹಕಾರಿಯಾಗಿದೆ ಎಂದು ಹೇಳಿದರು.

ಬಿಎಸ್‌ಡಬ್ಲ್ಯುಎಂಎಲ್ ಸಿಒಒ ರಮಾಮಣಿ, ಡಿಜಿಎಂಗಳಾದ ಥಾನ್ ನಾಯ್ಕ್, ಭೀಮೇಶ್ ಉಪಸ್ಥಿತರಿದ್ದರು.

24 ಗಂಟೆಯೂ ದೂರು ದಾಖಲಿಸಿ

ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ‘ಡಿಜಿಟಲ್ ದೂರು ಪರಿಹಾರ ವೇದಿಕೆ’ ಮೂಲಕ ನಾಗರಿಕರು ತಮ್ಮ ದೂರುಗಳನ್ನು ದಿನದ 24 ಗಂಟೆಯೂ ದಾಖಲಿಸಬಹುದು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆದೇಶದಂತೆ ಆರಂಭಿಸಲಾಗಿರುವ ವ್ಯಾಟ್ಸ್‌ಆ್ಯಪ್ ಸಂಖ್ಯೆ 9448197197 ಮೂಲಕ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

ಕರೀಗೌಡ

ಆಗಸ್ಟ್ 1ರಿಂದ 1,483 ದೂರುಗಳನ್ನು ಸ್ವೀಕರಿಸಿದ್ದು, ಅದರಲ್ಲಿ 1,464 ದೂರಗಳನ್ನು ಇತ್ಯರ್ಥ್ಯಪಡಿಸಲಾಗಿದೆ. ಸೆಪ್ಟೆಂಬರ್‌ನಲ್ಲಿ 515 ದೂರುಗಳು ಬಂದಿದ್ದು, 423 ದೂರುಗಳಿಗೆ ಪರಿಹಾರ ನೀಡಲಾಗಿದೆ. ಸಹಾಯವಾಣಿ: 1533 ಹಾಗೂ ‘ನಮ್ಮ ಬೆಂಗಳೂರು’ ಮೊಬೈಲ್ ಅಪ್ಲಿಕೇಶನ್, ಸಹಾಯ ತಂತ್ರಾಂಶದಲ್ಲೂ ದೂರುಗಳನ್ನು ದಾಖಲಿಸಬಹುದು ಎಂದರು.

100% ಸತ್ಯ ಸಂಗತಿ

2 ದಿನಗಳ ಹೈ ಅಲರ್ಟ್ ಡಿಸ್ಕೌಂಟ್ ಆಫರ್

2 ದಿನಗಳು ಮಾತ್ರ 13ನೇ & 14ನೇ ಸೆಪ್ಟೆಂಬರ್

ಸಮಯ: ಬೆಳಿಗ್ಗೆ 10 ರಿಂದ ರಾತ್ರಿ 10.00ರ ವರೆಗೆ 2 ಸ್ಥಳದಲ್ಲಿ

TAJ ಯಶವಂತಪುರ ಮತ್ತು ಶುಭ್‌ಕನ್ವೆನ್ಷನ್, ಬೆಂಗಳೂರು

ಏಕೆಂದರೆ...

ಅಮೆರಿಕ ಭಾರತದ ಮೇಲೆ 50% ಸುಂಕ ವಿಧಿಸಿದೆ ಮತ್ತು ಅದು ಕೋಟ್ಯಂತರ ರೂಪಾಯಿಗಳನ್ನು ನಷ್ಟ ಉಂಟಾಗಿದೆ

ಉಡುಪುಗಳು, ಶೂಗಳು, ಕೈಮಗ್ಗ, ಲಗೇಜ್ ಬ್ಯಾಗ್ ಮತ್ತು ಚಳಿಗಾಲದ ಉಡುಪುಗಳ ಪೂರೈಕೆ ಸ್ಥಗಿತಗೊಂಡಿದೆ

ಸುಮಾರು 2 ರಿಂದ 3 ಕೋಟಿ ಮೌಲ್ಯದ ಸಂಪೂರ್ಣ ಸ್ಟಾಕ್ ಈಗ ಚಿಲ್ಲರೆ ಗ್ರಾಹಕರಿಗೆ ನೇರವಾಗಿ ಲಭ್ಯವಿದೆ.

ಬೆಂಗಳೂರಿನ ತಾಜ್ ಯಶವಂತಪುರ ಮತ್ತು ಶುಭ್‌ಕನ್ವೆನ್ಷನ್‌ನ 2 ಸ್ಥಳಗಳಲ್ಲಿ ಕೇವಲ ರೂ.20 ಲಕ್ಷಗಳಿಗೆ ಮಾರಾಟವಾಗಲಿದೆ

ಬೆಂಗಳೂರಿನ ನಮ್ಮ ಪ್ರಿಯ ಚಿಲ್ಲರೆ ಗ್ರಾಹಕರೇ, ನಮ್ಮ ಎಲ್ಲಾ ಬ್ರಾಂಡೆಡ್ ವಸ್ತುಗಳು ರೂ.1000, 2000 ರಿಂದ 3000 ರೂಪಾಯಿವರೆಗಿನ ವಸ್ತುಗಳನ್ನು ನೀವು ಕ್ಯಾಷ್ & ಕ್ಯಾರಿ ಮೂಲಕ ಕೇವಲ ರೂ. 200 ರಿಂದ 300 ರೂಪಾಯಿಗಳಿಗೆ ಕೊಂಡುಕೊಳ್ಳಬಹುದು.

3000 ರಿಂದ 8000 ರೂಪಾಯಿಯ ಎಕ್ಸ್‌ಕ್ಲೂಸಿವ್ ಬ್ರಾಂಡ್ ಉಡುಪುಗಳು ಕೇವಲ ರೂ. 500-1500 ರೂಪಾಯಿಗಳಿಗೆ ಮಾರಾಟಕ್ಕೆ ಲಭ್ಯವಿದೆ.

ಆಶ್ಚರ್ಯ ಆದರೂ ಸತ್ಯ ₹1000 ರೂಪಾಯಿಗಳ ಮರ್ಸರೈಸ್ಡ್ ಕಾಟನ್ ಲೈಕ್ರಾ ಲೇಡೀಸ್ ಪ್ಯಾಂಟ್‌ಗಳು ಕೇವಲ ರೂ. 50 ರೂಪಾಯಿಗಳಿಗೆ ಮಾರಾಟ

₹1500 ರೂಪಾಯಿಯ ಬ್ರಾಂಡೆಡ್ ಮಕ್ಕಳು ಉಡುಪುಗಳು ಜಿರೋ ಸೈಜ್‌ನಿಂದ 3 ವರ್ಷದವರೆಗಿನ ಮಕ್ಕಳ ಸೈಜ್‌ನಲ್ಲಿ ಮಾರಾಟಕ್ಕೆ ಲಭ್ಯವಿದೆ

ಬನ್ನಿ ಆಯ್ಕೆ ಮಾಡಿ ಎಲ್ಲಾ ಐಟಂಗಳಿಗೆ ರೂ. 50 & 100 ಮಾತ್ರ

~~fabindia~~ ₹ 3000 ಪುರುಷ ಮತ್ತು ಮಹಿಳೆಯರ ಉಡುಪುಗಳು ಮಾರಾಟಕ್ಕಿವೆ, ಬನ್ನಿ & ಆಯ್ಕೆ ಮಾಡಿ ಕೇವಲ ರೂ.200ಕ್ಕೆ ಮಾತ್ರ

ಶಾಪಿಂಗ್ ಬ್ಯಾಗ್ಸ್ ಮತ್ತು ಲಾಂಡ್ರಿ ಬ್ಯಾಗ್‌ಗಳು ಕೇವಲ ರೂ.100, ರೂ.200ಕ್ಕೆ ಮತ್ತು ರೂ.300 ಮಾತ್ರ

ಗಮನಿಸಿ: 1. ಮಾರಾಟವನ್ನು ಆಯೋಜಿಸುವ ಮೂಲಕ ಸರಕುಗಳನ್ನು ಮಾರಾಟ ಮಾಡುವುದು ನಮ್ಮ ಗುರಿಯಲ್ಲ ಎಂದು ಬೆಂಗಳೂರಿನ ಜನರಿಗೆ ತಿಳಿಸಲಾಗಿದೆ.
2. ಹಠಾತ್ ಹೆಚ್ಚಿನ ಸುಂಕದಿಂದಾಗಿ, ರಫ್ತು ಮಾಡಬೇಕಿದ್ದ ಸ್ಟಾಕ್‌ನ್ನು ಈಗ ಭಾರತದ ದೊಡ್ಡ ನಗರಗಳಲ್ಲಿ ಭಾರಿ ರಿಯಾಯಿತಿ ನೀಡುವ ಮೂಲಕ ಮಾರಾಟ ಮಾಡಲಾಗುತ್ತದೆ.

1 ಸ್ಥಳ TAJ ಯಶವಂತಪುರ
2275, ತುಮಕೂರು ರಸ್ತೆ, ಯಶವಂತಪುರ ಇಂಡಸ್ಟ್ರಿಯಲ್ ಪ್ರದೇಶ 1ನೇ ಫೇಸ್, ಯಶವಂತಪುರ, ಬೆಂಗಳೂರು–560022

2 ಸ್ಥಳ ಶುಭ್ ಕನ್ವೆನ್ಷನ್
6ನೇ ಮುಖ್ಯ ರಸ್ತೆ, ಕೊತ್ನೂರ್ ಮುಖ್ಯ ರಸ್ತೆ, ಬ್ರಿಗೇಡ್ ಮಿಲೇನಿಯಂ ಎದುರು, ಪುಟ್ಟೇನಹಳ್ಳಿ, ಜೆಪಿ ನಗರ 7ನೇ ಹಂತ, ಬೆಂಗಳೂರು–560078

Entry FREE Parking

S.I. Advertisers, Lucknow.

ಮೆಟ್ರೊದಲ್ಲಿ 'ಹೃದಯ' ಸಾಗಾಟ

ಯಶವಂತಪುರ ಸ್ಪರ್ಶ್ ಆಸ್ಪತ್ರೆಯಿಂದ ಶೇಷಾದ್ರಿಪುರ ಬಳಿಯ ಅಪೊಲೊ ಆಸ್ಪತ್ರೆಗೆ

ನಮ್ಮ ಮೆಟ್ರೊ ರೈಲಿನಲ್ಲಿ ಹೃದಯ ಸಾಗಾಟ ಮಾಡಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ರೈಲಿನಲ್ಲಿ ಗುರುವಾರ ಹೃದಯ ಸಾಗಾಟ ಮಾಡಲಾಯಿತು. ಇದರೊಂದಿಗೆ ಮೆಟ್ರೊದಲ್ಲಿ ಎರಡನೇ ಬಾರಿ ಯಶಸ್ವಿಯಾಗಿ ಅಂಗಾಂಗ ಸಾಗಾಟ ಮಾಡಿದಂತಾಗಿದೆ.

ಯಶವಂತಪುರ ಸ್ಪರ್ಶ್ ಆಸ್ಪತ್ರೆಯಿಂದ ಶೇಷಾದ್ರಿಪುರ ಬಳಿಯ ಅಪೊಲೊ ಆಸ್ಪತ್ರೆಗೆ ಗುರುವಾರ ರಾತ್ರಿ ಹೃದಯವನ್ನು ಸಾಗಿಸಬೇಕಿತ್ತು. ಸ್ಪರ್ಶ್ ಆಸ್ಪತ್ರೆಯಿಂದ ಯಶವಂತಪುರ ಮೆಟ್ರೊ ಸ್ಟೇಷನ್‌ವರೆಗೆ ಆಂಬುಲೆನ್ಸ್ ಮೂಲಕ ಹೃದಯವನ್ನು ತರಲಾಯಿತು. ಅಲ್ಲಿಂದ ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣದವರೆಗೆ ಮೆಟ್ರೊ ರೈಲಿನಲ್ಲಿ ಸಾಗಿಸಲಾಯಿತು. ಸಂಪಿಗೆ ರಸ್ತೆಯಿಂದ ಅಪೊಲೊ ಆಸ್ಪತ್ರೆಗೆ ಮತ್ತೆ ಆಂಬುಲೆನ್ಸ್‌ನಲ್ಲಿ ಒಯ್ಯಲಾಯಿತು.

ಮೆಟ್ರೊ ರೈಲಿನ ಒಂದು ಕೋಚ್ ಅನ್ನು ಹೃದಯ ಸಾಗಿಸಲು ಮೀಸಲಿಡಲಾಗಿತ್ತು. ಎಂದಿನಂತೆ ಸಂಚಾರ ಮಾಡುವ ಪ್ರಯಾಣಿಕರ ರೈಲಿನಲ್ಲೇ ಹೃದಯವನ್ನು ಸಾಗಿಸಲಾಗಿದೆ. ರಾತ್ರಿ 11.1ಕ್ಕೆ ಯಶವಂತಪುರದಿಂದ ಹೊರಟ ರೈಲು 11.21ಕ್ಕೆ ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣ ತಲುಪಿದೆ. ಒಟ್ಟು ಏಳು ನಿಲ್ದಾಣಗಳನ್ನು ದಾಟಲು ಕೇವಲ 20 ನಿಮಿಷಗಳನ್ನು ತೆಗೆದುಕೊಂಡಿದೆ. ವೈದ್ಯಕೀಯ ತಂಡಕ್ಕೆ ಬಿಎಂಆರ್‌ಸಿಎಲ್ ಸಹಾಯಕ ಭದ್ರತಾ ಅಧಿಕಾರಿ ಹೊನ್ನೇಗೌಡ ನೇತೃತ್ವದಲ್ಲಿ ಮೆಟ್ರೊ ಸಿಬ್ಬಂದಿಯ ತಂಡವು ತ್ವರಿತ ಸಹಕಾರವನ್ನು ನೀಡಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕುಟುಂಬದ ಮನವಿ

ಹೃದಯದಾನ ಮಾಡಿದವರ ವಿವರವನ್ನು ಬಹಿರಂಗಪಡಿಸಬಾರದು ಎಂದು ಅವರ ಕುಟುಂಬದವರು ಮನವಿ ಮಾಡಿದ್ದರಿಂದ ಗೋಪ್ಯತೆ ಕಾಪಾಡಿಕೊಳ್ಳಲಾಗಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ತುಳಸಿ ಮದ್ದಿನೇನಿ ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ. ತುಳಸಿ ಅವರಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ಹುದ್ದೆ ನಿರೀಕ್ಷಣೆಯಲ್ಲಿದ್ದ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನೀಡಿ ಆದೇಶ ಹೊರಡಿಸಿದೆ.

ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ರಮಣದೀಪ್ ಚೌಧರಿ ಅವರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ರಿಜ್ವಾನ್ ಅರ್ಜಿ ವಿಚಾರಣೆ 19ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ನಕಲಿ ಯಾದಿ ತಯಾರು ಮಾಡುತ್ತಿದ್ದಾರೆ' ಎಂದು ತಮ್ಮ ವಿರುದ್ಧ ಬಿಜೆಪಿ ಮಾಡಿದ್ದ ಆರೋಪಗಳಿಗೆ ಸಂಬಂಧಿಸಿದಂತೆ ಶಿವಾಜಿನಗರದ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಸಲ್ಲಿಸಿರುವ ಖಾಸಗಿ ದೂರಿನ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 19ಕ್ಕೆ ಮುಂದೂಡಿದೆ.

ಈ ಪ್ರಕರಣವನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ರಿಜ್ವಾನ್ ಪರ ಹೈಕೋರ್ಟ್ ವಕೀಲ ಸೂರ್ಯ ಮುಕುಂದರಾಜ್ ಮತ್ತು ಸಂಜಯ್ ಯಾದವ್, ಅರ್ಜಿದಾರರನ್ನು ಪಾಟಿ ಸವಾಲಿಗೆ ಒಳಪಡಿಸುವ ಪ್ರಕ್ರಿಯೆ ಕೈಗೆತ್ತಿಕೊಳ್ಳುವಂತೆ ನ್ಯಾಯಾಧೀಶರಿಗೆ ಮನವಿ ಮಾಡಿದರು. ಇದಕ್ಕೆ ಪ್ರತಿವಾದಿ ಬಿಜೆಪಿ ಪರ ಹಾಜರಾಗಿದ್ದ ಹಿರಿಯ ವಕೀಲ ಚಲಪತಿ ಶ್ರೀನಿವಾಸ್ ಮತ್ತು ಎನ್.ಗೋಪಿ ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಪ್ರಕರಣವನ್ನು ಅರ್ಜಿದಾರರ ಪಾಟೀ ಸವಾಲಿನ ಪ್ರಕ್ರಿಯೆಗೆ ನಿಗದಿಪಡಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದರು.

ಪ್ರಕರಣವೇನು?: ರಿಜ್ವಾನ್ ಅರ್ಷದ್ 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ (ಸೆಂಟ್ರಲ್) ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ವೇಳೆ ಅವರ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಇಬ್ರಾಹಿಂ ಖಲೀಲುಲ್ಲಾ ಅವರನ್ನು ಬಿಜೆಪಿ ಮಾಡಿದ್ದ ಆರೋಪದಡಿ ಬಂಧಿಸಲಾಗಿತ್ತು.

'ಇಬ್ರಾಹಿಂ ಖಲೀಲುಲ್ಲಾ ಅವರು ರಿಜ್ವಾನ್ ಅರ್ಷದ್ ಪರ ಪ್ರಭಾತ್ ಕಾಂಪ್ಲೆಕ್ಸ್‌ನ ಮೂರನೇ ಮಹಡಿಯ ಕೊಠಡಿ ಸಂಖ್ಯೆ 507ರಲ್ಲಿ ನಕಲಿ ಮತದಾರರ ಗುರುತಿನ ಚೀಟಿಗಳನ್ನು ಮುದ್ರಿಸುತ್ತಿದ್ದಾರೆ' ಎಂದು ಆರೋಪಿಸಲಾಗಿತ್ತು. ಈ ಕುರಿತು ಬಿಜೆಪಿ ತನ್ನ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಬಿತ್ತರಿಸಿ, 'ರಿಜ್ವಾನ್ ಅರ್ಷದ್ ಅವರನ್ನು ಸ್ಪರ್ಧೆಯಿಂದ ಅನರ್ಹಗೊಳಿಸುವಂತೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿತ್ತು.

ಇದರ ವಿರುದ್ಧ ರಿಜ್ವಾನ್ ಅರ್ಷದ್ ಖಾಸಗಿ ದೂರು ದಾಖಲಿಸಿದ್ದಾರೆ. ಈ ಖಾಸಗಿ ದೂರಿನಲ್ಲಿ ಬಿಜೆಪಿಯ ರಾಜ್ಯ ಘಟಕದ ಅಂದಿನ ಅಧ್ಯಕ್ಷರು ಹಾಗೂ ಐ.ಟಿ ಸೆಲ್ ವಿಭಾಗದ ಅಧ್ಯಕ್ಷರನ್ನು ಆರೋಪಿಗಳಾಗಿ ಹೆಸರಿಸಲಾಗಿದೆ.

ನಗರದಲ್ಲಿ ಇಂದು

ಸಾಮಾನ್ಯ ಸಭೆ: 'ಆರೋಗ್ಯ ಮತ್ತು ಆಹಾರ'ದ ಬಗ್ಗೆ ಉಪನ್ಯಾಸ ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಜಿ.ನಂಜನಗೌಡ, ಶರಣಗೌಡ ಜಿ. ಪಾಟೀಲ, ಅಶೋಕ್ ಅಣ್ಣಯ್ಯ, ಅಧ್ಯಕ್ಷತೆ: ಬಿ.ಎಚ್. ಕೃಷ್ಣಾರೆಡ್ಡಿ, ಆಯೋಜನೆ: ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೊ ಆಪರೇಟಿವ್ ಸೊಸೈಟಿ, ಸ್ಥಳ: ಸಮೃದ್ಧಿ ಮ್ಯಾನರ್ ಪಾರ್ಟಿ ಹಾಲ್, ವೆಂಕಟೇಶ್ವರನಗರ, ಬೆಳಿಗ್ಗೆ 9.30

ಉಪನ್ಯಾಸ, ಸನ್ಮಾನ, ಭರತನಾಟ್ಯ: 'ಯೋಗ ಹಾಗೆ ಹೀಗೆ ಹೇಗೆ–ಒಂದು ಒಳನೋಟ' ವಿಷಯದ ಬಗ್ಗೆ ಉಪನ್ಯಾಸ: ಮಾರುತಿ ರಾಮ್, ಭರತನಾಟ್ಯ: ರಂಜನಾ ಮತ್ತು ಸಂಗಡಿಗರು, ಸನ್ಮಾನ: ಎಂ.ಎಸ್. ವೆಂಕಟೇಶ ಹೆಗಡೆ, ಎಂ.ಎಸ್. ವಿನಾಯಕ ಹೆಗಡೆ, ಉಪಸ್ಥಿತಿ: ವಿಘ್ನೇಶ್ವರ ಶಾಸ್ತ್ರಿ, ರವಿ ಹೆಗಡೆ, ಆಯೋಜನೆ ಹಾಗೂ ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

30ನೇ ವಾರ್ಷಿಕೋತ್ಸವ: ಕ್ರೀಡೆ, ಎನ್‌ಎಸ್‌ಎಸ್, ಎನ್‌ಸಿಸಿ, ವಿವಿಧ ಕ್ಷೇತ್ರಗಳ ಸಾಧಕರಿಗೆ ರಾಷ್ಟ್ರಮಟ್ಟದ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕಾರ, ಉದ್ಘಾಟನೆ: ಸಂತೋಷ್ ಲಾಡ್, ಪ್ರಶಸ್ತಿ ಪ್ರದಾನ: ಕೆ.ಎಚ್.ಮುನಿಯಪ್ಪ, ಜಾನಪದ ಕಲಾ ಮೇಳ ಉದ್ಘಾಟನೆ: ಡಾ.ನಾಗಲಕ್ಷ್ಮಿ ಚೌಧರಿ, ಆಯೋಜನೆ: ಮಾತೃಭೂಮಿ ಯುವಕರ ಸಂಘ, ಸ್ಥಳ: ಹರ್ಷ ಶಾಲೆ ಸಭಾಂಗಣ, ನೆಲಮಂಗಲ, ಬೆಳಿಗ್ಗೆ 10

ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೊ ರಿಕ್ಷಾ ಕೌಶಲ ತರಬೇತಿ ಉದ್ಘಾಟನೆ: ಅತಿಥಿಗಳು: ಎನ್.ಎ. ಹ್ಯಾರಿಸ್, ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್, ರಾಜೇಂದ್ರ ಚೋಳನ್ ಪಿ., ಲಕ್ಷ್ಮಿ ಗಣೇಶ್, ಆರತಿ ಹಿರೇಮಠ, ಸುಧಾಕರ್ ಪೈ, ಚಿತ್ರಾ ತಲ್ವಾರ್, ಶ್ರೀನಿವಾಸ್ ಅಲವಿಲ್ಲಿ, ಆಯೋಜನೆ: ಬಿ.ಪ್ಯಾಕ್, ಸ್ಥಳ: ರಂಗೋಲಿ ಮೆಟ್ರೊ ಆರ್ಟ್ ಸೆಂಟರ್, ಎಂ.ಜಿ. ರಸ್ತೆ, ಬೆಳಿಗ್ಗೆ 10.30

'ನ್ಯಾಯದ ಹರಿಕಾರ ಪೈಗಂಬರ್ ಮುಹಮ್ಮದ್' ವಿಚಾರಗೋಷ್ಠಿ: ಉದ್ಘಾಟನೆ: ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ವಿ.ಗೋಪಾಲ ಗೌಡ, ಅತಿಥಿಗಳು: ರಿಜ್ವಾನ್ ಅರ್ಷದ್, ಮೂಡ್ನಾಕೂಡು ಚಿನ್ನಸ್ವಾಮಿ, ಎಲ್.ಎನ್. ಮುಕುಂದರಾಜ್, ಆಯೇಷಾ ಖಾನುಂ, ಕೆ.ಎಂ. ರಾಮಚಂದ್ರಪ್ಪ, ಅರವಿಂದ ಜತ್ತಿ, ಹರ್ಜಿಂದರ್ ಸಿಂಗ್ ಭಾಟಿಯಾ, ಅಕ್ಬರ್ ಅಲಿ ಉಡುಪಿ, ಅಧ್ಯಕ್ಷತೆ: ಮೊಹಮ್ಮದ್ ಸಾದ್ ಬೆಳಗಾಮಿ, ಆಯೋಜನೆ: ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ, ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬಸವೇಶ್ವರ ರಸ್ತೆ, ಬೆಳಿಗ್ಗೆ 10.30

ಅಖಿಲ ಭಾರತ ಚಿಟ್ ಉದ್ದಿಮೆದಾರರ ಸಮಾವೇಶ: ಮುಖ್ಯ ಅತಿಥಿ: ಶೈಲಜಾ ಕಿರಣ್, ಮುಖ್ಯ ಭಾಷಣ: ಶಮಿಕಾ ರವಿ, ಅತಿಥಿಗಳು: ಎಸ್.ಬಿ.ಶೆಟ್ಟಣ್ಣವರ್, ಟಿ.ಎಚ್.ಎಂ. ಕುಮಾರ್, ಮನೋಜ್ ಕುಮಾರ್, ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ಚಿಟ್‌ಫಂಡ್ಸ್ ಅಸೋಸಿಯೇಷನ್, ಸ್ಥಳ: ಡಾ. ಬಾಬು ಜಗಜೀವನ್ ರಾಮ್ ಭವನ, ಹೊರವರ್ತುಲ ರಸ್ತೆ, ಸುಮನಹಳ್ಳಿ ಮೇಲ್ಸೇತುವೆ, ಬೆಳಿಗ್ಗೆ 10.30

ವೈಭವ ಗಣೇಶೋತ್ಸವ: ಬೆಳಿಗ್ಗೆ 11ರಿಂದ ರಂಗೋಲಿ ಸ್ಪರ್ಧೆ, ಸಂಜೆ 6.30ರಿಂದ ಸಂಗೀತ ವೈಭವ, ಆಯೋಜನೆ: ವೈಭವ ಗಣೇಶ ಹಿಂದೂ ಧಾರ್ಮಿಕ ಸೇವಾ ಪ್ರತಿಷ್ಠಾನ, ಜಯಂತ್ ಸೇವಾ ಫೌಂಡೇಷನ್, ಸ್ಥಳ: ಆಲದಮರದ ಸರ್ಕಲ್, ಆರ್‌ಟಿಒ ರಸ್ತೆ, ರೈಲ್ವೆ ಲೇಔಟ್, ಮಲ್ಲತ್ತಹಳ್ಳಿ

ಸಂಸ್ಕೃತೋತ್ಸವ ದಿನಾಚರಣೆ: ಉದ್ಘಾಟನೆ: ಎಚ್.ಪಿ. ಸಂದೇಶ್, ಅಧ್ಯಕ್ಷತೆ: ಎಂ. ಶಿವಕುಮಾರ ಸ್ವಾಮಿ, ಗೌರವ ಸಮರ್ಪಣೆ: ಡಾ.ಸಿ.ಎನ್. ಮಂಜುನಾಥ್, ಸಂಸ್ಕೃತೋತ್ಸವದ ಬಗ್ಗೆ ಭಾಷಣ: ಎಸ್. ಅಹಲ್ಯಾಶರ್ಮಾ, ಉಪಸ್ಥಿತಿ: ಅಜಯ್‌ಕುಮಾರ್ ಸಿಂಗ್, ಕೆ.ಎಂ. ಶಿವಕುಮಾರ್, ಜಿ.ವಿ. ಕೊಂಗವಾಡ್, ಎಸ್. ಸೆಲ್ವಕುಮಾರ್, ಎಂ.ಜಿ. ಮಂಜುನಾಥ್, ಶರತ್‌ಚಂದ್ರ, ಟಿ. ವೆಂಕಟೇಶ್, ಆಯೋಜನೆ: ಅಖಿಲ ಕರ್ನಾಟಕ ವಚನಸಾಹಿತ್ಯ ಪರಿಷತ್ತು, ಪ್ರತಿಭಾಸಂಸತ್, ಸ್ಥಳ: ಅಭಿಮಾನಿ ವಸತಿ, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಮಧ್ಯಾಹ್ನ 3

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಭಾವಾಂಜಲಿ ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಅತಿಥಿಗಳು: ಆರ್. ಅಶೋಕ, ರವಿ ಸುಬ್ರಹ್ಮಣ್ಯ, ಕೆ. ಚಂದ್ರಶೇಖರ್, ನೆ.ಲ. ನರೇಂದ್ರಬಾಬು, ಗುರಪ್ಪ ನಾಯ್ಡು, ಆನಂದರಾಜು, ಎನ್.ಆರ್. ರಮೇಶ್, ಕಟ್ಟೆ ಸತ್ಯನಾರಾಯಣ, ಉಮೇಶ್, ಬಿ.ಕೆ. ಶಿವರಾಮ್, ವೆಂಕಟಸ್ವಾಮಿ ನಾಯ್ಡು, ಸ್ಥಳ: ಶ್ರೀರಾಮಮಂದಿರ ಸಭಾಂಗಣ, ಎನ್.ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ

ವಿಶ್ವ ಸೆಪ್ಸಿಸ್ ದಿನದ ಪ್ರಯುಕ್ತ ವಿಶೇಷ ಅಂಚೆ ಲಕೋಟೆ ಬಿಡುಗಡೆ: ಡಾ.ಸಿ.ಎನ್. ಮಂಜುನಾಥ್, ಅತಿಥಿಗಳು: ಕೆ. ಪ್ರಕಾಶ್, ಮುರಳಿ ಶ್ರೀನಿವಾಸನ್, ಬಿ.ಎಲ್. ಸುಜಾತಾ ರಾಥೋಡ್, ಶಶಿಭೂಷಣ್ ಬಿ.ಎಲ್, ಆಯೋಜನೆ: ಏಷ್ಯಾಎಡ್ ವೈದ್ಯಕೀಯ ಶಿಕ್ಷಣ ಕಾಲೇಜು, ಸ್ಥಳ: ಮೇಘದೂತ ಸಭಾಂಗಣ, ಬೆಂಗಳೂರು ಪ್ರಧಾನ ಅಂಚೆ ಕಚೇರಿ, ರಾಜಭವನ ರಸ್ತೆ, ಮಧ್ಯಾಹ್ನ 3

ಮಲ್ಲಾರ ಉತ್ಸವ: ಹಾರ್ಮೋನಿಯಂ: ನರಸಿಂಹ ಕುಲಕರ್ಣಿ, ತಬಲಾ: ವಾದಿರಾಜ ದಂಡಾಪುರ, ಕಿಶೋರ ಕುಲಕರ್ಣಿ, ಸಮೀರ ಜೋಶಿ, ಉಪಸ್ಥಿತಿ: ರಾಜಶೇಖರ ಜೋಗಿನ್ಮನೆ, ಬಿ.ಬಿ. ಕುಲಕರ್ಣಿ, ಬಿ.ಎಸ್. ನಾಗರಾಜ, ಕೃಷ್ಣ ಪುರೋಹಿತ, ಆಯೋಜನೆ: ಕಿರಣಾ ಗಂಧರ್ವ ಸಭಾ, ಸ್ಥಳ: ಸಂಶೋಧನಾ ಮಂದಿರ, ಪೂರ್ಣಪ್ರಜ್ಞ ವಿದ್ಯಾಪೀಠ, ಸಂಜೆ 5

'ದಿ ಸಾತ್ವಿಕ್ ವೇ' ಪುಸ್ತಕ ಬಿಡುಗಡೆ: ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಸಂವಾದ: ಅನುಶ್ರುತಿ ಆರ್.ಕೆ., ರುತ್ ಡಿಸೋಜಾ ಪ್ರಭು, ಆಯೋಜನೆ: ಹಾರ್ಪರ್ ಕಾಲಿನ್ಸ್, ಸ್ಥಳ: ಕ್ರಾಸ್‌ವರ್ಡ್, ಒರಾಯನ್ ಮಾಲ್, ರಾಜಾಜಿನಗರ, ಸಂಜೆ 5

ಎಂ.ಎಸ್. ಸ್ಮಾರಕ ಸಂಗೀತ ಕಛೇರಿ: ಗಾಯನ: ಅಂಜಲಿ ಶ್ರೀರಾಮ್, ಪಿಟೀಲು: ಅಚ್ಯುತ ರಾವ್, ಮೃದಂಗ: ಆನೂರು ಅನಂತ ಕೃಷ್ಣ ಶರ್ಮ, ಖಂಜಿರ: ಬಿ.ಎಸ್. ಪುರುಷೋತ್ತಮ್, ಮೋರ್ಚಿಂಗ್: ಜಿ. ಲಕ್ಷ್ಮೀನಾರಾಯಣ, ಆಯೋಜನೆ: ಆವಾಹನ ಕಲ್ಚರಲ್ ಟ್ರಸ್ಟ್, ಸ್ಥಳ: ಶ್ರೀಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಸಂಜೆ 6.

ತಿತ್ತಿತ್ತೈ–ಯಕ್ಷ ಪರ್ವ: 'ದಮಯಂತಿ ಪುನಃ ಸ್ವಯಂವರ' ಪ್ರಸಂಗ, 'ಭೃಗು ಶಾಪ' ಪ್ರಸಂಗ ಹಾಗೂ 'ಕೃಷ್ಣ ಸಂಕಲ್ಪ' ಪ್ರಸಂಗ, ಆಯೋಜನೆ: ಟೀಮ್ ತಿತ್ತಿತ್ತೈ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9.10ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಅಂತಿಮ ಸ್ಪರ್ಶ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್



ನವರಾತ್ರಿ ಹಬ್ಬದ ಪ್ರಯುಕ್ತ ನಗರದ ಆರ್.ವಿ.ರಸ್ತೆಯಲ್ಲಿ ದುರ್ಗಾ ಮೂರ್ತಿಗೆ ಕಲಾವಿದರು ಅಂತಿಮ ಸ್ಪರ್ಶ ನೀಡಿದರು

32 ಮಸೂದೆಗಳಿಗೆ ಅಂಕಿತ

ಬೆಂಗಳೂರು: ವಿಧಾನ ಮಂಡಲದ ಮುಂಗಾರು ಅಧಿವೇಶನದಲ್ಲಿ ಅಂಗೀಕರಿಸಲಾಗಿದ್ದ 32 ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದು, ಅವುಗಳಲ್ಲಿ 15 ಮಸೂದೆಗಳನ್ನು ಶುಕ್ರವಾರ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. 37 ಮಸೂದೆಗಳನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿತ್ತು.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಎಚ್‌ಎಎಲ್ ಉಪ ಕೇಂದ್ರದ ವ್ಯಾಪ್ತಿಯಲ್ಲಿ ಸೆ.13ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಇಸ್ರೊ (ಮಾರತ್ತಹಳ್ಳಿ ಮತ್ತು ಎನ್‌ಎಎಲ್), ಬಾಗ್ಮನೆ ಟೆಕ್ ಪಾರ್ಕ್, ಜಿಟಿರೆ, ಡಬ್ಲ್ಯುಟಿಸಿ, ಇಂದಿರಾನಗರ ಡಿಫೆನ್ಸ್ ಕಾಲೊನಿ, 100 ಅಡಿ ರಸ್ತೆ, ಇಂದಿರಾನಗರ 1ನೇ ಮತ್ತು 2ನೇ ಹಂತ, 80 ಅಡಿ ರಸ್ತೆ, ಸಿಎಂಎಚ್ ರಸ್ತೆ, ಕೃಷ್ಣ ದೇವಸ್ಥಾನ ರಸ್ತೆ, ಜೀವನ್ ಬಿಮಾ, ನಗರ, ಬೀಡಿ ಲೇಔಟ್, ಎಲ್‌ಐಸಿ ಕಾಲೊನಿ, ತಿಪ್ಪಸಂದ್ರ, ರಮೇಶ್ ನಗರ, ಟಾಟಾ ಹೌಸಿಂಗ್, ಬಿಇಎಂಎಲ್, ಎಡಿಎ, ಮಲ್ಲೇಶಪಾಳ್ಯ, ಕಲ್ಲಪ್ಪ ಲೇಔಟ್, ರಾಜಣ್ಣ ಮತ್ತು ಎಲ್‌ಎನ್ ರೆಡ್ಡಿ ಕಾಲೊನಿ, ಬಸವನಗರ, ಅಣ್ಣಾಸಂದ್ರ ಪಾಳ್ಯ, ಕೃಷ್ಣಪ್ಪ ಉದ್ಯಾನ, ವಿಮಾನ ನಿಲ್ದಾಣ ರಸ್ತೆ, ಟೆಕ್ಸಾಸ್, ಐಎಎಂ, ಮಾರತ್‌ಹಳ್ಳಿ, ದೊಡ್ಡನೆಕ್ಕುಂದಿ, ನ್ಯಾಯಾಲಯ ಕ್ವಾರ್ಟರ್ಸ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಎಸ್‌ಆರ್‌ಎಸ್ ಪೀಣ್ಯ ಉಪ ಕೇಂದ್ರದ ವ್ಯಾಪ್ತಿಯಲ್ಲಿ ಸೆ.14ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಪೀಣ್ಯ ಗ್ರಾಮ, ಎಸ್‌ಆರ್‌ಎಸ್ ರಸ್ತೆ, 4 ನೇ ಬ್ಲಾಕ್, 2 ನೇ ಬ್ಲಾಕ್, ಎಂಇಐ ಫ್ಯಾಕ್ಟರಿ, ರಾಜಗೋಪಾಲ ನಗರ, ಕಸ್ತೂರಿ ಬಡಾವಣೆ, ಜಿಕೆಡಬ್ಲ್ಯು ಲೇಔಟ್, ಬೈರವೇಶ್ವರ ನಗರ, 10ನೇ ಕ್ರಾಸ್, 1ನೇ ಹಂತದ ಪೀಣ್ಯ ಕೈಗಾರಿಕಾ ಪ್ರದೇಶ, ಅಜೆಕ್ಸ್ ರಸ್ತೆ, ಸ್ಲಮ್ ರಸ್ತೆ, ಅನುಸೋಲಾರ್ ರಸ್ತೆ, ಚೇರ್ ಫ್ಯಾಕ್ಟರಿ ರಸ್ತೆ, ಜನರಲ್ ಮೆಟಲ್ ಸರ್ಕಲ್, ಸ್ನೋ ವೈಟ್ ರಸ್ತೆ, ಮೈಸೂರು ಎಂಜಿನಿಯರ್ ರಸ್ತೆ, ಸನ್‌ರೈಸ್ ಕಾಸ್ಟಿಂಗ್ ರಸ್ತೆ, 3ನೇ ಹಂತ. ವೈಷ್ಣವಿ ಮಾಲ್, ಕಾವೇರಿ ಮಾಲ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಅಲೆಮಾರಿಗಳಿಂದ ದೆಹಲಿ ಚಲೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಖಂಡಿಸಿ ಅಕ್ಟೋಬರ್ 2ರಂದು ಗಾಂಧಿ ಜಯಂತಿ ದಿನ ದೆಹಲಿ ಚಲೊ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟದ ಅಧ್ಯಕ್ಷ ಲೋಕೇಶಪ್ಪ ಅಂದೋಳ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಹುಲ್ ಗಾಂಧಿ ಅವರು ದೇಶದ್ಯಾಂತ ಯಾತ್ರೆ ಮಾಡುವ ವೇಳೆ ಅಲೆಮಾರಿಗಳ ಪರವಾಗಿ ಇರುವುದಾಗಿ ಹೇಳಿದ್ದರು. ಅವರದ್ದೇ ಪಕ್ಷ ರಾಜ್ಯದಲ್ಲಿ ಆಡಳಿತದಲ್ಲಿದ್ದು, ಅಲೆಮಾರಿಗಳಿಗೆ ರಾಜ್ಯ ಸರ್ಕಾರ ಮಾಡಿರುವ ಅನ್ಯಾಯವನ್ನು ಸರಿಪಡಿಸಲು ಕೋರುತ್ತೇವೆ' ಎಂದು ಹೇಳಿದರು.

ಹಿಂದಿನ ಎಲ್ಲ ಆಯೋಗಗಳು ಅಲೆಮಾರಿಗಳಿಗೆ ಶೇಕಡ 1ರಷ್ಟು ಮೀಸಲಿಟ್ಟಿದ್ದರು. ನ್ಯಾ. ನಾಗಮೋಹನದಾಸ್ ಆಯೋಗವೂ ಶೇ 1ರಷ್ಟು ಮೀಸಲಾತಿ ನೀಡಲು ಶಿಫಾರಸು ಮಾಡಿತ್ತು. ಆದರೆ, ಒಳಮೀಸಲಾತಿ ಅನುಷ್ಠಾನಕ್ಕೆ ತರುವಾಗ ರಾಜ್ಯ ಸರ್ಕಾರವು ಈ ಮೀಸಲಾತಿಯನ್ನು ಸ್ಪರ್ಶ ಜಾತಿಗಳ ಗುಂಪಿಗೆ ಸೇರಿಸಿ 49 ಅಲೆಮಾರಿ ಸಮುದಾಯಗಳಿಗೆ 10 ಸೂಕ್ಷ್ಮ ಸಮುದಾಯಗಳಿಗೆ ಅನ್ಯಾಯವೆಸಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಲೆಮಾರಿ ಸಮುದಾಯದ ಹೋರಾಟಗಾರರಾದ ಬಿ.ಎಚ್. ಮಂಜುನಾಥ್, ವೆಂಕಟರಮಣ, ಬಸವರಾಜ ನಾರಾಯಣಕರ್, ಶಿವಕುಮಾರ್, ಸಾವಿತ್ರಿ ರತ್ನಾಕರ್, ಸಣ್ಣ ಮಾರಪ್ಪ, ವಸಂತ್ ಉಪಸ್ಥಿತರಿದ್ದರು.

ಬಡ್ತಿಯಲ್ಲೂ ಒಳಮೀಸಲಾತಿ: ಆತಂಕ ಬೇಡ

ಮಾಜಿ ಸಚಿವ ಆಂಜನೇಯ ನೇತೃತ್ವದ ನಿಯೋಗಕ್ಕೆ ಶಾಲಿನಿ ರಜನೀಶ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗೊಂಡ ತಕ್ಷಣವೇ ಉದ್ಯೋಗ ನೇಮಕಾತಿ ಪ್ರಕ್ರಿಯೆಗಳು ನಡೆಯುತ್ತಿವೆ. ಬಡ್ತಿಗೂ ಅನ್ವಯವಾಗಲಿದ್ದು ಆತಂಕ ಬೇಡ ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ಮಾದಿಗ ಮತ್ತಿತರ ಸಮುದಾಯದಲ್ಲಿ ಮನೆ ಮಾಡಿರುವ ಆತಂಕ ದೂರ ಮಾಡುವಂತೆ ಕೋರಿ ತಮ್ಮನ್ನು ಭೇಟಿ ಮಾಡಿದ ಮಾಜಿ ಸಚಿವ ಎಚ್. ಆಂಜನೇಯ ನೇತೃತ್ವದ ನಿಯೋಗಕ್ಕೆ ಈ ಭರವಸೆ ನೀಡಿದ ಶಾಲಿನಿ, 'ನೇಮಕಾತಿ ಪ್ರಕ್ರಿಯೆಗಳು ನಡೆಯುತ್ತಿದ್ದು, ಈಗಾಗಲೇ ಕಾರ್ಯಪ್ರವೃತ್ತರಾಗಿದ್ದೇವೆ. ಈ ವಿಷಯದಲ್ಲಿ ಆತಂಕ ಬೇಡ' ಎಂದು ತಿಳಿಸಿದರು.

'ಶಿಕ್ಷಣ, ಉದ್ಯೋಗಕ್ಕೆ ಅನ್ವಯವಾಗುವ ರೀತಿ ಒಳಮೀಸಲಾತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದು, ಅದೇ ರೀತಿ ಬಡ್ತಿಯಲ್ಲೂ ಒಳಮೀಸಲಾತಿ ಜಾರಿಗೊಳಿಸಬೇಕು. ಬಡ್ತಿಗೆ ಒಳ ಮೀಸಲಾತಿ ಅನ್ವಯಿಸುವುದಿಲ್ಲವೆಂಬ ಸಂಶಯ ಇದೆ. ಈ ಗೊಂದಲ ನಿವಾರಣೆಗೆ ತಕ್ಷಣ ಮುಂದಾಗಬೇಕು. ಆದೇಶ ಹೊರಡಿಸಬೇಕು' ಎಂದು ನಿಯೋಗ ಆಗ್ರಹಿಸಿತು.

ಬಳಿಕ ಮಾತನಾಡಿದ ಎಚ್. ಆಂಜನೇಯ, 'ದೀರ್ಘ ಹೋರಾಟದ ಫಲವಾಗಿ ಎ, ಬಿ, ಸಿ ಗುಂಪುಗಳಾಗಿ ವಿಂಗಡಿಸಿ ಒಳಮೀಸಲಾತಿ ಹಂಚಿಕೆ ಮಾಡಲಾಗಿದೆ. ಮಾದಿಗ ಸಮುದಾಯದ ಸರ್ಕಾರಿ ನೌಕರರು ಯಾವುದೇ ರೀತಿ ಆತಂಕ ಪಡಬೇಕಿಲ್ಲ. ಶೀಘ್ರದಲ್ಲೇ ಒಳ ಮೀಸಲಾತಿ ಬಡ್ತಿಗೂ ಅನ್ವಯಿಸಲಿದೆ ಎಂಬ ಆದೇಶ ಹೊರಬೀಳಲಿದೆ. ಈಗಾಗಲೇ ಆಂಧ್ರಪ್ರದೇಶ, ತೆಲಂಗಾಣದಲ್ಲಿ ಆಗಿದೆ. ಅದೇ ಪದ್ಧತಿ ರಾಜ್ಯದಲ್ಲೂ ಜಾರಿಗೊಳ್ಳಲಿದೆ. ಆದ್ದರಿಂದ ನಿಶ್ಚಿಂತೆಯಿಂದ ಇರಬಹುದು' ಎಂದರು.

ಮಾಜಿ ಶಾಸಕ ತಿಮ್ಮರಾಯಪ್ಪ, ಒಳಮೀಸಲಾತಿ ಹೋರಾಟಗಾರರಾದ ಮಾರಪ್ಪ, ಆಲೂರಿಕರ್ ಅಂಬಣ್ಣ, ರವಿ ಬೋಸರಾಜ್, ಬಸವರಾಜ್ ಕೌತಾಳ್, ಹನುಮೇಶ ಗುಂಡೂರ್, ಮಾದಿಗ ನೌಕರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್, ಶಂಕರಪ್ಪ, ಗುಡಿಮನಿ, ಚೌಡಿ ಲೋಕೇಶ್ ಇತರರಿದ್ದರು.

ಮಾಜಿ ಸಚಿವ ಎಚ್.ಆಂಜನೇಯ ನೇತೃತ್ವದ ನಿಯೋಗ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿತು

ಸೆರಾಮಿಕ್ ಇಂಪ್ಲಾಂಟ್ ಬಳಸಿ ಶಸ್ತ್ರಚಿಕಿತ್ಸೆ

ಬೆಂಗಳೂರು: ವೈಟ್‌ಫೀಲ್ಡ್‌ನ ಆಸ್ಟರ್ ಆಸ್ಪತ್ರೆಯ ಮೂಳೆಚಿಕಿತ್ಸೆ ವಿಭಾಗದ ವೈದ್ಯರು 65 ವರ್ಷದ ವ್ಯಕ್ತಿಯೊಬ್ಬರಿಗೆ ಯಶಸ್ವಿಯಾಗಿ ಸೆರಾಮಿಕ್ ಇಂಪ್ಲಾಂಟ್ ಬಳಸಿ ಮಂಡಿ ಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಡಾ. ಕುಮಾರ್‌ದೇವ್ ಅರವಿಂದ್ ರಾಜಮಾನ್ಯ ನೇತೃತ್ವದ ವೈದ್ಯರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ. ಸಾಮಾನ್ಯವಾಗಿ ಮೊಣಕಾಲು ಕೀಲು ಬದಲಾವಣೆಗಳಲ್ಲಿ ಲೋಹದ ಇಂಪ್ಲಾಂಟ್‌ಗಳನ್ನು ಬಳಸಲಾಗುತ್ತದೆ. ಇದೇ ಮೊದಲ ಬಾರಿ ಸಾಂಪ್ರದಾಯಿಕ ಲೋಹದ ಇಂಪ್ಲಾಂಟ್ ಬದಲಿಗೆ, ಸೆರಾಮಿಕ್ ಇಂಪ್ಲಾಂಟ್ ಬಳಸಲಾಗಿದೆ. ಲೋಹದ ಇಂಪ್ಲಾಂಟ್‌ಗಳಿಗೆ ಹೋಲಿಸಿದರೆ, ಸೆರಾಮಿಕ್ ಇಂಪ್ಲಾಂಟ್ ಹೆಚ್ಚು ಬಾಳಿಕೆ ಬರಲಿದೆ ಎಂದು ಆಸ್ಪತ್ರೆ ತಿಳಿಸಿದೆ.

'ಸೆರಾಮಿಕ್ ಇಂಪ್ಲಾಂಟ್ ವ್ಯಕ್ತಿಗೆ ಹೆಚ್ಚಿನ ಆರಾಮ ನೀಡುತ್ತದೆ. ಇದು ಕೀಲಿನ ಸವೆತ ಮತ್ತು ಹರಿತವನ್ನು ತಡೆಯುತ್ತದೆ. ಲೋಹದ ಅಲರ್ಜಿ ಇರುವ ರೋಗಿಗಳಿಗೆ ಇದು ಉತ್ತಮ ಪರಿಹಾರ' ಎಂದು ಡಾ. ಕುಮಾರ್‌ದೇವ್ ಅರವಿಂದ್ ರಾಜಮಾನ್ಯ ತಿಳಿಸಿದ್ದಾರೆ.

ಆಯೋಗ: ಅಧ್ಯಕ್ಷರ ನೇಮಕಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ– ಪರಿಶಿಷ್ಟ ಬುಡಕಟ್ಟುಗಳ ಆಯೋಗಕ್ಕೆ ಅಧ್ಯಕ್ಷರು, ಸದಸ್ಯರನ್ನು ಕೂಡಲೇ ನೇಮಕ ಮಾಡಬೇಕು ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎರಡೂವರೆ ವರ್ಷಗಳಿಂದ ಅಧ್ಯಕ್ಷ, ಸದಸ್ಯರನ್ನು ನೇಮಕ ಮಾಡಿಲ್ಲ. ಆಯೋಗ ಖಾಲಿ ಇದೆ' ಎಂದು ಹೇಳಿದರು.

2003ರಲ್ಲಿ ಆಯೋಗವು ಅಸ್ತಿತ್ವಕ್ಕೆ ಬಂದಿದೆ. ಅಲ್ಲಿಂದ ಇಲ್ಲಿಯವರೆಗೆ ಯಾರೂ ಸಮರ್ಥವಾಗಿ ಕೆಲಸ ಮಾಡಿಲ್ಲ. ಈಗಿನ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಆಯೋಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ರಾಜ್ಯದಲ್ಲಿ ದಲಿತ ಸಮುದಾಯಗಳಿಗೆ ರಕ್ಷಣೆ ಮತ್ತು ನ್ಯಾಯ ನೀಡುವಲ್ಲಿ ಸಂಪೂರ್ಣವಾಗಿ ಸೋತಿದೆ ಎಂದು ಆರೋಪಿಸಿದರು.

ಶಾಸಕರಾಗಿದ್ದ ಅಂಜನಾಮೂರ್ತಿ, ನೆಹರು ಓಲೇಕಾರ್, ಈಗ ಐಟಿ–ಬಿಟಿ ಸಚಿವರಾಗಿರುವ ಪ್ರಿಯಾಂಕ್ ಖರ್ಗೆ ಸೇರಿದಂತೆ ಇಲ್ಲಿಯವರೆಗೆ 11 ಮಂದಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಒಂದಿಬ್ಬರನ್ನು ಹೊರತುಪಡಿಸಿ ಯಾರೂ ಸಮರ್ಥವಾಗಿ ಕಾರ್ಯನಿರ್ವಹಿಸಿಲ್ಲ. ಆಯೋಗದಲ್ಲಿ 1,727 ಪ್ರಕರಣಗಳು ಬಾಕಿ ಇವೆ. ಆಯೋಗಕ್ಕೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಎನ್.ಮೂರ್ತಿ, ಜೆ.ಸಿ. ವೆಂಕಟರಮಣಪ್ಪ, ಆರ್. ಮೋಹನ್‌ರಾಜ್, ಲಯನ್ ಬಾಲಕೃಷ್ಣ, ಶಂಕರ್ ರಾಮಲಿಂಗಯ್ಯ, ಆರ್. ಚಂದ್ರಶೇಖರ್, ಪ್ರಶಾಂತ್, ಅರುಣ್ ಟೈಗರ್, ಕೆ. ಜಗದೀಶ್, ದಲಿತ್ ರಮೇಶ್, ಸ್ವಪ್ನಾ ಉಪಸ್ಥಿತರಿದ್ದರು.

ಕಲ್ಕುಂಟೆ ಎಜುಕೇಷನ್ ಟ್ರಸ್ಟ್ (ರಿ)

(Regd. No.324/39-40) (S.Cadambi Vidya Kendra)

ನೋಂದಾಯಿತ ಕಚೇರಿ ವಿಳಾಸ: CA # 2, 10ನೇ ಮುಖ್ಯರಸ್ತೆ, 2ನೇ ಅಡ್ಡ ರಸ್ತೆ, 3ನೇಹಂತ, ವೆಸ್ಟ್ ಅಫ್ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079. **Ph.: 080-23232831, 23226019**

ಜಮೀನು ಮಾರಾಟಕ್ಕೆ ಟೆಂಡರ್ ಪ್ರಕಟಣೆ

KET ಸಂಸ್ಥೆಯ ಕಗ್ಗಲೀಪುರದಲ್ಲಿರುವ 1.5 ಎಕರೆ ಆಸ್ತಿ ಮಾರಾಟಕ್ಕೆ ಸಾರ್ವಜನಿಕ ಪ್ರಕಟಣೆ

ಕಲ್ಕುಂಟೆ ಎಜುಕೇಷನ್ ಟ್ರಸ್ಟ್ (ರಿ) (ಮುಂದೆ KET ಎಂದು ಉಲ್ಲೇಖಿಸಲಾಗುತ್ತದೆ) ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ, 1960ರ ಅಡಿಯಲ್ಲಿ ನೋಂದಾಯಿತ ಸಂಸ್ಥೆಯಾಗಿದೆ. ಶೈಕ್ಷಣಿಕ ಅಭಿವೃದ್ಧಿಯ ದೂರದೃಷ್ಟಿ ಹೊಂದಿದ್ದ ದಾನಿಗಳು ಮತ್ತು ಶಿಕ್ಷಣ ತಜ್ಞರು KET ಸಂಸ್ಥೆಯನ್ನು ಸ್ಥಾಪನೆ ಮಾಡಿದರು. KET ಕ್ರಿ.ಶ. 1926ರಲ್ಲಿ ರೂಪುಗೊಂಡು 1939ರಲ್ಲಿ ಸ್ಥಾಪಿತವಾಗಿದೆ. ವ್ಯವಸ್ಥಾಪಕ ಸಮಿತಿ ಸದಸ್ಯರ ಆಡಳಿತಾಧಿಕಾರದ ಅಡಿಯಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತದೆ. ನೋಂದಾಯಿತ ಕಚೇರಿ ವಿಳಾಸ: CA # 2, 10ನೇ ಮುಖ್ಯರಸ್ತೆ, 2ನೇ ಅಡ್ಡ ರಸ್ತೆ, 3ನೇಹಂತ, ವೆಸ್ಟ್ ಅಫ್ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.

KET ಸಂಸ್ಥೆ ಕಗ್ಗಲೀಪುರದಲ್ಲಿರುವ ತನ್ನ ಆಸ್ತಿಯನ್ನು ಮಾರಾಟ ಮಾಡಲು ಸಾರ್ವಜನಿಕ ಪ್ರಕಟಣೆ ಮೂಲಕ ಮೊಹರು ಮಾಡಲಾದ ಟೆಂಡರ್‌ಗಳನ್ನು ಆಹ್ವಾನಿಸುತ್ತಿದೆ. ಮಾರಾಟಕ್ಕೆ ಇರುವ ಆಸ್ತಿ (ಭೂಸ್ವತ್ತು): **ಒಟ್ಟು 1.5 ಎಕರೆ (ಸರ್ವೇ ನಂ. 110/2, 1 ಎಕರೆ 17 ಗುಂಟೆ ಹಾಗೂ ಸರ್ವೇ ನಂ. 395, 03 ಗುಂಟೆ).** ಆಸ್ತಿ ಇರುವ ವಿಳಾಸ: **ಕಗ್ಗಲೀಪುರ ಗ್ರಾಮ, ಉತ್ತರಹಳ್ಳಿ ಹೊಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ, ಕರ್ನಾಟಕ. ಕನಕಪುರ ರಸ್ತೆಗೆ ಹತ್ತಿರದಲ್ಲೇ ಇದ್ದು ಪ್ರಮುಖ ಸ್ಥಳದಲ್ಲಿದೆ.** ಸದರಿ 1.5 ಎಕರೆ ಜಮೀನು ಯಥಾಸ್ಥಿತಿ ಆಧಾರದ (as is where is basis) ಮೇಲೆ ಮಾರಾಟಕ್ಕಿದೆ.

ಆಸಕ್ತರು /ಖರೀದಿದಾರರು ಸಂಸ್ಥೆಯ ನೋಂದಾಯಿತ ಕಚೇರಿಗೆ ಭೇಟಿ ನೀಡಿ, ನಿಯಮಾನುಸಾರ ಟೆಂಡರ್ ದಾಖಲೆಗಳನ್ನು ಪಡೆಯಬಹುದು. ಪ್ರಸ್ತಾವನೆ ಸಲ್ಲಿಸಲು ಆಸಕ್ತಿ ಇರುವ ಖರೀದಿದಾರರು ತಮ್ಮ ಪ್ರಸ್ತಾವನೆ/ಬಿಡ್‌ಗಳನ್ನು ಮೊಹರು ಮಾಡಿದ ಲಕೋಟೆಯ ಮೂಲಕ, ಟೆಂಡರ್ ದಾಖಲೆಗಳ ಅನುಸಾರವಾಗಿ (ಷರತ್ತುಗಳು ಅನ್ವಯಿಸುತ್ತವೆ), ದಿನಾಂಕ: 17.10.2025 ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸಬೇಕು. ಟೆಂಡರ್ ದಾಖಲೆಗಳನ್ನು ಪಡೆಯಲು ಕಚೇರಿ ವಿಳಾಸ: **ಆಡಳಿತಾಧಿಕಾರಿ, ಎಸ್. ಕಡಂಬಿ ವಿದ್ಯಾಕೇಂದ್ರ, CA Site # 2, 10ನೇ ಮುಖ್ಯರಸ್ತೆ, 2ನೇ ಅಡ್ಡ ರಸ್ತೆ, 3ನೇಹಂತ, ವೆಸ್ಟ್ ಅಫ್ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.**

ಟೆಂಡರ್ ದಿನಾಂಕ: **13.09.2025**

ಟೆಂಡರ್ ದಾಖಲೆಗಳನ್ನು ದಿನಾಂಕ: **15.09.2025 ರಿಂದ 30.09.2025 ರವರೆಗೆ (ಎರಡೂ ದಿನಗಳು ಸೇರಿ), ಮಧ್ಯಾಹ್ನ 3.00 ರಿಂದ ಸಂಜೆ 5.00 ಗಂಟೆಯವರೆಗೆ, ಕಚೇರಿಯಿಂದ ಪಡೆಯಬಹುದು.**

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:**17.10.2025 ಸಂಜೆ 4.00 ಗಂಟೆ.**

ಕಲ್ಕುಂಟೆ ಎಜುಕೇಷನ್ ಟ್ರಸ್ಟ್ (ರಿ) ವ್ಯವಸ್ಥಾಪಕ ಸಮಿತಿ ಯಾವುದೇ ಕಾರಣ ನೀಡದೆ, ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ. ಇದನ್ನು ಪ್ರಸ್ತಾವನೆ ಸಲ್ಲಿಸಲು ಆಸಕ್ತಿ ಇರುವ ಎಲ್ಲಾ ಖರೀದಿದಾರರು ಗಮನಿಸಬೇಕು.

ಸಾಮಾನ್ಯ ಕಾರ್ಯದರ್ಶಿ, ಕಲ್ಕುಂಟೆ ಎಜುಕೇಷನ್ ಟ್ರಸ್ಟ್ (ರಿ)

3M INDIA LIMITED

CIN: L31300KA1987PLC013543

Registered Office: Plot Nos. 48-51, Electronic City, Hosur Road, Bengaluru-560 100, Phone: 080-22231414

Email id: investorhelpdesk.in@mmm.com,| Website: www.3m.com/in

Special Window for Re-lodgement of Transfer Requests of Physical Shares

Notice is hereby given that pursuant to SEBI Circular SEBI/HO/MIRSD/MIRSD-PoD/P/CIR/2025/97 dated July 02, 2025, the Company has opened a special window exclusively for the re-lodgement of transfer deeds, which were lodged prior to the deadline of April 01, 2019 and rejected/returned/not attended due to the deficiency in the documents/process/or otherwise. The special window will remain open from July 07, 2025 to January 06, 2026.

Re-lodgement of legally valid and complete documents for transfer of physical shares, where there is no dispute on ownership will be considered. Investors may submit their request till January 06, 2026, with the Registrar & Share Transfer Agent (RTA) of the Company.

The details of RTA: KFin Technologies Limited, Unit: 3M India Limited, Selenium Tower B, Plot 31-32, Gachibowli, Financial District, Nanakramguda, Hyderabad – 500 032,

Email: einward.ris@kfintech.com / rajeev.kr@kfintech.com, Ph No. 040-6716 1524

During this period, the securities that are re-lodged for transfer shall be issued only in demat mode. Investors must have a demat account and provide its Client Master List ('CML'), along with the transfer documents and share certificate, while re-lodging the transfer request with RTA. Due process shall be followed for such transfer-cum-demat requests.

We reiterate that re-lodgement will be allowed only in those cases where transfer deed for physical shares were lodged before April 01, 2019 and were rejected/returned/not attended due to the deficiency in the documents/process/or otherwise.

Place: Bengaluru
Date: September 12, 2025

For 3M India Limited
Pratap Rudra Bhuvanagiri
Company Secretary

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ

ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)

4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ರೆಗ್ಯುಲೇಷನ್ 33(2))

ಡಿಮ್ಯಾಂಡ್ ನೋಟೀಸು

ಡೆಟ್ಸ್ ಡ್ಯೂ ಟು ಬ್ಯಾಂಕ್ಸ್ ಅಂಡ್ ಅದರ್ ಫೈನಾನ್ಷಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು.

ಆರ್ ಸಿ ನಂ. 979/2024 ಒಎ 1401/2022

ಭಾರತೀಯ ಸ್ಟೇಟ್ ಬ್ಯಾಂಕ್ Vs ಶ್ರೀಮತಿ ಮಂಜುಳ ಸೋಮಶೇಖರ್

ಇವರಿಗೆ (ಸಿಹೆಚ್) ಭಾರತೀಯ ಸ್ಟೇಟ್ ಬ್ಯಾಂಕ್, ಒತ್ತಡಗ್ರಸ್ತ ಆಸ್ತಿಗಳ ವಸೂಲಿ ಶಾಖೆ, ನಂ. 11/30 3ನೇ ಮಹಡಿ, ಬೆಂಗಳೂರು – 560 002, ಕರ್ನಾಟಕ ....**ಸರ್ಟಿಫಿಕೇಟ್ ಹೋಲ್ಡರ್**

Vs

(ಸಿಡಿ 1) ಶ್ರೀಮತಿ ಮಂಜುಳ ಸೊಮಶೇಖರ್ W/o. ಲೇಟ್ ಬಿ. ಸೋಮಶೇಖರ್, ಮಾಲೀಕರು : ಮೆ. ಗೌರವ್ ಇಂಡಸ್ಟ್ರೀಸ್, ನಂ. 102–ಬಿ, 2ನೇ ಮುಖ್ಯ ರಸ್ತೆ, ಕಡಬಗೆರೆ ಕ್ರಾಸ್, ಮಾಚೋಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು – 560 091, ಕರ್ನಾಟಕ

ಮತ್ತೊಂದು ವಿಳಾಸ : ಶ್ರೀಮತಿ ಮಂಜುಳ ಸೊಮಶೇಖರ್ W/o. ಲೇಟ್ ಬಿ. ಸೋಮಶೇಖರ್, ಮಾಲೀಕರು: ಮೆ. ಗೌರವ್ ಇಂಡಸ್ಟ್ರೀಸ್, ನಂ. 15/23, 2ನೇ ಮುಖ್ಯ ರಸ್ತೆ, ಮಾರೇನಹಳ್ಳಿ, ಸರಸ್ವತಿನಗರ , ಬೆಂಗಳೂರು – 560 040, ಕರ್ನಾಟಕ . ....**ಸರ್ಟಿಫಿಕೇಟ್ ಡೆಟರ್ಸ್**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ–2) ಇವರು ಒ.ಎ. ನಂ. 1401/2022 ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. **11007256/-** (ರೂಪಾಯಿ ಒಂದು ಕೋಟಿ ಹತ್ತು ಲಕ್ಷದ ಏಳು ಸಾವಿರದ ಇನ್ನೂರ ಐವತ್ತ ಆರು ಮಾತ್ರ) ಜೊತೆಗೆ ದಿನಾಂಕ 09.09.2022 ರಿಂದ ಪೂರ್ತಿಪಾವತಿಯ ದಿನಾಂಕದವರೆಗೆ ಶೇ.14.30% ನಂತೆ ಬಡ್ಡಿ ಅರ್ಧ ವಾರ್ಷಿಕ ಚಕ್ರಬಡ್ಡಿ ಮತ್ತು **ವೆಚ್ಚ ರೂ.113000/- (ರೂಪಾಯಿ ಒಂದು ಲಕ್ಷ ಹದಿಮೂರು ಸಾವಿರ ಮಾತ್ರ)** ಮತ್ತು ಇತರ ಖರ್ಚು ಸರ್ಟಿಫಿಕೇಟ್ ಡೆಟರ್ಸ್‌ರವರಿಂದ ಬಾಕಿ ಇರುತ್ತದೆ. 2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್ಸಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. 4) ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ : (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ. (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **05.11.2024ರಂದು** ಕೊಡಲ್ಪಟ್ಟಿದೆ.

ಸಹಿ/ ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ, (ಡಿಆರ್‌ಟಿ–2)
ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ: 16 (1) ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ಸಾರ್ವಜನಿಕ ನೋಟೀಸು – ಇ–ಹರಾಜು

ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)

ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು

ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ

ಇ–ಹರಾಜಿನ ದಿನಗಳು: 09.10.2025 ಮತ್ತು 10.10.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು 'ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ' ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	'ಎ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 09.10.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	11.49 ಕೋಟಿ	1.149 ಕೋಟಿ
	'ಬಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 09.10.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಡಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	6.03 ಕೋಟಿ	0.603 ಕೋಟಿ
	'ಸಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ ಮತ್ತು ಬಿ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 09.10.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 3	ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಮತ್ತು ತಮಿಳುನಾಡಿನಲ್ಲಿ ಗುತ್ತಿಗೆಗೆ ತೆಗೆದುಕೊಂಡಿರುವ ಸ್ಥಳಗಳಲ್ಲಿರುವ ಯಂತ್ರೋಪಕರಗಳನ್ನು ಹೊರತುಪಡಿಸಿ ದಿವಾಳಿ ಪ್ರಕ್ರಿಯೆ ನಿಯಮಗಳ (ನಿಯಮ 32ಎ ಜೊತೆಗೆ ನಿಯಮ 32(ಇ) ಅನ್ನು ಓದಿಕೊಂಡಂತೆ) ಅಡಿಯಲ್ಲಿ ಕಾರ್ಪೊರೇಟ್ ಸಾಲಗಾರ ಕಂಪನಿಯನ್ನು ಅದು ಕಾರ್ಯನಿರ್ವಹಿಸುತ್ತಿರುವಂತೆಯೇ ಮಾರಾಟಮಾಡುವುದು. ಇದಕ್ಕೆ ಕೆಲವು ನಿರ್ದಿಷ್ಟ ವಿನಾಯತಿಗಳಿವೆ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಡಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	5.36 ಕೋಟಿ	0.536 ಕೋಟಿ
	'ಡಿ' ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಮಾರಾಟ (ಒಂದೊಮ್ಮೆ ವರ್ಗ ಎ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 09.10.2025ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ		
ಆಸ್ತಿ ಪಟ್ಟಿ 4	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೊರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೇ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	96.00 ಲಕ್ಷ	9.60 ಲಕ್ಷ
ಆಸ್ತಿ ಪಟ್ಟಿ 5	ಮಂಗಳೂರಿನ ಬಾಂಗ್ರಾ ಕುಲೂರಿನ ನಂ. 15,16,17,24,25 ಮತ್ತು 26 –1ರಲ್ಲಿರುವ 14,081.65 ಚದರ ಅಡಿ ವಿಸ್ತೀರ್ಣದ, ಆರು ವಾಣಿಜ್ಯ ನಿವೇಶನಗಳು – ಇದರ ಸಂಪೂರ್ಣ ಸ್ವತ್ತು	2.13 ಕೋಟಿ	0.213 ಕೋಟಿ
ಆಸ್ತಿ ಪಟ್ಟಿ 6	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	2.63 ಕೋಟಿ	0.263 ಕೋಟಿ
	'ಇ' ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 10.10.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 7	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	54.00 ಲಕ್ಷ	5.40 ಲಕ್ಷ
ಆಸ್ತಿ ಪಟ್ಟಿ 8	ಸರ್ವೇ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	62.00 ಲಕ್ಷ	6.20 ಲಕ್ಷ
ಆಸ್ತಿ ಪಟ್ಟಿ 9	ಸರ್ವೇ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	30.00 ಲಕ್ಷ	3.00 ಲಕ್ಷ
	'ಎಫ್' ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 10.10.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 10	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	2.16 ಕೋಟಿ	0.216 ಕೋಟಿ
	'ಜಿ' ವರ್ಗ: ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 10 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 10.10.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 11	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	35.00 ಲಕ್ಷ	3.50 ಲಕ್ಷ
	'ಹೆಚ್' ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 11 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ–ಹರಾಜು ಮೂಲಕ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ 10.10.2025 ರಂದು ಸಂಜೆ 05.00 ರಿಂದ 06.00 ರವರೆಗೆ		
ಆಸ್ತಿ ಪಟ್ಟಿ 12	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	1.82 ಕೋಟಿ	0.182 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ 'ಇ–ಹರಾಜು ಪ್ರಕ್ರಿಯೆಯ ಮಾಹಿತಿ' (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **'ಎ' ಅಥವಾ 'ಬಿ' ಅಥವಾ 'ಸಿ' ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳು ಮತ್ತು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **06.10.2025**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ದಿನಾಂಕ: 12.09.2025
ಸ್ಥಳ: ಬೆಂಗಳೂರು

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110
ದೂರವಾಣಿ: 080–29599998 e-mail : forest.brzp@gmail.com

ಸಂ: ಎ3/ಬಿಯುಡಿ/RKVY/ಟೆಂಡರ್/ಸಿಆರ್–/2025–26 ದಿನಾಂಕ: 12.09.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ (ಆರ್.ಕೆ.ವಿ.ವೈ) ಯೋಜನೆಯಡಿ ನರ್ಸರಿಗಳಲ್ಲಿ ವಿವಿಧ ಅರಣ್ಯ ಜಾತಿಯ ಸಸಿಗಳನ್ನು ವಿವಿಧ ಅಳತೆಯ ನೇಯ್ದ ಪಾಲಿಥಿನ್ ಚೀಲಗಳಲ್ಲಿ ಬೆಳೆಸುವುದು ಮತ್ತು ರಸ್ತೆಬದಿ ನೆಡುತೋಪು (ಆರ್.ಎಸ್.ಪಿ.) ಯೋಜನೆಯಡಿ ಗುಂಡಿ ತೆಗೆಯುವ ಹಾಗೂ ನರ್ಸರಿಗಳಲ್ಲಿ 14"x20" ಅಳತೆಯ ನೇಯ್ದ ಪಾಲಿಥಿನ್ ಚೀಲಗಳಲ್ಲಿ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪೋರ್ಟಲ್ http://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 20–09–2025 ಸಂಜೆ 5.30 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22–09–2025ರ ಅಪರಾಹ್ನ 12.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳನ್ನು ಯಶಸ್ವಿಯಾಗಿ ಪೂರೈಸಿದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸಿಲ್ಲದೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 23.09.2025 ರಂದು ಅಪರಾಹ್ನ 12–00 ಗಂಟೆಗೆ ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ. ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/2797/ಆಕಾರ್/2025–26

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, (i) **ಶ್ರೀಮತಿ. ರಂಜನಿ ಇಸ್ಪಹನಿ,** ಕೋಂ ಲೇಟ್ ಶ್ರೀ. ಸೈಯದ್ ಅಲಿ ಇಸ್ಪಹನಿ; ಮತ್ತು (ii) **ಕುಮಾರಿ. ಫಿರುಝೇ ಇಸ್ಪಹನಿ,** ಬಿನ್ ಲೇಟ್ ಶ್ರೀ. ಸೈಯದ್ ಅಲಿ ಇಸ್ಪಹನಿ (ಇನ್ನು ಮುಂದೆ ಇವರನ್ನು **"ಮಾಲೀಕರು"** ಎಂದು ಕರೆಯಲ್ಪಡುವ), ಇವರ ಮಾಲೀಕತ್ವದ ಷೆಡ್ಯೂಲ್‌ನಲ್ಲಿ ವಿವರಿಸಿರುವ ಮತ್ತು ಇನ್ನು ಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಈ ಸ್ವತ್ತುಗಳ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ. ಈ ಷೆಡ್ಯೂಲ್ ಸ್ವತ್ತುಗಳಿಗೆ ತಾವೇ ಜಂಟಿ ಮತ್ತು ಸಂಪೂರ್ಣ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತುಗಳ ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಸದರಿ ಮಾಲೀಕರು ಸದರಿ ಷೆಡ್ಯೂಲ್ ಸ್ವತ್ತುಗಳ ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಯಾವುದೇ ವ್ಯಕ್ತಿ/ಗಳು, ಕಂಪನಿ ಅಥವಾ ಸಂಸ್ಥೆಯು ಷೆಡ್ಯೂಲ್ ಸ್ವತ್ತುಗಳ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಲಿಸ್ ಪೆಂಡೆನ್ಸ್, ಯಾವುದೇ ನ್ಯಾಯಾಂಗ/ ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ ಒಪ್ಪಂದ, ಪವರ್ ಆಫ್ ಅಟಾರ್ನಿ, ವಿಲ್, ಸ್ವಾಧೀನ, ಆಯ್ಕೆ, ಎಫ್‌ಎಆರ್/ಎಫ್‌ಎಸ್‌ಐ, ಪ್ರಥಮ ನಿರಾಕರಣೆ ಹಕ್ಕು, ಮುನ್‌ಕೊಳ್ಳುವಿಕೆ, ಅಥವಾ ಯಾವುದೇ ಸ್ವರೂಪದ ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಈ ನೋಟೀಸ್ ಪ್ರಕಟವಾದ **15 (ಹದಿನೈದು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಅಂತಹ ಆಕ್ಷೇಪಣೆಗಳು ಮತ್ತು ಕ್ಲೇಮುಗಳನ್ನು ಸಲ್ಲಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆ ಯಾರೂ ಈ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರವನ್ನು ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳು

ಐಟಂ ನಂ. 1:

ಬೆಂಗಳೂರು – 560 052, ವಾರ್ಡ್ ನಂ. 110 – ಸಂಪಂಗಿರಾಮನಗರ, ಅಲಿ ಅಸ್ಕರ್ ರಸ್ತೆಯಲ್ಲಿರುವ ಸ್ಥಿರಾಸ್ತಿ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ **24,336.33 ಚದರ ಅಡಿಗಳು**, ಈ ಸ್ವತ್ತಿನ **ಮುನಿಸಿಪಲ್ ನಂ. 17/17**, ಹಳೆಯ ಮುನಿಸಿಪಲ್ ನಂ. 17 ರ ಭಾಗವಾದ ಹಾಗೂ ಇದರ ಹಿಂದಿನ ಮುನಿಸಿಪಲ್ ನಂ. 11 ರ ಭಾಗವಾಗಿದ್ದು, ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವಕ್ಕೆ : ಮುನಿಸಿಪಲ್ ನಂ. 17 ರ ಉಳಿದ ಭಾಗ;
ಪಶ್ಚಿಮಕ್ಕೆ : ಅಲಿ ಅಸ್ಕರ್ ಅಡ್ಡ ರಸ್ತೆ;
ಉತ್ತರಕ್ಕೆ : ಮುನಿಸಿಪಲ್ ನಂ. 17 ರ ಉಳಿದ ಭಾಗ; ಮತ್ತು
ದಕ್ಷಿಣಕ್ಕೆ : ಅಲಿ ಅಸ್ಕರ್ ರಸ್ತೆ.

ಐಟಂ ನಂ. 2:

ಬೆಂಗಳೂರು – 560 052, ವಾರ್ಡ್ ನಂ. 110 – ಸಂಪಂಗಿರಾಮನಗರ, ಎಸ್.ಆರ್.ಟಿ. ರಸ್ತೆಯಲ್ಲಿರುವ (ಕನ್ನಿಂಗ್‌ಹ್ಯಾಂ ರಸ್ತೆ), ಸ್ಥಿರಾಸ್ತಿ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ **18,621.72 ಚದರ ಅಡಿಗಳು**, ಈ ಸ್ವತ್ತಿನ **ಮುನಿಸಿಪಲ್ ನಂ. 35/4 ಮತ್ತು 35/5**, ಹಳೆಯ ಮುನಿಸಿಪಲ್ ನಂ. 17 ರ ಭಾಗವಾದ ಹಾಗೂ ಇದರ ಹಿಂದಿನ ಮುನಿಸಿಪಲ್ ನಂ. 11 ರ ಭಾಗವಾಗಿದ್ದು, ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವಕ್ಕೆ : ಮುನಿಸಿಪಲ್ ನಂ. 17 ರ ಉಳಿದ ಭಾಗ (ಶಹ ಸುಲ್ತಾನ್ ಕಾಂಪ್ಲೆಕ್ಸ್);
ಪಶ್ಚಿಮಕ್ಕೆ : ಅಲಿ ಅಸ್ಕರ್ ಅಡ್ಡ ರಸ್ತೆ;
ಉತ್ತರಕ್ಕೆ : ಎಸ್.ಆರ್.ಟಿ. ರಸ್ತೆ (ಕನ್ನಿಂಗ್‌ಹ್ಯಾಂ ರಸ್ತೆ); ಮತ್ತು
ದಕ್ಷಿಣಕ್ಕೆ : ಮುನಿಸಿಪಲ್ ನಂ. 17 ರ ಉಳಿದ ಭಾಗ.

ಸಿ.ಆರ್. ಮುರಳಿಧರನ್, ಪಾಲುದಾರರು
ದುಅ ಅಸೋಸಿಯೇಟ್ಸ್
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್
130/1, 2ನೇ ಮಹಡಿ, ಹಲಸೂರು ರಸ್ತೆ,
ಬೆಂಗಳೂರು – 560 042
ದೂ. ಸಂ. 91–80–25588799/ 25589909
ಇ–ಮೇಲ್: murali@duaassociates.com

ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟೆಂಬರ್ 13, 2025

ನೈರುತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ
ಬಿ/ಟಿಆರ್‌ಡಿ.2025–26/18 ದಿನಾಂಕ: 06.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಜೋಲಾರಪೇಟೆ ವಿಭಾಗದಲ್ಲಿ ವಿಭಾಗೀಯ ವೇಗವನ್ನು ಗಂಟೆಗೆ 110 ಕಿ.ಮೀ ನಿಂದ ಗಂಟೆಗೆ 130 ಕಿ.ಮೀ ಗೆ ಹೆಚ್ಚಿಸುವ ಮತ್ತು ಬೆಂಗಳೂರು ವಿಭಾಗದಲ್ಲಿ ಅನಗತ್ಯ ಮಾಸ್ಟ್/ಪೋರ್ಟಲ್ ಅನ್ನು ತೆಗೆದುಹಾಕುವ ಸಂಬಂಧ ಓಎಚ್‌ಇ ಮಾರ್ಪಾಡುಗಳು **ಪೂರ್ಣಗೊಳ್ಳಬೇಕಾದ ಅವಧಿ: 09 ತಿಂಗಳು**	ರೂ.1,00,69,467.58/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29–09–2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು

ಪಿಯುಬಿ/450/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ ಬಿ/ಟಿಆರ್‌ಡಿ. 2025–26/17ದಿನಾಂಕ: 06.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈರುತ್ಯ ರೈಲ್ವೆ– ಬೆಂಗಳೂರು ವಿಭಾಗ– ನಿಡವಂಡ ನಿಲ್ದಾಣದಲ್ಲಿ ರಸ್ತೆ–1 ಬದಿಯಲ್ಲಿ 01 ಹೆಚ್ಚುವರಿ ಲೂಪ್ ಲೈನ್ ಒದಗಿಸುವುದಕ್ಕೆ ಸಂಬಂಧಿಸಿದಂತೆ –ಓಎಚ್‌ಇ ಮಾರ್ಪಾಡುಗಳು [ii] ನಿಡವಂಡ–ಹಿರೇಹಳ್ಳಿ ನಿಲ್ದಾಣಗಳ ನಡುವಿನ ಕಿ.ಮೀ. 49/200–300ರಲ್ಲಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 28 ರ ಬದಲಿಗೆ ಪ್ರಸ್ತಾವಿತ ರಸ್ತೆ ಕೆಳ ಸೇತುವೆಗೆ ಸಂಬಂಧಿಸಿದಂತೆ ಓಎಚ್‌ಇ ಮಾರ್ಪಾಡುಗಳು (ಡಬಲ್ ಟ್ರ್ಯಾಕ್) ಎರಡೂ ಬದಿಗಳಲ್ಲಿ 85 ಮೀಟರ್ ಯು–ಟೈಪ್ ರಿಟೇನಿಂಗ್ ವಾಲ್ ಮತ್ತು 135 ಮೀಟರ್ ಸಂಪರ್ಕ ರಸ್ತೆ **ಪೂರ್ಣಗೊಳಿಸುವ ಅವಧಿ: 11 ತಿಂಗಳು**	ರೂ.1,38,91,597.02/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29–09–2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು

ಪಿಯುಬಿ/449/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ
ಬಿ/ಟಿಆರ್‌ಡಿ.2025–26/12 ದಿನಾಂಕ: 06.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
[I] ಪ್ರಸ್ತಾವಿತ ರಸ್ತೆ–06 (686 ಮೀ ಸರ್ ಲೈನ್) ಅನ್ನು ಎಸ್‌ವಿಸಿ ತುದಿಯ ಕಡೆಗೆ 650 ಮೀಟರ್ ಶಂಟಿಂಗ್ ನೆಕ್‌ನೊಂದಿಗೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಬಿಡ್–ಓಹೆಚ್‌ಇ ಮಾರ್ಪಾಡುಗಳು, ರಸ್ತೆ–5 ಪಕ್ಕದಲ್ಲಿರುವ ಅಸ್ತಿತ್ವದಲ್ಲಿರುವ ಸರಕುಗಳ ಇಳಿಸುವಿಕೆಯ ವೇದಿಕೆಯನ್ನು ಕಿತ್ತುಹಾಕುವುದು [ii] ವೈಟಿಎಸ್‌ಕೆ ಡೌನ್ ಲೈನ್ ಪಿಟಿಎಫ್‌ಇ ಅನ್ನು ಬದಲಾಯಿಸಲು ಓಎಚ್‌ಇ ಮಾರ್ಪಾಡು. ಪೂರ್ಣಗೊಳ್ಳುವ ಅವಧಿ 10 ತಿಂಗಳುಗಳು	ರೂ. 1,31,47,138.73/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29–09–2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್/ಟಿಆರ್‌ಡಿ, ಬೆಂಗಳೂರು

ಪಿಯುಬಿ/447/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ
ಬಿ/ಟಿಆರ್‌ಡಿ.2025–26/14 ದಿನಾಂಕ: 06.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
[i] ಚಿಕ್ಕಬಾಣಾವರ, ಯಡಿಯೂರು, ಶ್ರವಣಬೆಳಗೊಳ ಮತ್ತು ನೆಲಮಂಗಲ ರೋಡ್ ನಿಲ್ದಾಣಗಳಲ್ಲಿ 420 ಮೀ ಉದ್ದದ ಟ್ರ್ಯಾಕ್ ಮೆಷಿನ್ ಸೈಡಿಂಗ್ ನಿರ್ಮಾಣಕ್ಕೆ ಅಗತ್ಯವಿರುವ ಓಎಚ್ ಇ ಮಾರ್ಪಾಡು [ii] ಬಿಜಿ ನಗರ ಪಿಎಫ್–1&2 16 ಮೀಟರ್, ಹಿರಿಸಾವೆ ಪಿಎಫ್–1, 2 ಮತ್ತು 3 ರಲ್ಲಿ 20 ಮೀಟರ್, ಶ್ರವಣಬೆಳಗೊಳ ಪಿಎಫ್–1, ಪಿಎಫ್–2&3 ತಲಾ 138 ಮೀಟರ್, ಚನ್ನರಾಯಪಟ್ಟಣ ಪಿಎಫ್–1, 2 ಮತ್ತು 3 ರಲ್ಲಿ 140 ಮೀಟರ್ ಮತ್ತು ಕುಣಿಗಲ್ ಉಪ ವಿಭಾಗದ ಸಹಾಯಕ ವಿಭಾಗೀಯ ಎಂಜಿನಿಯರ್ ವ್ಯಾಪ್ತಿಯ ಚನ್ನರಾಯಪಟ್ಟಣ ನಿಲ್ದಾಣದಲ್ಲಿ ಕಾಂಪೌಂಡ್ ಗೋಡೆಯ ಪ್ರಸ್ತಾವಿತ ವಿಸ್ತರಣೆಗೆ ಸಂಬಂಧಿಸಿದಂತೆ ಓಎಚ್‌ಇ ಮಾರ್ಪಾಡು. [iii] ಬೆಂಗಳೂರು ವಿಭಾಗದ ಚಿಕ್ಕಬಾಣಾವರ–ಹಾಸನ (ಜಿಆರ್ 296) ವಿಭಾಗಗಳ ವಿದ್ಯುದೀಕರಣದ ಬಾಕಿ ಉಳಿದಿರುವ ಕಾಮಗಾರಿಗಳು. [iv] ಚಿಕ್ಕಬಾಣಾವರ–ಹಾಸನ ವಿಭಾಗದಲ್ಲಿ ಎಂಜಿನಿಯರಿಂಗ್ ಟ್ರ್ಯಾಕ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟಿಆರ್‌ಡಿ ಕೆಲಸ.	ರೂ.1,56,83,153.85/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29–09–2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು

ಪಿಯುಬಿ/448/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ವೈದ್ಯ ಸೀಟಿಗಾಗಿ ನಕಲಿ ದಾಖಲೆ: ಕೆಇಎ ದೂರು

21 ಅಭ್ಯರ್ಥಿಗಳು, ಸುಳ್ಳು ದಾಖಲೆ ಸೃಷ್ಟಿಸಿದ ನಾಲ್ವರ ವಿರುದ್ಧ ಕ್ರಮ?

● ರಹಸ್ಯ ಪತ್ರ ಬರೆದಿದ್ದ ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ

● ರಾಜೇಶ್ ರೈ ಚಟ್ಲ

ಬೆಂಗಳೂರು: ನಕಲಿ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿ ಅಂಗವಿಕಲ ಕೋಟಾದ ಮೀಸಲಾತಿ ಅಡಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯಲು ಯತ್ನಿಸಿದ ಜಾಲವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಭೇದಿಸಿದೆ.

ಪ್ರಕರಣವು ಮೇಲ್ನೋಟಕ್ಕೆ ಸಾಬೀತಾಗಿರುವ ಕಾರಣ 21 ಅಭ್ಯರ್ಥಿಗಳು ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸಲು ಸಹಕರಿಸಿದ ನಾಲ್ವರ ವಿರುದ್ಧ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರ ನಿರ್ದೇಶನದಂತೆ ಮುಖ್ಯ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ್ ಅವರು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

21 ಅಭ್ಯರ್ಥಿಗಳು ಶ್ರವಣ ದೋಷವಿದೆ ಎಂದು ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿದ್ದರು. ಈ ಪೈಕಿ, ಹೆಚ್ಚಿನವರು ಯುಡಿ ಐಡಿ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ಅನ್ನು ವಿಜಯನಗರ ಜಿಲ್ಲೆಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಿಂದ ಪಡೆದಿದ್ದಾರೆ. ಯುಡಿ ಐಡಿ ಪಡೆಯಲು ಇತ್ತೀಚೆಗೆ ಪಡೆದ ವೈದ್ಯಕೀಯ ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದರು.

2025ನೇ ಸಾಲಿನಲ್ಲಿ ಯುಜಿಸಿಇಟಿ, ಯುಜಿ ನೀಟ್ ಪರೀಕ್ಷೆಗೆ ಹಾಜರಾದ ಈ ಅಭ್ಯರ್ಥಿಗಳು ಅಂಗವಿಕಲ ಕೋಟಾದ ಅಡಿ ವೈದ್ಯಕೀಯ ಸೀಟು ಕೋರಿದ್ದರು. ಆದರೆ, ಅವರಲ್ಲಿ ಹೆಚ್ಚಿನವರು ಮೂಲ ಅರ್ಜಿಯಲ್ಲಿ ಅಂಗವಿಕಲ ಮೀಸಲಾತಿ ಕೋರದೆ, ನಂತರ ಅರ್ಜಿ ತಿದ್ದುಪಡಿ ಮೂಲಕ ಅಂಗವಿಕಲ ಮೀಸಲಾತಿ ಕೋರಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು.

ಸಿಇಟಿ–2006 ನಿಯಮಗಳ ಪ್ರಕಾರ ಅಂಗವಿಕಲ ಕೋಟಾದ ಅಡಿ ಸೀಟು ಕೋರಿರುವ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆಯನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ (ಡಿಎಂಇ) ರಚಿಸಿದ ವೈದ್ಯಕೀಯ ಮಂಡಳಿಯಿಂದ ತಪಾಸಣೆಗೆ ಒಳಪಡಿಸಲಾಗುತ್ತದೆ. ಅಲ್ಲಿಂದ ಬಂದ ಅರ್ಹತೆ ಆಧಾರದಲ್ಲಿ ಮೆರಿಟ್ ಪ್ರಕಾರ ಕೆಇಎ ಸೀಟು ಹಂಚಿಕೆ ಮಾಡುತ್ತದೆ. ಹೀಗಾಗಿ, ಕೆಇಎ ಈ ಅಭ್ಯರ್ಥಿಗಳನ್ನು ವೈದ್ಯಕೀಯ ತಪಾಸಣೆಗಾಗಿ ಜುಲೈ 9 ಮತ್ತು 17ರಂದು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿತ್ತು.

ಸೆ.1ರಂದು ಕೆಇಎಗೆ ರಹಸ್ಯ ಪತ್ರ ಬರೆದಿರುವ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ‘ಈ ಅಭ್ಯರ್ಥಿಗಳು ನಕಲಿ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿದ್ದು, ಈ ಬಗ್ಗೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಕೋರಿದ್ದಾರೆ.

ರಹಸ್ಯ ಪತ್ರದಲ್ಲಿ ಏನಿದೆ: ‘ಶ್ರವಣ ದೋಷದ ನೈಜತೆಯ ತಪಾಸಣೆಗೆ ಎಲ್ಲ 21 ಅಭ್ಯರ್ಥಿಗಳನ್ನು ಆಡಿಯೊಗ್ರಾಂ ಬೆರಾ (ಶ್ರವಣ ದೋಷ ಪರೀಕ್ಷೆ) ಪರೀಕ್ಷೆಗೆ ನಿಮ್ಹಾನ್ಸ್‌ಗೆ ಕಳುಹಿಸಲಾಗಿತ್ತು. ಈ ಪೈಕಿ, ಎಂಟು ಅಭ್ಯರ್ಥಿಗಳ ಅಂಗವಿಕಲ ಪ್ರಮಾಣಪತ್ರದ ಬಗ್ಗೆ ವಿಕ್ಟೋರಿಯಾ ಆಸ್ಪತ್ರೆಯ ಇಎನ್‌ಟಿ ವಿಭಾಗದ ಪ್ರಾಧ್ಯಾಪಕರು ಸಂಶಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಅಪರ್ಣಾ ಎಂಬ ಅಭ್ಯರ್ಥಿಯು ನಕಲಿ ಅಂಗವಿಕಲ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ವಿಜಯನಗರ ಜಿಲ್ಲೆಯ ಹೊಸಪೇಟೆಯ ಸಾರ್ವಜನಿಕ ಆಸ್ಪತ್ರೆಯಿಂದ ಯುಡಿ ಐಡಿ ಪಡೆದಿದ್ದಾರೆಂದೂ ತಿಳಿಸಿದ್ದಾರೆ. ನಿಮ್ಹಾನ್ಸ್‌ಗೆ ಕಳುಹಿಸಿದ್ದ ಅಭ್ಯರ್ಥಿಗಳು ಅಲ್ಲಿಂದ ಪಡೆಯಲಾಗಿದೆ ಎಂದು ಉಲ್ಲೇಖಿಸಿದ್ದ ಆಡಿಯೊಗ್ರಾಂ ಬೆರಾ ವರದಿಗಳನ್ನು ಸಲ್ಲಿಸಿದ್ದರು.

ವರದಿಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದ ವಿಕ್ಟೋರಿಯಾ ಆಸ್ಪತ್ರೆಯ ಇಎನ್‌ಟಿ ವಿಭಾಗದ ಮುಖ್ಯಸ್ಥ ಡಾ. ಸಿ. ರವಿಶಂಕರ್, ಈ ದಾಖಲೆಗಳ ನೈಜತೆ ಬಗ್ಗೆ ನಿಮ್ಹಾನ್ಸ್‌ಗೆ ಪತ್ರ ಬರೆದಿದ್ದರು. ‘ಈ 21 ಅಭ್ಯರ್ಥಿಗಳ ಪೈಕಿ ಯಾರೊಬ್ಬರೂ ತಮ್ಮಲ್ಲಿ ತಪಾಸಣೆ ನಡೆಸಿಲ್ಲ. ಈ ಅಭ್ಯರ್ಥಿಗಳು ಸಲ್ಲಿಸಿರುವ ವರದಿಗಳು ಅಧಿಕೃತವಲ್ಲ’ ಎಂದು ನಿಮ್ಹಾನ್ಸ್ ವರದಿ ನೀಡಿತ್ತು.

ಕೆಇಎಗೆ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಬರೆದ ರಹಸ್ಯ ಪತ್ರದ ಆಧಾರದಲ್ಲಿ ಈ ಎಲ್ಲ ಅಭ್ಯರ್ಥಿಗಳಿಗೆ ಸೆ. 8ರಂದು ಕೆಇಎ ನೋಟಿಸ್ ನೀಡಿತ್ತು. ಅಂಗವಿಕಲ ಕೋಟಾದ ಅಡಿ ಅರ್ಜಿ ಸಲ್ಲಿಸಿರುವ ಬಗ್ಗೆ ಎಲ್ಲ ಮೂಲ ದಾಖಲೆಗಳನ್ನು ಹಾಜರುಪಡಿಸುವಂತೆ ಸೂಚಿಸಿತ್ತು. ಇಬ್ಬರು ಅಭ್ಯರ್ಥಿಗಳು (ಡಿ. ಜಯದೇವ ಮತ್ತು ಬಿ. ಪ್ರೀತಮ್) ಮತ್ತು ಮೂವರು ಅಭ್ಯರ್ಥಿಗಳ ಪೋಷಕರು ಹಾಜರಾಗಿ ಲಿಖಿತವಾಗಿ ವಿವರಣೆ ನೀಡಿದ್ದಾರೆ. ಅಭ್ಯರ್ಥಿಗಳು ಮತ್ತು ಪೋಷಕರು ನೀಡಿರುವ ಮನವಿಗಳಲ್ಲಿ ಭರಮಪ್ಪ, ರಾಜಣ್ಣ, ಚಂದ್ರಶೇಖರ್ ಮತ್ತು ಚೆನ್ನಕೇಶವ ಎಂಬವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೃತ್ಯದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ.

ಯಾರ ಮೇಲೆ ಎಫ್‌ಐಆರ್

ಅಧ್ಯಂತ ಶರಣ್ಯ, ಬಿ.ಕೆ. ಯಶಸ್, ಬಿ.ಟಿ. ಪುಷ್ಕರ, ಎ. ಸುದರ್ಶನ್, ಕೆ ಭರತ್ ಚಕ್ರವರ್ತಿ, ಅಲಿಯಾ ಫಾತಿಮಾ, ಡಿ. ಜಯದೇವ್, ಪಿ. ವಿಜಯ್ ಮಯೂರ್ , ಎ. ಐಮಾನ್, ವೈ.ಜೆ. ಯುಕ್ತಿರಾಜ್ ಗೌಡ, ಎ.ಎನ್. ಅಪರ್ಣಾ, ಗೀತಿಕಾ ರಾವ್, ಟಿ. ರಿತಿಕಾ, ಪಿ.ಕೆ. ಶ್ರದ್ಧಾ, ಎಂ. ಕೃಷ್ಣ ಚೈತನ್ಯ, ಟಿ.ಪಿ. ಚಿನ್ಮಯ್, ಬಿ. ಪ್ರೀತಮ್ , ಋತ್ವಿಕ್ ದೇವ ಕುಮಾರ್, ಸಾಯಿಶಿವ ಶಿವಪ್ಪಯ್ಯನಮಠ, ಪ್ರೀತಿ ಪಿ.ಪಾಟೀಲ್, ದರ್ಶನ್.

ನೆರವಾದ ನಾಲ್ವರು

ಭರಮಪ್ಪ, ರಾಜಣ್ಣ, ಚಂದ್ರಶೇಖರ್, ಚೆನ್ನಕೇಶವ

ಅಂಗವಿಕಲ ಕೋಟಾದಲ್ಲಿ ಸೀಟಿಗೆ ₹38 ಲಕ್ಷ!

ಅಂಗವಿಕಲ ಕೋಟಾದಡಿ ₹38 ಲಕ್ಷಕ್ಕೆ ಸರ್ಕಾರಿ ವೈದ್ಯಕೀಯ ಸೀಟು ಕೊಡಿಸುವುದಾಗಿ ಚಂದ್ರಶೇಖರ್ ಮತ್ತು ಭರಮಪ್ಪ ಭರವಸೆ ನೀಡಿದ್ದರು. ಈ ಬಗ್ಗೆ ವೈ.ಜೆ. ಯುಕ್ತಾರಾಜ್ ಗೌಡ ಎಂಬ ಅಭ್ಯರ್ಥಿಯ ತಂದೆ ಕೆಇಎಗೆ ನೀಡಿದ್ದ ಲಿಖಿತ ಮನವಿಯಲ್ಲಿ ತಿಳಿಸಿದ್ದಾರೆ.

‘ನನ್ನ ಮಗ ಅರ್ಜಿ ಸಲ್ಲಿಸುವಾಗ ಅಂಗವಿಕಲ ಕೋಟಾ ಎಂದು ನಮೂದಿಸಿರಲಿಲ್ಲ. ನಾನು ಮಗನಿಗೆ ಆಡಳಿತ ಮಂಡಳಿ ಕೋಟಾದಲ್ಲಿ ವೈದ್ಯಕೀಯ ಸೀಟು ಕೊಡಿಸಲು ಹುಡುಕುತ್ತಿದ್ದಾಗ ನನ್ನ ಪರಿಚಯದ ನೆಲಮಂಗಲದ ದೇವರಾಜ್ (ದೈಹಿಕ ಶಿಕ್ಷಕರು) ಅವರ ಸಂಬಂಧಿಕರಾದ ಚಂದ್ರಶೇಖರ್ ಅವರನ್ನು ಪರಿಚಯಿಸಿದರು. ಅವರು ನಂದಿನಿ ಬಡಾವಣೆಯ ಕೃಷ್ಣಾನಂದ ನಗರ ಪ್ರೌಢ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಭರಮಪ್ಪ ಎಂಬುವರ ಮೊಬೈಲ್ ನಂಬರ್ ಕೊಟ್ಟರು. ಚಂದ್ರಶೇಖರ್ ಮತ್ತು ಭರಮಪ್ಪ ಇಬ್ಬರೂ ಸೇರಿ ಅಂಗವಿಕಲ ಕೋಟಾದಲ್ಲಿ ಅರ್ಜಿಯನ್ನು ಮಾರ್ಪಾಡು ಮಾಡಿ ಕೆಇಎಯಿಂದ ಸೀಟು ಕೊಡಿಸುತ್ತೇವೆಂದು ತಿಳಿಸಿದರು. ನನ್ನ ಮಗನ ಹೆಸರಿನಲ್ಲಿ ವಿಕ್ಟೋರಿಯಾ ಮತ್ತು ನಿಮ್ಹಾನ್ಸ್‌ನಲ್ಲಿ ಕೆಲವು ದಾಖಲೆಗಳನ್ನು ಸೃಷ್ಟಿಸಿ ಅಸಲಿ ದಾಖಲೆಗಳನ್ನು ಭರಮಪ್ಪನವರೇ ಇಟ್ಟುಕೊಂಡಿದ್ದಾರೆ. ಅಲ್ಲದೆ, ಚಂದ್ರಶೇಖರ್ ಮತ್ತು ಭರಮಪ್ಪ ಅವರು ₹38 ಲಕ್ಷಕ್ಕೆ ವೈದ್ಯಕೀಯ ಸೀಟು ಕೊಡಿಸುವ ಬಗ್ಗೆ ನನ್ನ ಬಳಿ ಮಾತನಾಡಿ, ₹10 ಲಕ್ಷ ಪಡೆದಿದ್ದಾರೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದರ್ಶನ್ ಭೀಮರಾಯ ಎಂಬ ಅಭ್ಯರ್ಥಿ ಸಲ್ಲಿಸಿದ ಲಿಖಿತ ಮನವಿಯಲ್ಲಿ, ‘ನನಗೆ ಹೆಚ್ಚಿನ ಅಂಕಗಳು ನೀಟ್ ಪರೀಕ್ಷೆಯಲ್ಲಿ ಬರದೆ ಇದ್ದುದರಿಂದ ವೈದ್ಯಕೀಯ ಸೀಟು ಪಡೆಯಲು ಭರಮಪ್ಪ ಅವರನ್ನು ಸಂಪರ್ಕಿಸಿದಾಗ ಅವರು ಅಂಗವಿಕಲ ಕೋಟಾದ ಅಡಿ ವೈದ್ಯಕೀಯ ಸೀಟು ಕೊಡಿಸುವುದಾಗಿ ತಿಳಿಸಿದರು. ಸೀಟಿಗೆ ₹ 35 ಲಕ್ಷ ಆಗುತ್ತದೆ. ₹ 15 ಲಕ್ಷ ಮುಂಗಡ ನೀಡಬೇಕೆಂದೂ ಹೇಳಿದರು. ಮುಂಗಡ ಹಣ ಪಡೆದ ನಂತರ ತನ್ನ ಇ-ಮೇಲ್ ಐಡಿ, ಮೊಬೈಲ್ ನಂಬರ್, ಯೂಸರ್ ಐಡಿ, ಪಾಸ್‌ವರ್ಡ್, ಸಿಇಟಿ ಮತ್ತು ನೀಟ್ ವಿವರಗಳನ್ನು ಪಡೆದುಕೊಂಡರು ಮತ್ತು ಅಂಗವಿಕಲ ಪ್ರಮಾಣಪತ್ರವನ್ನು ಅಂಚೆಯಲ್ಲಿ ಕಳುಹಿಸಿದರು. ಭರಮಪ್ಪನವರೇ ವಿಕ್ಟೋರಿಯಾ ಆಸ್ಪತ್ರೆಗೆ ತೋರಿಸಲು ಕೆಲವು ದಾಖಲೆಗಳನ್ನು ಕೊಟ್ಟರು’ ಎಂದು ತಿಳಿಸಿದ್ದಾರೆ.

ಡಿಸೆಂಬರ್‌ನಲ್ಲಿ ಜಾತಿವಾರು ಸಮೀಕ್ಷೆ ವರದಿ ಸಲ್ಲಿಕೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಇದೇ 22ರಂದು ಆರಂಭಗೊಂಡು ಅ.7ರವರೆಗೆ ನಡೆಯಲಿದ್ದು, ಡಿಸೆಂಬರ್‌ನಲ್ಲಿ ವರದಿ ಸಲ್ಲಿಕೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಈ ಬಾರಿ ಸಮೀಕ್ಷೆಯಲ್ಲಿ ಎಲ್ಲ ಕುಟುಂಬಗಳು ಭಾಗವಹಿಸಬೇಕು. ಯಾರೊಬ್ಬರೂ ತಪ್ಪಿಸಿಕೊಳ್ಳಬಾರದು’ ಎಂದು ಅವರು ಶುಕ್ರವಾರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಸಮೀಕ್ಷಾ ಕೈಪಿಡಿ ಬಿಡುಗಡೆ ಮಾಡಿ ಮನವಿ ಮಾಡಿದರು.

ಸಮೀಕ್ಷೆಯಲ್ಲಿ 60 ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನಾವಳಿ ಇರುತ್ತದೆ. ಅದರಲ್ಲಿ ಪ್ರತಿ ಸದಸ್ಯರ ಧರ್ಮ, ಜಾತಿ, ಉಪಜಾತಿ, ವಿದ್ಯಾರ್ಹತೆ, ಕುಲಕಸುಬು ಕೌಶಲ್ಯ, ಆದಾಯ, ಕುಟುಂಬದ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಸಂಗ್ರಹಿಸಲಾಗುವುದು. ಈಗಾಗಲೇ ಯುಎಚ್‌ಐಡಿ ಸ್ಟಿಕ್ಕರ್ ಅಂಟಿಸುವ ಕೆಲಸ ನಡೆದಿದೆ. ರಾಜ್ಯದ 2 ಕೋಟಿ ಮನೆಗಳ ಪೈಕಿ ಈವರೆಗೆ 1.55 ಕೋಟಿ ಮನೆಗಳಿಗೆ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ ಎಂದರು.

ಶಿಕ್ಷಕರು ಮನೆಗೆ ಸಮೀಕ್ಷೆ ಬರುವುದಕ್ಕೆ 3 ದಿನಗಳ ಮೊದಲೇ ಆಶಾ ಕಾರ್ಯಕರ್ತೆಯರು ಪ್ರಶ್ನಾವಳಿಗಳನ್ನು ವಿತರಿಸುತ್ತಾರೆ. ಇದರಿಂದ ಮನೆಯ ಸದಸ್ಯರು ಎಲ್ಲ ಪ್ರಶ್ನೆಗಳನ್ನು ಓದಿಕೊಂಡು ಉತ್ತರಿಸಲು ಸಹಾಯಕವಾಗುತ್ತದೆ. ಪ್ರಶ್ನೆಗಳನ್ನು ಓದಲು ಬಾರದಿದ್ದವರು ಬೇರೆಯವರ ಸಹಾಯ ಪಡೆದುಕೊಳ್ಳಬಹುದು. ಒಟ್ಟಿನಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು. ಅದಕ್ಕಾಗಿ ಪ್ರತಿಯೊಂದು ಕುಟುಂಬಗಳೂ ತಯಾರಿರಬೇಕು. ಆಶಾ ಕಾರ್ಯಕರ್ತೆಯರು ಶನಿವಾರದಿಂದಲೇ (ಸೆ.13) ಪ್ರಶ್ನಾವಳಿ ವಿತರಿಸುತ್ತಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಒಂದು ವೇಳೆ ಯಾರಿಗಾದರೂ ಸಮೀಕ್ಷೆಯಲ್ಲಿ ಭಾಗವಹಿಸಲು ಆಗದಿದ್ದರೆ ಅಥವಾ ಮನೆಯಲ್ಲಿ ಇಲ್ಲದೇ ಇದ್ದರೆ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬಹುದು ಮತ್ತು ವೆಬ್‌ಸೈಟ್‌ನಲ್ಲಿ ಸಮೀಕ್ಷೆಯ ಮೂಲಕ ಪ್ರಶ್ನೆಗಳಿಗೆ ಉತ್ತರ ನೀಡಿ ಸಮೀಕ್ಷೆಯಲ್ಲಿ ಭಾಗವಹಿಸಬಹುದು ಎಂದರು.

ದಸರಾ ರಜೆ ಸೆಪ್ಟೆಂಬರ್ 22ರಿಂದ ಆರಂಭವಾಗುತ್ತದೆ. ಸಮೀಕ್ಷೆಯಲ್ಲಿ ಸರ್ಕಾರಿ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತದೆ. ಸುಮಾರು 1.75 ಲಕ್ಷ ಶಿಕ್ಷಕರು ಭಾಗವಹಿಸಲಿದ್ದಾರೆ. ಈ ಕಾರ್ಯದಲ್ಲಿ ಭಾಗವಹಿಸುವ ಶಿಕ್ಷಕರಿಗೆ ₹20,000 ದವರೆಗೆ ಸಂಭಾವನೆ ನೀಡಲಾಗುತ್ತದೆ. ಇದಕ್ಕಾಗಿ ₹325 ಕೋಟಿ ಮೀಸಲಿಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಗೇಟೆಡ್ ಕಮ್ಯುನಿಟಿ ಮತ್ತು ಅಪಾರ್ಟ್‌ಮೆಂಟ್‌ಗಳಿಗೂ ಸಮೀಕ್ಷೆಗೆ ಹೋಗುತ್ತಾರೆ. ಅವರೂ ಸಹಕರಿಸಬೇಕು. ಒಂದು ವೇಳೆ ಹೇಳಲು ಸಾಧ್ಯವಾಗದಿದ್ದರೆ, ಆನ್‌ಲೈನ್ ಮೂಲಕ ಮಾಹಿತಿ ನೀಡಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯ್ಕ್ ಇದ್ದರು.

ಸಮೀಕ್ಷೆಗೆ ವಿನೂತನ ವಿಧಾನ

ಈ ಸಮೀಕ್ಷೆಯಲ್ಲಿ ಎಲ್ಲಾ ಕುಟುಂಬಗಳು ಪೂರ್ಣವಾಗಿ ಒಳ್ಳಗೊಳ್ಳಬೇಕು ಎಂಬ ಕಾರಣಕ್ಕಾಗಿ ವಿನೂತನ ಸಮೀಕ್ಷಾ ವಿಧಾನ ಅನುಸರಿಸಲಾಗುತ್ತಿದೆ. ರಾಜ್ಯದ ಬಹುಪಾಲು ಮನೆಗಳು ವಸತಿ ಉದ್ದೇಶದ ವಿದ್ಯುತ್ ಸಂಪರ್ಕ ಹೊಂದಿದ್ದು, ಅವುಗಳಿಗೆ ಆರ್.ಆರ್ ಸಂಖ್ಯೆ ಹೊಂದಿರುವ ಎಲೆಕ್ಟ್ರಿಕ್ ಮೀಟರ್‌ಗಳು ಇರುತ್ತವೆ. ಈ ಮಾಹಿತಿ ಆಧರಿಸಿ ಮನೆಗಳ ಪಟ್ಟಿಯನ್ನು ತಯಾರಿಸಲಾಗಿದೆ. ಹೀಗಾಗಿ ಎಲ್ಲ ಮನೆಗಳು ಮತ್ತು ಕುಟುಂಬಗಳು ಈ ಜಾಲದಲ್ಲಿ ಬಂದಿವೆ. ವಿದ್ಯುತ್ ಸಂಪರ್ಕ ಹೊಂದಿರದ ಮನೆಗಳನ್ನೂ ಪ್ರತ್ಯೇಕ ವಿಧಾನದಿಂದ ಸಮೀಕ್ಷೆಗೆ ಒಳಪಡಿಸಲಾಗುವುದು. ವಿದ್ಯುತ್ ಸಂಪರ್ಕವಿಲ್ಲದ ಮನೆಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಪಿಡಿಒ ಮತ್ತು ಗ್ರಾಮ ಆಡಳಿತಾಧಿಕಾರಿಗಳನ್ನು ಬಳಸಿ ಅಂತಹ ಮನೆಗಳನ್ನು ಜಿಯೋಟ್ಯಾಗ್ ಮಾಡಿ, ಸಮೀಕ್ಷಾ ಬ್ಲಾಕ್‌ಗಳನ್ನು ರಚಿಸಲಾಗಿದೆ. ಈ ಮೂಲಕ 2 ಕೋಟಿ ಕುಟುಂಬಗಳ 7 ಕೋಟಿ ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸಲಾಗುವುದು.

ಆಧಾರ್ ಲಿಂಕ್ ಕಡ್ಡಾಯ

ಕುಟುಂಬದ ಎಲ್ಲಾ ಸದಸ್ಯರ ಆಧಾರ್ ಕಾರ್ಡ್‌ಗಳು ಯಾವ ಮೊಬೈಲ್ ನಂಬರ್‌ಗಳಿಗೆ ಲಿಂಕ್ ಆಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆಧಾರ್ ಕಾರ್ಡ್ ಸಂಖ್ಯೆಗೆ ಈಗ ಬಳಸುತ್ತಿರುವ ಮೊಬೈಲ್ ಸಂಖ್ಯೆ ಲಿಂಕ್ ಆಗಿರದಿದ್ದಲ್ಲಿ ಲಿಂಕ್ ಮಾಡಿಕೊಳ್ಳಬೇಕು. ಮುಖ್ಯವಾಗಿ ಕುಟುಂಬದ ಯಾವುದಾದರೂ ಒಬ್ಬ ಸದಸ್ಯರ 1 ಮೊಬೈಲ್ ಸಂಖ್ಯೆಗೆ ಆ ಕುಟುಂಬದ 9 ಸದಸ್ಯರ ಆಧಾರ್ ಕಾರ್ಡ್ ಸಂಖ್ಯೆಗಳನ್ನು ಲಿಂಕ್ ಮಾಡಲು ಅವಕಾಶವಿದೆ. ಸಹಾಯವಾಣಿ: 8050770004
ವೆಬ್‌ಸೈಟ್: https://kscbc.karnataka.gov.in

ಚಲನಚಿತ್ರಗಳ ಟಿಕೆಟ್ ಗರಿಷ್ಠ ದರ ₹200

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಲ್ಟಿಪ್ಲೆಕ್ಸ್‌ಗಳೂ ಸೇರಿ ಎಲ್ಲ ಚಿತ್ರ ಮಂದಿರಗಳಲ್ಲಿ ಚಲನಚಿತ್ರಗಳ ಟಿಕೆಟ್ ದರವನ್ನು (ತೆರಿಗೆ ಬಿಟ್ಟು) ಗರಿಷ್ಠ ₹200ಕ್ಕೆ ನಿಗದಿಪಡಿಸಿ ಗೃಹ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಈ ನಿಯಮ ಶುಕ್ರವಾರದಿಂದಲೇ ಜಾರಿಗೆ ಬಂದಿದ್ದು, ಕನ್ನಡ ಸೇರಿ ಎಲ್ಲ ಭಾಷೆಗಳ ಚಲನಚಿತ್ರಗಳಿಗೂ ಈ ಆದೇಶ ಅನ್ವಯವಾಗಲಿದೆ. ಆದರೆ, 75 ಅಥವಾ ಅದಕ್ಕಿಂತ ಕಡಿಮೆ ಆಸನ ಹೊಂದಿರುವ ಪ್ರೀಮಿಯಂ ಸೌಲಭ್ಯಗಳನ್ನು ಒಳಗೊಂಡ ಮಲ್ಟಿಪ್ಲೆಕ್ಸ್‌ಗಳಿಗೆ ಈ ನಿಯಮದಿಂದ ವಿನಾಯ್ತಿ ನೀಡಲಾಗಿದೆ.

ಯಾವುದೇ ಭಾಷೆಯ ಚಿತ್ರವಾದರೂ ಸರಿ ಗರಿಷ್ಠ ದರ ₹200 ದಾಟುವಂತಿಲ್ಲ. ಟಿಕೆಟ್ ಮೇಲೆ ಶೇ 18ರಷ್ಟು ತೆರಿಗೆ ಇರುತ್ತದೆ. ಚಿತ್ರ ಮಂದಿರದಲ್ಲಿ ಎರಡು ಅಥವಾ ಮೂರು ಕ್ಲಾಸ್‌ಗಳ ಆಸನ ವ್ಯವಸ್ಥೆ ಇದ್ದರೆ ಅವುಗಳ ಬೆಲೆಯೂ ₹150ಕ್ಕಿಂತ ಕಡಿಮೆ ಆಗಲಿದೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ಪರಭಾಷಾ ಚಿತ್ರಗಳ ಟಿಕೆಟ್ ದರದ ಮೇಲೆ ಯಾವುದೇ ನಿಯಂತ್ರಣವಿರಲಿಲ್ಲ. ಕೆಲವು ಚಿತ್ರಗಳ ಟಿಕೆಟ್ ದರ ₹2,000–₹3000 ದಾಟುತ್ತಿತ್ತು. ತಮಿಳುನಾಡು ಮಾದರಿಯಲ್ಲೇ ಕರ್ನಾಟಕದಲ್ಲೂ ಟಿಕೆಟ್ ದರವನ್ನು ನಿಗದಿ ಮಾಡಬೇಕು ಎಂಬುದು ಕನ್ನಡ ಚಲನಚಿತ್ರ ರಂಗದ ಬೇಡಿಕೆಯಾಗಿತ್ತು. ರಾಜೇಂದ್ರ ಸಿಂಗ್ ಬಾಬು ಅವರು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿದ್ದಾಗ, ಸರ್ಕಾರಕ್ಕೆ ಈ ಸಂಬಂಧ ಪ್ರಸ್ತಾವನೆ ಸಲ್ಲಿಸಿದ್ದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಂದಿನ ಅಧ್ಯಕ್ಷ ಸಾ.ರಾ.ಗೋವಿಂದು ಕೈಜೋಡಿಸಿದ್ದರು.

‘ಏಳು ವರ್ಷಗಳ ಹೋರಾಟದ ಫಲ’

‘ಏಳು ವರ್ಷಗಳ ನಮ್ಮ ಹೋರಾಟ ಈಗ ಫಲ ನೀಡಿದೆ’ ಎಂದು ರಾಜೇಂದ್ರ ಸಿಂಗ್ ಬಾಬು ಪ್ರತಿಕ್ರಿಯಿಸಿದರು.

‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ಈ ಹಿಂದೆಯೇ ಆದೇಶ ಆಗಿತ್ತು. ಆದರೆ, ಆಗ ಸರ್ಕಾರದಲ್ಲಿ ಕೆಲವರು ಅದಕ್ಕೆ ಹಿನ್ನಡೆ ಉಂಟು ಮಾಡಿದರು. ಆ ಆದೇಶದ ವಿರುದ್ಧ ನ್ಯಾಯಾಲಯದಿಂದ ತಡೆ ತರಲಾಯಿತು. ಕೋಟಿಗಟ್ಟಲೆ ಹಣ ಕೊಟ್ಟು ಪರ ಭಾಷಾ ಚಿತ್ರಗಳನ್ನು ಇಲ್ಲಿಗೆ ತಂದು ಕನ್ನಡಿಗರ ಹಣ ಲೂಟಿ ಮಾಡುತ್ತಿದ್ದರು. ಈಗ ಅದಕ್ಕೆ ಕಡಿವಾಣ ಬೀಳಲಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಸಾಮಾನ್ಯ ಜನರೂ ಚಲನಚಿತ್ರಗಳನ್ನು ನೋಡಬಹುದಾಗಿದೆ’ ಎಂದರು.

‘ತಮಿಳುನಾಡು, ಆಂಧ್ರದಲ್ಲೂ ಟಿಕೆಟ್ ದರ ಕಡಿಮೆ ಇದೆ. ಅಲ್ಲಿ ತೆರಿಗೆಯೂ ಸೇರಿ ಟಿಕೆಟ್ ದರ ₹150ರಿಂದ ₹200ರ ಒಳಗೆ ಇದೆ. ಕರ್ನಾಟಕದಲ್ಲಿ ಮಾತ್ರ ಅತ್ಯಂತ ದುಬಾರಿ ಆಗಿತ್ತು. ಇದರಿಂದ ಕನ್ನಡ ಚಿತ್ರಗಳ ಮೇಲೂ ಪರಿಣಾಮ ಬೀರಿತ್ತು. ಹೊಸ ಅಧಿಸೂಚನೆ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದರು.

ವೈದ್ಯಕೀಯ ಕ್ಷೇತ್ರದಲ್ಲೂ ಆತ್ಮಹತ್ಯೆ ಪ್ರಕರಣಗಳ ಹೆಚ್ಚಳ ● ಪರಿಹಾರಕ್ಕೆ ಬ್ರಿಟನ್ ಸಹಯೋಗ

ಆತ್ಮಹತ್ಯೆ ಅಧ್ಯಯನ ಕೇಂದ್ರ ಸ್ಥಾಪನೆ

● ಚಂದ್ರಹಾಸ ಹಿರೇಮಳಲಿ

ಲಂಡನ್: ಆತ್ಮಹತ್ಯೆ ಪ್ರಕರಣಗಳನ್ನು ತಡೆಯಲು ಶ್ರಮಿಸಬೇಕಿರುವ ವೈದ್ಯಕೀಯ ಕ್ಷೇತ್ರದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳೇ ಆತ್ಮಹತ್ಯೆಗೆ ಶರಣಾಗುತ್ತಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ಹಾಗೂ ಬ್ರಿಟನ್ ಜತೆಯಾಗಿ, ಈ ಕುರಿತು ಆಳವಾದ ಅಧ್ಯಯನ ಕೈಗೊಳ್ಳಲು ಕರ್ನಾಟಕದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಮುಂದಾಗಿವೆ.

ಲಂಡನ್ ಪ್ರವಾಸದಲ್ಲಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಸಿ.ಭಗವಾನ್ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಮನೋರೋಗ ಮತ್ತು ಮಾನಸಿಕ ಆರೋಗ್ಯ ವಿಭಾಗದ ಡಾ.ರಾಜೀವ್, ಡಾ.ರಶ್ಮಿ ಪಟೇಲ್, ಡಾ.ಬೆನ್ ಮತ್ತು ಡಾ.ಟೋನಿ ಅವರು ಈ ಕುರಿತು ಸುದೀರ್ಘ ಮಾತುಕತೆ ನಡೆಸಿ, ನಿರ್ಧಾರ ತೆಗೆದುಕೊಂಡಿದ್ದಾರೆ.

ಖಿನ್ನತೆ, ಆರೋಗ್ಯ ಸಮಸ್ಯೆ, ಚಟಗಳ ಗೀಳು, ಸಾಲ ಮತ್ತಿತರ ಕಾರಣಗಳಿಂದ ವಿಶ್ವದಲ್ಲಿ ಪ್ರತಿ ವರ್ಷ 10 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ತಡೆಯಬೇಕಾದ, ಚಿಕಿತ್ಸೆ ನೀಡಬೇಕಾದ ವೈದ್ಯಕೀಯ ಮತ್ತು ಆರೋಗ್ಯ ಕ್ಷೇತ್ರದ ಸಿಬ್ಬಂದಿ, ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಒಂದು ದಶಕದ ಅವಧಿಯಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ಬ್ರಿಟನ್, ಭಾರತ ಸೇರಿದಂತೆ ಬಹುತೇಕ ದೇಶಗಳಲ್ಲಿ ಸಾಮಾನ್ಯ ಪಿಡುಗಾಗುತ್ತಿರುವ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಎರಡೂ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಅಧ್ಯಯನ ಆರಂಭಿಸುತ್ತಿವೆ.

ಸಂಶೋಧನಾ ಕೇಂದ್ರದಲ್ಲಿ ಆತ್ಮಹತ್ಯೆಗೆ ಕಾರಣಗಳನ್ನು ಅಧ್ಯಯನ ಮಾಡುವ ಜತೆಗೆ, ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ಶುಶ್ರೂಷ ಅಧಿಕಾರಿಗಳು, ನರ್ಸಿಂಗ್ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವುದು. ಮಾದಕ ದ್ರವ್ಯ, ಕುಡಿತದ ಚಟಕ್ಕೆ ಅಂಟಿಕೊಳ್ಳುವುದನ್ನು ತಪ್ಪಿಸಲು ಸೂಕ್ತ ಮಾರ್ಗದರ್ಶನ ನೀಡುವುದು. ಭವಿಷ್ಯದಲ್ಲಿ ಆತ್ಮಹತ್ಯೆ ಪ್ರಕರಣಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಸೂಕ್ತ ತರಬೇತಿ, ತಪಾಸಣೆ, ಚಿಕಿತ್ಸಾ ಶಿಫಾರಸುಗಳನ್ನು ಮಾಡಲಾಗುತ್ತದೆ. ಈ ಕುರಿತು ಪ್ರತ್ಯೇಕ ಕೋರ್ಸ್‌ಗಳನ್ನು ಅಳಡಿಸುವ ಚಿಂತನೆ ನಡೆಸಿದರು.

ಸರ್ಕಾರಿ ಶಾಲೆ ದತ್ತು ಪಡೆಯಲು ನಿರ್ಧಾರ

ಕರ್ನಾಟಕದಲ್ಲಿನ ಸರ್ಕಾರಿ ಶಾಲಾ-ಕಾಲೇಜುಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು ಬ್ರಿಟನ್‌ನಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರು ಘೋಷಿಸಿದರು.

ವೋಲ್ವರ್ ಹ್ಯಾಂಟನ್ ನಗರದಲ್ಲಿ ನೆಲೆಸಿರುವ ಕನ್ನಡಿಗರ ಜತೆ ಡಾ.ಎಂ. ಸಿ.ಸುಧಾಕರ್, ಡಾ.ಶರಣ ಪ್ರಕಾಶ ಪಾಟೀಲ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಅವರು ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಅವರು ಈ ನಿರ್ಧಾರ ಮಾಡಿದರು.

ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್ ಗಳಲ್ಲಿ ಕರ್ನಾಟಕ ನಿಗದಿಪಡಿಸಿರುವ ಎನ್‌ಆರ್‌ಐ ಕೋಟಾಗಳನ್ನು ಸದುಪಯೋಗ ಪಡಿಸಿಕೊಳ್ಳುವುದು, ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ವಿದ್ಯಾರ್ಥಿಗಳ ಪ್ರವೇಶ ಹೆಚ್ಚಳ ಮಾಡಲು ಶ್ರಮಿಸುವ ಭರವಸೆ ನೀಡಿದರು.

> ಆತ್ಮಹತ್ಯೆ ಪ್ರಕರಣಗಳ ಕುರಿತ ಸಂಶೋಧನೆಗಾಗಿ ಕರ್ನಾಟಕ- ಬ್ರಿಟನ್ ಸಹಯೋಗದಲ್ಲಿ ಬೆಂಗಳೂರು ಸಮೀಪದ ಭೀಮನಕುಪ್ಪೆಯಲ್ಲಿ ಕೇಂದ್ರ ಸ್ಥಾಪಿಸಲಾಗುವುದು
> **ಬಿ.ಸಿ.ಭಗವಾನ್,** ಕುಲಪತಿ, ರಾಜೀವ್ ಗಾಂಧಿ ವೈದ್ಯಕೀಯ ವಿ.ವಿ

ಕರ್ನಾಟಕದಲ್ಲೇ ಪರೀಕ್ಷೆ: ಮನವಿ

ಬ್ರಿಟನ್‌ನಲ್ಲಿ ವಿದ್ಯಾಭ್ಯಾಸ ಮಾಡಲು ಆಸಕ್ತಿ ಹೊಂದಿರುವ ಭಾರತದ ವೈದ್ಯಕೀಯ ಪದವೀಧರರಿಗೆ ಕರ್ನಾಟಕದಲ್ಲೇ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ (ಎಂಆರ್‌ಸಿಪಿ) ಪರೀಕ್ಷೆ ನಡೆಸುವಂತೆ ಸಚಿವ ಶರಣ ಪ್ರಕಾಶ ಪಾಟೀಲ ಪ್ರಸ್ತಾವ ಸಲ್ಲಿಸಿದರು.

ಎಂಆರ್ ಸಿಪಿ ಪರೀಕ್ಷೆಯನ್ನು ಬ್ರಿಟನ್‌ನ ಫೆಡರೇಷನ್ ಆಫ್ ದ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ನಡೆಸುತ್ತದೆ ಹಾಗೂ ಬ್ರಿಟಿಷ್ ಅಸೋಸಿಯೇಷನ್ ಆಫ್ ಫಿಸಿಷಿಯನ್ಸ್ ಆಫ್ ಇಂಡಿಯನ್ ಒರಿಜಿನ್ ತರಬೇತಿ ನೀಡುತ್ತದೆ.

ಈ ಕುರಿತು ಮಾತನಾಡಿದ ಪಾಟೀಲ, ‘ಈಗಿರುವ ವ್ಯವಸ್ಥೆಯಲ್ಲಿ ಕರ್ನಾಟಕದ ಹೆಚ್ಚಿನ ವೈದ್ಯಕೀಯ ಪದವೀಧರರು, ಸ್ನಾತಕೋತ್ತರ ಪದವಿಗಾಗಿ ಎಂಆರ್ ಸಿಪಿ ಪರೀಕ್ಷೆ ಸಿದ್ಧತೆ, ಪರೀಕ್ಷೆ ಬರೆಯಲು ಭಾರತದಿಂದ ಬ್ರಿಟನ್‌ಗೆ ಬರುತ್ತಾರೆ. ಕರ್ನಾಟಕದಲ್ಲೂ ಪರೀಕ್ಷೆ ನಡೆದರೆ ಅವರಿಗೆ ಅನುಕೂಲವಾಗುತ್ತದೆ’ ಎಂದರು.

‘ಕಲ್ಯಾಣ’ದಲ್ಲಿ ಮುಂದುವರಿದ ಮಳೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಸತತ 3ನೇ ದಿನವೂ ಮಳೆ ಮುಂದುವರಿದಿದೆ.

ಕಲಬುರಗಿ ನಗರ, ಜಿಲ್ಲೆಯ ಕಾಳಗಿ, ಜೇವರ್ಗಿ, ಚಿತ್ತಾಪುರ ತಾಲ್ಲೂಕಿನ ಹಲವೆಡೆ ಬಿರುಸಿನ ಮಳೆ ಸುರಿಯಿತು.

ಬೀದರ್ ನಗರ, ಗ್ರಾಮೀಣ ಭಾಗ, ಬೀದರ್, ಹುಲಸೂರ, ಭಾಲ್ಕಿ, ಹುಮನಾಬಾದ್, ಚಿಟಗುಪ್ಪ ತಾಲ್ಲೂಕು ವ್ಯಾಪ್ತಿಯಲ್ಲೂ ಮಳೆ ಬಿದ್ದಿದೆ.

ಯಾದಗಿರಿ, ಶಹಾಪುರ, ಸುರಪುರ, ಕೆಂಭಾವಿ, ವಡಗೇರಾ, ಗುರುಮಠಕಲ್, ಹುಣಸಗಿ, ಕೊಪ್ಪಳ, ರಾಯಚೂರು ಜಿಲ್ಲೆಯ ದೇವದುರ್ಗ, ಮಾನ್ವಿ ಹಾಗೂ ಸಿರವಾರದಲ್ಲಿ ವರ್ಷಧಾರೆಯಾಗಿದೆ.

ಧಾರವಾಡ, ಬೆಳಗಾವಿ ಜಿಲ್ಲೆಯಲ್ಲೂ ಮಳೆ

ಹುಬ್ಬಳ್ಳಿ ವರದಿ: ನಗರ, ಗ್ರಾಮೀಣ ಪ್ರದೇಶ, ಧಾರವಾಡದಲ್ಲಿ ಮಳೆ ಬಿದ್ದಿದೆ. ಕೆಎಂಸಿ–ಆರ್‌ಐ ಆಸ್ಪತ್ರೆಯ ಬಿಆರ್‌ಟಿಎಸ್ ಬಸ್ ನಿಲ್ದಾಣದ ಕಾರಿಡಾರ್ ಜಲಾವೃತಗೊಂಡಿತ್ತು. ಬೆಳಗಾವಿ ನಗರ, ತಾಲ್ಲೂಕಿನಲ್ಲಿ ಮಳೆ ಸುರಿಯಿತು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಬಿ.ಎಂ.ಸೂಗೂರು ಬಳಿ ಕೋಳ್ಳಿ ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ವ್ಯಕ್ತಿಯನ್ನು ಕೃಷಿ ಕಾರ್ಮಿಕರು ರಕ್ಷಿಸಿದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.30	12,668	14,073
ಹಾರಂಗಿ	2,859	2,858.55	1,898	2,500
ಕಬಿನಿ	2,284.00	2,283.28	3,522	4,150
ಹೇಮಾವತಿ	2,922	2,921.50	4,970	6,260
ಲಿಂಗನಮಕ್ಕಿ	1,819	1,817.50	4,807	8,375
ಸೂಪಾ (ಮೀ)	564	560.13	3,219.96	4,621.53
ಮಾಣಿ	595	594.09	686	-
ತುಂಗಭದ್ರಾ	1,633	1,626.06	17,097	16,995
ಮಲಪ್ರಭಾ	2,079.50	2,079.50	1,094	1,094
ಘಟಪ್ರಭಾ	2,175	2,174.85	3,015	2,686
ಭದ್ರಾ *	186	185	6,516	4,120
ಆಲಮಟ್ಟಿ (ಮೀ)	519.6	519.60	25,834	25,834
ನಾರಾಯಣಪುರ (ಮೀ)	492.25	492.17	21,000	15,430

* ನೆಲಮಟ್ಟದಿಂದ

ರಾಜ್ಯ ಒಕ್ಕಲಿಗರ ಸಂಘ

#148, ವಿಶ್ವೇಶ್ವರಪುರ, ಕೃಷ್ಣರಾಜೇಂದ್ರರಸ್ತೆ, ಬೆಂಗಳೂರು –560 004

ನಂ. ರಾ.ಒ.ಸಂ /ಚು.ವಿ / 1035 / 2025-26 ದಿನಾಂಕ: 12/09/2025

ಸಾರ್ವಜನಿಕ ಪ್ರಕಟಣೆ

ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವ ನೋಂದಣಿ ಅರ್ಜಿಗಳನ್ನು ಡಿ.ಸಿ.ಸಿ ಬ್ಯಾಂಕ್ ನ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ವಿತರಿಸಲಾಗುತ್ತಿದ್ದು, ದಿನಾಂಕ: 28-07-2025 ಮತ್ತು 02-08-2025 ರಂದು ನಡೆದ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನದಂತೆ, **ದಿನಾಂಕ: 30-11-2025**ಕ್ಕೆ ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವ ನೋಂದಣಿ ಅರ್ಜಿಗಳ ವಿತರಣೆ ಸ್ಥಗಿತಗೊಳಿಸಲಾಗುವುದು.

ಸಹಿ/- **ಅಧ್ಯಕ್ಷರು** | ಸಹಿ/- **ಉಪಾಧ್ಯಕ್ಷರು** | ಸಹಿ/- **ಪ್ರಧಾನ ಕಾರ್ಯದರ್ಶಿ** | ಸಹಿ/- **ಸಹ ಕಾರ್ಯದರ್ಶಿ** | ಸಹಿ/- **ಖಜಾಂಚಿ**



2025-26ನೇ ಸಾಲಿನಲ್ಲಿ ಕೆಇಎ ಮೂಲಕ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರಥಮ ಬಿ.ಇ. ಕೋರ್ಸುಗಳಲ್ಲಿ ಹಾಗೂ ಡಿಪ್ಲೋಮಾ ಲ್ಯಾಟರಲ್ ಎಂಟ್ರಿ ಸ್ಕೀಂನಲ್ಲಿ ಖಾಲಿ ಉಳಿದಿರುವ ಸೀಟುಗಳಿಗೆ ಪ್ರಾಂಶುಪಾಲರ ಹಂತದಲ್ಲಿ ನೇರ ಪ್ರವೇಶಾತಿ.

● ಸಿಇಟಿ ಬರೆದು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಸೀಟು ಸಿಗದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶವಕಾಶ.

● ಪ್ರವೇಶ ಬಯಸುವ ಅಭ್ಯರ್ಥಿಗಳು ತಮಗೆ ಇಚ್ಛೇನುಸಾರ ಕಾಲೇಜ್ ಹಾಗೂ ಕೋರ್ಸ್‌ನ್ನು ಆಯ್ಕೆ ಮಾಡಿಕೊಂಡು ನಿಗಧಿತ ಶುಲ್ಕಗಳನ್ನು ಪಾವತಿಸಿ ಕಾಲೇಜಿನಲ್ಲಿ ದಿನಾಂಕ: 15.09.2025 ರ ಒಳಗೆ ಪ್ರವೇಶ ಪಡೆಯಬಹುದು.

ಪ್ರಥಮ ವರ್ಷದ ಉಳಿಕೆ ಇಂಜಿನಿಯರಿಂಗ್ ಸೀಟುಗಳ ವಿವರಗಳು

	ಕಾಲೇಜುಗಳು	ಕೋರ್ಸ್ ಹಾಗೂ ಸೀಟುಗಳು							
1.	ಎಸ್‌ಕೆಎಸ್‌ಜೆಟಿಇ, ಬೆಂಗಳೂರು	TX	22	ST	08				
2.	ಚಾಮರಾಜನಗರ	CE	40	EC	10	ME	46		
3.	ಹಾಸನ	CE	05	ME	09				
4.	ಕೆ.ಆರ್. ಪೇಟೆ	CE	39	ME	30				
5.	ರಾಮನಗರ	CE	32	ME	43				
6.	ಕುಶಾಲನಗರ	CE	39	ME	50				
7.	ರಾಯಚೂರು	CE	28	ME	52				
8.	ಹಾವೇರಿ	CE	12	ME	27				
9.	ಹೂವಿನ ಹಡಗಲಿ	CE	48	EC	04	ME	59		
10.	ಕಾರವಾರ	CE	51	EC	18	ME	48		
11.	ತಳಕಲ್, ಕೊಪ್ಪಳ	CE	32	ME	42	EE	02		
12.	ಗಂಗಾವತಿ	CE	50	EC	28	ME	56	EE	42
13.	ಮೊಸಳೆಹೊಸಳ್ಳಿ	CE	44	ME	51	EE	07		
14.	ಚಳ್ಳಕೆರೆ, ಚಿತ್ರದುರ್ಗ	AT	45						
15.	ನರಗುಂದ, ಗದಗ	CE	09						
16.	ಬೀದರ್	CE	02						
17.	ಅರಸೀಕೆರೆ	EC	21	IS	11				



ಡಾ. ಎಂ. ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು
ಇಲಾಖೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವುದು

CE, ME, AT, ST, TX
ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ **50%** ರಷ್ಟು ವಿನಾಯಿತಿ
ಶುಲ್ಕ ರೂ.**28,450/-** ಮಾತ್ರ

ಇತರೆ ಕೋರ್ಸುಗಳಿಗೆ ರೂ.**44,950/-** ಮಾತ್ರ

ಹೆಚ್ಚಿನ ಮಾಹಿತಿಗಾಗಿ ಸಮೀಪದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಪ್ರಾಂಶುಪಾಲರನ್ನು ಸಂಪರ್ಕಿಸುವುದು.
https://dtek.karnataka.gov.in / https://keauthority-ka@nic.in

ಆಯುಕ್ತರು
ತಾಂತ್ರಿಕ ಶಿಕ್ಷಣ ಇಲಾಖೆ

ವಾಹನ್ ತಂತ್ರಾಂಶ: ಮಾಹಿತಿ ತುಂಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಮಾಲೀಕರು ತಮ್ಮ ವಾಹನಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ವಾಹನ್ ತಂತ್ರಾಂಶದಲ್ಲಿ ತುಂಬಿದರೆ ಮಾತ್ರ ಕ್ಲಿಯರೆನ್ಸ್ ಪ್ರಮಾಣ ಪತ್ರ (ಸಿಸಿ), ನಿರಾಪೇಕ್ಷಣ ಪ್ರಮಾಣ ಪತ್ರ (ಎನ್‌ಒಸಿ) ಸಿಗಲಿದೆ. ಎನ್‌ಒಸಿ, ಸಿಸಿ ಮಾತ್ರ ನೀಡಲು ಎನ್‌ಐಸಿ ಅನುವು ಮಾಡಿಕೊಡುವುದಿಲ್ಲ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ತಿಳಿಸಿದ್ದಾರೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ನಿರ್ದೇಶನದಂತೆ ಎನ್‌ಐಸಿ ಅಭಿವೃದ್ಧಿಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ವಾಹನ್ ತಂತ್ರಾಂಶಗಳನ್ನು 2019ರಿಂದ ಅನ್ವಯವಾಗುವಂತೆ ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಲ್ಲಿ ಅಳವಡಿಸಲಾಗಿದೆ. ಎಲ್ಲ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಈ ತಂತ್ರಾಂಶ ಬಳಕೆಯಲ್ಲಿದೆ.

ವಾಹನ್ ತಂತ್ರಾಂಶದಲ್ಲಿ ಹಾರ್ಸ್ ಪವರ್, ಕ್ಯುಬಿಕ್ ಕೆಪಾಸಿಟಿ, ವೀಲ್ ಬೇಸ್ ಸಹಿತ ಎಲ್ಲ ಮಾಹಿತಿಗಳನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಹಾಜರುಪಡಿಸಿ ವಾಹನದ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕು ಎಂದು ಅವರು ತಿಳಿಸಿದ್ದಾರೆ.

ಶಿವಾಜಿನಗರ ಸಂಚಾರ ಪೊಲೀಸ್ ಠಾಣೆಯ ಆವರಣದಲ್ಲಿ ತೆರೆದಿರುವ ಕೌಂಟರ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಿದ ವಾಹನಗಳ ಮಾಲೀಕರು

पंजाब नैशनल बैंक punjab national bank

ಬೆಂಗಳೂರು ವೃತ್ತ
1ನೇ ಮಹಡಿ, ರಹೇಜ ಟವರ್
ನಂ. 26–27, ಎಂ ಜಿ ರಸ್ತೆ,
ಬೆಂಗಳೂರು–560 001.

ಇ–ಮೇಲ್: cobangeastgad@pnb.co.inಮೊ: 9945568435

ಸ್ಥಳಾವಕಾಶ ಬೇಕಾಗಿದೆ

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಈ ಕೆಳಗಿನ ಸ್ಥಳಗಳಲ್ಲಿ ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ನೆಲ ಮಹಡಿಯಲ್ಲಿ ಎಟಿಎಂ ಹೊಂದಿರುವ ಶಾಖೆಯನ್ನು ತೆರೆಯಲು ಸೂಕ್ತವಾದ ಸಿದ್ಧ–ನಿರ್ಮಿತ ಮತ್ತು ಉತ್ತಮವಾಗಿ ನಿರ್ಮಿಸಲಾದ ಹಾಲ್ ಮಾದರಿಯ ಕಟ್ಟಡದ ಅಗತ್ಯವಿದೆ.

ಕ್ರ.ಸಂ.	ಸ್ಥಳ	ಕಾರ್ಪೆಟ್ ಏರಿಯಾ (ಚ.ಅ.ಗಳಲ್ಲಿ)
1	ಕೃಷ್ಣರಾಜಪುರಂ, ಬೆಂಗಳೂರು	1600 ರಿಂದ 2000
2	ಕಾಡುಗೋಡಿ (ವೈಟ್‌ಫೀಲ್ಡ್), ಬೆಂಗಳೂರು	1600 ರಿಂದ 2000
3	ಕೊತ್ತನೂರು (ಜೆ ಪಿ ನಗರ 8ನೇ ಹಂತ) ಬೆಂಗಳೂರು	1600 ರಿಂದ 2000
4	ಹೆಸರಘಟ್ಟ, ಬೆಂಗಳೂರು	1200 ರಿಂದ 1600
5	ಹೆಣ್ಣೂರು ರಸ್ತೆ, ಬೆಂಗಳೂರು	1600 ರಿಂದ 2000
6	ದೊಡ್ಡಬಳ್ಳಾಪುರ	1200 ರಿಂದ 1600
7	ಗುಂಜೂರು	1600 ರಿಂದ 2000
8	ಸರ್ಜಾಪುರ ರಸ್ತೆ	1600 ರಿಂದ 2000
9	ವರ್ತೂರು	1600 ರಿಂದ 2000
10	ಕನಕಪುರ	1200 ರಿಂದ 1600

ನೀಡಲಾಗುವ ಆವರಣಗಳು ಶಾಸನಬದ್ಧ ಅಧಿಕಾರಿಗಳಿಂದ ಎಲ್ಲಾ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು ಹೊಂದಿರಬೇಕು. ಆಸಕ್ತ ಮಾಲೀಕರು / ನೋಂದಾಯಿತ ಪವರ್ ಆಫ್ ಅಟಾರ್ನಿ ಹೊಂದಿರುವವರು ಬಯಸಿದ ಪ್ರದೇಶದಲ್ಲಿ ಅಂತಹ ಆವರಣಗಳನ್ನು ಹೊಂದಿರುವವರು, ದೀರ್ಘಾವಧಿಯ ಗುತ್ತಿಗೆ ಆಧಾರದ ಮೇಲೆ ತಮ್ಮ ಸುಲಭವಾಗಿ ಲಭ್ಯವಿರುವ ಆವರಣವನ್ನು 15 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಲು ಸಿದ್ಧರಿದ್ದರೆ, ಬ್ಯಾಂಕಿನ ವೆಬ್‌ಸೈಟ್ **www.pnbindia.in** ನಲ್ಲಿ ಲಭ್ಯವಿರುವ ನಿಗದಿತ ಸ್ವರೂಪದಲ್ಲಿ ಅಥವಾ ಮೇಲಿನ ವಿಳಾಸದಿಂದ ಪಡೆದಿರುವ ತಮ್ಮ ಆಫರ್‌ಗಳನ್ನು ಕಚೇರಿ ಸಮಯದಲ್ಲಿ ಕಳುಹಿಸಬಹುದು. ಸರಿಯಾಗಿ ಮೊಹರು ಮಾಡಿ ಸಹಿ ಮಾಡಿದ ಸಂಪೂರ್ಣ ಭರ್ತಿ ಮಾಡಿದ ಆಫರ್‌ಗಳನ್ನು ಕೆಳಗೆ ಸಹಿ ಮಾಡಿದ ವಿಳಾಸಕ್ಕೆ (**23.09.2025 ರಂದು ಸಂಜೆ 05.00 ಗಂಟೆಯವರೆಗೆ**) ಅಥವಾ ಅದಕ್ಕೂ ಮೊದಲು ತಲುಪಬೇಕು.

ಬ್ಯಾಂಕ್ ಯಾವುದೇ ಮಧ್ಯವರ್ತಿ ಶುಲ್ಕ (ಬ್ರೋಕರೇಜ್) ವನ್ನು ಪಾವತಿಸುವುದಿಲ್ಲ. ಯಾವುದೇ ಕಾರಣಗಳನ್ನು ನೀಡದೆ ತನ್ನ ಸ್ವಂತ ವಿವೇಚನೆಯಿಂದ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ದಿನಾಂಕ: 13.09.2025
ಸ್ಥಳ: ಬೆಂಗಳೂರು

ಸಹಿ/– ವೃತ್ತ ಮುಖ್ಯಸ್ಥರು, ಬೆಂಗಳೂರು ವೃತ್ತ
ಪಂಜಾಬ್ ನ್ಯಾಷನಲ್ ಬ್ಯಾಂಕ್

₹90 ಕೋಟಿ ದಂಡ ಸಂಗ್ರಹ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಕಲ್ಪಿಸಿದ್ದ ಅವಕಾಶವನ್ನು ಬಳಸಿಕೊಂಡು 30 ಲಕ್ಷ ವಾಹನಗಳ ಮಾಲೀಕರು ದಂಡ ಪಾವತಿಸಿದ್ದಾರೆ. ₹90 ಕೋಟಿಗೂ ಹೆಚ್ಚು ದಂಡ ಸಂಗ್ರಹವಾಗಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಮೂಲಗಳು ಹೇಳಿವೆ.

ಆ.22ರಿಂದ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿತ್ತು. ಶುಕ್ರವಾರ (ಸೆ.12) ಕೊನೆ ದಿನವಾಗಿತ್ತು. ಕೊನೆಯ ದಿನ ಸರ್ವರ್ ಸಮಸ್ಯೆಯಿಂದಾಗಿ ಹಲವರು ದಂಡ ಪಾವತಿಸಲು ಪರದಾಡಿದರು.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಂಡು ವಾಹನ ಮಾಲೀಕರು ದಂಡ ಪಾವತಿಸಿದ್ದಾರೆ.

ನಿವೃತ್ತ ಎಸಿಪಿ ಅಡ್ಡಗಟ್ಟಿ ಸುಲಿಗೆ

ಸಂಜಯನಗರ ಠಾಣೆ ಪೊಲೀಸರ ಕಾರ್ಯಾಚರಣೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಮೊಹ್ಸಿನ್

ಸಲ್ಮಾನ್

ಇರ್ಫಾನ್

ಬೆಂಗಳೂರು: ವಾಯುವಿಹಾರ ಮುಗಿಸಿ ಮನೆಯತ್ತ ತೆರಳುತ್ತಿದ್ದ ನಿವೃತ್ತ ಎಸಿಪಿ ಮೇಲೆ ಹಲ್ಲೆ ಮಾಡಿ ಚಿನ್ನಾಭರಣ ಕಸಿದುಕೊಂಡು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಸಂಜಯ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ.ಹಳ್ಳಿಯ ನಿವಾಸಿಗಳಾದ ಸೈಯದ್ ಮೊಹ್ಸಿನ್ (30), ಮೊಹಮ್ಮದ್ ಸಲ್ಮಾನ್ (20) ಹಾಗೂ ಸೈಯ್ಯದ್ ಇರ್ಫಾನ್ (23) ಬಂಧಿತರು. ಆರೋಪಿಗಳಿಂದ ಚಿನ್ನಾಭರಣ ಹಾಗೂ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೆಬ್ಬಾಳದ ಪಶು ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಬಳಿ ನಿವೃತ್ತ ಎಸಿಪಿ ಎಚ್.ಸುಬ್ಬಣ್ಣ ಅವರಿಗೆ ಚಾಕುವಿನಿಂದ ತಿವಿದು ₹8 ಲಕ್ಷ ಮೌಲ್ಯದ ಚಿನ್ನಾಭರಣ ದರೋಡೆ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

‘ಸುಬ್ಬಣ್ಣ ಅವರಿಗೆ ಬೆಳಗಿನ ಜಾವ ವಾಯು ವಿಹಾರಕ್ಕೆ ಹೋಗುವ ಅಭ್ಯಾಸವಿತ್ತು. ಎಂದಿನಂತೆ ವಾಯುವಿಹಾರ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ಮಾಸ್ಕ್ ಧರಿಸಿ, ಬಂದಿದ್ದ ಆರೋಪಿಗಳು ಅವರನ್ನು ಅಡ್ಡಗಟ್ಟಿದ್ದರು. ಬಳಿಕ, ಚಾಕು ತೋರಿಸಿ ಅವರ ಕತ್ತಿನಲ್ಲಿದ್ದ ಚಿನ್ನದ ಸರ ಕಸಿದುಕೊಂಡಿದ್ದರು. ಪ್ರತಿರೋಧ ತೋರಲು ಮುಂದಾದ ಸುಬ್ಬಣ್ಣ ಅವರ ಕೈಗೆ ಚಾಕುವಿನಿಂದ ಹಲ್ಲೆ ಮಾಡಿ, ಕೈಯಲ್ಲಿದ್ದ ಚಿನ್ನದ ಬ್ರೇಸ್‌ಲೆಟ್ ಹಾಗೂ ಸರವನ್ನು ಕಸಿದುಕೊಂಡು ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

ಸುಬ್ಬಣ್ಣ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು ಎಂದು ಪೊಲೀಸರು ಹೇಳಿದರು.

ಪ್ರತಿಷ್ಠಿತ ಬಟ್ಟೆ ಅಂಗಡಿಗಳಲ್ಲಿ ಐ.ಟಿ ಶೋಧ

ಬೆಂಗಳೂರಿನ ಪ್ರತಿಷ್ಠಿತ ಬಟ್ಟೆ ಅಂಗಡಿಯ ಎರಡು ಮಳಿಗೆಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ನಗರದ ಕೆಂಪೇಗೌಡ ರಸ್ತೆ ಮತ್ತು ಮೈಸೂರು ರಸ್ತೆಯ ಗುಡ್ಡದಹಳ್ಳಿಯಲ್ಲಿ ರುವ ಎರಡು ಮಳಿಗೆಗಳ ಮೇಲೆ ಅಧಿಕಾರಿಗಳು ಶುಕ್ರವಾರ ಬೆಳಿಗ್ಗೆಯೇ ದಾಳಿ ನಡೆಸಿ, ಶೋಧ ಆರಂಭಿಸಿದ್ದರು.

ಚೆನ್ನೈ ಮೂಲದ ಈ ಕಂಪನಿಯು ತಮಿಳುನಾಡಿನಾದ್ಯಂತ ಹತ್ತಾರು ಮಳಿಗೆಗಳನ್ನು ಹೊಂದಿದೆ. ಆ ಎಲ್ಲ ಮಳಿಗೆಗಳು, ಕಂಪನಿಯ ಮುಖ್ಯಸ್ಥ, ಅವರ ಕುಟುಂಬ, ಆಪ್ತರ ಮನೆ ಹಾಗೂ ಕಚೇರಿಗಳಲ್ಲೂ ಶೋಧ ನಡೆದಿದೆ.

ತಮಿಳುನಾಡಿನ ಪ್ರಾದೇಶಿಕ ಪಕ್ಷವೊಂದಕ್ಕೆ ಈ ಕಂಪನಿಯು ನೀಡಿದ್ದ ದೇಣಿಗೆಯ ಸಂಬಂಧ ಆದಾಯ ತೆರಿಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ಆದಾಯ ತೆರಿಗೆ ವಂಚನೆ ಮಾಡಿರುವುದು ಮತ್ತು ರಾಜಕೀಯ ಪಕ್ಷಕ್ಕೆ ನೀಡಿದ್ದ ದೇಣಿಗೆಯ ಮೊತ್ತ ತಾಳೆಯಾಗದೇ ಇರುವುದರ ಆಧಾರದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ರಾತ್ರಿ ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಯಲ್ಲಿಯೂ ದಾಳಿ ಮುಂದುವರೆದಿತ್ತು.

ನಿರ್ದೇಶಕ ಎಸ್.ನಾರಾಯಣ್ ಮನೆಯಲ್ಲಿ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆ ಕಿರುಕುಳದ ವಿಚಾರವಾಗಿ ನಿರ್ದೇಶಕ ಎಸ್.ನಾರಾಯಣ್ ಅವರ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಜ್ಞಾನಭಾರತಿ ಠಾಣೆಯ ಪೊಲೀಸರು ರಾಜರಾಜೇಶ್ವರಿ ನಗರದ ಮನೆಯಲ್ಲಿ ಶುಕ್ರವಾರ ಸ್ಥಳ ಮಹಜರು ನಡೆಸಿದರು.

ಸೊಸೆಗೆ ವರದಕ್ಷಿಣೆ ಕಿರುಕುಳ ನೀಡಿದ್ದಾರೆ ಎಂಬ ಆರೋಪದಡಿ ಎಸ್.ನಾರಾಯಣ್, ಅವರ ಪತ್ನಿ ಭಾಗ್ಯವತಿ ಹಾಗೂ ಪುತ್ರ ಪವನ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಪ್ರಕರಣದ ದೂರುದಾರೆ ಪವಿತ್ರಾ ಅವರ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದಾದರೂ ಸಾಕ್ಷ್ಯಗಳಿದ್ದರೆ ನೀಡುವಂತೆಯೂ ಕೋರಲಾಗಿದೆ. ನಾರಾಯಣ್ ಅವರಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಕರೆಸಲಾಗುವುದು ಎಂದು ಪೊಲೀಸ್ ಮೂಲಗಳು ಹೇಳಿವೆ.

ಪವಿತ್ರಾ ಅವರು ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 85 ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

“ಇಂಡೋ–ಟಿಬೆಟನ್ ಗಡಿ ಪೊಲೀಸ್ ಪಡೆ”
(ಗೃಹ ವ್ಯವಹಾರಗಳ ಸಚಿವಾಲಯ)
ಭಾರತ ಸರ್ಕಾರ

ತಿದ್ದುಪಡಿ

ಕೆಳಕಂಡ ಹುದ್ದೆಗಳ ನೇಮಕಾತಿ ಸಂಬಂಧಿಸಿದಂತೆ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟಗೊಂಡಿದ್ದ ಜಾಹೀರಾತುಗಳಲ್ಲಿ, ಖಾಲಿಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದರಿಂದ ಮಾರ್ಪಾಡು ಉಂಟಾಗಿದ್ದು, ಆಡಳಿತಾತ್ಮಕ ಕಾರಣಗಳಿಂದಾದ ತಿದ್ದುಪಡಿ ಕೆಳಗಿನಂತಿರುತ್ತದೆ:–

(ಎ) ಹೆಡ್ ಕಾನ್‌ಸ್ಟೇಬಲ್ (ಎಜುಕೇಶನ್ & ಸ್ಟ್ರೆಸ್ ಕೌನ್ಸೆಲರ್) ನೇಮಕಾತಿ–2024:

29 ಜೂನ್ – 5 ಜುಲೈ, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0006/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಹೆಡ್ ಕಾನ್‌ಸ್ಟೇಬಲ್ (ಎಜುಕೇಶನ್ & ಸ್ಟ್ರೆಸ್ ಕೌನ್ಸೆಲರ್)	ಪುರುಷ	37	15	7	24	13	96	44	15	7	26	14	106
	ಮಹಿಳೆ	6	3	1	4	2	16	7	3	1	4	2	17

(ಬಿ) ಕಾನ್‌ಸ್ಟೇಬಲ್ (ಗಾರ್ಡನರ್) ನೇಮಕಾತಿ–2024:

20 ಜುಲೈ – 26 ಜುಲೈ, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0010/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಗಾರ್ಡನರ್)	ಪುರುಷ	18	3	5	3	3	32	27	3	6	3	5	44
	ಮಹಿಳೆ	3	0	1	1	0	5	4	0	1	1	0	6

(ಸಿ) ಕಾನ್‌ಸ್ಟೇಬಲ್ (ಅನಿಮಲ್ ಟ್ರಾನ್ಸ್‌ಪೋರ್ಟ್) ನೇಮಕಾತಿ–2024:

27 ಜುಲೈ – 02 ಆಗಸ್ಟ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0013/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಅನಿಮಲ್ ಟ್ರಾನ್ಸ್‌ಪೋರ್ಟ್)	ಪುರುಷ	44	11	10	22	10	97	88	15	13	25	10	151
	ಮಹಿಳೆ	8	2	2	4	2	18	16	3	3	5	2	29

(ಡಿ) ಕಾನ್‌ಸ್ಟೇಬಲ್ (ಕಿಚನ್ ಸರ್ವೀಸಸ್) ನೇಮಕಾತಿ–2024:

31 ಆಗಸ್ಟ್ – 06 ಸೆಪ್ಟಂಬರ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0018/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಕಿಚನ್ ಸರ್ವೀಸಸ್)	ಪುರುಷ	389	41	60	138	69	697	443	69	77	173	129	891
	ಮಹಿಳೆ	69	7	10	24	12	122	79	12	13	30	23	157

(ಇ) ಕಾನ್‌ಸ್ಟೇಬಲ್ (ಮೇಸನ್) ನೇಮಕಾತಿ– 2024:

3 – 9 ಆಗಸ್ಟ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0015/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಮೇಸನ್)	ಪುರುಷ	27	3	2	10	12	54	53	6	5	11	15	90
	ಮಹಿಳೆ	5	1	0	2	2	10	10	1	0	2	3	16

(ಎಫ್) ಕಾನ್‌ಸ್ಟೇಬಲ್ (ಪ್ಲಂಬರ್) ನೇಮಕಾತಿ–2024:

3 – 9 ಆಗಸ್ಟ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0015/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಪ್ಲಂಬರ್)	ಪುರುಷ	22	3	1	8	10	44	47	6	4	9	13	79
	ಮಹಿಳೆ	4	1	0	1	2	8	8	1	0	1	3	13

(ಜಿ) ಕಾನ್‌ಸ್ಟೇಬಲ್ (ಕಾರ್ಪೆಂಟರ್) ನೇಮಕಾತಿ–2024:

3 – 9 ಆಗಸ್ಟ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0015/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಕಾರ್ಪೆಂಟರ್)	ಪುರುಷ	31	4	2	10	14	61	56	7	5	11	17	96
	ಮಹಿಳೆ	5	1	0	2	2	10	9	1	0	2	3	15

(ಎಚ್) ಕಾನ್‌ಸ್ಟೇಬಲ್ (ಡ್ರೈವರ್) ನೇಮಕಾತಿ–2024:

21 – 27 ಸೆಪ್ಟಂಬರ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0025/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಕಾನ್‌ಸ್ಟೇಬಲ್ (ಡ್ರೈವರ್)	ಪುರುಷ	209	77	40	164	55	545	275	103	48	211	75	712

(ಐ) ಸಬ್ ಇನ್ಸ್‌ಪೆಕ್ಟರ್ (ಟೆಲೆಕಮ್ಯುನಿಕೇಶನ್) ನೇಮಕಾತಿ–2024:

2 – 8 ನವಂಬರ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0030/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಸಬ್ ಇನ್ಸ್‌ಪೆಕ್ಟರ್ (ಟೆಲೆಕಮ್ಯುನಿಕೇಶನ್)	ಪುರುಷ	31	12	6	21	8	78	32	13	7	21	8	81
	ಮಹಿಳೆ	6	2	1	4	1	14	6	2	1	4	1	14

(ಜೆ) ಹೆಡ್ ಕಾನ್‌ಸ್ಟೇಬಲ್ (ಟೆಲೆಕಮ್ಯುನಿಕೇಶನ್) ನೇಮಕಾತಿ–2024:

2 – 8 ನವಂಬರ್, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಸಿಬಿಸಿ ನಂ. 19143/11/0030/2425 ಮುಖೇನ ಪ್ರಕಟಗೊಂಡಿರುವ ಜಾಹೀರಾತು.

ಹುದ್ದೆಯ ಹೆಸರು	ವಿವರಗಳು	ಇವುಗಳ ಬದಲಿಗೆ						ಹೀಗೆ ಓದಿಕೊಳ್ಳುವುದು					
		ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಎಡಬ್ಲ್ಯೂಎಸ್	ಒಟ್ಟು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯೂಎಸ್	ಒಟ್ಟು
ಹೆಡ್ ಕಾನ್‌ಸ್ಟೇಬಲ್ (ಟೆಲೆಕಮ್ಯುನಿಕೇಶನ್)	ಪುರುಷ	123	50	26	90	36	325	193	61	33	113	45	445
	ಮಹಿಳೆ	22	9	5	16	6	58	34	11	6	20	7	78

2. ಈ ಜಾಹೀರಾತಿನ ಇನ್ನಿತರ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

CBC 19143/11/0010/2526

ಸಹಿ/– ಡಿಐಜಿ (ನೇಮಕಾತಿ)

ಟೆಕಿಗೆ ₹17.66 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆಯ ಹೆಸರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗೆ ₹17.66 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್‌ನ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಣ ಕಳೆದುಕೊಂಡಿರುವ ಮಾರತ್‌ಹಳ್ಳಿಯ ನಿವಾಸಿ, ಟೆಕಿ ಎನ್. ಲಾವಣ್ಯ ಅವರು ನೀಡಿದ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318(4), 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಶ್ಮಿತಾ ಎಂಬಾಕೆಯ ವಿರುದ್ಧ ಶಂಕೆ ವ್ಯಕ್ತವಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಟೆಕಿ ಲಾವಣ್ಯ ಅವರನ್ನು ಟೆಲಿಗ್ರಾಂ ಆ್ಯಪ್ ಮೂಲಕ ಸಂಪರ್ಕಿಸಿದ್ದ ಸೈಬರ್ ವಂಚಕರು, ಅರೆಕಾಲಿಕ ಉದ್ಯೋಗದ ಬಗ್ಗೆ ಮಾಹಿತಿ ನೀಡಿದ್ದರು. ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳ ಕುರಿತು ಗೂಗಲ್ ರಿವ್ಯೂವ್ ಮಾಡಿ ಹಣ ಗಳಿಸಬಹುದು ಎಂದು ಆಮಿಷವೊಡ್ಡಲಾಗಿತ್ತು. ಅಲ್ಲದೇ ಟೆಲಿಗ್ರಾಂ ಆ್ಯಪ್ ಮೂಲಕ ಲಿಂಕ್‌ವೊಂದನ್ನು ಕಳುಹಿಸಿದ್ದ ಸೈಬರ್ ವಂಚಕರು, ಹಣ ಹೂಡಿಕೆ ಮಾಡಿ ಲಾಭ ಗಳಿಸುವಂತೆ ತಿಳಿಸಿದ್ದರು. ಕರೆ ಮಾಡಿದವರ ಮಾತು ನಂಬಿದ್ದ ಟೆಕಿ ಆರಂಭದಲ್ಲಿ ₹10 ಸಾವಿರ ಹಣ ಹೂಡಿಕೆ ಮಾಡಿದ್ದರು. ಕೆಲವು ದಿನ ಕಳೆದ ಮೇಲೆ ₹10,700 ನೀಡಿದ್ದರು. ಇನ್ನೂ ಹೆಚ್ಚಿನ ‘ಟಾಸ್ಕ್’ ಪೂರ್ಣಗೊಳಿಸಿದರೆ, ಅಧಿಕ ಲಾಭ ದೊರೆಯಲಿದೆ ಎಂದು ವಂಚಕರು ಹೇಳಿದ್ದರು. ಲಾವಣ್ಯ ಅವರು ವಿವಿಧ ಬ್ಯಾಂಕ್‌ಗಳ 10 ಖಾತೆಗಳಿಂದ ₹17.66 ಲಕ್ಷ ಹೂಡಿಕೆ ಮಾಡಿದ್ದರು. ಅದಾದ ಮೇಲೆ ವಂಚಕರು ₹10 ಸಾವಿರ ವಾಪಸ್ ನೀಡಿದ್ದರು. ಬಳಿಕ ಯಾವುದೇ ಹಣವನ್ನು ವಾಪಸ್ ನೀಡದೇ ವಂಚಿಸಿದ್ದಾರೆ’ ಎಂಬುದಾಗಿ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ.

ಉಪಮುಖ್ಯಮಂತ್ರಿ ಮನೆ ಎದುರು ನಿಂತಿದ್ದ ಕಾರಿನ ಮೂಲ ಪತ್ತೆ?

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸದಾಶಿವನಗರದ ನಿವಾಸದ ಬಳಿ ಪತ್ತೆಯಾದ ನಕಲಿ ನಂಬರ್ ಪ್ಲೇಟ್ ಅಳವಡಿಸಿದ್ದ ಕಾರು, ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ.ಮಂಜುನಾಥ್ ಹೆಸರಿನಲ್ಲಿ ಇರುವುದು ತನಿಖೆಯಿಂದ ಗೊತ್ತಾಗಿದೆ.

ಆ ಕಾರನ್ನು ಕಾಂಗ್ರೆಸ್ ಕಾರ್ಯಕರ್ತ ಕೃಷ್ಣಮೂರ್ತಿ ಅವರು ಬಳಸುತ್ತಿರುವುದೂ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಶಿವಕುಮಾರ್ ಅವರ ನಿವಾಸದ ಸಮೀಪದ 18ನೇ ಕ್ರಾಸ್‌ನಲ್ಲಿ ಸೆ.7ರಂದು ಕೆಎ-51 ಎಂಡಬ್ಲ್ಯು 6814 ನೋಂದಣಿ ಸಂಖ್ಯೆಯ ಬಿಳಿ ಬಣ್ಣದ ಫಾರ್ಚೂನರ್ ಕಾರು ನಿಂತಿತ್ತು. ಅದರ ಮೂಲವನ್ನು ಪೊಲೀಸರು ಪತ್ತೆ ಮಾಡಿದ್ದಾರೆ.

ಅರ್ಧ ದಿನ ಕಳೆದರೂ ಕಾರು ಸ್ಥಳದಲ್ಲೇ ನಿಂತಿದ್ದರಿಂದ ಬೇರೆ ವಾಹನಗಳ ಸಂಚಾರಕ್ಕೆ ಅಡಚಣೆ ಆಗಬಹುದು ಎಂದು ಸಂಚಾರ ಪೊಲೀಸರು ಅದನ್ನು ತೆರವುಗೊಳಿಸಲು ಮುಂದಾಗಿದ್ದರು.

ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಪರಿಶೀಲಿಸಿದಾಗ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನೆಲಸಿರುವ ದೀಪಕ್ ಅವರ ಕಾರು ಎಂಬುದು ಕಂಡುಬಂದಿತ್ತು. ಅವರಿಗೆ ಕರೆ ಮಾಡಿ, ಕಾರು ತೆರವುಗೊಳಿಸುವಂತೆ ಪೊಲೀಸರು ತಿಳಿಸಿದ್ದರು. ಆದರೆ, ದೀಪಕ್ ಅವರು ಕಾರು ತಮ್ಮ ಮನೆ ಮುಂದೆಯೇ ನಿಲ್ಲಿಸಲಾಗಿದೆ ಎಂದಿದ್ದರು.

ಅಚ್ಚರಿಗೊಂಡ ಪೊಲೀಸರು, ತನಿಖೆ ಆರಂಭಿಸಿದ್ದರು. ಈ ನಂಬರ್ ಪ್ಲೇಟ್ ಹಿಂದೆ ಮತ್ತೊಂದು ನಂಬರ್ ಪ್ಲೇಟ್ ಇರುವುದು ಪತ್ತೆಯಾಗಿತ್ತು. ಕೆಎ–42 ಪಿ 6606 ಸಂಖ್ಯೆಯ ನಂಬರ್ ಪ್ಲೇಟ್ ಪತ್ತೆಯಾಗಿತ್ತು.

ನಂತರ, ಕಾರನ್ನು ಠಾಣೆಗೆ ತೆಗೆದುಕೊಂಡು ಹೋಗಿ ತಪಾಸಣೆ ನಡೆಸಿದಾಗ ಮಾಗಡಿಯ ಮಾಜಿ ಶಾಸಕ ಎ.ಮಂಜುನಾಥ್ ಅವರ ಹೆಸರಿನಲ್ಲಿ ರಾಮನಗರದ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ನೋಂದಣಿ ಆಗಿರುವುದು ಕಂಡುಬಂದಿತ್ತು. ಆ ಬಳಿಕ ಮಂಜುನಾಥ್ ಅವರಿಗೆ ನೋಟಿಸ್ ಕೊಟ್ಟು ಮಾಹಿತಿ ಕೇಳಲಾಗಿತ್ತು.

ಹಿಂದಿನ ವಿಧಾನಸಭಾ ಚುನಾವಣೆ ವೇಳೆ ಕೃಷ್ಣಮೂರ್ತಿ ಎಂಬ ಕಾರ್ಯಕರ್ತನಿಗೆ ಈ ಕಾರನ್ನು ಕೊಡಲಾಗಿತ್ತು. ಈಗಲೂ ಅವರೇ ಕಾರು ಬಳಸುತ್ತಿದ್ದಾರೆ ಎಂದು ಉತ್ತರಿಸಿದ್ದರು.

ಸಿ.ಎಂ ನಿವಾಸದ ಬಳಿ ಹೊತ್ತಿ ಉರಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ‘ಕಾವೇರಿ’ ಬಳಿ ಶುಕ್ರವಾರ ಬೆಳಿಗ್ಗೆ ಕಾರೊಂದು ಬೆಂಕಿಗೆ ಆಹುತಿಯಾಗಿದೆ. ಇದ್ದಕ್ಕಿದ್ದಂತೆ ಕಾರಿಗೆ ಬೆಂಕಿ ತಗುಲಿ ಧಗಧಗನೆ ಹೊತ್ತಿ ಉರಿದಿದೆ. ಇದರಿಂದ ಈ ಮಾರ್ಗದಲ್ಲಿ ಸ್ವಲ್ಪಹೊತ್ತು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಟೆಕಿ ಸಚಿನ್ ಅವರು ಕಾರಿನಲ್ಲಿ ಕೋರಮಂಗಲದಿಂದ ಗಂಗಾನಗರದಲ್ಲಿ ಇರುವ ಉಪ ನೋಂದಣಾಧಿಕಾರಿ ಕಚೇರಿಗೆ ಆಸ್ತಿ ನೋಂದಣಿಗಾಗಿ ತೆರಳುತ್ತಿದ್ದರು. ಅರಮನೆ ರಸ್ತೆಯ ವಿಂಡ್ಸರ್ ಮ್ಯಾನರ್ ಸೇತುವೆಯ ಸರ್ವೀಸ್ ರಸ್ತೆಯಲ್ಲಿ ಕಾರು ಸಾಗುತ್ತಿರುವಾಗ ಎಂಜಿನ್‌ನಲ್ಲಿ ಇದ್ದಕ್ಕಿದ್ದಂತೆ ಹೊಗೆ ಕಾಣಿಸಿಕೊಂಡಿತ್ತು. ಚಾಲಕ ತಕ್ಷಣವೇ ಅಪಾಯ ಅರಿತು ಕಾರನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದರು. ಸಚಿನ್ ಹಾಗೂ ಚಾಲಕ ಇಬ್ಬರೂ ಕಾರಿನಿಂದ ಇಳಿದಿದ್ದರು. ಚಾಲಕ ಕಾರಿನ ಮುಂದಿನ ಬಾನೆಟ್ ತೆಗೆಯುತ್ತಿದ್ದಂತೆಯೇ ಬೆಂಕಿ ಆವರಿಸಿದ್ದರಿಂದ ಅವರು ಹಿಂದೆ ಸರಿದಿದ್ದರು. ಸಚಿನ್ ಅವರು ಕಾರಿನಲ್ಲಿದ್ದ ದಾಖಲೆ ಮತ್ತು ಕೆಲ ವಸ್ತುಗಳನ್ನು ಹೊರಗೆ ತೆಗೆದುಕೊಂಡಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕಾರಿನ ಟೈರ್ ಮತ್ತು ಡೀಸೆಲ್ ಟ್ಯಾಂಕ್ ಸ್ಫೋಟವಾಗಿದೆ. ಕಾರಿನಲ್ಲಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ಗೊತ್ತಾಗಿಲ್ಲ ಎಂದು ಪೊಲೀಸರು ಹೇಳಿದರು.

ಸುಟ್ಟು ಹೋದ ಕಾರನ್ನು ರಸ್ತೆಯಿಂದ ತೆರವು ಗೊಳಿಸಿದ ಹೈಗ್ರೌಂಡ್ಸ್ ಠಾಣೆ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ಧಾರೆ.

ಹೊತ್ತಿ ಉರಿದ ಕಾರು

ರಸ್ತೆಯಲ್ಲಿ ಗುಂಡಿ: ಉರುಳಿದ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೂರ್ವ ವಿಭಾಗದ ಪಣತ್ತೂರು ಮುಖ್ಯ ರಸ್ತೆಯಲ್ಲಿ ಬಿದ್ದಿರುವ ಗುಂಡಿ ತಪ್ಪಿಸಲು ಹೋಗಿ ಶಾಲಾ ಬಸ್‌ವೊಂದು ಉರುಳಿದ ಘಟನೆ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಬಸ್‌ನಲ್ಲಿ 20ಕ್ಕೂ ಹೆಚ್ಚು ಮಕ್ಕಳಿದ್ದರು. ಅವರು ತುರ್ತು ನಿರ್ಗಮನ ದ್ವಾರದ ಮೂಲಕ ಹೊರಗೆ ಬಂದಿದ್ದಾರೆ.

ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ರಸ್ತೆಯಲ್ಲಿ ಬಿದ್ದಿದ್ದ ಗುಂಡಿಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು. ನಿಧಾನವಾಗಿ ಬಸ್ ವಾಲುತ್ತಿರುವ ದೃಶ್ಯವು ಬಸ್‌ನಲ್ಲಿ ಅಳವಡಿಸಿದ್ದ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ಸ್ಥಳಕ್ಕೆ ಬೇರೊಂದು ಬಸ್ ತರಿಸಿಕೊಂಡು ಮಕ್ಕಳನ್ನು ಶಾಲೆಗೆ ಕಳುಹಿಸಲಾಯಿತು. ಬಳಿಕ ಬಸ್ ಅನ್ನು ಮೇಲಕ್ಕೆ ಎತ್ತಲಾಯಿತು’ ಎಂದು ಪೊಲೀಸರು ಹೇಳಿದರು.

‘ಬೇರೊಂದು ಶಾಲೆಯ ಬಸ್ ಮುಂದೆ ತೆರಳುತ್ತಿತ್ತು. ಆ ಬಸ್‌ನ ಹಿಂದೆಯೇ ನ್ಯೂ ಹೊರೈಜಾನ್ ಶಾಲೆಯ ಬಸ್ ಬರುತ್ತಿತ್ತು. ಮುಂದೆ ವಾಹನಗಳು ನಿಂತಿದ್ದರಿಂದ ರಸ್ತೆಯ ಎಡಭಾಗದಿಂದ ಮುಂದಕ್ಕೆ ಸಾಗಲು ಚಾಲಕ ಎಡಕ್ಕೆ ಬಸ್ ಅನ್ನು ತಿರುಗಿಸಿದ್ದರು. ಆಗ ಗುಂಡಿಗೆ ಚಕ್ರಗಳು ಇಳಿದ ಪರಿಣಾಮ ಬಸ್ ಉರುಳಿತ್ತು’ ಎಂದು ಸ್ಥಳೀಯರು ತಿಳಿಸಿದ್ದಾರೆ.

ರಸ್ತೆಯಲ್ಲಿ ಬಿದ್ದಿರುವ ಗುಂಡಿಯಿಂದ ವಾಲಿದ ಶಾಲಾ ಬಸ್

ಬಿಡಿಎ ನೆಮ್ಮದಿಯ ಜೀವನಕ್ಕೆ ವರದಾನ – ಬಿಡಿಎ ನಿವೇಶನ

ಬಿಡ್ ಮಾಡಿ

ಪ್ರತಿ ಚ.ಮೀ.ಗೆ ರೂ. 500/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ



ಇ-ಹರಾಜನ್ನು ಆರಂಭಿಸುವ ದಿನಾಂಕ: 17.09.2025.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ವಸತಿ ಹಾಗೂ ವಾಣಿಜ್ಯ ಮೂಲೆ / ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು "ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ" ಹರಾಜು ಮಾಡಲಾಗುವುದು.

ಇ-ಹರಾಜನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 06.10.2025, ಸಂಜೆ 5.00 ಗಂಟೆಗೆ

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 1 ರಿಂದ 40): 08.10.2025ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 09.10.2025ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ.ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
	ಅರ್ಕಾವತಿ ಲೇಔಟ್, 17ನೇ ಬ್ಲಾಕ್, ಗೆದ್ದಹಳ್ಳಿ			
1	GH100	12.00	8.00	96.00
2	GH111A	12.00	(7.00+7.50)/2	87.00
3	GH112A	12.00	(7.50+8.40)/2	95.40
4	GH125A	9.00	(6.00+5.00)/2	49.50
5	GH126A	9.00	(8.50+6.00)/2	65.25
6	GH536	15.00	16.40	246.00
7	GH535	15.00	16.40	246.00
8	GH185	6.00	9.00	54.00
9	GH143	9.00	(5.40+8.50)/2	62.55
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 8722433608			
	ಅರ್ಕಾವತಿ ಲೇಔಟ್, 20ನೇ ಬ್ಲಾಕ್, ಹೆಣ್ಣೂರು			
10	HN106	6.00	24.00	144.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8722433608			
	ಅರ್ಕಾವತಿ ಲೇಔಟ್, 5ನೇ ಬ್ಲಾಕ್, ಕೆ. ನಾರಾಯಣಪುರ			
11	299A	15.00	24.00	360.00
12	298A	15.00	24.00	360.00
13	276A	15.00	24.00	360.00
14	275A	15.00	24.00	360.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 8217795990			
	ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು			
15	1379	12.00	(5.30+5.90)/2	67.20
16	1418	18.00	(7.30+5.80)/2	117.90
17	1419	18.00	(6.60+5.25)/2	106.65
18	1494	24.00	(5.30+4.50)/2	117.60
19	1495	24.00	(4.50+3.90)/2	100.80
20	1466A	24.00	8.80	211.20
21	1467A	24.00	8.80	211.20
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 7349388238			
	ಅರ್ಕಾವತಿ ಲೇಔಟ್, 8ನೇ ಬ್ಲಾಕ್, ಜಕ್ಕೂರು			
22	76A	(13.80+7.60)/2	12.00	128.40
23	98A	(9.00+15.00)/2	12.00	144.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 7349388238			
	ಹೆಚ್‌ಬಿಆರ್ 1ನೇ ಹಂತ, 4ನೇ ಬ್ಲಾಕ್, ಹೆಣ್ಣೂರು			
24	477	18.28	12.19	222.83
25	476	18.28	12.19	222.83
26	475	18.28	12.19	222.83
27	482	18.28	12.19	222.83
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,72,000/-, ಸಂಪರ್ಕಿಸಿ: 8722433608			
	ಅರ್ಕಾವತಿ ಲೇಔಟ್, 15ನೇ ಬ್ಲಾಕ್, ಥಣಿಸಂದ್ರ			
28	TS-392	12.00	(7.00+6.00)/2	78.00
29	TS-415	9.00	(7.00+6.00)/2	58.50
30	TS-341	(6.60+6.00)/2	9.00	56.70
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 82,500/-, ಸಂಪರ್ಕಿಸಿ: 9980402882			
	ಅರ್ಕಾವತಿ ಲೇಔಟ್, 16ನೇ ಬ್ಲಾಕ್, ಥಣಿಸಂದ್ರ			
31	244	9.00	(7.60+8.00)/2	70.20
32	243	9.00	(6.00+5.80)/2	53.10
33	230	9.00	(5.00+5.80)/2	48.60
34	288	10.00	9.00	90.00
35	287	9.00	(9.50+9.00)/2	83.25
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 82,500/-, ಸಂಪರ್ಕಿಸಿ: 9980402882			
	ಅರ್ಕಾವತಿ ಲೇಔಟ್, 3ನೇ ಬ್ಲಾಕ್, ಸಂಪಿಗೇಹಳ್ಳಿ			
36	SH100	11.40	17.80	202.92
37	SH101	18.00	(11+11.60)/2	203.40
38	72	(4.20+3.90)/2	9.00	36.45
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 60,000/-, ಸಂಪರ್ಕಿಸಿ: 7349388238			
	ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು			
39	3042/B	15.00	6.00	90.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 7349388238			
	ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಸಂಪಿಗೇಹಳ್ಳಿ			
40	SH257	18.00	8.50	153.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 60,000/-, ಸಂಪರ್ಕಿಸಿ: 7349388238			

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 41 ರಿಂದ 82): 09.10.2025ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 10.10.2025ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ.ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
	ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಸಂಪಿಗೇಹಳ್ಳಿ			
41	44	(8.00+8.30)/2	12.00	97.80
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 60,000/-, ಸಂಪರ್ಕಿಸಿ: 7349388238			
	ಅರ್ಕಾವತಿ ಲೇಔಟ್, 19ನೇ ಬ್ಲಾಕ್, ಚೆಳ್ಳಕೆರೆ			
42	415	8.50	12.00	102.00
43	463	6.00	9.00	54.00
44	470	6.00	(12.40+12.20)/2	73.80
45	448	(8.50+8.30)/2	12.00	100.80
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 8722433608			
	ಅರ್ಕಾವತಿ ಲೇಔಟ್, 20ನೇ ಬ್ಲಾಕ್, ಹೆಣ್ಣೂರು			
46	HN92	7.00	9.00	63.00
47	HN99	6.00	18.00	108.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8722433608			
	ಆರ್‌ಎಂವಿ 2ನೇ ಹಂತ, ಪೂರ್ಣಾಪುರ			
48	118/A	26.00	25.00	650.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 2,25,000/-, ಸಂಪರ್ಕಿಸಿ: 8722433608			
	ಆರ್‌ಎಂವಿ 2ನೇ ಹಂತ, ಲೊಟ್ಟೆಗೊಲ್ಲಹಳ್ಳಿ			
49	61	24.00	(14.00+4.50)/2	222.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 2,00,000/-, ಸಂಪರ್ಕಿಸಿ: 8722433608			
	ಓಎಂಬಿಆರ್, ಬಾಣಸವಾಡಿ			
50	1AM502	(19.20+12.80)/2	(5.5+17.6)/2	184.80
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,72,000/-, ಸಂಪರ್ಕಿಸಿ: 8722433608			
	ಅರ್ಕಾವತಿ ಲೇಔಟ್, 1ನೇ ಬ್ಲಾಕ್, ಜಕ್ಕೂರು			
51	474	12.00	(10.70+9.83)/2	123.18
52	495	12.00	(9.83+8.90)/2	112.38
53	496	12.00	(9.00+8.07)/2	102.42
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 7349388238			
	ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಜಕ್ಕೂರು			
54	JK174	12.00	9.00	108.00
55	JK209	12.00	9.00	108.00
56	2192	18.00	(9.10+11.20)/2	182.70
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 7349388238			
	ಮುಂದುವರೆದ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 9ನೇ ಬ್ಲಾಕ್, ಮಲ್ಲತ್ತಹಳ್ಳಿ			
57	567	9.00	(19.00+19.10)/2	171.45
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147510380			
	ಮುಂದುವರೆದ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 8ನೇ ಬ್ಲಾಕ್, ಗಿಡದಕೊನೇನಹಳ್ಳಿ ಗ್ರಾಮ			
58	2246	18.00	11.10	199.80
59	2047	18.00	(11.00+9.20)/2	181.80
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. Rs. 70,000/-, ಸಂಪರ್ಕಿಸಿ: 6362956998			
	ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಮಂಗನಹಳ್ಳಿ			
60	1978	18.20	11.70	212.94
61	1968	(11.80+12.00)/2	(11.60+8.20)/2	117.81
62	1984	(17.40+17.00)/2	(19.60+15.50)/2	301.86
63	1985	14.00	11.00	154.00
64	1762	(9.00+9.60)/2	12.00	111.60
65	2211	4.00	12.00	48.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 7975861995			
	ಕೆಂಗೇರಿ ಸ್ಯಾಟಲೈಟ್, ಕೆಂಗೇರಿ			
66	2004	3.30	14.00	46.20
67	2126/A	5.18	12.10	62.67
68	2158	12.10	7.60	91.96
69	2044	(20.25+6.25)/2	(12.20+18.00)/2	199.02
70	2057	18.00	9.00	162.00
71	2060	18.00	9.00	162.00
72	2058	18.00	9.00	162.00
73	2029	18.00	9.00	162.00
74	2047	9.10	12.00	109.20
75	2050	(10.70+9.15)/2	12.20	121.80
76	2036	12.00	9.00	108.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 9620159111			
	ಬನಶಂಕರಿ 6ನೇ ಹಂತ, 3ನೇ ಬ್ಲಾಕ್, ಹೆಮ್ಮಿಗೇಪುರ			
77	1263/A	18.00	(26.00+30.00)/2	504.00
78	1940	(12.5+30.00)/2	12.00	225.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 8147799282			
	ಅಂಜನಾಪುರ ಟೌನ್‌ಶಿಪ್, 2ನೇ 'ಎ' ಬ್ಲಾಕ್, ಅಂಜನಾಪುರ			
79	75	9.00	(5.00+7.00)/2	56.25
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 66,000/-, ಸಂಪರ್ಕಿಸಿ: 8660907357			
	ಬನಶಂಕರಿ 6ನೇ ಹಂತ, 4ನೇ ಬ್ಲಾಕ್, ಲಿಂಗಧೀರನಹಳ್ಳಿ			
80	1773	12.00	(8.00+12.00)/2	132.00
81	1704	(9.00+12.00)/2	12.00	126.00
82	1500	(12.00+11.50)/2	12.00	141.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 83 ರಿಂದ 122): 13.10.2025ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 14.10.2025ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ.ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
	ಮುಂದುವರೆದ ಬನಶಂಕರಿ ಬಡಾವಣೆ, 4ನೇ 'ಬಿ' ಬ್ಲಾಕ್, ಬಿ.ಎಂ. ಕಾವಲ್			
83	547	(28.20+21.00)/2	24.00	590.40
84	446	12.00	18.00	216.00
85	536	(30.00+34.00)/2	24.00	768.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			
	ಮುಂದುವರೆದ ಬನಶಂಕರಿ ಬಡಾವಣೆ, 4ನೇ 'ಟಿ' ಬ್ಲಾಕ್, ತಲಘಟ್ಟಪುರ			
86	552	(7.00+9.00)/2	12.00	96.00
87	257/I	12.00	(15.00+2.80)/2	106.80
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			
	ಬನಶಂಕರಿ 6ನೇ ಹಂತ, 3ನೇ ಬ್ಲಾಕ್, ಹೆಮ್ಮಿಗೇಪುರ			
88	2061	(16.00+4.50)/2	12.00	123.00
89	1640/25	18.00	12.00	216.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/-, ಸಂಪರ್ಕಿಸಿ: 8147799282			
	ಬನಶಂಕರಿ 6ನೇ ಹಂತ, 5ನೇ ಬ್ಲಾಕ್, ಲಿಂಗಧೀರನಹಳ್ಳಿ			
90	1015	(13.00+12.00)/2	12.00	150.00
91	872	12.00	9.20	110.40
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			
	ಮುಂದುವರೆದ ಅಂಜನಾಪುರ ಬಡಾವಣೆ, 5ನೇ 'ಜಿ' ಬ್ಲಾಕ್, ಗೊಲ್ಲಹಳ್ಳಿ			
92	1040	9.00	6.00	54.00
93	552	12.00	18.00	216.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 67,500/-, ಸಂಪರ್ಕಿಸಿ: 8310525317			
	ಬನಶಂಕರಿ 6ನೇ ಹಂತ, 11ನೇ ಬ್ಲಾಕ್, ಗಣಕಲ್ಲು			
94	1014	(4.50+5.00)/2	9.00	42.75
95	1208	7.00	12.00	84.00
96	1191	5.00	9.00	45.00
97	1052	(5.00+4.50)/2	9.00	42.75
98	1035	(5.00+4.50)/2	9.00	42.75
99	1013	5.00	9.00	45.00
100	1005	5.00	9.00	45.00
101	1145/A	(4.10+7.50)/2	12.20	70.76
102	1170	5.00	9.00	45.00
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84,000/-, ಸಂಪರ್ಕಿಸಿ: 8147799282			
	ಬನಶಂಕರಿ 6ನೇ ಹಂತ, 1ನೇ ಬ್ಲಾಕ್, ತೂರಹಳ್ಳಿ			
103	121	18	(5.50+11.00)/2	148.5
104	100/J	9	12	108
105	100/K	9	12	108
106	100/L	15	12	180
107	100/F	9	12	108
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,000/-, ಸಂಪರ್ಕಿಸಿ: 8147799282			
	ಬನಶಂಕರಿ 6ನೇ ಹಂತ, 2ನೇ ಬ್ಲಾಕ್, ತೂರಹಳ್ಳಿ			
108	1094/A	12	18	216
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,500/-, ಸಂಪರ್ಕಿಸಿ: 8147799282			
	ಬನಶಂಕರಿ 6ನೇ ಹಂತ, 4ನೇ ಬ್ಲಾಕ್, ಲಿಂಗಧೀರನಹಳ್ಳಿ			
109	1632	(11.80+24.30)/2	18	324.9
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			
	ಮುಂದುವರೆದ ಬನಶಂಕರಿ 6ನೇ ಹಂತದ ಬಡಾವಣೆ, 4ನೇ 'ಹೆಚ್' ಬ್ಲಾಕ್, ಗುಬ್ಬಲಾಳ			
110	3482	24	(7.50+9.20)/2	200.4
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,000/-, ಸಂಪರ್ಕಿಸಿ: 8147799282			
	ಅಂಜನಾಪುರ ಟೌನ್‌ಶಿಪ್, 8ನೇ ಬ್ಲಾಕ್, ಅಂಜನಾಪುರ			
111	755/C	12	9	108
112	755/D	12	9	108
113	755/E	11	9	99
114	755/F	11	9	99
115	755/G	11	9	99
116	755/H	11	9	99
117	755/I	11	9	99
118	755/L	11	9	99
119	755/M	11	9	99
120	755/N	11	9	99
121	755/O	12	9	108
122	755/P	12	9	108
	ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 67,000/-, ಸಂಪರ್ಕಿಸಿ: 8310525317			

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).
3. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ /ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
4. ಸಹಿ ಮತ್ತು ಭಾವಚಿತ್ರದ ಗುರುತನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ/ ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
5. ಹರಾಜು ಖರೀದಿದಾರರು ಸರಿಯಾದ ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ-ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.
6. **ಅಪ್ರಾಪ್ತ ವಯಸ್ಕರು /ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ /ಹತ್ತಿರದ ಸ್ನೇಹಿತರ ಮೂಲಕ ಇ-ಹರಾಜಿನಲ್ಲಿ ಭಾಗವಹಿಸಬಹುದು. ಇ-ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು /ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**
7. ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.
8. ಪ್ರತಿ ನಿವೇಶನಕ್ಕೆ ಇಎಂಡಿ ಮೊತ್ತವನ್ನು ರೂ. 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ ಮತ್ತು ಈ ಮೊತ್ತವನ್ನು ಇ-ಹರಾಜು ಶುಲ್ಕದೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಉಲ್ಲೇಖಿಸಿದಂತೆ ಪಾವತಿಸಬೇಕು. ಇ-ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಪಾವತಿಸಿದರೆ ಮರುಪಾವತಿ ಸಮಯದಲ್ಲಿ ಇಎಂಡಿಯ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
9. ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.
10. ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.
11. ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
12. ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
13. **ಬ್ಯಾಂಕ್‌ನ ಹೆಸರು :- ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು-560020**
    ಉಳಿತಾಯ ಖಾತೆಯ ಹೆಸರು :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
    ಉಳಿತಾಯ ಖಾತೆ ಸಂಖ್ಯೆ :- 2828101053014 ಐ.ಎಫ್.ಎಸ್.ಸಿ ಕೋಡ್:- CNRB0002828
    ಪಾವತಿಯ ವಿಧಾನ :- ಆರ್.ಟಿ.ಜಿ.ಎಸ್ /ಎನ್.ಇ.ಎಫ್.ಟಿ
14. ಯಶಸ್ವಿ ಬಿಡ್‌ದಾರರಿಗೆ (ಅತಿ ಹೆಚ್ಚು ಬಿಡ್‌ದಾರರು) ಇ-ಹರಾಜಿನ ಮುಕ್ತಾಯ ಸಮಯದಿಂದ 72 ಗಂಟೆಗಳ ಒಳಗೆ (ಬ್ಯಾಂಕ್ ರಜಾದಿನಗಳನ್ನು ಹೊರತುಪಡಿಸಿ) ಒಟ್ಟು ಬೆಲೆಯ 25% ಮೊತ್ತವನ್ನು ರೂ.4.00 ಲಕ್ಷಗಳ ಇಎಂಡಿ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ಕೆಳಗೆ ತಿಳಿಸಲಾದ ಬಿಡಿಎ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲಹೆ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ; ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿದ್ದಕ್ಕೆ ಪಡೆದ ಚಲನ್ ಅನ್ನು ಲೆಕ್ಕಾಧಿಕಾರಿ ಹಣಕಾಸು ಇಲಾಖೆ ('ಡಿ' ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ 308) ಇವರಿಗೆ ಸಲ್ಲಿಸಬೇಕು. ನಿಗದಿತ ಸಮಯದ ಒಳಗೆ 25% ಹಣವನ್ನು ಸಂದಾಯ ಮಾಡಲು ವಿಫಲವಾದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್ಡುದರಾರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ.ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದ್ದು.
15. ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಮೊತ್ತ ರೂ. 4 ಲಕ್ಷಗಳನ್ನು 30 ಕೆಲಸದ ದಿನಗಳಲ್ಲಿ ಅವರ ಖಾತೆಗೆ ಜಮಾ ಮಾಡಲಾಗುವುದು.
16. ಹರಾಜು ಖರೀದಿದಾರರು ಜಂಟಿಯಾಗಿ ನಿವೇಶನಗಳನ್ನು ನೋಂದಾಯಿಸಲು ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಹರಾಜು ಖರೀದಿದಾರರೊಂದಿಗೆ ರಕ್ತಸಂಬಂಧಿಗಳು ಅಂದರೆ ಸಂಗಾತಿ, ಪುತ್ರರು ಅಥವಾ ಅವಿವಾಹಿತ ಹೆಣ್ಣುಮಕ್ಕಳು ಮಾತ್ರ ಜಂಟಿ ನೋಂದಣಿಗೆ ಅರ್ಹರಾಗಿರುತ್ತಾರೆ. ಅರ್ಜಿಯಲ್ಲಿ ಅಂತಹ ವ್ಯಕ್ತಿಯ ಸಂಬಂಧವನ್ನು ಸ್ಪಷ್ಟವಾಗಿ ನಮೂದಿಸಬೇಕು ಮತ್ತು ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು. ನಂತರ ಅಂತಹ ವಿನಂತಿಯನ್ನು ತಿರಸ್ಕರಿಸಲಾಗುತ್ತದೆ.
17. ಬಿಡ್ಡಿಂಗ್ ಸಮಯದಲ್ಲಿ, ಒಂದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದಲ್ಲಿ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
18. **ಯಶಸ್ವಿ ಬಿಡ್ಡುದಾರರು /ಅತಿ ಹೆಚ್ಚಿನ ಬಿಡ್ಡುದಾರರು ಇ-ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
19. ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.
20. ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ-ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು.
    ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):- ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು.
21. ಬಿಡ್ಡುದಾರರು/ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ-ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).
22. ಇ-ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.
23. ಇ-ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 m^2 ನಿವೇಶನದ ವಿಸ್ತೀರ್ಣದ ಮೂಲ ದರ ರೂ.45,000/m^2 ಆಗಿರುತ್ತದೆ. ಬಿಡ್‌ದಾರರು ರೂ..45,000x1.1=ರೂ.49,500/m^2 ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ.49,500 ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
24. ಪ್ರತಿ ನಿವೇಶನಕ್ಕೆ ಕನಿಷ್ಠ 2 ಬಿಡ್‌ದಾರರುಗಳು ಇರಬೇಕು. ಏಕ ಬಿಡ್‌ದಾರನನ್ನು ತಿರಸ್ಕರಿಸಲಾಗುವುದು.
25. ವೆಬ್‌ಸೈಟ್ ವಿಳಾಸ: **www.kbda.karnataka.gov.in**
26. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ವೆಬ್‌ಸೈಟ್: **https://kppp.karnataka.gov.in** ಇಲ್ಲಿಗೆ ಲಾಗ್‌ಆನ್ ಆಗಿ ಹೊಸ ಇ-ಹರಾಜು ಬಿಡ್ಡಿಂಗ್ ಬಳಕೆದಾರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್:080-46010000 ಮತ್ತು 080-68948777 ಸಂಪರ್ಕಿಸುವುದು.
27. ಹರಾಜು ಮಾಡಿದ ನಿವೇಶನಗಳನ್ನು ಯಶಸ್ವಿ ಬಿಡ್‌ದಾರರಿಗೆ ಅವುಗಳು ಇರುವ ಸ್ಥಿತಿಯಲ್ಲಿಯೇ ಹಂಚಿಕೆ ಮಾಡಲಾಗುವುದು. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಇತ್ಯಾದಿಗಳನ್ನು ಬಿಡ್ ಮಾಡುವ ಮುನ್ನ ಭೌತಿಕವಾಗಿ ಪರಿಶೀಲಿಸತಕ್ಕದ್ದು. ಇ-ಹರಾಜಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ/ಪರ್ಯಾಯ ನಿವೇಶನ ನೀಡಲಾಗುವುದಿಲ್ಲ.
28. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಮೇಲೆ ನಿರ್ದಿಷ್ಟಪಡಿಸಿರುವ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು.
29. ಇ-ಹರಾಜಿನ ಬಗ್ಗೆ, ಬಿಡ್‌ದಾರರು ಪ್ರಾಧಿಕಾರವನ್ನು ನೇರವಾಗಿ ಸಂಪರ್ಕಿಸಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು.
30. ನಿವೇಶನಗಳ ಜಿಯೊ ಟ್ಯಾಗ್ ಕೇವಲ ಪರಾಮರ್ಶನೆಗೆ ಮಾತ್ರ. ಅದರಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ಆ ಬಗ್ಗೆ ಯಾವುದೇ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ-ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ **https://kppp.karnataka.gov.in** ಲಾಗಾನ್ ಆಗಿ

ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ **080-23368435 /23368036** ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ **080-46010000 /68948777** ಸಂಪರ್ಕಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ. ಬೆಂಅಪ್ರಾ/ಅಸ/ಇ-ಹರಾಜು/ಟಿ-08/2025-26, ದಿನಾಂಕ: 06.09.2025

ಸಹಿ/- ಅಭಿಯಂತರ ಸದಸ್ಯರು

ಸಮಾಜದಲ್ಲಿ 'ಕಳಂಕಿತರು' ಎಂಬ ಹಣೆಪಟ್ಟಿಯನ್ನು ಹೊತ್ತು, ಮುಖ್ಯವಾಹಿನಿಯಿಂದ ದೂರವೇ ಉಳಿದಿರುವವರು ಲಿಂಗತ್ವ ಅಲ್ಪಸಂಖ್ಯಾತರು. ಇದರ ನಡುವೆಯೂ ತಮಗಾದ ಎಲ್ಲ ಅವಮಾನ, ನೋವನ್ನೂ ಮೆಟ್ಟಿ ನಿಂತು, ಘನತೆಯ ಬದುಕನ್ನು ಕಟ್ಟಿಕೊಟ್ಟಲು ಯಶಸ್ವಿಯಾಗಿರುವ ಕೆಲವೇ ಮಂದಿಯಲ್ಲಿ ಒಬ್ಬರಾಗಿರುವ ಪೂಜಾ, ತಮ್ಮ ಸಮುದಾಯದ ಇತರರಿಗೆ ಮಾದರಿಯಾಗಿದ್ದಾರೆ.

ನಾನು ಪೂಜಾ ಅಲಿಯಾಸ್ ಅಶ್ವತ್ಥಾಮ

• ನಾಗರಾಜ ಗೊರೇಬಾಳ

ಮನೆ ಬಿಟ್ಟು ಹೋಗಿದ್ದ ಮಗ ವಾಪಸ್ ಬಂದಾಗ ಮನೆಯವರು ಯಾರೂ ಸ್ವಾಗತಿಸುವ ಸ್ಥಿತಿಯಲ್ಲಿ ಇರಲಿಲ್ಲ. ಅವನು ಬಂದದ್ದಕ್ಕೆ ಖುಷಿಪಡುವ ಮನಃಸ್ಥಿತಿಯೂ ಅವರದಾಗಿರಲಿಲ್ಲ. ಏಕೆಂದರೆ ಮನೆಯಿಂದ ಹೋದಾಗ ಅಶ್ವತ್ಥಾಮ ಆಗಿದ್ದ ಮಗ, ಹಿಂದಿರುಗಿ ಬಂದಾಗ ಪೂಜಾ ಆಗಿದ್ದ, ಹೆಣ್ಣಾಗಿ ಬದಲಾಗಿದ್ದ. ಕುಟುಂಬದ ಮರ್ಯಾದೆ ಕಳೆದೆ ಎಂದು ಅಬ್ಬರಿಸಿದ ಅಣ್ಣ ಹೊರಗಟ್ಟಿದ. ಆ ನೋವಿನಲ್ಲೇ ಮತ್ತೆ ಮನೆಬಿಟ್ಟ ಪೂಜಾಗೆ ಬದುಕುಳಿಯಲು ಆಸರೆಯಾದದ್ದು ಭಿಕ್ಷಾಟನೆಯ ದಾರಿಯೊಂದೇ.

ಹಿಂದೆ ಮನೆಯಿಂದ ಹೊರಗಿದ್ದಾಗ ಭಿಕ್ಷಾಟನೆಯ ಆಗುಹೋಗು ಅರಿತಿದ್ದ ಪೂಜಾಗೆ ಮತ್ತೆ ಅದೇ ಕಾಯಕ ಮುಂದುವರಿಸುವುದು ನುಂಗಲಾರದ ತುತ್ತಾಯಿತು. 'ದುಡಿಯಲು ಆಗಲ್ವಾ, ಭಿಕ್ಷೆ ಬೇಡ್ತೀಯ ನಾಚಿಕೆಯಾಗಲ್ವಾ' ಎಂದು ಜನರಾಡಿದ ಚುಚ್ಚುಮಾತುಗಳಿಂದ ನೊಂದು, ಗೌರವಯುತವಾಗಿ ಬದುಕಿ ತೋರಿಸಬೇಕೆಂಬ ಛಲ ಮೂಡಿತು.

ಅಶ್ವತ್ಥಾಮ ಆಗಿದ್ದಾಗಲೇ ಪದವಿ ಪೂರೈಸಿದ್ದ ಪೂಜಾಗೆ, ಲಿಂಗತ್ವ ಅಲ್ಪಸಂಖ್ಯಾತರ ಪರವಾದ ಕೋರ್ಟ್ ತೀರ್ಪು ವರದಾನವಾಯಿತು. ಕಲ್ಯಾಣ ಕರ್ನಾಟಕದವರಿಗೆ ಸಂವಿಧಾನದ 371ಜೆ ಕಲಂನಡಿ ನೀಡುವ ಉದ್ಯೋಗ ಮೀಸಲಾತಿಯನ್ನು ಬಳಸಿಕೊಂಡು 2022ರಲ್ಲಿ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದರು. ನೇಮಕಾತಿ ಪರೀಕ್ಷೆಯಲ್ಲಿ ಪಾಸಾಗಿದ್ದರಿಂದ ಶಿಕ್ಷಕ ಹುದ್ದೆ ಒಲಿದುಬಂತು. ಇದೀಗ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ತೊಂಡಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮಾಜವಿಜ್ಞಾನ ಶಿಕ್ಷಕಿಯಾಗಿ ಪೂಜಾ ಸೇವೆ ಸಲ್ಲಿಸುತ್ತಿದ್ದಾರೆ.

ತಿರಸ್ಕರಿಸಿದವರೇ ಪುರಸ್ಕರಿಸಿದರು

ಭಿಕ್ಷೆ ನೀಡುವಾಗ ಜನ ಆಡುತ್ತಿದ್ದ ಚುಚ್ಚುಮಾತುಗಳಿಂದ ನೊಂದು, ಏನಾದರೂ ಸಾಧನೆ ಮಾಡಲೇಬೇಕೆಂಬ ಛಲ ಮೂಡಿಸಿಕೊಂಡೆ.
ಲಿಂಗತ್ವ ಅಲ್ಪಸಂಖ್ಯಾತರು ಸಾಮಾನ್ಯವಾಗಿ ತಮ್ಮವರಿಂದ ದೂರ ಇರಲು ಬಯಸುತ್ತಾರೆ. ಅವಮಾನ ಮಾಡಿದ ಜನರೆದುರು ಕಾಣಿಸಿಕೊಳ್ಳಬಾರದು ಎಂದುಕೊಳ್ಳುತ್ತಾರೆ. ಆದರೆ, ನಾನು ಚಿಗುರೊಡೆದ ಸ್ಥಳದಲ್ಲೇ ಬೇರುಬಿಟ್ಟು ಹೆಮ್ಮರವಾಗಿ ಬೆಳೆಯಬೇಕು ಅಂದುಕೊಂಡೆ.
ತಿರಸ್ಕರಿಸಿದವರೇ ಪುರಸ್ಕರಿಸುವಂತೆ ಆಗಬೇಕು ಎಂದು ಹಟ ತೊಟ್ಟು ಶಿಕ್ಷಕಿಯಾಗುವಲ್ಲಿ ಯಶಸ್ವಿಯಾದೆ.
ಈಗ ನನ್ನ ಊರಿನವರು, ಕುಟಂಬದವರು, ಸ್ನೇಹಿತರು ನನ್ನ ಸಾಧನೆಯನ್ನು ಮೆಚ್ಚಿ ಗೌರವದಿಂದ ಕಾಣುತ್ತಿದ್ದಾರೆ.

ಕೈಬಿಡದ ವಿದ್ಯೆ

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ದಲಿತ ಕುಟುಂಬದಲ್ಲಿ ಜನಿಸಿದ ಅಶ್ವತ್ಥಾಮ, ಬಾಲ್ಯದಿಂದಲೂ ಅತ್ಯಂತ ಚುರುಕುಮತಿಯಾಗಿದ್ದರೂ ಸೌಮ್ಯಸ್ವಭಾವದವನಾಗಿದ್ದ. ತನ್ನೊಳಗಿನ ಹೆಣ್ತನದ ಸುಡುಕೆಂಡದ ವಿಷಯವನ್ನು ತಂದೆ–ತಾಯಿ ಬಳಿ ಹೇಳಿಕೊಳ್ಳಲು ಧೈರ್ಯ ಸಾಲದೆ, ನೋವನ್ನು ಒಡಲಲ್ಲಿಟ್ಟುಕೊಂಡೇ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ತನ್ನೂರಿನಲ್ಲಿ ಮುಗಿಸಿದ್ದ. ಮುಂದೆ ಮಾನ್ವಿ ಪಟ್ಟಣದಲ್ಲಿ ಪಿಯುಸಿ, ಬಿ.ಎ. ಮುಗಿಸಿ, ರಾಯಚೂರಿನಲ್ಲಿ ಬಿ.ಇಡಿ ಹಾಗೂ ಸಿಂಧನೂರಿನಲ್ಲಿ ಎಂ.ಎ. ಶಿಕ್ಷಣ ಪೂರೈಸಿದ್ದ. ಎಸ್ಎಸ್ಎಲ್‌ಸಿಯಿಂದ ಎಂ.ಎ.ವರೆಗೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದ ಅಶ್ವತ್ಥಾಮ, ಶಿಕ್ಷಕನಾಗುವ ಕನಸು ಹೊತ್ತು ಟಿಇಟಿ ಪರೀಕ್ಷೆ ಬರೆದು, ಒಂದು ವರ್ಷ ಮನೆಯಲ್ಲಿ ಖಾಲಿ ಕುಳಿತಿದ್ದ.

'ನೀನು ಹೆಣ್ಣಿನಂತೆ ಆಡ್ತೀಯ', 'ನೀನು ಚಕ್ಕಾ' ಎಂದೆಲ್ಲಾ ಚಪ್ಪಾಳೆ ತಟ್ಟಿ ಛೇಡಿಸುವುದು, ನಿರಂತರವಾಗಿ ಆಗುತ್ತಿದ್ದ ಅವಮಾನ, ಕಿರುಕುಳ ಮಿತಿಮೀರಿದಾಗ ಮನೆಬಿಟ್ಟು ಬೆಂಗಳೂರಿಗೆ ಬಂದು ಲಿಂಗತ್ವ ಅಲ್ಪಸಂಖ್ಯಾತರ ಪರಿವಾರವನ್ನು ಸೇರಿಕೊಂಡ. ಪರಿವಾರದ ಹಿರಿಯರ ಸಲಹೆ ಮೇರೆಗೆ ಟ್ರಾಫಿಕ್ ಸಿಗ್ನಲ್, ಮಾರುಕಟ್ಟೆ ಬಳಿ ಭಿಕ್ಷಾಟನೆ ಮಾಡಿ ಹಣ ಸಂಪಾದಿಸತೊಡಗಿದ. ಈ ನಡುವೆ, ಹುಡುಗನೊಳಗಿದ್ದ 'ಹೆಣ್ತನ' ಬಲಗೊಳ್ಳುತ್ತಲೇ ಇತ್ತು. 'ಈ ನೋವನ್ನು 30 ವರ್ಷ ಅನುಭವಿಸಿದ್ದು ಸಾಕು, ಇನ್ನಾದರೂ ನನ್ನ ಭಾವನೆಗೆ ತಕ್ಕಂತೆ ಬದುಕಬೇಕು' ಎಂಬ ದೃಢ ನಿರ್ಧಾರದಿಂದ 2018ರಲ್ಲಿ ₹ 6 ಲಕ್ಷ ಖರ್ಚು ಮಾಡಿ ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆಗೆ ಒಳಗಾಗಿ 'ಪೂಜಾ' ಹೆಸರಿನ ಹೆಣ್ಣಾದ.

ಎದೆಯೆತ್ತರ ಬೆಳೆದು ನಿಂತ ಮಗ ವಂಶ ಬೆಳೆಸುತ್ತಾನೆ ಎಂದುಕೊಂಡರೆ, ಲಿಂಗ ಪರಿವರ್ತಿಸಿಕೊಂಡು ಬೀದಿಯಲ್ಲಿ ಭಿಕ್ಷಾಟನೆಗೆ ನಿಂತಾಗ ಯಾವ ತಾಯಿ ಮತ್ತು ಅಣ್ಣ ತಾನೇ ಸಹಿಸುತ್ತಾರೆ? ಆದರೆ ವಿದ್ಯಾಧಿದೇವತೆಯ ಪ್ರಭಾವಕ್ಕೆ ಅವರೆಲ್ಲ ತಲೆಬಾಗಲೇಬೇಕಾಯಿತು. ಶಿಕ್ಷಕಿಯಾಗಿ ಆಯ್ಕೆಯಾದಾಗ, 'ಆಗ ಮಗ ಆಗಿದ್ದೆ, ಈಗ ಮಗಳಾಗಿ ಸಾಧನೆ ಮಾಡಿದ್ದೀಯ' ಎಂದು ಪೂಜಾ ಅವರನ್ನು ತಾಯಿ ಅಪ್ಪಿಕೊಂಡು ಸಂತಸಪಟ್ಟರು. ಅಣ್ಣ ಕೂಡಾ ತಂಗಿಯ ಸಾಧನೆಗೆ ಬೆರಗಾಗಿ, ಖುದ್ದು ಬಂದು ಮನೆಗೆ ಕರೆದೊಯ್ದರು.

ಇದೀಗ, ರಾಯಚೂರು ಜಿಲ್ಲೆಯಲ್ಲಿ ಶಿಕ್ಷಕಿ ಹುದ್ದೆಗೇರಿದ ಪ್ರಥಮ ಲಿಂಗತ್ವ ಅಲ್ಪಸಂಖ್ಯಾತೆ ಎಂಬ ಹಿರಿಮೆಗೆ ಪೂಜಾ ಪಾತ್ರರಾಗಿದ್ದಾರೆ. ಮಕ್ಕಳ ನೆಚ್ಚಿನ ಶಿಕ್ಷಕಿಯೂ ಆಗಿದ್ದಾರೆ. ಗ್ರಾಮದಲ್ಲಿನ ಮನೆ ಮನೆಗೆ ತೆರಳಿ, ಶಾಲೆ ಬಿಡಿಸದಂತೆ ಪಾಲಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ, ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರುತ್ತಿದ್ದಾರೆ.

ಪೂಜಾ ಅವರ ಶಾಲಾ–ಕಾಲೇಜು ದಾಖಲಾತಿಗಳಲ್ಲಿ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿಯಲ್ಲಿ ಈಗಲೂ ಅಶ್ವತ್ಥಾಮ ಎಂಬ ಹೆಸರೇ ಇದೆ. ಹೆಸರು ಬದಲಾಯಿಸಲು ವಕೀಲರ ಮೂಲಕ ನಡೆಸಿದ ಕಾನೂನು ಹೋರಾಟಕ್ಕೆ ಜಯ ಸಿಕ್ಕಿಲ್ಲ. ವೈದ್ಯಕೀಯ ಪ್ರಮಾಣಪತ್ರದ ಆಧಾರದಲ್ಲಿ ಜಿಲ್ಲಾಧಿಕಾರಿ ನೀಡಿದ 'ಲಿಂಗತ್ವ ಅಲ್ಪಸಂಖ್ಯಾತ' ಪ್ರಮಾಣಪತ್ರವೇ ಅವರಿಗೆ ಆಧಾರವಾಗಿದೆ. ಎಲ್ಲಾ ದಾಖಲಾತಿಗಳನ್ನು ಬದಲಾದ ಲಿಂಗತ್ವಕ್ಕೆ ಅನುಗುಣವಾದ ಹೆಸರಿನಲ್ಲಿಯೇ ಕಾನೂನುಬದ್ಧಗೊಳಿಸಲು ಸರ್ಕಾರ ಮುಂದಾದರೆ ಲಿಂಗತ್ವ ಅಲ್ಪಸಂಖ್ಯಾತರಿಗೆ ಅನುಕೂಲವಾಗುತ್ತದೆ ಎನ್ನುತ್ತಾರೆ ಪೂಜಾ.

'ಶಾಲೆಗೆ ಸೇರಿದ ದಿನದಿಂದ ಇಲ್ಲಿಯವರೆಗೂ ತೊಂಡಿಹಾಳ ಶಾಲೆಯ ಸಹೋದ್ಯೋಗಿಗಳು, ಮಕ್ಕಳು ನನ್ನನ್ನು ಭೇದಭಾವ ಇಲ್ಲದೆ ಸಮನಾಗಿ ಕಾಣುತ್ತಿದ್ದಾರೆ. ಇಲ್ಲಿಯೇ ಮನೆ ಮಾಡಿದ್ದೇನೆ. ಗ್ರಾಮಸ್ಥರು ಕೂಡ ಮನೆ ಮಗಳಂತೆ ಪ್ರೀತಿಯಿಂದ ಕಾಣುತ್ತಿದ್ದಾರೆ. ಪಿಯು ಕಾಲೇಜಿನ ಉಪನ್ಯಾಸಕಿಯಾಗುವ ಗುರಿ ಇದೆ. ಅದಕ್ಕಾಗಿ ತಯಾರಿ ನಡೆಸಿದ್ದೇನೆ' ಎಂದ ಪೂಜಾ, ಆತ್ಮವಿಶ್ವಾಸದ ನಗೆ ಬೀರಿದರು.

ಮುಖ್ಯವಾಹಿನಿಗೆ ಬನ್ನಿ

ಲಿಂಗತ್ವ ಅಲ್ಪಸಂಖ್ಯಾತರು ಅಂದರೆ ಸೆಕ್ಸ್ ವರ್ಕರ್ಸ್, ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುವವರು, ಸಮಾಜದಲ್ಲಿ ಇರುವುದಕ್ಕೆ ಅವರು ನಾಲಾಯಕ್ಕು ಎಂದು ಭಾವಿಸಿ, ಅವರನ್ನು ಹೀಯಾಳಿಸುವವರೇ ಹೆಚ್ಚು. ಪುರುಷರು ಹಾಗೂ ಮಹಿಳೆಯರಂತೆ ಲಿಂಗತ್ವ ಅಲ್ಪಸಂಖ್ಯಾತರಿಗೂ ಸಮಾಜದಲ್ಲಿ ಸೂಕ್ತ ಸ್ಥಾನಮಾನ ಸಿಗಬೇಕು. ನಮಗೆ ಸರ್ಕಾರ ಉದ್ಯೋಗ ಮೀಸಲಾತಿಯ ಜತೆಗೆ ಇತರ ಸೌಲಭ್ಯಗಳನ್ನೂ ಒದಗಿಸಬೇಕು. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಈಗಲೂ ನನ್ನ ಸಂಪರ್ಕದಲ್ಲಿದ್ದಾರೆ. ಭಿಕ್ಷಾಟನೆ ಬಿಟ್ಟು ಸಮಾಜದಲ್ಲಿ ಗೌರವದಿಂದ ಬದುಕೋಣ. ಶಿಕ್ಷಣ ಪಡೆದುಕೊಂಡು ಸಮಾಜದ ಮುಖ್ಯವಾಹಿನಿಗೆ ಬನ್ನಿ, ಉತ್ತಮ ಬದುಕು ಕಟ್ಟಿಕೊಳ್ಳಿ.

ಫ್ಯಾಷನ್‌ಪ್ರಿಯರಿಗೆ ಕ್ರಾಪ್‌ಟಾಪ್ ಅಚ್ಚುಮೆಚ್ಚು. ಆದರೆ, ಎಚ್ಚರ ವಹಿಸದಿದ್ದರೆ ಈ ದಿರಿಸು ಆರೋಗ್ಯ ಸಮಸ್ಯೆ ತಂದೊಡ್ಡಬಹುದು!

ನಿಲ್ಲಿ ಕ್ರಾಪ್‌ಟಾಪ್ ಧರಿಸುತ್ತಿದ್ದೀರಾ?

• ಸುಶೀಲಾ ಡೋಣೂರ

ಟ್ರೆಂಡಿ, ಫ್ಯಾಷನಬಲ್ ಕ್ರಾಪ್‌ಟಾಪ್ ಈಗ ಹದಿಹರೆಯದ ಹುಡುಗಿಯರ ಅತ್ಯಾಪ್ತ ದಿರಿಸು. ಸುಮ್ಮನೇ ಸ್ಟ್ರೀಟ್‌ನಲ್ಲಿ ಒಂದು ಸುತ್ತು ಹಾಕಿ ಬರುವುದೇ ಇರಲಿ, ಸಣ್ಣದೊಂದು ಶಾಪಿಂಗ್ ರೌಂಡ್ ಆದರೂ ಸರಿ, ಸ್ನೇಹಿತರೊಂದಿಗೆ ಸಿನಿಮಾ-ಸುತ್ತಾಟವೂ ಆಗಿರಬಹುದು... ಎಲ್ಲೆಡೆ, ಹುಡುಗಿಯರ ಮೊದಲ ಆಯ್ಕೆ ಆಕರ್ಷಕವಾದ ಕ್ರಾಪ್‌ಟಾಪ್.

'ಯಾಕಿಷ್ಟ?' ಎಂದು ಅವರನ್ನು ಕೇಳಿ ನೋಡಿ. 'ಆರಾಮದಾಯಕ', 'ಆಧುನಿಕ ಲುಕ್' ಎಂದೆಲ್ಲ ಸಿದ್ಧ ಉತ್ತರಗಳು ನಿಮಗೆ ಸಿಗುತ್ತವೆ. ಆದರೆ, ಈ ದಿರಿಸಿಗೆ ಕೆಲವು ಪೋಷಕರ ವಿರೋಧವೂ ಇದೆ. ಏಕೆಂದರೆ, ಅದೀಗ ದಿರಿಸು ಮಾತ್ರವೇ ಆಗಿ ಉಳಿದಿಲ್ಲ. ಮಾನಸಿಕ, ದೈಹಿಕ ಸ್ವಾಸ್ಥ್ಯವನ್ನು ಪ್ರಭಾವಿಸುತ್ತಿರುವ ಆತಂಕಕಾರಿ ಬೆಳವಣಿಗೆಯಾಗಿದೆ. ಮೈಕಾಣಿಸುವ ಬಟ್ಟೆ ಧರಿಸುವುದರಿಂದ ಸೋಂಕು, ಶೀತದಂತಹ ವ್ಯತಿರಿಕ್ತ ಪರಿಣಾಮಗಳಿಗೆ ಒಡ್ಡಿಕೊಳ್ಳಬಹುದಾದ ಅಪಾಯ ಹೆಚ್ಚು ಎನ್ನುವುದು ತಜ್ಞರ ಎಚ್ಚರಿಕೆ.

ದೇಹದ ಉಷ್ಣತೆಯಲ್ಲಿ ಇದ್ದಕ್ಕಿದ್ದಂತೆ ವ್ಯತ್ಯಾಸ ಆಗುವುದರಿಂದ ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಪಬ್, ಬಾರ್‌ನಂತಹ ಒಳಾಂಗಣ ವಾತಾವರಣ ಹಾಗೂ ಅಲ್ಲಿ ಸೇವಿಸುವ ಆಹಾರ, ಪಾನೀಯವು ದೇಹದ ಉಷ್ಣತೆಯನ್ನು ಹೆಚ್ಚಿಸುತ್ತವೆ. ಅಲ್ಲಿಂದ ಇದ್ದಕ್ಕಿದ್ದಂತೆ ಹೊರಗಿನ ವಾತಾವರಣಕ್ಕೆ ಒಡ್ಡಿಕೊಂಡಾಗ, ಹೈಪೋಥರ್ಮಿಯಾದಂತಹ ಅಪಾಯಕ್ಕೆ ಗುರಿಯಾಗಬಹುದು. ಅಂದರೆ,



ದೇಹದ ತಾಪಮಾನವು ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾದಾಗ ಸಂಭವಿಸುವ ಅಪಾಯಕಾರಿ ಸ್ಥಿತಿ ಎನ್ನುವುದು ವೈದ್ಯರ ಎಚ್ಚರಿಕೆ.

ಆದರೆ, ಇದು ಇಲ್ಲಿಗೇ ನಿಲ್ಲುವುದಿಲ್ಲ. ಕ್ರಾಪ್‌ಟಾಪ್ ತೊಡಲು ನಡೆಸುವ ಪಡಿಪಾಟಲು ಇದೆಯಲ್ಲ, ಅದು ಮಕ್ಕಳಲ್ಲಿ ಆರೋಗ್ಯ ಹಾಗೂ ವರ್ತನೆಯ ಸಮಸ್ಯೆಗಳನ್ನು ಸಹ ಹುಟ್ಟುಹಾಕುತ್ತಿದೆ. ಅದರಲ್ಲಿ ಹೊಕ್ಕಳಿನ ಅಂದ ಹೆಚ್ಚಿಸುವ ಕ್ರಮಗಳದ್ದೇ ಮೇಲುಗೈ. ಇಂತಹ ಟಾಪ್‌ಗಳನ್ನು ಧರಿಸಲು 12-13ರ ವಯೋಮಾನದಲ್ಲಿಯೇ ಮಕ್ಕಳು ಹೊಕ್ಕಳಿನ ಸುತ್ತ ವ್ಯಾಕ್ಸಿಂಗ್ ಮಾಡಲು ಆರಂಭಿಸುತ್ತಾರೆ. ಹೊಟ್ಟೆಗೆ ಟ್ಯಾಟೂ ಹಾಕಿಸುವ ಪ್ರವೃತ್ತಿಯೂ ಹೆಚ್ಚುತ್ತಿದೆ. ಜೊತೆಗೆ ಬೆಲ್ಲಿ ಬಟನ್ ಅಂದ ಹೆಚ್ಚಿಸುವ ಆಭರಣಗಳನ್ನು ಧರಿಸುವ ಹುಕಿ ಬೇರೆ.

ಮಕ್ಕಳು ಟ್ಯಾಟೂ ಹಾಕಿಸುವ ಮುನ್ನ ಅಗತ್ಯ ಮುನ್ನೆಚ್ಚರಿಕೆ ವಹಿಸುತ್ತಾರೆ ಎನ್ನುವ ಖಾತರಿ ಇಲ್ಲ. ಟ್ಯಾಟೂ ಹಾಕುವ ಮಷೀನು, ಸೂಜಿ, ಇಂಕ್ ಹಾಗೂ ಡಿಸೈನ್ ಸ್ಟಿಕರ್‌ಗಳನ್ನು ಹೊಸವೇ ಬಳಸುತ್ತಿದ್ದಾರೆಯೇ ಎನ್ನುವುದನ್ನೂ ಅವರು ಗಮನಿಸದೇ ಹೋಗಬಹುದು. ವಿಧವಿಧದ ರಿಂಗ್, ಪಿನ್, ಬಟನ್‌ಗಳು (ಚಿನ್ನ, ಬೆಳ್ಳಿ, ಪ್ಲಾಟಿನಂ ಹಾಗೂ ಇಮಿಟೇಶನ್ ಆಭರಣ) ಹೊಕ್ಕಳನ್ನು ಅಲಂಕರಿಸುವುದಿದೆ. ಇವುಗಳಲ್ಲೂ ಸುರಕ್ಷಾ ಮಾನದಂಡಗಳನ್ನು ಯಾರೂ ನೋಡುವುದಿಲ್ಲವಾದ್ದರಿಂದ ಸೋಂಕುಗಳಿಗೆ ಒಡ್ಡಿಕೊಳ್ಳಬಹುದಾದ ಅಪಾಯಗಳನ್ನು ಕಡೆಗಣಿಸುವ ಹಾಗಿಲ್ಲ. ಈ ಬಟ್ಟೆ ತೊಡಲು ದೇಹ ಸಣ್ಣಗಿದ್ದರೆ ಚಂದ ಎನ್ನುವ ಒತ್ತಡವು ಅವರ ಊಟ-ತಿಂಡಿಯನ್ನು ನಿಯಂತ್ರಿಸುತ್ತದೆ. ಇದರಿಂದ, ಬೆಳೆಯುವ ಹಂತದಲ್ಲಿ ಮಕ್ಕಳು ಪೋಷಕಾಂಶಗಳ ಕೊರತೆ ಎದುರಿಸುವಂತೆ ಆಗಬಹುದು. ತಾವು ಹೇಗೆ ಕಾಣಿಸಿಕೊಳ್ಳುತ್ತೇವೆ ಎನ್ನುವುದನ್ನು ಪದೇ ಪದೇ ಗಮನಿಸುವುದು, ಫೋಟೊ ತೆಗೆದುಕೊಳ್ಳುವುದು, ತಮ್ಮ ನೋಟ-ನಿಲುವನ್ನು ತಾವೇ ಒಪ್ಪದೇ ಇರುವಂತಹ ವರ್ತನೆಯ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತಿವೆ.

ಡ್ರೆಸ್‌ಕೋಡ್ ಬಗ್ಗೆ ಮಾತನಾಡುವುದು ಮಾತ್ರವಲ್ಲ, ದಿರಿಸನ್ನು ಜವಾಬ್ದಾರಿಯಿಂದ ನೋಡುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಲು ಶಾಲಾ ಕಾಲೇಜುಗಳೂ ಪ್ರಯತ್ನಿಸಬೇಕು. ಶೈಕ್ಷಣಿಕ ಚಟುವಟಿಕೆಗಳ ಭಾಗವಾಗಿ ಈ ಬಗ್ಗೆ ಅರಿವು ಮೂಡಿಸಬೇಕು. ಬೆಳವಣಿಗೆಯ ಹಂತದಲ್ಲಿ ಅತಿ ಬಿಗಿಯಾದ, ಮೈ ಕಾಣುವಂತಹ ಬಟ್ಟೆಗಳನ್ನು ಏಕೆ ತೊಡಬಾರದು ಎನ್ನುವುದನ್ನು ವೈಜ್ಞಾನಿಕ ಕಾರಣಗಳ ಸಮೇತ ಮನವರಿಕೆ ಮಾಡಬೇಕು. ಮಾಧ್ಯಮ ಸಾಕ್ಷರತೆ, ಸೌಂದರ್ಯದ ಸಾಮಾಜಿಕ ಚಿತ್ರಣ, ಆರೋಗ್ಯಕರ ತೂಕ ನಿರ್ವಹಣೆ, ನಿಯಂತ್ರಣದಂತಹ ವಿಷಯಗಳ ಬಗ್ಗೆ ಇಂತಹ ವೇದಿಕೆಗಳಲ್ಲಿ ಚರ್ಚಿಸಬೇಕು.
ಇದರಲ್ಲಿ ಪೋಷಕರ ಪಾತ್ರ ಪ್ರಧಾನವಾಗಿರುತ್ತದೆ.

- ಫ್ಯಾಶನ್, ಟ್ರೆಂಡ್, ಎಲ್ಲರೂ ಹಾಕುತ್ತಾರೆ ಎನ್ನುವ ಕಾರಣಗಳಿಗೆ ಯಾವುದೋ ಒಂದು ಶೈಲಿಯನ್ನು ಅನುಸರಿಸದೆ, ತಮ್ಮ ದೇಹ, ನೋಟ-ನಿಲುವಿಗೆ ತಕ್ಕಂತೆ ಡ್ರೆಸ್ ಮಾಡಿಕೊಳ್ಳಲು ಮಕ್ಕಳಿಗೆ ಕಲಿಸಿ.
- 18 ವರ್ಷದ ಒಳಗಿನವರು ಆಭರಣ ಧರಿಸುವ ಸಲುವಾಗಿ ಹೊಕ್ಕಳಿಗೆ ಚುಚ್ಚಿಸಿಕೊಳ್ಳುವುದನ್ನು, ಟ್ಯಾಟೂ ಹಾಕಿಸಿಕೊಳ್ಳುವುದನ್ನು ತಡೆಯಿರಿ. ಇಲ್ಲವೇ ನೀವೇ ಜೊತೆಗೆ ನಿಂತು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ.
- ಕ್ರಾಪ್‌ಟಾಪ್ ತೊಟ್ಟು ಹೊರಗೆ ಹೋಗುವಾಗ ಹೊರಗಿನ ವಾತಾವರಣವನ್ನು ಗಮನಿಸಿ. ಸಂಜೆಯ ಸುಳಿಗಾಳಿಗೆ, ರಾತ್ರಿಯ ಚಳಿಗೆ ಧರಿಸಲು ಓವರ್‌ಕೋಟ್, ಜಾಕೆಟ್ ಜೊತೆಗಿರಲಿ.
- ಕ್ರಾಪ್‌ಟಾಪ್ ಲುಕ್‌ಗೆ ಪೂರಕವಾಗಿ ಹೈವೇಸ್ಟ್ ಪ್ಯಾಂಟ್-ಸ್ಕರ್ಟ್ ಹೊಂದಿಸಿಕೊಳ್ಳಿ.
- ಕ್ರಾಪ್‌ಟಾಪ್‌ನಲ್ಲಿ ಸ್ಪೋರ್ಟ್ಸ್ ಬ್ರಾ ಧರಿಸಲು ಸೂಚಿಸಿ.
- ಕ್ರಾಪ್‌ಟಾಪ್‌ಗಳು ಸಾಧ್ಯವಾದಷ್ಟೂ ದಪ್ಪ ಫ್ಯಾಬ್ರಿಕ್‌ನಿಂದ ಕೂಡಿರಲಿ.

ದಾಸವಾಳ ದೋಸೆ ಕಿತ್ತಲೆಹಣ್ಣಿನ ಪುಲಾವ್!

'ಕರುನಾಡ ಸವಿಯೂಟ'ದಲ್ಲಿ ತಾವು ತಯಾರಿಸಿದ ಖಾದ್ಯಗಳೊಂದಿಗೆ ಕಾವ್ಯಾ ಎಸ್. ಬೆಲ್ಲದ್

ರಸಾಸ್ವಾದ

'ಅಡುಗೆ ಮನೆ' ಒಂದು ಪ್ರಯೋಗಶಾಲೆ. ಬಹುಶಃ ಸೈನ್ಸ್ ಲ್ಯಾಬ್‌ಗಿಂತಲೂ ಹೆಚ್ಚು ಪ್ರಯೋಗಗಳು ಇಲ್ಲಿ ನಡೆಯುತ್ತವೆ. ಆರೋಗ್ಯ ಪ್ರಜ್ಞೆ ಹೆಚ್ಚಾದ ಮೇಲಂತೂ ಆ ಪ್ರಯೋಗಗಳು ನೂರ್ಮಡಿಗೊಂಡಿವೆ. ಪ್ರತಿ ಪಾಕದಲ್ಲೂ ಆರೋಗ್ಯ ಅರಸುವವರೇ ಹೆಚ್ಚು. ಕೋವಿಡ್ ಸಮಯದಲ್ಲಿ ಶುರುವಾದ ಈ ಖಯಾಲಿ ಹಾಗೇ ಮುಂದುವರಿದಿದೆ. ಪ್ರಯೋಗಶೀಲತೆಗೆ ಪುಷ್ಟಿ ನೀಡಿದೆ.

ಒಂದಿಲ್ಲೊಂದು ಆರೋಗ್ಯದ ಗುಟ್ಟನ್ನು ತಮ್ಮಲ್ಲೇ ಅಡಗಿಸಿಕೊಂಡು ಸೌಂದರ್ಯ, ಸುವಾಸನೆ ಹೊರಸೂಸುವ ಹೂವು, ಎಲೆ, ಹಣ್ಣು, ಸಿಪ್ಪೆ, ಕಾಯಿ ಎಲ್ಲವೂ ಈಗ ಅಡುಗೆಯ ಪ್ರಯೋಗಗಳಿಗೆ ತೆರೆದುಕೊಂಡಿವೆ. ದೇವರ ಫೋಟೊ ಫ್ರೇಮಿಗೋ ಹೊಸಿಲಿನ ಅಂದಕ್ಕೋ ಸೀಮಿತವಾಗಿದ್ದ, ಭಕ್ತಿಭಾವ ಸ್ಫುರಿಸುತ್ತಿದ್ದ ಅವು ಈಗ ಬಾಣಲೆಯಲ್ಲಿ ಬೆಂದು ಆರೋಗ್ಯ ಭಾಗ್ಯವನ್ನೂ ಕರುಣಿಸುತ್ತಿವೆ.

ಇಂತಹ ಪ್ರಯೋಗಗಳ ಮೂಲಕ ಕಾವ್ಯಾ ಎಸ್. ಬೆಲ್ಲದ್ , 'ಪ್ರಜಾವಾಣಿ'ಯಿಂದ ದಾವಣಗೆರೆಯಲ್ಲಿ ಆಯೋಜಿಸಿದ್ದ ಕರುನಾಡ ಸವಿಯೂಟ 4ನೇ ಆವೃತ್ತಿಯ ಅಡುಗೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಮುಡಿಗೇರಿಸಿಕೊಂಡಿದ್ದಾರೆ. ಅವರು ತಯಾರಿಸಿದ್ದ ಪಾರಿಜಾತ ಹೂವಿನ ಖೀರು, ಶಂಖಪುಷ್ಪದ ಫೀರ್ನಿ, ನುಗ್ಗೆಸೊಪ್ಪಿನ ಉಂಡೆ, ಕಿತ್ತಲೆಹಣ್ಣಿನ ಪುಲಾವ್, ಹಸಿಮೆಣಸಿನಕಾಯಿಯಿಂದ ತಯಾರಿಸಿದ ಬರ್ಫಿ ಸೇರಿದಂತೆ 29 ಖಾದ್ಯಗಳು ಗಮನಸೆಳೆದವು, ಆರೋಗ್ಯ ವರ್ಧನೆಯ ಪಾಠ ಹೇಳಿದವು. ಖಾರದಲ್ಲೂ ಸಿಹಿ ಅರಸುವ, ಕಹಿಯಲ್ಲೂ ರುಚಿ ಹುಡುಕುವ ಕಾವ್ಯಾ ಅವರ ಪ್ರಯೋಗಶೀಲತೆಗೆ ಪಾಕಪ್ರಿಯರು, ತೀರ್ಪುಗಾರರು ಹುಬ್ಬೇರಿಸಿದರು.

ಫೇಸ್‌ಬುಕ್‌ನ ವಿವಿಧ ಗುಂಪುಗಳಲ್ಲಿ ಕಾವ್ಯಾ ಈವರೆಗೆ 2,100 ಬಗೆಯ ಖಾದ್ಯಗಳನ್ನು ಉಣಬಡಿಸಿದ್ದಾರೆ. ಅವರ ಪ್ರಯೋಗಶೀಲತೆಯು ಸಿಹಿಕಹಿ ಚಂದ್ರು ಅವರ 'ಬೊಂಬಾಟ್ ಭೋಜನ' ಅಡುಗೆಮನೆಗೂ ಕರೆದೊಯ್ದಿದೆ. ಫಾರ್ಮಸಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಕಾವ್ಯಾ, ಹಾವೇರಿ ಜಿಲ್ಲೆಯ ಅಕ್ಕಿಆಲೂರು ಗ್ರಾಮದವರು.

> ದಾಸವಾಳ, ಶಂಖಪುಷ್ಪ, ಪಾರಿಜಾತ ಇವೆಲ್ಲ ಔಷಧೀಯ ಗಿಡಮೂಲಿಕೆಗಳು. ಅವನ್ನು ಹಾಗೆಯೇ ಕೊಟ್ಟರೆ ಯಾರೂ ತಿನ್ನುವುದಿಲ್ಲ. ಅವನ್ನೇ ಬಳಸಿ ಖಾದ್ಯ ತಯಾರಿಸಿ ಕೊಟ್ಟರೆ ಖುಷಿಯಿಂದ ಸವಿಯುತ್ತಾರೆ. ಈ ಖಾದ್ಯಗಳು ನೋಡಲು ಸಹ ಆಕರ್ಷಕವಾಗಿರುತ್ತವೆ.

ಸುಮಾ ಬಿ.

ಕಾವ್ಯಾ ಪ್ರಯೋಗದ ಖಾದ್ಯಗಳಿವು

- ದಾಸವಾಳ ಹೂವಿನಲ್ಲಿ ಚಿತ್ರಾನ್ನ, ಚಟ್ನಿ, ದೋಸೆ, ದಾಸವಾಳ ಎಲೆಯ ಇಡ್ಲಿ
- ಅವರೆಕಾಳಿನ ಐಸ್‌ಕ್ರೀಂ, ಜಿಲೇಬಿ, ಹೋಳಿಗೆ
- ನುಗ್ಗೆಸೊಪ್ಪಿನ ಉಂಡೆ, ತಾಲಿಪಟ್ಟು, ಅಕ್ಕಿರೊಟ್ಟಿ, ನುಗ್ಗೆಕಾಯಿ ಪಕೋಡ
- ಹಸಿಮೆಣಸಿನಕಾಯಿಯ ಹಲ್ವಾ, ಬರ್ಫಿ
- ಶಂಖಪುಷ್ಪ ಹೂವಿನ ಲಸ್ಸಿ, ಫೀರ್ನಿ, ಜಿಲೇಬಿ
- ಕಿತ್ತಲೆಹಣ್ಣಿನ ಫೀರ್ನಿ, ಕಿತ್ತಲೆಸಿಪ್ಪೆಯ ಗೊಜ್ಜು
- ತೊಂಡೆಕಾಯಿ ಪಕೋಡ, ಮಾವಿನಕಾಯಿ ಪಕೋಡ
- ಕಲ್ಲಂಗಡಿ ಹಣ್ಣಿನ ರೈಸ್
- ಬಾಳೆಎಲೆಯ ಸಿರಾ
- ಗುಲಾಬಿ ಹೂವಿನ ಶ್ರೀಖಂಡ...

ಮಾಡಿನೋಡಿ ಪಾರಿಜಾತ ಖೀರು

ದೈವಿಕ ಭಾವ ಸ್ಫುರಿಸುವ ಪಾರಿಜಾತ ಹೂವು ಮಂಡಿನೋವು ಸೇರಿ ಇತರ ಕಾಯಿಲೆಗಳನ್ನು ಗುಣಪಡಿಸುತ್ತದೆ ಎನ್ನುವ ನಂಬಿಕೆ ಇದೆ. ಈ ಹೂವಿನಲ್ಲಿ ರುಚಿಯಾದ ಖೀರು ತಯಾರಿಸುವ ವಿಧಾನ ಹೇಳಿಕೊಟ್ಟಿದ್ದಾರೆ ಕಾವ್ಯಾ.

ಏನೇನು ಬೇಕು?: ಒಂದು ಲೀಟರ್ ಗಟ್ಟಿ ಹಾಲು, ಕಾಲು ಕಪ್ ಸಕ್ಕರೆ, ಕಾಲು ಕಪ್ ಒಣಹಣ್ಣುಗಳು (ಗೋಡಂಬಿ, ಬಾದಾಮಿ, ಪಿಸ್ತಾ, ದ್ರಾಕ್ಷಿ), ಕಾಲು ಕಪ್ ಪಾರಿಜಾತ ಹೂವು, ಒಂದು ಚಮಚ ತುಪ್ಪ.

ಹೀಗೆ ಮಾಡಿ: ಮೊದಲು ಅರ್ಧ ಲೀಟರ್ ಹಾಲನ್ನು ಗ್ಯಾಸ್ ಮೇಲೆ ಇಟ್ಟು ಪಾರಿಜಾತ ಹೂವನ್ನು ಹಾಕಿ ಕುದಿಸಿ. ಆಗ ಅದು ಕೇಸರಿ ಬಣ್ಣ ಬಿಟ್ಟುಕೊಳ್ಳುತ್ತದೆ. ಆಗ ಗ್ಯಾಸ್ ಆಫ್ ಮಾಡಿ, ಅದನ್ನು ಸೋಸಿ ಇಡಿ. ಇನ್ನೊಂದು ಬಾಣಲೆಗೆ ಉಳಿದ ಹಾಲು ಹಾಕಿ. ಅದು ಗಟ್ಟಿಯಾಗಿ ಅರ್ಧ ಭಾಗ ಆಗುವವರೆಗೂ ಕುದಿಸಬೇಕು. ನಂತರ ಅದಕ್ಕೆ ಸಕ್ಕರೆ ಹಾಗೂ ಪಾರಿಜಾತದ ಹಾಲು ಹಾಕಿ ಕುದಿಸಬೇಕು. ಈ ಮಿಶ್ರಣ ಗಟ್ಟಿ ಹದಕ್ಕೆ ಬಂದಾಗ ಗ್ಯಾಸ್ ಆಫ್ ಮಾಡಿ.

ಇನ್ನೊಂದು ಬಾಣಲೆಗೆ ಒಂದು ಚಮಚ ತುಪ್ಪ ಹಾಕಿ ಒಣಹಣ್ಣುಗಳನ್ನು ಕರಿದು, ಪಾರಿಜಾತದ ಹಾಲಿನ ಮಿಶ್ರಣಕ್ಕೆ ಸೇರಿಸಬೇಕು. ಈಗ ಪಾರಿಜಾತ ಹೂವಿನ ಖೀರು ಸವಿಯಲು ಸಿದ್ಧ. ಇದನ್ನು ಬಿಸಿಯಾಗಿಯೂ ಕುಡಿಯಬಹುದು ಅಥವಾ ಫ್ರಿಡ್ಜ್‌ನಲ್ಲಿಟ್ಟು ತಣ್ಣಗಾದ ಬಳಿಕವೂ ಸವಿಯಬಹುದು.

ಸಿಡಿಮಿಡಿಗೆ ಮದ್ದೇನು?

ವಿಪರೀತ ಎನ್ನುವಷ್ಟು ಕೋಪ ಬರುತ್ತದೆ. ವೈದ್ಯರು ಹಾರ್ಮೋನ್ ಏರಿಳಿತ ಎಂದರು. ಅದಕ್ಕೂ ಮದ್ದು ತೆಗೆದುಕೊಳ್ಳುತ್ತಿದ್ದೇನೆ. ಆದರೂ ಕೋಪ ಕಡಿಮೆಯಾಗಿಲ್ಲ. ಸಣ್ಣ ವಿಷಯಕ್ಕೂ ಸಿಡುಕುವಂತಾಗಿದೆ. ಹೀಗೇ ಆದರೆ ಕುಟುಂಬದವರೆಲ್ಲ ದೂರವಾಗಿಬಿಡುವ ಭಯ ಶುರುವಾಗಿದೆ. ಗೃಹಿಣಿಯಾಗಿರುವುದರಿಂದ ಎಲ್ಲದಕ್ಕೂ ಗಂಡನನ್ನು ಅವಲಂಬಿಸಬೇಕಾಗಿದೆ. ಹಾಗಾಗಿ, ಅದಕ್ಕೂ ಕೋಪ ಬರುತ್ತದೆ. ಇದನ್ನು ನಿಯಂತ್ರಿಸಲು ಸರಳ ಉಪಾಯಗಳೇನಾದರೂ ಇವೆಯೇ?

ಸಂಗೀತ, ಶಿರಹಟ್ಟಿ

ಅಂತರಂಗ

ಅಕ್ಷರ ದಾಮ್ಲೆ , ಮನಃಶಾಸ್ತ್ರಜ್ಞ

ನಿಮ್ಮ ಪ್ರಶ್ನೆಯನ್ನು ಗಮನಿಸಿದಾಗ, ಎಲ್ಲೋ ಒಂದಷ್ಟು ವರ್ಷಗಳಿಂದ ಕಟ್ಟಿಟ್ಟಿದ್ದ ಕೋಪವೆಲ್ಲ ಈಗ ಒಟ್ಟಿಗೇ ಬರುತ್ತಿದೆಯೇನೋ ಎಂಬ ಸಂಶಯ ಮೂಡುತ್ತಿದೆ. ಹಾರ್ಮೋನುಗಳ ಏರುಪೇರಿನಿಂದಾಗಿ ಮನಸ್ಸಿನ ಆರೋಗ್ಯದ ಮೇಲೆ ವಿವಿಧ ರೀತಿಯ ಪರಿಣಾಮಗಳು ಉಂಟಾಗುತ್ತವೆ. ಆದರೆ ಇದೊಂದೇ ಕಾರಣ ಆಗಬೇಕೆಂದಿಲ್ಲ. ಯಾವುದೇ ರೀತಿಯ ದೈಹಿಕ ಆರೋಗ್ಯದ ಸಮಸ್ಯೆ ಇದ್ದರೂ ಅದು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಉದಾಹರಣೆಗೆ, ತೀವ್ರ ತಲೆನೋವಿದ್ದಾಗ ಸಿಡುಕುತನ ಜಾಸ್ತಿ ಆಗಬಹುದು. ನಿದ್ರೆ ಕಡಿಮೆ ಆಗಿದ್ದಾಗ ಕಿರಿಕಿರಿ ಅನ್ನಿಸಬಹುದು. ಆದರೆ, ನಿಮ್ಮ ಸಿಟ್ಟಿನ ಹಿಂದೆ ದೈಹಿಕ ಕಾರಣಗಳ ಜೊತೆಗೆ ಮಾನಸಿಕ ಕಾರಣಗಳೂ ಇರುವಂತೆ ಕಾಣುತ್ತಿದೆ.

ಇದನ್ನು ಇನ್ನೂ ಆಳವಾಗಿ ಅವಲೋಕಿಸುವ ಮೊದಲು, ಕೆಲವೊಂದಷ್ಟು ವಿಷಯಗಳನ್ನು ವಿಮರ್ಶಿಸಬೇಕು.

1. ನಿಮಗೆ ಸರಿಯಾಗಿ ನಿದ್ದೆ ಬರುತ್ತಿದೆಯೇ? ಬರುತ್ತಿದ್ದರೆ, ಸುಮಾರು 6-8 ಗಂಟೆಗಳ ಕಾಲ ನಿದ್ದೆ ಮಾಡುತ್ತಿದ್ದೀರಾ?
2. ಸರಿಯಾದ ಸಮಯಕ್ಕೆ ಆಹಾರವನ್ನು ಸೇವಿಸುತ್ತಿದ್ದೀರಾ ಅಥವಾ ಅದರಲ್ಲೂ ಏನಾದರೂ ಏರುಪೇರು ಇದೆಯೇ?
3. ಮುಟ್ಟು ಸರಿಯಾಗಿ ಆಗುತ್ತಿದೆಯೇ?
4. ಜೀವನದಲ್ಲಿ ಏನಾದರೂ ಅಚಾನಕ್ಕಾಗಿ ಬದಲಾಗಿದೆಯೇ?
5. ನಿಮ್ಮ ಯಾವುದಾದರೂ ಅಪೇಕ್ಷೆಗಳು ಈಡೇರದೆ ಬಾಕಿ ಉಳಿದಿವೆಯೇ?

ಇವುಗಳಲ್ಲಿ ಮೊದಲ ಮೂರು ಪ್ರಶ್ನೆಗಳಿಗೆ ಉತ್ತರಗಳು ಸಕಾರಾತ್ಮಕವಾಗಿದ್ದು, ಕಡೆಯ ಎರಡು ಪ್ರಶ್ನೆಗಳಿಗೆ ನಕಾರಾತ್ಮಕವಾಗಿದ್ದಲ್ಲಿ, ಮತ್ತೆ ಹುಡುಕಬೇಕಾದುದು ನಿಮ್ಮ ಬಾಲ್ಯಕಾಲದಿಂದ ಬಂದಿರಬಹುದಾದಂತಹ ಕೋಪದ ಮೂಲಗಳನ್ನು. ಅವುಗಳನ್ನು ಹುಡುಕುವುದಕ್ಕೆ ನೀವು ಮನಃಶಾಸ್ತ್ರಜ್ಞರನ್ನು ಭೇಟಿಯಾಗಬೇಕಾದ ಅಗತ್ಯವಿದೆ. ಆದರೆ, ಸದ್ಯದ ಮಟ್ಟಿಗೆ ಕೋಪದ ಪ್ರಮಾಣವನ್ನು ಕಡಿಮೆ ಮಾಡಲು ಒಂದಷ್ಟು ಸುಲಭದ ಉಪಾಯಗಳನ್ನು ನೋಡೋಣ:

1. **ದಿನಚರಿ ಸರಿಪಡಿಸಿಕೊಳ್ಳಿ:** ಪ್ರತಿದಿನವೂ ಸಾಧ್ಯವಾದಷ್ಟು ಒಂದೇ ಸಮಯಕ್ಕೆ ಮಲಗಿ, ಒಂದೇ ಸಮಯಕ್ಕೆ ಏಳಿ. ಸರಿಯಾದ ಸಮಯಕ್ಕೆ ಆಹಾರ ತೆಗೆದುಕೊಳ್ಳಿ. ದಿನಚರಿ ಸರಿಯಾದಾಗ ನಿಮ್ಮ ದೈಹಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಮಾತ್ರವಲ್ಲ, ಹಾರ್ಮೋನುಗಳ ಏರುಪೇರನ್ನು ಸರಿಪಡಿಸಲು ಸಹಾಯವಾಗುತ್ತದೆ.
2. **ಸಾಮ್ಯತೆ ಇದೆಯೇ ಪರಿಶೀಲಿಸಿ:** ಬೇರೆ ಸಂದರ್ಭದಲ್ಲಿ ಕೋಪ ಬರುತ್ತಿದ್ದರೂ, ಅವುಗಳ ಮೂಲ ಕಾರಣಗಳ ಸ್ವರೂಪದಲ್ಲಿ ಏನಾದರೂ ಸಾಮ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಿ. ಎಷ್ಟೋ ಬಾರಿ ಪ್ರತಿ ಪ್ರಕರಣವೂ ಬೇರೆ ಬೇರೆ ಎಂದು ಅನ್ನಿಸಿದರೂ ಅವುಗಳ ಆಳಕ್ಕೆ ಇಳಿದು ನೋಡಿದಾಗ ಸಾಮ್ಯತೆ ಕಂಡುಬರುತ್ತದೆ.
3. **ತಕ್ಷಣ ಹೊರಹಾಕಬೇಡಿ:** ಕೋಪ ಬರುವಂತಹ ಯಾವುದೇ ಸಂದರ್ಭದಲ್ಲಿ, ಇತರರ ಮೇಲೆ ಏಕಾಏಕಿ ಹರಿಹಾಯುವ ಬದಲು, ನಿಮಗೆ ಬರುತ್ತಿರುವ ಸಿಟ್ಟಿನ ಕಾರಣಗಳನ್ನು ಒಂದು ಕಾಗದದಲ್ಲಿ ಬರೆಯುತ್ತಾ ಹೋಗಿ. ಆಮೇಲೆ ಅದನ್ನು ಓದಿ, ನಿಮ್ಮ ಗ್ರಹಿಕೆಯಲ್ಲಿ ಏನಾದರೂ ತಪ್ಪಾಗಿದೆಯೇ ಎಂದು ನೋಡಿ. ಮಾತ್ರವಲ್ಲ, ನಿಮ್ಮ ಕೋಪವನ್ನು ಇತರರ ಮುಂದೆ ಹೇಗೆ ಅಭಿವ್ಯಕ್ತಪಡಿಸಬಹುದು ಎಂಬ ಬಗ್ಗೆ ಮನಸ್ಸಿನಲ್ಲೇ ಚರ್ಚಿಸಿ. ಆಮೇಲೆ, ಸಂಬಂಧಪಟ್ಟವರಿಗೆ ಅರ್ಥವಾಗುವ ರೀತಿಯಲ್ಲಿ ಕೋಪವನ್ನು ವ್ಯಕ್ತಪಡಿಸಿ. ಆಗ, ಅವರಿಂದ ಏನಾದರೂ ತಪ್ಪಾಗುತ್ತಿದ್ದರೆ, ಅದನ್ನು ತಿದ್ದಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನೀವು ಸಿಡುಕಿದ ತಕ್ಷಣ ಅವರ ಪ್ರತಿಕ್ರಿಯೆ ಹೆಚ್ಚಾಗಿ ಪ್ರತಿರೋಧವೇ ಆಗಿರಬಹುದು.
4. **ಕಾರಣ ಗುರುತಿಸಿ:** ನಿಮ್ಮೊಳಗೆ ಎಲ್ಲೋ ಅಸಹಾಯಕತೆ ಕಂಡುಬರುತ್ತಿದೆ. ಅದಕ್ಕೆ ಕಾರಣವೇನೆಂದು ಗುರುತಿಸಿ. ಅದನ್ನು ಸರಿಪಡಿಸುವ ಮೂಲಕವೂ ನಿಮ್ಮ ಸಿಡುಕುತನವನ್ನು ಕಡಿಮೆ ಮಾಡಿಕೊಳ್ಳಬಹುದು. ಇವಿಷ್ಟನ್ನು ಮಾಡಿದ ಮೇಲೂ ಸಿಡುಕುತನ ಕಡಿಮೆ ಆಗದಿದ್ದರೆ, ಮಾನಸಿಕ ತಜ್ಞರನ್ನು ಭೇಟಿ ಮಾಡಿ.

ಅಮ್ಮ ಹೇಳ್ತಾಳೆ

ಜೋಳ ಹಾಳಾಗದಂತೆ ಆಯಿ (ಅಜ್ಜಿ) ಹೀಗೆ ಮಾಡುತ್ತಿದ್ದಳು: ಆಗಿನ ಕಾಲದಲ್ಲಿ ಬಹುತೇಕ ಕುಟುಂಬಗಳು ಕೃಷಿಯನ್ನು ಅವಲಂಬಿಸಿರುತ್ತಿದ್ದವು. ಹಾಗಾಗಿ, ಮನೆಯು ದವಸ, ಧಾನ್ಯಗಳಿಂದ ತುಂಬಿರುತ್ತಿತ್ತು. ಜೋಳ ಹಾಳಾಗದಂತೆ ಮಾಡಲು ಆಯಿ ಅದರಲ್ಲಿ ಬೇವಿನಎಲೆಗಳನ್ನು ಹಾಕಿ ಇಡುತ್ತಿದ್ದಳು. ಅದರಿಂದ ಹುಳ ಬರುವುದನ್ನು ತಡೆಯಬಹುದಾಗಿತ್ತು. ಜೊತೆಗೆ ಬಹಳ ದಿನಗಳವರೆಗೆ, ಅಂದರೆ ಒಂದರಿಂದ ಎರಡು ವರ್ಷಗಳ ಕಾಲ ಸಂಗ್ರಹಿಸಿ ಇಡಬಹುದಾಗಿತ್ತು. ಜೋಳ ಮಾತ್ರವಲ್ಲದೆ ಇನ್ನಿತರ ಧಾನ್ಯಗಳಲ್ಲೂ ಬೇವಿನಎಲೆಗಳನ್ನು ಬೆರೆಸಿ ಇಡಬಹುದು. ಏಕೆಂದರೆ, ಬೇವಿನಎಲೆಯು ಕೀಟನಾಶಕ ಗುಣವನ್ನು ಹೊಂದಿರುತ್ತದೆ.

ಭಾಗ್ಯ ಎಸ್. ಬುಳ್ಳಾ
ಕಲಬುರಗಿ

ಭೂಮಿಕಾಗೆ ಬರಹಗಳನ್ನು ಕಳುಹಿಸಬೇಕಾದ ವಿಳಾಸ
ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು.
ನಮ್ಮ ಇ-ಮೇಲ್ ಐ.ಡಿ
bhoomika@prajavani.co.in

‘ಬಿಡದಿ ಬಳಿ ಎ.ಐ ಸಿಟಿ ನಿರ್ಮಾಣ’

2 ಸಾವಿರ ಎಕರೆಯಲ್ಲಿ ಕನಸಿನ ಉಪನಗರ • ಡಿಸಿಎಂ ಅವರಿಂದ ಲೋಗೊ ಅನಾವರಣ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆ ಬಿಡದಿ ಹೋಬಳಿಯ 2000 ಎಕರೆಗೂ ಹೆಚ್ಚು ಜಾಗದಲ್ಲಿ ದೇಶದ ಮೊದಲ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ ವಿಶ್ವದರ್ಜೆಯ ಎ.ಐ ನಗರ (ಎ.ಐ ಸಿಟಿ) ತಲೆ ಎತ್ತಲಿದೆ.

ಜಿ.ಎಸ್. ನಟರಾಜ್

‘ಕೆಲಸ–ವಾಸ–ಉಲ್ಲಾಸ’ ಪರಿಕಲ್ಪನೆ ಅಡಿ ಉಪನಗರ ಯೋಜನಾ ಪ್ರದೇಶದ ನಿರ್ಮಾಣಕ್ಕೆ ಒಟ್ಟು 9 ಗ್ರಾಮಗಳ ವ್ಯಾಪ್ತಿಯ 8,493 ಎಕರೆ ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಅದೀಗ ಎರಡು ಸಾವಿರ ಎಕರೆಯಲ್ಲಿ ಎ.ಐ ಸಿಟಿ ನಿರ್ಮಾಣವಾಗಲಿದೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ಅಡಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ಈ ನಗರ ನಿರ್ಮಿಸುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತ್ತೀಚೆಗೆ ಜಿಬಿಐಟಿ ಲಾಂಛನದ ಜೊತೆಗೆ ಎ.ಐ ನಗರದ ಪರಿಕಲ್ಪನೆಯ ವಿಡಿಯೊ ಕೂಡ ಬಿಡುಗಡೆ ಮಾಡಿದ್ದಾರೆ.

ಸಿಂಗಪುರ, ಬೀಜಿಂಗ್, ದುಬೈ, ಸ್ಯಾನ್ ಫ್ರಾನ್ಸಿಸ್ಕೊ ಸೇರಿ ಕೆಲವೆಡೆ ಅತ್ಯಾಧುನಿಕ ಎ.ಐ ತಂತ್ರಜ್ಞಾನ ಆಧಾರಿತ ನಗರಗಳು ನಿರ್ಮಾಣವಾಗಿವೆ. ಎ.ಐ ಆಧಾರಿತ ಆರ್ಥಿಕತೆ, ಆಡಳಿತ ಹಾಗೂ ಜೀವನಶೈಲಿ ಅಳವಡಿಸಿಕೊಂಡಿವೆ. ‘ಇದೀಗ, ಬಿಡದಿಯಲ್ಲೂ ಅಂತಹದ್ದೇ ಒಂದು ನಗರ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ.

ಕಂದ್ರ ವಾಣಿಜ್ಯ ಜಿಲ್ಲೆ: ‘ಉದ್ದೇಶಿತ ಎ.ಐ ನಗರಕ್ಕೆ ಮೀಸಲಿಟ್ಟಿರುವ ಜಾಗದಲ್ಲಿ ಜಾಗತಿಕ ಕಂಪನಿಗಳು ಎ.ಐ ಆಧರಿತ ಉದ್ಯಮದ ಮೇಲೆ ಹೂಡಿಕೆ ಮಾಡಲಿವೆ’ ಎಂದು ಜಿಬಿಡಿಎ ಅಧ್ಯಕ್ಷ ಜಿ.ಎಸ್. ನಟರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ನಗರದಲ್ಲಿ ಎ.ಐ ತಂತ್ರಜ್ಞಾನ ಆಧಾರಿತ ಮೂಲಸೌಕರ್ಯ, ಶಿಕ್ಷಣ ಹಾಗೂ ಸಾರ್ವಜನಿಕ ಸೇವೆಗಳನ್ನೂ ಡಿಜಿಟಲ್ ತಂತ್ರಜ್ಞಾನದೊಂದಿಗೆ ಜೋಡಿಸಲಾಗುವುದು. ಮಾನವ ಸಂಪನ್ಮೂಲದ ಬದಲು ಎ.ಐ ಆಧಾರಿತ ನಿಯಂತ್ರಣ ಮತ್ತು ನಿರ್ವಹಣೆಗೆ ಆದ್ಯತೆ ದೊರೆಯಲಿದೆ. ವಿಶ್ವದ ಕೆಲವೆಡೆ ಈಗಾಗಲೇ ಇಂತಹ ನಗರಗಳಿವೆ. ದೇಶದಲ್ಲಿ ಕರ್ನಾಟಕ ಮೊದಲಿಗೆ ಅಂತಹ ನಗರಕ್ಕೆ ಮುನ್ನುಡಿ ಬರೆಯುತ್ತಿದೆ’ ಎಂದು ಹೇಳಿದರು.

ಅಂಕಿ ಅಂಶಗಳು

8,493 ಎಕರೆ — ಉಪನಗರ ಯೋಜನಾ ಪ್ರದೇಶ

9 — ಯೋಜನೆಗೆ ಒಳಪಡುವ ಗ್ರಾಮಗಳು

6,731 ಎಕರೆ — ಖಾಸಗಿ ಮಾಲೀಕತ್ವದ ಜಮೀನು

750 ಎಕರೆ — ಸರ್ಕಾರಿ ಜಮೀನು

1,012 ಎಕರೆ — ಜಲಮೂಲಗಳಿರುವ ಪ್ರದೇಶ

ಉದ್ದೇಶಿತ ಎ.ಐ ನಗರದ ನೀಲನಕ್ಷೆ (ಚಿತ್ರ ಕೃಪೆ: ಜಿಬಿಡಿಎ)

ಹೀಗಿರಲಿದೆ ಹೊಸ ಕನಸಿನ ನಗರ

- ಎ.ಐ ಸಂಬಂಧಿತ ಸೇವಾ ಕ್ಷೇತ್ರದಲ್ಲಿ ಸಾವಿರಾರು ಹೊಸ ಉದ್ಯೋಗ ಸೃಷ್ಟಿ ಗುರಿ
- ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ಉದ್ಯೋಗ ನೀತಿ
- ಪೂರಕವಾಗಿ ಸ್ಥಳೀಯರನ್ನು ಅಣಿಗೊಳಿಸಲು ಕೌಶಲ ಕೇಂದ್ರಗಳ ಆರಂಭ
- ಮುಖ್ಯರಸ್ತೆಗಳಿಗೆ ಸಂಪರ್ಕಕ್ಕಾಗಿ 300 ಮೀ. ಅಗಲದ ಬಿಸಿನೆಸ್ ಕಾರಿಡಾರ್

ಶೂನ್ಯ ದಟ್ಟಣೆ

ಉಪ ನಗರವನ್ನು ಶೂನ್ಯ ಸಂಚಾರ ದಟ್ಟಣೆ ಪರಿಕಲ್ಪನೆ ಅಡಿ ನಿರ್ಮಿಸಲಾಗುತ್ತಿದೆ. ಎಲ್ಲಾ ದಿಕ್ಕಿನಿಂದ ಸಂಪರ್ಕಿಸಲು ಕನಿಷ್ಠ 70 ಮೀಟರ್ ಅಗಲದ ರಸ್ತೆ ನಿರ್ಮಿಸಲಾಗುವುದು.

ಉಪನಗರದ ವರ್ತುಲ ರಸ್ತೆ ಯೋಜನೆಯು (ಎಸ್‌ಟಿಆರ್‌ಆರ್) 9 ಕಿ.ಮೀ., ನೈಸ್ ರಸ್ತೆಯಿಂದ 11 ಕಿ.ಮೀ., ಬೆಂಗಳೂರು–ಮೈಸೂರು ಹೆದ್ದಾರಿಯಿಂದ 5 ಕಿ.ಮೀ., ಬೆಂಗಳೂರು–ದಿಂಡಿಗಲ್ ಹೆದ್ದಾರಿಯಿಂದ 2.2 ಕಿ.ಮೀ. ಅಂತರದಲ್ಲಿ ಈ ನಗರ ತಲೆ ಎತ್ತಲಿದೆ.

ಈ ಯೋಜನೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಒಟ್ಟು ಉದ್ದವೇ 30 ಕಿ.ಮೀಗೂ ಹೆಚ್ಚು ಇರಲಿದೆ ಎಂದು ಜಿಬಿಡಿಎ ಅಧ್ಯಕ್ಷ ನಟರಾಜ್ ತಿಳಿಸಿದರು.

ಮೂರ್ನಾಲ್ಕು ವರ್ಷದಲ್ಲಿ ಯೋಜನೆ ಪೂರ್ಣ ಗುರಿ

ಯೋಜನೆಗೆ ಬೇಕಾದ ಭೂಮಿ ಸ್ವಾಧೀನಕ್ಕೆ ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ಗುರುವಾರದಿಂದ ಆರಂಭವಾಗಿದೆ.

ಸ್ವಾಧೀನಪಡಿಸಿಕೊಳ್ಳಲಾಗುವ ಭೂಮಿಗಳಿಗೆ ಜೆಎಂಸಿ ತಂಡ ಖುದ್ದಾಗಿ ಭೇಟಿ ನೀಡಿ ಅಳತೆ, ಮೌಲ್ಯ ಪ್ರಮಾಣೀಕರಣ ಮಾಡಲಿದೆ. ಈ ಎಲ್ಲ ಪ್ರಕ್ರಿಯೆ ಮುಗಿದು ಅಂತಿಮ ವರದಿ ನೀಡಲು ಮೂರು ತಿಂಗಳ ಬೇಕಾಗುತ್ತದೆ. ಆ ನಂತರ ಭೂಸ್ವಾಧೀನ ಕಾರ್ಯ ನಡೆಯಲಿದೆ.

ಎಲ್ಲ ಪ್ರಕ್ರಿಯೆ ಮುಗಿದ ಉಪನಗರ ಯೋಜನೆ ಪೂರ್ಣಗೊಳ್ಳಲು ಕನಿಷ್ಠ ಮೂರು ವರ್ಷ ಬೇಕಾಗುತ್ತದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ತಿಳಿಸಿದೆ.

‘ಶರಾವತಿ ಪಂಪ್ಡ್ ಸ್ಟೋರೇಜ್: 120 ಎಕರೆಯಷ್ಟೇ ಬಳಕೆ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ 120 ಎಕರೆಯಷ್ಟೇ ಬಳಕೆಯಾಗಲಿದ್ದು, ಹೆಚ್ಚುವರಿ 2 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗಲಿದೆ’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಕೆ.ಜೆ.ಜಾರ್ಜ್

ಯೋಜನೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ. ಯೋಜನೆಗೆ ಗುರುತಿಸಿರುವ ಪ್ರದೇಶದಲ್ಲಿ ಸರ್ಕಾರದ ಜಾಗವೇ ಇದೆ. 40 ಎಕರೆಯಷ್ಟು ಖಾಸಗಿ ಜಮೀನು ಸ್ವಾಧೀನ ಮಾಡಿಕೊಳ್ಳಬೇಕು’ ಎಂದು ಅವರು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದರು.

‘ಶಿವನಸಮುದ್ರ ಯೋಜನೆ ನಾಲ್ಕು ಕೃಷ್ಣರಾಜ ಒಡೆಯರ ಕಾಲದಲ್ಲಿ ಅನುಷ್ಠಾನಗೊಂಡಿತ್ತು. ‘ವಿದ್ಯುತ್ ಉತ್ಪಾದನೆ ಮಾಡಿದರೆ ನೀರಿನ ಸತ್ವ ಹೋಗುತ್ತದೆ, ಆ ನೀರನ್ನು ಕೃಷಿಗೆ ಬಳಸಲು ಆಗುವುದಿಲ್ಲ’ ಎಂದು ಸೃಷ್ಟಿಸಿಕೊಳ್ಳಲು ಕೆಲವರು ಸುಳ್ಳು ಹಬ್ಬಿಸಿದ್ದರು. ಅಂಥ ಜನ ಎಲ್ಲಾ ಕಾಲದಲ್ಲೂ ಇರುತ್ತಾರೆ’ ಎಂದರು.

ಚುಟುಕು ಸುದ್ದಿ

ಡಲ್ಲಾಸ್: ಕರ್ನಾಟಕದ ವ್ಯಕ್ತಿಯ ತಲೆ ಕತ್ತರಿಸಿದ ಸಹೋದ್ಯೋಗಿ

ಹೂಸ್ಟನ್ (ಪಿಟಿಐ): ವಾಷಿಂಗ್ ಮೆಷಿನ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಮೋಟೆಲ್‌ನ ವ್ಯವಸ್ಥಾಪಕ, ಕರ್ನಾಟಕದ ಚಂದ್ರಮೌಳಿ ನಾಗಮಲ್ಲಯ್ಯ (50) ಎಂಬುವರ ತಲೆಯನ್ನು ಸಹೋದ್ಯೋಗಿಯೊಬ್ಬ ಮಚ್ಚಿನಿಂದ ಕಡಿದು ಕೊಲೆ ಮಾಡಿದ್ದಾನೆ.

ಚಂದ್ರಮೌಳಿ

ಡಲ್ಲಾಸ್‌ನ ‘ಡೌನ್‌ಟೌನ್ ಸ್ಯೂಟ್ಸ್’ ಮೋಟೆಲ್‌ನಲ್ಲಿ (ಪ್ರವಾಸಿಗರು, ವಿಶೇಷವಾಗಿ ವಾಹನ ಚಾಲಕರಿಗಾಗಿ ನಿರ್ಮಿಸಿರುವ ಹೋಟೆಲ್) ಬುಧವಾರ ಬೆಳಿಗ್ಗೆ ಈ ಘಟನೆ ನಡೆದಿದೆ. ಆರೋಪಿ, ಕ್ಯೂಬಾದ ಯೋರ್ಡನಿಸ್ ಕೊಬಾಸ್ ಮಾರ್ಟಿನೆಜ್ (37) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಚಂದ್ರಮೌಳಿ ಅವರನ್ನು ರಕ್ಷಿಸಲು ಪತ್ನಿ ಹಾಗೂ ಮಗ ಪ್ರಯತ್ನಿಸಿದರೂ ಅವರನ್ನು ಆರೋಪಿ ದೂರ ತಳ್ಳಿ ದಾಳಿ ನಡೆಸಿದ್ದಾನೆ. ಪಾರ್ಕಿಂಗ್ ಸ್ಥಳಕ್ಕೆ ರುಂಡವನ್ನು ಎರಡು ಬಾರಿ ಒದ್ದು, ಬಳಿಕ ಅದನ್ನು ತೆಗೆದುಕೊಂಡು ಕಸದ ಬುಟ್ಟಿಗೆ ಹಾಕಲು ಪ್ರಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಧಾನಿ ಮೋದಿ ಅಭಿನವ ಬಸವಣ್ಣ’

ಗದಗ: ‘ಪ್ರಧಾನಿ ನರೇಂದ್ರ ಮೋದಿ ಅಭಿನವ ಬಸವಣ್ಣ ಇದ್ದಂತೆ’ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

‘12ನೇ ಶತಮಾನದಲ್ಲಿ ಮಹಿಳಾ ಸಮಾನತೆಗಾಗಿ ಬಸವಣ್ಣ ಹೋರಾಡಿದ್ದರು. ಈಗ ಪ್ರಧಾನಿ ದಿಟ್ಟ ಹೆಜ್ಜೆ ಇರಿಸಿದ್ದಾರೆ. 2028ರ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಾನೂನು ಬರಲಿದೆ. ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ಸಿಗಲಿದೆ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಅರ್ಜಿ ಆಹ್ವಾನ

ವಿಜಯಪುರ: ವಿಜಯಪುರ ಕನ್ನಡ ಪುಸ್ತಕ ಪರಿಷತ್ತಿನಿಂದ ರಾಜ್ಯಮಟ್ಟದ ‘ಡಾ.ಹೊಂಬಣ ಸಿದ್ದಲಿಂಗ ಶ್ರೀ’ ಪುಸ್ತಕ ಪ್ರಶಸ್ತಿಗೆ, 2024ರಲ್ಲಿ ಪ್ರಕಟವಾದ ಕೃತಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿ ₹10 ಸಾವಿರ ನಗದು, ಪ್ರಶಸ್ತಿ ಫಲಕ, ಸ್ಮರಣಿಕೆ ಒಳಗೊಂಡಿದೆ. ಸಂಪಾದನೆ, ಪಿಎಚ್.ಡಿ, ಸ್ಮರಣ ಸಂಚಿಕೆ ಹೊರತು ಪಡಿಸಿ, ಎಲ್ಲ ಪ್ರಕಾರದ ಸಾಹಿತ್ಯ ಕೃತಿಯ ಎರಡು ಪ್ರತಿಗಳನ್ನು ಅಕ್ಟೋಬರ್ 30ರ ಒಳಗೆ ಡಾ. ಶಂಕರ ಬೈಚಬಾಳ, ವಜ್ರ, ರಾಜಾಜಿನಗರ, ವಿಜಯಪುರ- 586109 ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಮಾಹಿತಿಗೆ ಮೊ: 9740560993, 9448751980 ಸಂಪರ್ಕಿಸಿ.

‘ಹೊಸ ಪಕ್ಷ ಕಟ್ಟುವ ಆಲೋಚನೆಯಿಲ್ಲ’

ಮಂಡ್ಯ: ‘ಕರ್ನಾಟಕ ಹಿಂದೂ ಪಾರ್ಟಿ ಕಟ್ಟುತ್ತೇನೆ ಎಂದು ಗುರುವಾರ ಹೇಳಿಕೆ ನೀಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಶುಕ್ರವಾರ ಹೇಳಿಕೆ ಬದಲಿಸಿದ್ದು, ‘ಹೊಸ ಪಕ್ಷ ಕಟ್ಟುವುದು ನನ್ನ ತಲೆಯಲ್ಲಿ ಇಲ್ಲ’ ಎಂದಿದ್ದಾರೆ.

ಮಲೆಯಾಳಕ್ಕೆ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಹಿಂದುತ್ವ, ಅಭಿವೃದ್ಧಿ, ಭ್ರಷ್ಟಾಚಾರ ಮುಕ್ತ ವಿಷಯಗಳನ್ನು ಬಿಟ್ಟರೆ, ನನ್ನ ತಲೆಯಲ್ಲಿ ಬೇರೆ ಆಲೋಚನೆ ಇಲ್ಲ. ರಾಜಕೀಯ ಪಕ್ಷ ಕಟ್ಟುಬೇಕು ಅಥವಾ ಬಿಜೆಪಿಗೆ ಸಡ್ಡು ಹೊಡೆಯಬೇಕು ಅನ್ನೋದು ನನ್ನಲ್ಲಿ ಇಲ್ಲ’ ಎಂದಿದ್ದಾರೆ.

‘ಪಕ್ಷದ ಹೈಕಮಾಂಡ್‌ಗೆ ಯತ್ನಾಳ್ ಹಿಂದುತ್ವದ ಶಕ್ತಿ ಎಂದು ಅರ್ಥವಾಗಿದೆ. ಬಿಜೆಪಿ ಹೈಕಮಾಂಡ್ ತಪ್ಪು ತಿದ್ದಿಕೊಂಡು 2028ಕ್ಕೆ ನನಗೆ ಈ ರಾಜ್ಯದ ಜವಾಬ್ದಾರಿ ನೀಡಲಿದೆ’ ಎಂದರು.

ದೇವ‘ದಾರಿ’ಗೆ ನಡೆಯದ ಜಂಟಿ ಸರ್ವೆ

ಸ್ಥಳೀಯರ ವಿರೋಧ; ಜಂಟಿ ಹೋರಾಟ ನಡೆಸಿದ ಜನಸಂಗ್ರಾಮ ಪರಿಷತ್, ರೈತ ಸಂಘ, ಕೆಆರ್‌ಎಸ್

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ ಜಿಲ್ಲೆ): ಸಂಡೂರು ತಾಲ್ಲೂಕಿನ ‘ದೇವದಾರಿ ಕಬ್ಬಿಣದ ಅದಿರು ಗಣಿ’ಗೆ ಸಂಪರ್ಕ ಕಲ್ಪಿಸುವ ರಸ್ತೆಯ ಜಂಟಿ ಸರ್ವೆಗೆ ಸಂಘಟನೆಗಳು, ಸ್ಥಳೀಯರ ವಿರೋಧ ವ್ಯಕ್ತವಾಗಿದ್ದು, ಸರ್ವೆ ನಡೆಸಲಾಗದೇ ಅಧಿಕಾರಿಗಳು ಹಿಂದಿರುಗಿದ್ದಾರೆ.

ಸ್ವಾಮಿಮಲೈ ಅರಣ್ಯ ವ್ಯಾಪ್ತಿಯ 401.57 ಹೆಕ್ಟೇರ್ ಪ್ರದೇಶದಲ್ಲಿ ‘ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ‘ದೇವದಾರಿ ಕಬ್ಬಿಣದ ಅದಿರು ಗಣಿ’ ನಡೆಸಲು ಉದ್ದೇಶಿಸಿದೆ. ವಾರ್ಷಿಕ 20 ಲಕ್ಷ ಟನ್ ಕಬ್ಬಿಣ ಅದಿರು ಸಾಗಣೆಯ ಯೋಜನೆ ಇದಾಗಿದ್ದು, ಗಣಿಗೆ ಸಂಪರ್ಕ ಕಲ್ಪಿಸಲು ಸದ್ಯ ರಸ್ತೆಯೇ ಇಲ್ಲ.

ರಸ್ತೆ ಬೇಕಿದ್ದರೆ, ಕಿರ್ಲೋಸ್ಕರ್ ಕಂಪನಿ ಸುಪರ್ದಿಯಲ್ಲಿರುವ ರಸ್ತೆ ಮತ್ತು ಹೊಸದಾಗಿ ಅರಣ್ಯ ಪ್ರದೇಶದ ಸ್ವಲ್ಪ ಭಾಗ ಬೇಕಾಗಿದೆ. ಇದಕ್ಕಾಗಿ ಕೆಐಒಸಿಎಲ್ ಅರಣ್ಯ ಇಲಾಖೆ ಅರಣ್ಯ ಅನುಮತಿ (ಎಫ್‌ಸಿ) ಕೋರಿದೆ.

ದೇವದಾರಿ ಗಣಿಯ ರಸ್ತೆಗೆಂದು ಕೆಐಒಸಿಎಲ್ ಸೂಚಿಸಿರುವ ಜಾಗದ ಸರ್ವೆಗೆ ಶುಕ್ರವಾರ ಅರಣ್ಯ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಕೆಐಒಸಿಎಲ್ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು. ಆದರೆ, ಜನಸಂಗ್ರಾಮ ಪರಿಷತ್, ರಾಜ್ಯ ರೈತ ಸಂಘ, ಕರ್ನಾಟಕ ರಾಷ್ಟ್ರ ಸಮಿತಿ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದರು. ಹೋರಾಟಗಾರರನ್ನು ಮನವೊಲಿಸಲು ಅಧಿಕಾರಿಗಳು ಪ್ರಯತ್ನಿಸಿದರಾದರೂ, ಅವರು ಯಾವುದಕ್ಕೂ ಜಗ್ಗಲಿಲ್ಲ. ಕೊನೆಗೆ ಸರ್ವೆ ಕೈಬಿಟ್ಟ ಅಧಿಕಾರಿಗಳು ಹಿಂದಿರುಗಿದರು.

ಮುಖ್ಯಾಂಶಗಳು

- ವಾರ್ಷಿಕ 20 ಲಕ್ಷ ಟನ್ ಕಬ್ಬಿಣ ಅದಿರು ಸಾಗಣೆಯ ಯೋಜನೆ
- ಗಣಿಗೆ ಸಂಪರ್ಕ ಕಲ್ಪಿಸಲು ಸದ್ಯ ರಸ್ತೆಯೇ ಇಲ್ಲ
- ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆ ಅನುಮತಿ ಕೋರಿಕೆ

ದೇವದಾರಿ ಗಣಿ ರಸ್ತೆಯ ಜಂಟಿ ಸರ್ವೆ ನಡೆಸಲು ಶುಕ್ರವಾರ ಸ್ವಾಮಿಮಲೈ ಅರಣ್ಯ ಪ್ರದೇಶಕ್ಕೆ ಬಂದಿದ್ದ ಅರಣ್ಯ, ಕಂದಾಯ, ಕೆಐಒಸಿಎಲ್ ಅಧಿಕಾರಿಗಳಿಗೆ ತಡೆ ಒಡ್ಡಿದರು– ಪ್ರಜಾವಾಣಿ ಚಿತ್ರ

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ ಬಳ್ಳಾರಿ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಬಸವರಾಜ ಅವರು, ‘ರಸ್ತೆ ನಿರ್ಮಾಣ ಮಾಡಲು ಅರಣ್ಯ ಭೂಮಿ ಕೋರಿ ಕೆಐಒಸಿಎಲ್ ಪ್ರಸ್ತಾವನೆ ಸಲ್ಲಿಸಿದೆ. ಇದರ ಜತೆಗೆ ಕೆಐಒಸಿಎಲ್‌ನ ರಸ್ತೆಯನ್ನು ಬಳಸಿಕೊಳ್ಳಲು ಅನುಮತಿ ಕೇಳಿದೆ. ಪ್ರಸ್ತಾವನೆ ಹಿನ್ನೆಲೆಯಲ್ಲಿ ರಸ್ತೆ ಜಾಗದ ಸರ್ವೆ ಶುಕ್ರವಾರ ನಡೆಯಲಿಲ್ಲ. ಚರ್ಚೆ ಮಾಡಿ ಮುಂದಿನ ಸರ್ವೆ ನಿರ್ಧರಿಸುತ್ತೇವೆ’ ಎಂದು ಹೇಳಿದರು.

ಜನಸಂಗ್ರಾಮ ಪರಿಷತ್ ಮುಖಂಡ ಶ್ರೀಶೈಲ ಆಲದಹಳ್ಳಿ ಮಾತನಾಡಿ, ‘1 ಲಕ್ಷ ಮರಗಳನ್ನು ಕಡಿದು ಇಲ್ಲಿ ಗಣಿಗಾರಿಕೆ ಮಾಡಲು ಉದ್ದೇಶಿಸಲಾಗಿದೆ. ಈಗಾಗಲೇ ಅದಿರನ್ನು ಹೊರಗಿನವರಿಗೆ ಮಾರುತ್ತಿರುವ ಎಸ್‌ಎಂಐಐಎಲ್ ಕೆಐಒಸಿಎಲ್‌ಗೆ ಅದಿರು ಕೊಡಿಸಲು ಕೇಂದ್ರ ಉಕ್ಕು ಸಚಿವಾಲಯ ಕ್ರಮ ಕೈಗೊಳ್ಳಲಿ’ ಎಂದು ಹೇಳಿದರು.

ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ ಶುಕ್ರವಾರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಾಗಿನ ಅರ್ಪಿಸಿದರು. ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ರಂಗನಾಥ್, ಜಿ.ಎಚ್.ಶ್ರೀನಿವಾಸ್, ಬಸವರಾಜು ವಿ.ಶಿವಗಂಗಾ, ಕೆ.ಎಸ್.ಬಸವಂತಪ್ಪ, ಲತಾ ಮಲ್ಲಿಕಾರ್ಜುನ್, ವಾಸು, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಜೊತೆಗಿದ್ದರು

‘ಅನುದಾನ ತನ್ನಿ, ಇಲ್ಲ ರಾಜೀನಾಮೆ ಕೊಡಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಕೇಂದ್ರದ ಮೇಲೆ ಒತ್ತಡ ಹೇರಿ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುದಾನ ತನ್ನಿ, ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ಮರು ಚುನಾವಣೆಗೆ ಬನ್ನಿ’ ಎಂದು ರಾಜ್ಯದ ಬಿಜೆಪಿ ಸಂಸದರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು.

ಇಲ್ಲಿನ ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ ಶುಕ್ರವಾರ ಬಾಗಿನ ಅರ್ಪಿಸಿ ಅವರು ಮಾತನಾಡಿದರು.

‘ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ ₹5300 ಕೋಟಿ ನೀಡದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುದಾನ ಪಡೆಯಲು ನಾಲ್ಕು ಬಾರಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದೇನೆ. ಒಂದು ಕಡತವನ್ನೂ ಸಹಿ ಹಾಕಿಲ್ಲ. ಒಂದು ರೂಪಾಯಿ ಕೊಟ್ಟಿಲ್ಲ’ ಎಂದರು.

‘ಜನರು ಮತ ಕೊಟ್ಟಿದ್ದಾರೆ. ಅವರ ಋಣವನ್ನು ತೀರಿಸಲು ಪ್ರಧಾನಿ ಬಳಿಗೆ ನಡೆಯಿರಿ. ಅಲ್ಲಿ ಬಾಯಿ ಬಿಡಿ’ ಎಂದು ಬಿಜೆಪಿ ಸಂಸದರಿಗೆ ಹೇಳಿದರು.

‘ಅಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಲು ಅವಕಾಶ ಕೊಡುವುದಿಲ್ಲ ಎಂದು ಮಹಾರಾಷ್ಟ್ರ ಸಿ.ಎಂ ದೇವೇಂದ್ರ ಫಡಣವೀಸ್ ಹೇಳಿದ್ದಾರೆ. ಹಾಗೆ ಹೇಳಲು ಅವರು ಯಾರು? ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನಂತೆ ನಮ್ಮ ಪಾಲಿನ ನೀರು ಪಡೆಯುವುದು ನಮ್ಮ ಹಕ್ಕು’ ಎಂದರು.

ಬೆಳಗಾವಿ: ‘ಕೈ’, ಕಮಲ ಕಾರ್ಯಕರ್ತರ ಜಟಾಪಟಿ, ಮಾರಾಮಾರಿ

ಬಿಡಿಸಿಸಿ ಚುನಾವಣೆ: ಅಧಿಕಾರಿ ಅಪಹರಣ ಯತ್ನ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಚುನಾವಣೆ ನಿಮಿತ್ತ ಚನ್ನಮ್ಮನ ಕಿತ್ತೂರು ಪಟ್ಟಣದಲ್ಲಿ ಶುಕ್ರವಾರ ನಡೆದ ಸಭೆಯು ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಮಾರಾಮಾರಿಗೆ ನಡೆಯಿತು.

ಚುನಾವಣೆ ನಡೆಸಲು ಬಂದಿದ್ದ ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭೀಮಪ್ಪ ಕೋಟಿಗಿ ಅವರನ್ನು ಅಪಹರಿಸುವ ಯತ್ನವೂ ನಡೆಯಿತು. ಪೊಲೀಸರ ಸಮ್ಮುಖದಲ್ಲೇ ಪರಸ್ಪರ ಬಡಿದಾಡಿದರು.

ಸೆ.19ರಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕರ ಆಯ್ಕೆಗೆ ಚುನಾವಣೆ ನಿಗದಿಯಾಗಿದೆ. ಇದಕ್ಕೆ ಮತ ಚಲಾಯಿಸಲು ಪ್ರತಿ ಪಿಕೆಪಿಎಸ್‌ನಿಂದ ಒಬ್ಬರಿಗೆ ಮತದಾನ ಹಕ್ಕು ನೀಡಲು ಠರಾವು ಪಾಸ್ ಮಾಡಬೇಕು. ಚನ್ನಮ್ಮನ ಕಿತ್ತೂರಿನ ಪಿಕೆಪಿಎಸ್‌ನಲ್ಲಿ ಈ ಕುರಿತ ಠರಾವ್ ಪಾಸ್ ಮಾಡಲು ಚುನಾವಣೆ ನಡೆಯುತ್ತಿತ್ತು. ಸಭೆಯಲ್ಲಿ ವಾಗ್ವಾದ ಜೋರಾಯಿತು. ನಿರ್ದೇಶಕರೊಬ್ಬರು ಅಧಿಕಾರಿಯ ಅಂಗಿ ಹಿಡಿದು ಹೊರಹಾಕಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಎನ್ನಲಾದ ಕೆಲವರು ಪಿಕೆಪಿಎಸ್ ಅಧಿಕಾರಿಯನ್ನು ಕಾರಿನಲ್ಲಿ ಅಪಹರಣ ಮಾಡಲು ಯತ್ನಿಸಿದರು. ಆಗ ಅಡ್ಡ ಬಂದು ಕಾರ್ ತಡೆದ ಬಿಜೆಪಿ ಕಾರ್ಯಕರ್ತರು ಕಾರಿನ ಗಾಜು ಗುದ್ದಿದರು.

ಸ್ಥಳದಲ್ಲಿ ಕೆಲಕಾಲ ತ್ವೇಷಮಯ ವಾತಾವರಣ ನಿರ್ಮಾಣವಾಯಿತು.

ಕಾರಿನಿಂದ ಅಧಿಕಾರಿ, ಕಾಂಗ್ರೆಸ್ ಕಾರ್ಯಕರ್ತರನ್ನು ಹೊರಕ್ಕೆ ಎಳೆದರು. ಕಾಲರ್ ಹಿಡಿದು ಪರಸ್ಪರ ಹೊಡೆದಾಡಿಕೊಂಡರು. ಬರೆಹೆಚ್ಚಿಸಿದ್ದ ಪೊಲೀಸರು ಹೊಡೆದಾಟ ತಡೆಯಲು ಪರದಾಡಿದರು.

‘ಶುಕ್ರವಾರ ಮತಹಕ್ಕಿನ ಕೋರಂ ಬಾರದ ಕಾರಣ ಮುಂದೂಡಲಾಗಿತ್ತು. ಕಾಂಗ್ರೆಸ್ ಸದಸ್ಯರ ಸಂಖ್ಯೆ ಕಡಿಮೆ ಇದ್ದು, ಚುನಾವಣೆ ಮುಂದೂಡಲು ಹುನ್ನಾರ ನಡೆಸಿದರು’ ಎಂದು ಬಿಜೆಪಿ ಕಾರ್ಯಕರ್ತರು ದೂರಿದ್ದಾರೆ.

ಘಟನೆಯಿಂದಾಗಿ ಚುನಾವಣೆಯನ್ನು ಸೆ.15ಕ್ಕೆ ಮುಂದೂಡಲಾಯಿತು.

ಚನ್ನಮ್ಮನ ಕಿತ್ತೂರಿನ ಸಂಘದ ಮುಖ್ಯ ಕಾರ್ಯನಿರ್ವಾಹಕನನ್ನು ಅಪಹರಿಸಿಕೊಂಡು ಹೋಗಲು ಯತ್ನಿಸಿದ್ದ ವಾಹನವನ್ನು ಬಿಜೆಪಿ ಕಾರ್ಯಕರ್ತರು ತಡೆದರು ಪ್ರಜಾವಾಣಿ ಚಿತ್ರ

ಕೃಷಿ ಪ್ರೀತಿ..

ಪ್ರಜಾವಾಣಿ ಚಿತ್ರ

ಮಂಡ್ಯ ತಾಲ್ಲೂಕಿನ ಹೊಳಲು ಗ್ರಾಮದಲ್ಲಿ ಶುಕ್ರವಾರ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಪ್ರಾತ್ಯಕ್ಷಿಕೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ ಅವರು ಯಾಂತ್ರೀಕೃತ ವಿಧಾನದಲ್ಲಿ ಭತ್ತ ನಾಟಿ ಮಾಡುವ ಮೂಲಕ ಗಮನಸೆಳೆದರು

ದ್ವಿಭಾಷಾ ಸೂತ್ರ: ಸಿ.ಎಂ ನಿರ್ಧಾರವೇ ಅಂತಿಮ– ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಗದಗ: ‘ರಾಜ್ಯದಲ್ಲಿ ದ್ವಿಭಾಷಾ ಅಥವಾ ತ್ರಿಭಾಷಾ ಸೂತ್ರದ ಕುರಿತು ಚರ್ಚೆ ನಡೆಯುತ್ತಿದೆ. ಆದರೆ, ಈವರೆಗೆ ತೀರ್ಮಾನ ಕೈಗೊಂಡಿಲ್ಲ. ಇದರಲ್ಲಿ ಮುಖ್ಯಮಂತ್ರಿಯವರ ನಿರ್ಣಯವೇ ಅಂತಿಮ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಮಧು ಬಂಗಾರಪ್ಪ

‘ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರ ಒಪ್ಪುವುದಿಲ್ಲ. ಪ್ರತ್ಯೇಕ, ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ಪ್ರೋತ್ಸಾಹಿಸುತ್ತೇವೆ. ಹಾಗಾಗಿ ಎಸ್‌ಇಪಿ ಸಮಿತಿಯಲ್ಲಿ ದ್ವಿಭಾಷಾ, ತ್ರಿಭಾಷಾ ಸೂತ್ರದ ಬಗ್ಗೆ ಚರ್ಚಿಸಲಾಗುವುದು’ ಎಂದು ಶುಕ್ರವಾರ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಕುರಿತ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಮಹಿಳಾ ಅಭ್ಯರ್ಥಿಗಳ ನೇಮಕಾತಿ ಸಂದರ್ಭದಲ್ಲಿ ಪತಿ ಅಥವಾ ತಂದೆಯ ಆದಾಯ ಪ್ರಮಾಣಪತ್ರ ಲಗತ್ತಿಸಬೇಕಾ ಎಂಬ ಪ್ರಕರಣ ಇದಾಗಿದೆ. ಕೋರ್ಟ್ ಆದೇಶವನ್ನು ಇಲಾಖೆ ಪಾಲಿಸಲಿದೆ’ ಎಂದರು.

‘ಮುಂದೆ ಈ ರೀತಿಯ ಸಮಸ್ಯೆ ಎದುರಾಗಬಾರದು ಎಂಬ ಕಾರಣಕ್ಕೆ ಹೊಸ ಶಿಕ್ಷಕರ ನೇಮಕಾತಿ ಸಂಬಂಧ ಕಾನೂನು ಇಲಾಖೆ ಅಭಿಪ್ರಾಯ ಕೇಳಲಾಗಿದೆ’ ಎಂದರು.

ಅಕ್ರಮ ಗಣಿಗಾರಿಕೆ: ಕ್ರಮಕ್ಕೆ ಆಗ್ರಹ

ಬೆಂಗಳೂರು: ₹1 ಲಕ್ಷ ಕೋಟಿಗೂ ಹೆಚ್ಚು ಮೌಲ್ಯದಷ್ಟು ಕಬ್ಬಿಣದ ಅದಿರನ್ನು ಅಕ್ರಮವಾಗಿ ಗಣಿಗಾರಿಕೆ ಮಾಡಿ, ಸಾಗಿಸಿದ ರಾಜಕಾರಣಿಗಳು ಮತ್ತು ಕಂಪನಿಗಳ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್ ನಿಯೋಗವು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕಾಂಗ್ರೆಸ್ ನಾಯಕರಾದ ವಿ.ಎಸ್.ಉಗ್ರಪ್ಪ, ಬಿ.ಎಲ್.ಶಂಕರ್, ಎಚ್.ಎಂ.ರೇವಣ್ಣ, ರಾಣಿ ಸತೀಶ್, ಜಯಪ್ರಕಾಶ್ ಹೆಗ್ಡೆ, ವಿ.ಆರ್. ಸುದರ್ಶನ್, ಎಲ್.ಹನುಮಂತಯ್ಯ ಅವರಿದ್ದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಮನವಿ ಪತ್ರ ಸಲ್ಲಿಸಿದೆ.

‘ಬಳ್ಳಾರಿ, ತುಮಕೂರು, ಚಿತ್ರದುರ್ಗ ಭಾಗದಲ್ಲಿ ಉತ್ಕೃಷ್ಟ ಗುಣಮಟ್ಟದ ಕಬ್ಬಿಣದ ಅದಿರು ಇರುವುದನ್ನು ಕಂಡುಕೊಂಡಿದ್ದ ಕೆಲವರು 2000ನೇ ಇಸವಿಯಿಂದಲೂ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದರು. ನ್ಯಾಯಮೂರ್ತಿ ಯು.ಎಲ್.ಭಟ್ ನೇತೃತ್ವದ ಆಯೋಗವು, ವಿ.ಎಸ್. ಉಗ್ರಪ್ಪ ಅಧ್ಯಕ್ಷತೆಯ ಸತ್ಯಶೋಧನಾ ಸಮಿತಿಯು ಈ ಅಕ್ರಮದ ಬಗ್ಗೆ ಗಮನ ಸೆಳೆದಿದ್ದವು. ಆದರೆ ಅಂದಿನ ಸರ್ಕಾರ ಅಕ್ರಮ ಗಣಿಗಾರಿಕೆ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ’ ಎಂದು ಪತ್ರದಲ್ಲಿ ವಿವರಿಸಿದೆ.

‘ಹತ್ತಾರು ಸಾವಿರ ಕೋಟಿಯಷ್ಟು ಅದಿರನ್ನು ಕದ್ದು ಸಾಗಿಸಿರುವುದು ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರ ನೇತೃತ್ವದಲ್ಲಿ ನಡೆದ ತನಿಖೆಯಲ್ಲಿ ಪತ್ತೆಯಾಗಿತ್ತು. ಎಚ್.ಕೆ.ಪಾಟೀಲ ಅವರ ನೇತೃತ್ವದಲ್ಲಿ ರಚಿಸಲಾದ ಸಂಪುಟ ಉಪ ಸಮಿತಿಯು ಈಚೆಗೆ ವರದಿ ನೀಡಿದ್ದು, ₹1 ಲಕ್ಷ ಕೋಟಿಗೂ ಹೆಚ್ಚು ಮೌಲ್ಯದ ಅದಿರನ್ನು ಅಕ್ರಮವಾಗಿ ಸಾಗಿಸಲಾಗಿದೆ ಎಂಬುದನ್ನು ಪತ್ತೆ ಮಾಡಿದೆ’ ಎಂದಿದೆ.

‘ಇಷ್ಟು ದೊಡ್ಡ ಮಟ್ಟದಲ್ಲಿ ರಾಜ್ಯದ ಸಂಪತ್ತನ್ನು ಲೂಟಿ ಹೊಡೆದವರು ಆರಾಮವಾಗಿ ಇದ್ದಾರೆ. ಅವರ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಂಡು, ರಾಜ್ಯಕ್ಕಾಗಿರುವ ನಷ್ಟವನ್ನು ವಸೂಲಿ ಮಾಡಬೇಕು’ ಎಂದು ಆಗ್ರಹಿಸಿದೆ.

ಸಾಕ್ಷಿ ದೂರುದಾರನ ಜಾಮೀನು: 16ಕ್ಕೆ ಆದೇಶ

ಧರ್ಮಸ್ಥಳ ಬೆಳವಣಿಗೆ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ ಜಿಲ್ಲೆ): ಧರ್ಮಸ್ಥಳ ಗ್ರಾಮದಲ್ಲಿ ಮೃತದೇಹಗಳನ್ನು ಹೂತು ಹಾಕಲಾಗಿದೆ ಎನ್ನಲಾದ ಆರೋಪದ ಸಾಕ್ಷಿ ದೂರುದಾರನಿಗೆ ಜಾಮೀನು ನೀಡುವುದಕ್ಕೆ ಸಂಬಂಧಿಸಿದ ಆದೇಶವನ್ನು ಸೆ. 16ರಂದು ಪ್ರಕಟಿಸುವುದಾಗಿ ನ್ಯಾಯಾಲಯ ತಿಳಿಸಿದೆ.

ಸಾಕ್ಷಿ ದೂರುದಾರನನ್ನು ವಿಶೇಷ ತನಿಖಾ ತಂಡ (ಎಸ್ಐಟಿ) ಆ.22ರಂದು ಬಂಧಿಸಿತ್ತು. ಬೆಳ್ತಂಗಡಿ, ಬೆಂಗಳೂರು ಮತ್ತಿತರ ಕಡೆಗಳಲ್ಲಿ ಮಹಜರು ನಡೆಸಿತ್ತು. ಸೆ. 6ರಂದು ನ್ಯಾಯಾಂಗ ಬಂಧನ ವಿಧಿಸಿ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯ ಶಿವಮೊಗ್ಗ ಜೈಲಿಗೆ ಕಳುಹಿಸಿತ್ತು.

ಆತನ ಜಾಮೀನು ಅರ್ಜಿ ಶುಕ್ರವಾರ ವಿಚಾರಣೆಗೆ ಬಂದಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶ ವಿಜಯೇಂದ್ರ ಟಿ.ಎಚ್ ಅವರು ಆದೇಶ ಕಾಯ್ದಿರಿಸಿದರು. ಜಾಮೀನು ನೀಡಬಾರದು ಎಂದು ಎಸ್‌ಐಟಿ ಪೊಲೀಸರು ವಕೀಲರ ಮೂಲಕ ಕೋರ್ಟ್‌ಗೆ ಆಕ್ಷೇಪಣೆ ಸಲ್ಲಿಸಿದ್ದಾರೆ. ಸಾಕ್ಷಿ ದೂರುದಾರನ ಪರವಾಗಿ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರು ವಾದ ಮಂಡಿಸಿದ್ದರು.

ವಿಠಲ ಗೌಡ ಸಹಾಯಕರ ವಿಚಾರಣೆ: ಸಾಕ್ಷಿ ದೂರುದಾರ ಆರೋಪದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ತಲೆಬುರುಡೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಸಂದೇಹದಿಂದ ವಿಚಾರಣೆಗೆ ಒಳಗಾಗಿದ್ದ ವಿಠಲ ಗೌಡ ಅವರ ಆಪ್ತ ಎಂದು ಹೇಳಲಾದ ಬಂಟ್ವಾಳ ನಿವಾಸಿ ಪ್ರದೀಪ್ ಎಂಬುವವರನ್ನು ಶುಕ್ರವಾರ ಎಸ್‌ಐಟಿ ವಿಚಾರಣೆಗೆ ಒಳಪಡಿಸಿತು.

ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಮಧ್ಯಾಹ್ನ 3 ಗಂಟೆಯ ವೇಳೆ ಪ್ರದೀಪ್ ಅವರನ್ನು ಹಾಜರುಪಡಿಸಿದ್ದು, ನ್ಯಾಯಾಧೀಶರ ಮುಂದೆ ಸುಮಾರು ಎರಡು ತಾಸು ಹೇಳಿಕೆ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ.

ಯತ್ನಾಳ್ ವಿರುದ್ಧ ಎಫ್‌ಐಆರ್

ಮಂಡ್ಯ: ಮದ್ದೂರು ಪಟ್ಟಣದಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತವಾಗಿ ಎಫ್‌ಐಆರ್ ದಾಖಲಿಸಿದ್ದಾರೆ. ‘ಅನ್ಯ ಕೋಮಿನ ಭಾವನೆಗಳಿಗೆ ಧಕ್ಕೆ ಮತ್ತು ಕೋಮು ಉಂಟಾಗುವಂತೆ ಮಾತನಾಡಿದ್ದಾರೆ’ ಎಂದು ‘ಇನ್‌ಸ್ಪೆಕ್ಟರ್ ಮಂಜುನಾಥ್’ ನೀಡಿದ ದೂರಿನ ಮೇರೆಗೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್‌ಸ್ಪೆಕ್ಟರ್ ಅಮಾನತು: ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದಾಗ ಕರ್ತವ್ಯದಲ್ಲಿಲ್ಲದ ಕಾರಣ, ಪಟ್ಟಣ ಠಾಣೆಯ ‘ಇನ್‌ಸ್ಪೆಕ್ಟರ್ ಶಿವಕುಮಾರ್ ಅವರನ್ನು ಅಮಾನತು ಮಾಡಲಾಗಿದೆ’ ಎಂದು ಉಪ್ಪಾರಪೇಟೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಎಸ್ಪಿ ವರ್ಗಾವಣೆ: ಮಂಡ್ಯದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಇ. ತಿಮ್ಮಯ್ಯ ಅವರನ್ನು ಸರ್ಕಾರ ದಿಢೀರ್ ವರ್ಗಾವಣೆ ಮಾಡಿರುವುದು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

‘ಮದ್ದೂರು ಗಣೇಶೋತ್ಸವ ಮೆರವಣಿಗೆಯಲ್ಲಿ ನಡೆದ ಕಲ್ಲು ತೂರಾಟ ಪ್ರಕರಣಕ್ಕೂ ತಿಮ್ಮಯ್ಯ ವರ್ಗಾವಣೆಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ತಿಮ್ಮಯ್ಯ ಅವರಿಗೆ ಸ್ಥಳ ನಿಯುಕ್ತಿ ಮಾಡಿಲ್ಲ. ಡಿಜಿ ಮತ್ತು ಐಜಿಪಿ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಕಾನ್‌ಸ್ಟೆಬಲ್ ಹುದ್ದೆ: ವಯೋಮಿತಿ ಸಡಿಲ?

ಬೆಂಗಳೂರು: ‘ರಾಜ್ಯದಲ್ಲಿ ಹಲವು ವರ್ಷಗಳಿಂದ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಹೀಗಾಗಿ ಕಾನ್‌ಸ್ಟೆಬಲ್ ನೇಮಕಾತಿಯ ವಯೋಮಿತಿ ಸಡಿಲಿಕೆ ಮಾಡುವ ಕುರಿತು ಚರ್ಚೆ ನಡೆದಿದ್ದು, ಶೀಘ್ರದಲ್ಲೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆ ಆಕಾಂಕ್ಷಿಗಳು, ಎರಡರಿಂದ ಮೂರು ವರ್ಷ ವಯೋಮಿತಿ ಹೆಚ್ಚಳ ಮಾಡುವಂತೆ ಮನವಿ ಸಲ್ಲಿಸಿದ್ದಾರೆ. ವಯೋಮಿತಿ ಸಡಿಲಿಕೆ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಅವರಿಗೆ ಸೂಚನೆ ನೀಡಿದ್ದೇನೆ’ ಎಂದರು.

‘ಬೇರೆ ರಾಜ್ಯಗಳಲ್ಲಿ ವಯೋಮಿತಿ ಎಷ್ಟು ವರ್ಷವಿದೆ ಎಂಬ ಬಗ್ಗೆ ಪರಿಶೀಲನೆ ನಡೆಸಿ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಲಾಗಿದೆ. ಸರ್ಕಾರಕ್ಕೆ ಪ್ರಸ್ತಾವ ಬಂದ ತಕ್ಷಣವೇ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಧರ್ಮಸ್ಥಳದಲ್ಲಿ ನಾಲ್ಕು ಅನುಮಾನಾಸ್ಪದ ಸಾವುಗಳಾಗಿವೆ’ ಎಂದು ಮಹೇಶ್ ಶೆಟ್ಟಿ ತಿಮರೋಡಿ ಅವರು ದೂರು ಕೊಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ‘ದೂರು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಎಸ್‌ಐಟಿ ಅಧಿಕಾರಿಗಳು ಪರಿಶೀಲಿಸುತ್ತಾರೆ. ಯಾರೇ ಕೊಟ್ಟ ಹೇಳಿಕೆ ಮೇಲೆ ತೀರ್ಮಾನ ಮಾಡುವುದಿಲ್ಲ’ ಎಂದು ಹೇಳಿದರು.

ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿಗಿಂತ ಕಡಿಮೆ ಬಿಡ್ ಅಪರಾಧ ಎನಿಸಬೇಕು –ಸಚಿವ

‘ಎಲ್ಲಿವರೆಗೆ ರೈತರ ಶೋಷಣೆ ಮಾಡುತ್ತಿರುತ್ತೀರಿ?’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಗೆ ಬಿಡ್ ಮಾಡಿದರೆ ಅಪರಾಧ ಎಂದು ಪರಿಗಣಿಸುವ ಕಾನೂನು ಬರಬೇಕಿದೆ’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಪ್ರತಿಪಾದಿಸಿದರು.

ಶುಕ್ರವಾರ ಇಲ್ಲಿ ‘ಕೃಷಿ ಉತ್ಪನ್ನ ಮಾರುಕಟ್ಟೆ ಕಾನೂನು’ ಕುರಿತ ವಿಚಾರಸಂಕಿರಣ ಉದ್ಘಾಟಿಸಿದ ಅವರು, ‘ಸ್ವಾತಂತ್ರ್ಯ ಬಂದು ದಶಕಗಳಾದರೂ ಎಲ್ಲಿಯವರೆಗೆ ರೈತರನ್ನು ಶೋಷಣೆ ಮಾಡುತ್ತಿರುತ್ತೀರಿ?’ ಎಂದು ಪ್ರಶ್ನಿಸಿದರು.

ವಿದ್ಯಾವಿಕಾಸ ಶಿಕ್ಷಣ ಟ್ರಸ್ಟ್ ಹಾಗೂ ಬೆಂಗಳೂರಿನ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಹಯೋಗದಲ್ಲಿ ವಿಚಾರ ಸಂಕಿರಣ ನಡೆಯಿತು.

‘ದೇಶದ ಮಾರಾಟಗಳು ಪಾವತಿಗಳನ್ನು ‘ಡಿಜಿಟಲ್ ಪೇಮೆಂಟ್’ ಮೂಲಕ ಕಡ್ಡಾಯಗೊಳಿಸಲಿಲ್ಲವೇಕೆ? ಇದನ್ನು ಡಿಜಿಟೈಸ್ ಮಾಡಿದರೆ, ಉತ್ಪನ್ನಕ್ಕೆ ಎಷ್ಟು ಬೆಲೆ ಸಿಕ್ಕಿತೆಂದು ಗೊತ್ತಾಗುತ್ತದೆ. ಕಪ್ಪು ಹಣ ಬಳಕೆಯೂ ತಗ್ಗುತ್ತದೆ. ಈ ವಿಷಯದಲ್ಲಿ ಪ್ರತ್ಯೇಕ ಕಾನೂನು ಜಾರಿಗೆ ಬರಬೇಕು’ ಎಂದು ಅಭಿಪ್ರಾಯಪಟ್ಟರು.

‘ಈವರೆಗಿನ ಕಾನೂನುಗಳು ಸಮಸ್ಯೆಗಳ ಮೂಲ ಕಿತ್ತು ಹಾಕುತ್ತಿಲ್ಲ. ಶ್ರೀಮಂತರ ಪರವಾಗಿವೆ. ಇರುವಷ್ಟು ಕಾನೂನು ಬದಲಾದರೆ, ರೈತರ ರಕ್ಷಣೆಯೂ, ವಿದೇಶಗಳಲ್ಲಿ ವಿಲಾಸಿ ಸೇವೆಗಳು ಮಾನವ ಹಕ್ಕುಗಳಾಗಿವೆ. ಇಲ್ಲಿ ರೈತರಿಗೆ ಸೌಲಭ್ಯ, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದಿರುವುದು ಮಾನವ ಹಕ್ಕು ಉಲ್ಲಂಘನೆ’ ಎಂದು


ರೈತರ ಕಲ್ಯಾಣಕ್ಕೆ ಸಂಬಂಧಿಸಿದ್ದೂ ಸೇರಿ ಒಟ್ಟು ನೂರು ಮಸೂದೆಗಳನ್ನು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಿದ್ಧಪಡಿಸುತ್ತಿದೆ
ಎಚ್.ಕೆ.ಪಾಟೀಲ ಕಾನೂನು ಸಚಿವ

ಯಾರೂ ಹೇಳಿಲ್ಲ ಮತ್ತು ಹಾಗೇ ಪರಿಗಣಿಸುತ್ತಿಲ್ಲ’ ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮುಕ್ತ ವಾತಾವರಣದಲ್ಲಿ ಕೆಲಸ ಮಾಡುವವರು ಮಾತ್ರ ಶ್ರೇಷ್ಠ ವಿಚಾರಗಳನ್ನು ಸೃಷ್ಟಿಸಬಲ್ಲರು.

–ಆಲ್ಬರ್ಟ್ ಐನ್‌ಸ್ಟೀನ್

ಸಂಪಾದಕೀಯ

ಬಿಹಾರದಲ್ಲಿ 'ಎಸ್‌ಐಆರ್' ಪ್ರಕ್ರಿಯೆ ಆಧಾರ್ ಸೇರ್ಪಡೆ ಸ್ವಾಗತಾರ್ಹ

ಬಿಹಾರದಲ್ಲಿ ನಡೆದಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಧಿಕೃತ ಗುರುತಿನ ಚೀಟಿಯನ್ನಾಗಿ 'ಆಧಾರ್' ಅನ್ನೂ ಪರಿಗಣಿಸಬೇಕೆಂದು ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿಐ) ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ಸ್ವಾಗತಾರ್ಹ. ಈ ನಿರ್ದೇಶನ, 'ಎಸ್‌ಐಆರ್' ಪ್ರಕ್ರಿಯೆಗೆ ಸಂಬಂಧಿಸಿದ ದೂರುಗಳ ವಿಚಾರಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಿಂದ ಅನಿವಾರ್ಯವಾಗಿದ್ದ ಮತ್ತೊಂದು ಹಸ್ತಕ್ಷೇಪ ಆಗಿದೆ. ಆಧಾರ್ ಸೇರ್ಪಡೆಯೊಂದಿಗೆ, ಪಡಿತರಚೀಟಿ ಹಾಗೂ ಪಾಸ್‌ಪೋರ್ಟ್ ಸೇರಿದಂತೆ ಗುರುತಿನ ಪುರಾವೆಯಾಗಿ ನೀಡಬಹುದಾದ ದಾಖಲೆಗಳ ಸಂಖ್ಯೆ ಹನ್ನೆರಡಕ್ಕೇರಿದೆ. ಇದರಿಂದಾಗಿ 'ಎಸ್‌ಐಆರ್' ಪ್ರಕ್ರಿಯೆ ಹೆಚ್ಚು ಒಳಗೊಳ್ಳುವಿಕೆಯ ಸಾಧ್ಯತೆಯನ್ನು ಹೊಂದಿದಂತಾಗಿದೆ. ಅಷ್ಟುಮಾತ್ರವಲ್ಲದೆ, ಬಿಹಾರ ವಿಧಾನಸಭಾ ಚುನಾವಣೆಗೆ ಕೆಲವು ವಾರಗಳಷ್ಟೇ ಉಳಿದಿರುವಾಗ, ಆಯೋಗ ಕೈಗೊಂಡಿರುವ 'ಎಸ್‌ಐಆರ್'ನಿಂದಾಗಿ ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಬಯಲು ಮಾಡಿದಂತಾಗಿದೆ. 'ಇಸಿಐ' ಗೊತ್ತುಪಡಿಸಿದ ಹನ್ನೊಂದು ದಾಖಲೆಗಳ ಜೊತೆಗೆ ಆಧಾರ್ ಅನ್ನೂ ಪರಿಶೀಲನೆಗೆ ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ಆಗಸ್ಟ್‌ನಲ್ಲಿಯೇ ಸೂಚಿಸಿತ್ತು. ಆದರೆ, ಬೂತ್ ಹಂತದ ಅಧಿಕಾರಿಗಳು (ಬಿಎಲ್‌ಒ) ಆಧಾರ್ ಪುರಾವೆಯನ್ನು ಒಪ್ಪಿಕೊಳ್ಳುತ್ತಿಲ್ಲ ಎನ್ನುವ ವರದಿಗಳು ಪ್ರಕಟವಾಗಿದ್ದವು. ಪ್ರಸ್ತುತ, ಆಧಾರ್ ಪುರಾವೆಯನ್ನು ಒಪ್ಪಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡುವುದರೊಂದಿಗೆ ಬಿಎಲ್‌ಒಗಳಿಗೆ ಬೇರೆ ದಾರಿಯೇ ಉಳಿಯದಂತಾಗಿದೆ.

ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಬಿಹಾರದಲ್ಲಿನ 'ಎಸ್‌ಐಆರ್' ಪ್ರಕ್ರಿಯೆಯ ಅಧಿಕೃತ ಗುರುತಿನ ಪುರಾವೆಗಳ ಪಟ್ಟಿಗೆ 'ಆಧಾರ್' ಸೇರ್ಪಡೆಯಾಗಿದೆ. ಇದರಿಂದಾಗಿ, 'ಎಸ್‌ಐಆರ್' ವ್ಯಾಪಕತೆ ಹೆಚ್ಚಾಗಲಿದೆ.

ಆಧಾರ್ ವಾಸಸ್ಥಳದ ಪುರಾವೆಯಷ್ಟೇ ಆಗಿದ್ದು, ಪೌರತ್ವದ ಪುರಾವೆ ಆಗದಿರುವ ಕಾರಣದಿಂದಾಗಿ ಅದನ್ನು ಪರಿಗಣಿಸುವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ 'ಇಸಿಐ' ತಿಳಿಸಿತ್ತು. ಈ ವಾದಕ್ಕೆ ಪ್ರತಿಕ್ರಿಯೆಯಾಗಿ, 'ಇಸಿಐ' ಗೊತ್ತುಪಡಿಸಿರುವ ಪಾಸ್‌ಪೋರ್ಟ್ ಹಾಗೂ ಜನನ ಪ್ರಮಾಣಪತ್ರ ಹೊರತುಪಡಿಸಿದರೆ ಉಳಿದ ದಾಖಲೆಗಳನ್ನು ಕೂಡ ಪೌರತ್ವದ ಸಾಕ್ಷ್ಯಗಳೆಂದು ಪರಿಗಣಿಸಲು ಆಗದು ಹಾಗೂ ಆ ದಾಖಲೆಗಳನ್ನು ಕೂಡ ಅಕ್ರಮವಾಗಿ ಹೊಂದುವುದು ಸಾಧ್ಯವಿದೆ ಎಂದು ಕೋರ್ಟ್ ಹೇಳಿದೆ. ಉಳಿದ ಸೂಚಿತ ದಾಖಲೆಗಳಿಗಿಂತಲೂ ಆಧಾರ್ ಭಿನ್ನವಾಗಿದ್ದು, ಅದು ಶೇ 90ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಗುರುತಿನ ಚೀಟಿಯಾಗಿದೆ. ಗುರುತಿನ ಪುರಾವೆಯನ್ನಾಗಿ ಆಧಾರ್ ಪರಿಗಣಿಸುವುದರಿಂದಾಗಿ, ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಹೊರಗುಳಿದಿರುವ 65 ಲಕ್ಷಕ್ಕೂ ಹೆಚ್ಚು ಮತದಾರರು ಮತ್ತೆ ತಮ್ಮ ಹೆಸರುಗಳನ್ನು ಸೇರ್ಪಡೆಗೊಳಿಸಲು ಅನುಕೂಲ ಆಗುತ್ತದೆ. ದಾಖಲೆಯ ಅಧಿಕೃತತೆಯ ಬಗ್ಗೆ ಅನುಮಾನಗಳಿದ್ದರೆ, ಅದನ್ನು ಪರಿಹರಿಸಿಕೊಳ್ಳಲು 'ಇಸಿಐ' ಬಳಿ ಸಂಪನ್ಮೂಲಗಳಿವೆ.

ಬಿಹಾರದಲ್ಲಿನ ಮತಗಟ್ಟೆಗಳನ್ನು ತರ್ಕಬದ್ಧವಾಗಿ ಪುನರ್ ವ್ಯವಸ್ಥೆಗೊಳಿಸುವ 'ಇಸಿಐ' ನಿರ್ಧಾರ 'ಎಸ್‌ಐಆರ್' ಪ್ರಕ್ರಿಯೆಗೆ ಮತ್ತೊಂದು ಗೊಂದಲವನ್ನು ಸೇರ್ಪಡೆಗೊಳಿಸಿದೆ. ಚುನಾವಣಾ ಆಯೋಗ ಹೊಸತಾಗಿ 12,817 ಮತಗಟ್ಟೆಗಳನ್ನು ಸೇರ್ಪಡೆ ಮಾಡುವುದರೊಂದಿಗೆ, ಬಿಹಾರದಲ್ಲಿನ ಮತಗಟ್ಟೆಗಳ ಸಂಖ್ಯೆ 90,712ಕ್ಕೆ ಮುಟ್ಟಿದೆ. ಇದರ ಜೊತೆಗೆ ಪ್ರತಿ ಮತಗಟ್ಟೆಯಲ್ಲಿನ ಮತದಾರರ ಸಂಖ್ಯೆಯನ್ನು 1,500ರಿಂದ 1,200ಕ್ಕೆ ಇಳಿಸಲಾಗಿದೆ. ಚುನಾವಣೆ ಸಂದರ್ಭದಲ್ಲಿ ಮತಗಟ್ಟೆಯ ಮೇಲೆ ಹೆಚ್ಚಿನ ಒತ್ತಡ ತಗ್ಗಿಸುವ 'ಇಸಿಐ' ಕ್ರಮ ಸ್ವಾಗತಾರ್ಹ. ಆದರೆ, ಮತಗಟ್ಟೆಗಳ ಮರು ಹೊಂದಾಣಿಕೆಯೊಂದಿಗೆ ಬಿಎಲ್‌ಒಗಳನ್ನೂ ಸ್ಥಳಾಂತರಿಸಲಾಗಿದೆ. ಇದರಿಂದಾಗಿ, ಈಗಾಗಲೇ ದೂರು ಸಲ್ಲಿಸಿರುವ ಮತದಾರರು ಈಗ ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲು ಹೊಸ ಬಿಎಲ್‌ಒಗಳನ್ನು ಸಂಪರ್ಕಿಸಬೇಕಾಗುತ್ತದೆ. ಎಲ್ಲ ದಾಖಲೆಗಳೂ ಸಂಪೂರ್ಣವಾಗಿ ಇನ್ನೂ ಡಿಜಿಟಲೀಕರಣಗೊಂಡಿಲ್ಲ ಹಾಗೂ ಕೆಲವು ಬಿಎಲ್‌ಒಗಳು ತಮ್ಮ ನಿಕಟಪೂರ್ವ ಅಧಿಕಾರಿಗಳಿಂದ ಪಡೆದ ದಾಖಲೆಗಳ ಪರಿಶೀಲನೆಯನ್ನು ಇನ್ನಷ್ಟೇ ನಡೆಸಬೇಕಾಗಿದೆ. 'ಎಸ್‌ಐಆರ್' ಪ್ರಕ್ರಿಯೆ ಪೂರ್ಣಗೊಳ್ಳಲು ಎರಡು ವಾರಗಳಷ್ಟೇ ಉಳಿದಿರುವಾಗ, ಹೆಚ್ಚುವರಿ ಆಡಳಿತಾತ್ಮಕ ಒತ್ತಡವು ವಿಳಂಬ ಮತ್ತು ಗೊಂದಲಕ್ಕೆ ಕಾರಣವಾಗಲಿದೆ.

ಚುರುಮುರಿ

ನಾಗರಿಕ ಪ್ರಜ್ಞೆ

ಕಸ ಎಲ್ಲಿ ಹಾಕಬೇಕು ಎಂದು ಗೊತ್ತಿಲ್ಲದೆ ಎಲ್ಲೆಂದರಲ್ಲಿ ಕಸ ಎಸೆಯುವ ಜನಕ್ಕೆ, ಓಟು ಯಾರಿಗೆ ಹಾಕಬೇಕು ಎನ್ನುವುದು ಗೊತ್ತಿರುತ್ತದೆಯೆ?

ಕೆ.ಬಿ.ಎಸ್. ಗೌಡ
ರಾಜಕೀಯ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬರ ಎಂದು ಹೇಳಲಾಗುತ್ತಿತ್ತು. ಟೀಕಿಸುವವರಿಗೆ ಈಗ ಅರಿವಾಗಿದೆ. ಇಲ್ಲಿ ಕೆಲಸಗಳು ಉಳಿಯುತ್ತವೆ, ಟೀಕೆಗಳು ಸಾಯುತ್ತವೆ.

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 13-9-2000

• ದುಬಾರಿಯಾದ ಸ್ನಾತಕೋತ್ತರ ಮಾಹಿತಿ ತಂತ್ರಜ್ಞಾನ ಶಿಕ್ಷಣ

ಮಂಗಳೂರು, ಸೆಪ್ಟೆಂಬರ್ 12– ವಿಶ್ವವಿದ್ಯಾಲಯಗಳಲ್ಲಿ ಲಭ್ಯವಾಗುವ ಮಾಹಿತಿ ತಂತ್ರಜ್ಞಾನ ಕುರಿತ ಅಧ್ಯಯನ ಸಾಮಾನ್ಯ ಆದಾಯ ವರ್ಗಕ್ಕೆ ಎಟುಕದ ರೀತಿಯಲ್ಲಿ ಶುಲ್ಕ ನಿಗದಿಪಡಿಸಿ ಆದೇಶ ಹೊರಡಿಸುವ ಮೂಲಕ ಸ್ನಾತಕೋತ್ತರ ಶಿಕ್ಷಣ ಎಲ್ಲರಿಗೂ ಸಲ್ಲ ಎಂಬಂಥ ಸ್ಥಿತಿಯನ್ನು ರಾಜ್ಯ ಸರ್ಕಾರ ಸೃಷ್ಟಿಸಿದೆ.

ಮಂಗಳೂರು ವಿಶ್ವವಿದ್ಯಾಲಯದ ಎಂಬಿಎ ಮತ್ತು ಕಂಪ್ಯೂಟರ್ ಅನ್ವಯ ಕುರಿತ ಎಂಸಿಎ ಪದವಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ನಿಗದಿಪಡಿಸಿದ ಶುಲ್ಕ ಯಾವ ವೃತ್ತಿಶಿಕ್ಷಣ ಕೋರ್ಸ್‌ಗೂ ಕಡಿಮೆ ಇಲ್ಲದಷ್ಟು ದುಬಾರಿಯಾಗಿದೆ.

• ಕಪಿಲ್ ರಾಜೀನಾಮೆ

ನವದೆಹಲಿ, ಸೆಪ್ಟೆಂಬರ್ 12– ಕಪಿಲ್‌ದೇವ್ ಅವರು, ಭಾರತ ಕ್ರಿಕೆಟ್ ತಂಡದ ಕೋಚ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಚೆನ್ನೈನಲ್ಲಿರುವ ಭಾರತ ಸಂಭವನೀಯರ ತಂಡಕ್ಕೆ ತರಬೇತಿ ನೀಡಲು ತೆರಳಬೇಕೆಂದು ಬಿಸಿಸಿಐ ಅಧ್ಯಕ್ಷ ಎ.ಸಿ. ಮುತ್ತಯ್ಯ, ಕಪಿಲ್‌ದೇವ್‌ಗೆ ಸೂಚನೆ ನೀಡಿದ ಬೆನ್ನಲ್ಲಿಯೇ ಕಪಿಲ್ ತಮ್ಮ ರಾಜೀನಾಮೆ ಪತ್ರವನ್ನು ಮುತ್ತಯ್ಯ ಅವರಿಗೆ ಕಳುಹಿಸಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 13-9-1950

• 90 ಮಂದಿ ಬಂಧನ

ಕಲ್ಕತ್ತ, ಸೆಪ್ಟೆಂಬರ್ 12– ಮುಂಬಯಿಯಲ್ಲಿ ನಡೆಯುತ್ತಿರುವ ಹತ್ತಿ ಗಿರಣಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ ಕರೆ ನೀಡಿದ್ದ ಒಂದು ದಿನದ ಬಂದ್‌ನಲ್ಲಿ ಪಾಲ್ಗೊಂಡಿದ್ದ 90 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈ ಬಂದ್ ಕಲ್ಕತ್ತ ನಗರ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿನ ಜನಜೀವನದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಬಸ್‌ಗಳ ಸಂಚಾರ ಎಂದಿನಂತಿತ್ತು. ಕಾರ್ಖಾನೆಗಳ ಚಟುವಟಿಕೆಗೆ ಯಾವುದೇ ಅಡ್ಡಿಯಾಗಲಿಲ್ಲ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸಾಮಾನ್ಯವಾಗಿತ್ತು.

ಆದರೂ, ಕಲ್ಕತ್ತಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಎರಡು ರೈಲುಗಳ ಸಂಚಾರಕ್ಕೆ ಭಾಗಶಃ ಅಡ್ಡಿಯಾಯಿತು. ಹೌರಾ ಭಾಗದ ಕೆಲವು ಕಾರ್ಖಾನೆಗಳ ಚಟುವಟಿಕೆಗೆ ಅಡಚಣೆಯಾದ ಬಗ್ಗೆ ವರದಿಯಾಗಿದೆ.

• ವಿದ್ಯಾರ್ಥಿವೇತನ ಹೆಚ್ಚಳ

ನವದೆಹಲಿ, ಸೆಪ್ಟೆಂಬರ್ 12– ಪರಿಶಿಷ್ಟ ಜಾತಿ ಮತ್ತು ಪಂಗಡ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ಹೆಚ್ಚುವರಿ ಎರಡು ಲಕ್ಷ ರೂಪಾಯಿ ಅನುದಾನ ಮಂಜೂರು ಮಾಡಲು ಕೇಂದ್ರ ಶಿಕ್ಷಣ ಸಚಿವಾಲಯ ನಿರ್ಧರಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಆಯ್ಕೆ ಸಮಿತಿಯ ಶಿಫಾರಸು ಅನ್ವಯ ಈ ಹೆಚ್ಚುವರಿ ಅನುದಾನ ನೀಡಲು ತೀರ್ಮಾನಿಸಿದೆ.

ಪಾರಂಪರಿಕ ತಾಣಗಳ ಒತ್ತೆ ಬೇಡ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

> ನಾಡಿನ ಪರಂಪರೆಯ ಚಿಹ್ನೆಗಳು ಎನಿಸಿರುವ ನಮ್ಮ ಕೌಟುಂಬಿಕ ಆಭರಣಗಳನ್ನು ಒತ್ತೆ ಇಡಬಾರದು. ಅವು ನಾವು ಮುಂದಿನ ಪೀಳಿಗೆಗೆ ಬಿಟ್ಟು ಹೋಗಬೇಕಾದ ಪವಿತ್ರ ಆಸ್ತಿಗಳು. ಅವುಗಳನ್ನು ರಿಯಲ್ ಎಸ್ಟೇಟ್ ಕಣ್ಣುಗಳಿಂದ ನೋಡಿದರೆ ನಗರದ ಅಂತರ್ಜಲದಂತಿರುವ ಸ್ಮೃತಿಗಳು ಅಳಿಸಿಹೋಗುತ್ತವೆ.

ಭಾರತವು ದುಬೈ ಮತ್ತು ಸಿಂಗಪುರದ ದಾರಿಯಲ್ಲಿ ನಡೆಯುತ್ತಿರುವುದನ್ನು ನೋಡಿ ಸಂಕಟವಾಗುತ್ತಿದೆ– ಎಂದು ಒಮ್ಮೆ ಉದ್ಗರಿಸಿದ್ದರು ನೊಬೆಲ್ ಪ್ರಶಸ್ತಿ ಪುರಸ್ಕೃತ ಭಾರತೀಯ ಮೂಲದ ಸಾಹಿತಿ ವಿ.ಎಸ್. ನೈಪಾಲ್. ಒಂದು ದೊಡ್ಡ ದೇಶ ಎಂದರೆ ಫಳಫಳ ಹೊಳೆಯುವ ಮಾಲ್‌ಗಳು, ಗಾಜಿನ ದೊಡ್ಡ ದೊಡ್ಡ ಫಲಕಗಳಿಂದ ಸಿಂಗಾರಗೊಂಡ ಗಗನಚುಂಬಿ ಕಟ್ಟಡಗಳು ಮತ್ತು ಶಾವಿಗೆಯಂತೆ ನಗರವನ್ನು ಸುತ್ತುವರೆದಿರುವ ಫ್ಲೈಓವರ್‌ಗಳು ಇವಿಷ್ಟೇ ಅಲ್ಲ.

ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳು; ಐತಿಹಾಸಿಕ ಕಟ್ಟಡಗಳಾದ ಹೈಕೋರ್ಟ್, ವಿಧಾನ ಸೌಧ, ರಾಜಭವನ, ಬಾಲಬ್ರೂಯಿ ಅತಿಥಿಗೃಹ, ಬೆಂಗಳೂರು ಅರಮನೆ, ಟಿಪ್ಪೂ ಸುಲ್ತಾನನ ಬೇಸಿಗೆ ಅರಮನೆ, ಮೆಯೊ ಹಾಲ್, ಸೇಂಟ್ ಮಾರ್ಕ್ಸ್ ಚರ್ಚ್, ಬಸವನಗುಡಿ; ಕಲಾಸಂಸ್ಕೃತಿಯನ್ನು ಎತ್ತಿಹಿಡಿಯುತ್ತಿರುವ ಚಿತ್ರಕಲಾ ಪರಿಷತ್, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್; ರವೀಂದ್ರ ಕಲಾಕ್ಷೇತ್ರ, ಟೌನ್ ಹಾಲ್; ದಿವಾನ್ ಶೇಷಾದ್ರಿ ಅಯ್ಯರ್ ಸಾರ್ವಜನಿಕ ಗ್ರಂಥಾಲಯದ ಕಟ್ಟಡ; ಇವುಗಳ ಜೊತೆಗೆ ಸಾರ್ವಜನಿಕವೂ ಪಾರಂಪರಿಕ ಹೆಗ್ಗುರುತುಗಳೂ ಎನಿಸಿರುವ ಕೆ.ಆರ್. ಮಾರ್ಕೆಟ್ ಮತ್ತು ರಸೆಲ್ ಮಾರ್ಕೆಟ್; ಬೆಂಗಳೂರು ಕ್ಲಬ್, ಚಿನ್ನಸ್ವಾಮಿ ಸ್ಟೇಡಿಯಂ, ರೇಸ್ ಕೋರ್ಸ್, ಬೆಂಗಳೂರು ಗಾಲ್ಫ್ ಕ್ಲಬ್, ಜಕ್ಕೂರು ಫ್ಲೇಯಿಂಗ್ ಸ್ಕೂಲ್– ಹೀಗೆ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆಯೆನ್ನಿ. ಈ ತಾಣಗಳ ಇತಿಹಾಸ ರೋಚಕವೂ ಬೋಧಪ್ರದವೂ ಆದುದು. ನಗರವನ್ನು ನಿರ್ಮಿಸುವಲ್ಲಿ ಸಾಂಪ್ರದಾಯಿಕತೆಯನ್ನೂ ವೈಶ್ವಿಕತೆಯನ್ನೂ ಬೆಸುಗೆ ಮಾಡಿದ ಪೂರ್ವಜರ ದೂರದೃಷ್ಟಿಗೆ ಇವು ಸಾಕ್ಷ್ಯಗಳಾಗಿವೆ. ಮಾತ್ರವಲ್ಲ, ಇದು ಪರಂಪರೆಯನ್ನು ಉಳಿಸಿಕೊಂಡೇ ಆಧುನಿಕತೆಗೂ ತೆರೆದುಕೊಂಡ ಲಂಡನ್, ಪ್ಯಾರೀಸ್ ಮತ್ತು ರೋಮ್‌ಗಳಂಥ ನಗರಗಳ ಪಂಕ್ತಿಯಲ್ಲಿ ನಮ್ಮ ನಗರವೂ ನಿಲ್ಲುವಂತೆ ಮಾಡಿದೆ.

1876ರ ಜೂನ್ 24ರಂದು 'ಬಿಜಿಸಿ' ಸ್ಥಾಪನೆಯಾಯಿತು. ಬ್ರಿಟಿಷ್ ಸೈನಿಕರ ಗುಂಪೊಂದು ಆರಂಭಿಸಿದ ಈ ಕ್ಲಬ್, ಈಗಲೂ ಕ್ರಿಯಾಶೀಲವಾಗಿರುವ ಅತ್ಯಂತ ಹಳೆಯ ಕ್ಲಬ್. ದಿವಾನ್ ಶೇಷಾದ್ರಿ ಅಯ್ಯರ್ ಆದೇಶದಂತೆ 1885ರಲ್ಲಿ ಈ ಜಮೀನನ್ನು ಗಾಲ್ಫ್‌ನ ಉದ್ದೇಶಕ್ಕೆಂದು ಉಚಿತವಾಗಿ ನೀಡಲಾಯಿತು; ಅಲ್ಲಿ ಇತರ ಯಾವುದೇ ವಿಧದ ನಿರ್ಮಾಣಕ್ಕೂ ಚಟುವಟಿಕೆಗೂ ನಿಷೇಧವನ್ನೂ ಹೇರಲಾಯಿತು. ಹಸುರಿನಿಂದ ಆವೃತವಾಗಿರುವ 60 ಎಕರೆಗಳ ಈ ಮನಮೋಹಕ ಸ್ಥಳದಲ್ಲಿ ಆರಂಭದಲ್ಲಿ 12 'ಹೋಲ್'(ಕುಳಿ)ಗಳಿದ್ದವು; ಅನಂತರದಲ್ಲಿ 18 ಹೋಲ್‌ಗಳಿಗೆ ಪುನರ್ ವಿನ್ಯಾಸ ಮಾಡಲಾಯಿತು. ಈ ತಾಣ ದಿಟವಾಗಿಯೂ ನಗರದ ಹೃದಯಭಾಗದಲ್ಲಿರುವ ಪಚ್ಚೆಯ ರತ್ನವೇ ಹೌದು.

ಕಳೆದ ಎರಡು ದಶಕಗಳಲ್ಲಿ ಬೆಂಗಳೂರಿನಲ್ಲಿ ಭೂಮಿಯ ಬೆಲೆ ಗಗನಕ್ಕೇರಿದೆ. ಮಾಹಿತಿ ತಂತ್ರಜ್ಞಾನದ ಅಲೆ ವಿದೇಶೀ ಕಂಪನಿಗಳ ಪ್ರವಾಹ ಇಲ್ಲಿ ಉದ್ಯೋಗಗಳನ್ನು ಸೃಷ್ಟಿಸಿತು. ಗ್ರಾಮೀಣ ಕರ್ನಾಟಕದಿಂದಲೂ, ದೇಶದ ಹಿಂದುಳಿದ ದೂರದ ಪ್ರದೇಶಗಳಿಂದಲೂ ಉದ್ಯೋಗಗಳನ್ನು ಅರಸುತ್ತ ಬರುತ್ತಿರುವ ವಲಸಿಗರಿಂದಲೂ ನಗರದ ಒತ್ತಡ ಹೆಚ್ಚಿದೆ. ಸಹಜವಾಗಿ ಇದು ನಗರದ ಭೌಗೋಳಿಕ ದೃಶ್ಯವನ್ನೇ ಬದಲಾಯಿಸಿದೆ. ಪ್ರತಿಯೊಬ್ಬರೂ ಬೆಂಗಳೂರಿನ ಭೂಮಿಯನ್ನು ರಿಯಲ್ ಎಸ್ಟೇಟ್ ಏಜೆಂಟರ್‌ಗಳ ಮತ್ತು ಡೆವಲಪರ್‌ಗಳ ದುರಾಸೆಯ ಕಣ್ಣುಗಳಿಂದ ನೋಡುವಂತೆ ಮಾಡಿದೆ. ರಿಯಲ್ ಎಸ್ಟೇಟ್‌ನ ದಂಧೆಗಳು ನಗರದ ಕಲ್ಪನೆಯನ್ನೇ ವಿಕೃತಗೊಳಿಸುತ್ತಿವೆ.

1800ರಲ್ಲಿ ಪ್ರಾರಂಭವಾದ ಪ್ರತಿಷ್ಠಿತ ಬೆಂಗಳೂರು ರೇಸ್ ಕೋರ್ಸ್‌ನ ಗುತ್ತಿಗೆಯನ್ನು ರದ್ದುಗೊಳಿಸುವ ಯೋಚನೆಯೊಂದು ಹಿಂದೆ ನಡೆದಿತ್ತು. 1951ರಲ್ಲಿ ಅಂದಿನ ಮುಖ್ಯಮಂತ್ರಿ ಚಂಗಲರಾಯ ರೆಡ್ಡಿ ಅವರ ಸರ್ಕಾರ 85 ಎಕರೆಗಳಷ್ಟು ಜಮೀನನ್ನು ರೇಸ್ ಕೋರ್ಸ್‌ಗೆ ನೀಡಿತ್ತು. ಈ ಜಾಗವನ್ನು ಮಂತ್ರಿಗಳ ವಸತಿ ಸಮುಚ್ಚಯದ ನೆಪದಲ್ಲಿ ಸ್ಥಳಾಂತರಿಸಿ, ರಿಯಲ್ ಎಸ್ಟೇಟ್ ವ್ಯವಹಾರವನ್ನು ನಡೆಸುವುದು ಈ ಯೋಚನೆಯ ಹಿಂದಿನ ಹುನ್ನಾರವಾಗಿತ್ತು. ಸುದೈವದಿಂದ ಈ ಹುನ್ನಾರ ಫಲಿಸಲಿಲ್ಲ. ಹೀಗೆಯೇ, 'ಬೆಂಗಳೂರು ಗಾಲ್ಫ್ ಕ್ಲಬ್' ಅನ್ನು ಸ್ಥಳಾಂತರಿಸಿ, ಅಲ್ಲಿ ಇನ್ನೊಂದು ಯಾವುದೋ ಮೂರ್ಖತನದ ಯೋಜನೆಯನ್ನು ಆರಂಭಿಸುವ ದುರುದ್ದೇಶಪೂರಿತ ಪ್ರಯತ್ನಗಳು ನಡೆದವು.

ಈಗ ರಿಯಲ್ ಎಸ್ಟೇಟ್‌ನ ವಕ್ರದೃಷ್ಟಿ ಇನ್ನೊಂದು ಸ್ಥಳದ ಕಡೆಗೆ ತಿರುಗಿದೆ. ಜಕ್ಕೂರಿನಲ್ಲಿರುವ 'ಸರ್ಕಾರಿ ವೈಮಾನಿಕ ತರಬೇತಿ ಶಾಲೆ' (ಜಿಎಫ್‌ಟಿಎಸ್) ನಮ್ಮ ದೇಶದ ವಾಯುಯಾನ ತರಬೇತಿ ಕ್ಷೇತ್ರದಲ್ಲಿ ಶ್ರೀಮಂತ ಪರಂಪರೆಯನ್ನು ಹೊಂದಿರುವ ಸಂಸ್ಥೆ. ಸುಮಾರು 200 ಎಕರೆಯಷ್ಟು ಭೂಭಾಗವನ್ನು ಹೊಂದಿರುವ ಈ ಸಂಸ್ಥೆಯ ಮೂಲೋದ್ದೇಶವನ್ನು ಮೂಲೋತ್ಪಾಟನೆ ಮಾಡಿ, ಇದನ್ನು ಕೆಲವರು 'ಗಣ್ಯ'ರಿಗೆ ಸಂಪತ್ತಿನ ಮೂಲವನ್ನಾಗಿಸುವ ಆಕರ್ಷಕ ಯೋಜನೆಯೊಂದು ಸಿದ್ಧವಾಗುತ್ತಿದೆ. ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ 1948ರಲ್ಲಿ ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಪೈಲಟ್‌ಗಳಿಗೆ ಮತ್ತು ಇತರ ವೈಮಾನಿಕ ಚಟುವಟಿಕೆಗಳಿಗೆ ತರಬೇತಿ ನೀಡುವ 'ಫ್ಲೈಯಿಂಗ್ ಸ್ಕೂಲ್' ಅನ್ನು ಪ್ರಾರಂಭಿಸುವುದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ಹಸ್ತಾಂತರಿಸಿದರು. ಭಾರತೀಯ ವಾಯುಪಡೆಯ ಅನೇಕ ಪೈಲಟ್‌ಗಳು ಮತ್ತು ವಾಣಿಜ್ಯ ಪೈಲಟ್‌ಗಳು ಇಲ್ಲಿಂದಲೇ ಪದವಿಗಳನ್ನು ಪಡೆದಿದ್ದಾರೆ. ಮೊದಲ ಮಹಿಳಾ ಪೈಲಟ್ ಉಷಾ ಸುಂದರಂ ಇದೇ ಪವಿತ್ರ ಮೈದಾನದಿಂದಲೇ ವಾಣಿಜ್ಯ ಹಾರಾಟದ ಪರವಾನಗಿಯನ್ನು ಪಡೆದದ್ದು.

ಮಾತ್ರವಲ್ಲ, ಇದು ಭಾರತದ ಮೊದಲ ಖಾಸಗಿ ವಲಯದ ಹೆಲಿಕಾಪ್ಟರ್ ಚಾರ್ಟರ್ ಕಂಪನಿಗಳಿಗೂ ಜನ್ಮ ನೀಡಿದೆ. ಅಪಘಾತ ಸ್ಥಳಗಳಿಂದ ರೋಗಿಗಳನ್ನು ಸ್ಥಳಾಂತರಿಸಿ, ಅವರ ಜೀವಗಳನ್ನು ಉಳಿಸುವ ಕಾರ್ಯಾಚರಣೆಯಲ್ಲೂ ಇಲ್ಲಿಂದ ಹಾರಾಡುವ 'ಏರ್ ಆಂಬುಲೆನ್ಸ್'ಗಳು ನೆರವಾಗುತ್ತಿವೆ. ಪರಿಸರ ಸಂರಕ್ಷಣೆಗೆ ಪೂರಕವಾಗಿರುವ 'eVTOL' (ಎಲೆಕ್ಟ್ರಿಕ್ ವರ್ಟಿಕಲ್ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ಏರ್‌ಕ್ರಾಫ್ಟ್) ತಂತ್ರಜ್ಞಾನದ ಉದಯವಾಗಿದೆ. ಹೀಗಾಗಿ ನಗರದ ಹೃದಯಭಾಗದಲ್ಲಿರುವ ಜಕ್ಕೂರ್‌ನ ಫ್ಲೈಯಿಂಗ್ ಸ್ಕೂಲ್ ಅನ್ನು ಮುಚ್ಚಬೇಕಿಲ್ಲ; ಜೀವಗಳನ್ನು ಉಳಿಸಲು ದೂರದ ಸ್ಥಳ ಅಥವಾ ಆಸ್ಪತ್ರೆಗಳಿಗೆ ಸಂತ್ರಸ್ತರನ್ನು ತಲಪಿಸಲು ಇದನ್ನು 'ವರ್ಟಿಪೋರ್ಟ್' ಆಗಿ ಪರಿವರ್ತಿಸಬಹುದಾಗಿದೆ.

ಕೆಲವು ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಫ್ಲೈಯಿಂಗ್ ಸ್ಕೂಲ್'ನ ಹಲವು ವಿವರಗಳನ್ನು ಚರ್ಚಿಸಲು 'ಜಿಎಫ್‌ಟಿಎಸ್' ಸಭೆ ನಡೆಸಿದ್ದರು. ಆ ಸಭೆಯಲ್ಲಿ ಹಿರಿಯ ಅಧಿಕಾರಿಗಳು ಮತ್ತು ಕೆಲವರು ಸಚಿವರು ಭಾಗವಹಿಸಿದ್ದರು. ರನ್‌ವೇ ಪೂರ್ವಕ್ಕೆ ಸೇರಿರುವ, 'ಫನಲ್'ಗೆ ಹೊಂದಿಕೊಂಡಂತಿರುವ ಸುಮಾರು 3–4 ಎಕರೆಗಳನ್ನು ಮೆಟ್ರೋ ಫ್ಲೈಓವರ್‌ಗೆ ಬಳಸಿಕೊಳ್ಳುವುದರ ಬಗ್ಗೆ ಸರ್ಕಾರ ಯೋಚಿಸುತ್ತಿದೆ ಎಂದು ಘೋಷಿಸಿದ್ದಾರೆ. ರನ್‌ವೇಯ ಉದ್ದವನ್ನು ಕಡಿಮೆ ಮಾಡುವುದರಿಂದ, ದೊಡ್ಡ ಗಾತ್ರದ ತರಬೇತಿ ಮತ್ತು ಪ್ರಯಾಣಿಕ ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್‌ಗಳು ಸಾಧ್ಯವಾಗದು. ಜಕ್ಕೂರು ಫ್ಲೈಯಿಂಗ್ ಸ್ಕೂಲ್ ಹಲವು ವರ್ಷಗಳಿಂದ ನಿಷ್ಕ್ರಿಯವಾಗಿದೆ; ಅದರ ಚಟುವಟಿಕೆಗಳು ರೋಗಪೀಡಿತ ಸ್ಥಿತಿಯಲ್ಲಿವೆ. ಮಾತ್ರವಲ್ಲ, ಆ ಜಾಗದ ರಿಯಲ್ ಎಸ್ಟೇಟ್ ಮೌಲ್ಯವಾದ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಿಗೆ ತಕ್ಕುದಾದ ಆದಾಯವನ್ನೂ ಅದು ಗಳಿಸುತ್ತಿಲ್ಲ ಎಂದು ಅವರಲ್ಲಿ ಕೆಲವರು ಹೇಳಿದರು. ಹೀಗಾಗಿ ಇದನ್ನು ಗಾಲ್ಫ್ ಕೋರ್ಸ್‌ನಂತಹ ಹೆಚ್ಚು ಲಾಭದಾಯಕ ಯೋಜನೆಯಾಗಿ ಪರಿವರ್ತಿಸಬೇಕು ಎಂದು ಪ್ರತಿಪಾದಿಸಲಾಯಿತು. ಇದರ ಹಿಂದಿರುವ ಉದ್ದೇಶಗಳು ಸ್ಪಷ್ಟವಾಗಿವೆ.

ಸಭೆಯಲ್ಲಿ ಭಾಗವಹಿಸಿದ್ದ ಈ ಗುಂಪು ಕಳೆದ ಮೂರು ದಶಕಗಳಲ್ಲಿನ 'ಜಿಎಫ್‌ಟಿಎಸ್'ನ ದುರಾಡಳಿತವನ್ನು ಪರಿಶೀಲಿಸುವಂತೆ ಮುಖ್ಯಮಂತ್ರಿ ಅವರನ್ನು ವಿನಂತಿಸಬೇಕಿತ್ತು. ಆಗ ಹಲವು ವರ್ಷಗಳಿಂದ ಅಲ್ಲಿ ಮುಖ್ಯ ಪೈಲಟ್ ಇಲ್ಲದಿರುವುದು, ತರಬೇತಿ ಪೈಲಟ್‌ಗಳಾಗಿ ಸೇರಲು ಯಾರೂ ಇಚ್ಛಿಸದಿರುವುದು, ಹಿಂದಿನ ಮುಖ್ಯ ಪೈಲಟ್ ಮತ್ತು ಇತರ ಸಿಬ್ಬಂದಿ ಮಧ್ಯೆ ನಡೆದಿರುವ ಕಾನೂನು ಸಮರ, ಮಹತ್ವಾಕಾಂಕ್ಷೆಯ ಪೈಲಟ್‌ಗಳ ನೇಮಕಾತಿಯಲ್ಲಿನ ಕುಸಿತ, ಇವೆಲ್ಲವುಗಳಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟ– ಇವುಗಳು ಆಗ ಗಮನಕ್ಕೆ ಬರುತ್ತಿದ್ದವು.

ಅಷ್ಟು ಮಾತ್ರವಲ್ಲ, ಈ ಫ್ಲೈಯಿಂಗ್ ಸ್ಕೂಲನ್ನು ಆದಾಯದಾಯಕವಾಗಿ ಹೇಗೆ ಪುನರುಜ್ಜೀವಿತಗೊಳಿಸಬಹುದು ಮತ್ತು ಖಾಸಗಿ ವಲಯಕ್ಕೆ ಇದರ ಯಾವ ಅಂಶಗಳನ್ನು ಹೊರಗುತ್ತಿಗೆಗೆ ನೀಡಬಹುದು ಎಂಬುದರ ಅಧ್ಯಯನಕ್ಕಾಗಿಯೂ ಅವರು ಒತ್ತಾಯಿಸಬೇಕಾಗಿತ್ತು. ಜಗತ್ತಿನ ವೈಮಾನಿಕ ವ್ಯಾಕರಣವನ್ನೇ ಬದಲಾಯಿಸುತ್ತಿರುವ ಡ್ರೋನ್‌ಗಳೂ ಸೇರಿದಂತೆ, ವಿಮಾನದ ಬಿಡಿ ಭಾಗಗಳನ್ನು ತಯಾರಿಸಲು ಈ ಸ್ಥಳವನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನೂ ಪರಿಶೀಲಿಸಬಹುದು. ಆದರೆ ಈ ಯೋಜನೆಯು ಭೂಮಿಯನ್ನು ನುಂಗುವ ತಿಮಿಂಗಿಲಗಳಿಗೆ ಭೋಜನ ಒದಗಿಸುವ ಕಲಾಪವಾಗಬಾರದು; ಇದು ಸಣ್ಣ ಪ್ರಮಾಣದ ನೂರಾರು ಸ್ಟಾರ್ಟ್‌ಅಪ್‌ಗಳಿಗೆ ಅವಕಾಶವನ್ನು ಕಲ್ಪಿಸುವಂತಾಗಬೇಕು.

ಬೆಂಗಳೂರಿನಲ್ಲಿ ಈಗಾಗಲೇ ಆರೇಳು ಗಾಲ್ಫ್ ಕೋರ್ಸ್‌ಗಳಿವೆ. ಯಾರಾದರೂ ಇನ್ನೂ ಬೇಕೆಂದು ಬಯಸಿದರೆ ಅದಕ್ಕೂ ಸ್ವಾಗತವೇ. ಅದಕ್ಕಾಗಿ ಬೇಕಾದರೆ ನಿಧಿಯನ್ನೂ ಸಂಗ್ರಹಿಸಿ. ಹಾಲಿವುಡ್‌ನಂತೆ ಕಬ್ಬನ್ ಪಾರ್ಕ್ ಅಥವಾ ಲಾಲ್ ಬಾಗ್‌ಗಳನ್ನು ಡಿಸ್ನಿ ಲ್ಯಾಂಡ್ ಅಥವಾ ಯೂನಿವರ್ಸಲ್ ಸ್ಟುಡಿಯೊಗಳಿಗೆ ಮಾರಾಟ ಮಾಡಿದರೆ ನಮಗೆ ರಾಶಿ ರಾಶಿ ದುಡ್ಡು ಖಂಡಿತವಾಗಿಯೂ ಸಿಗುತ್ತದೆ. ಆದರೆ, ಹಾಗೆ ಮಾಡಲು ನಮಗೆ ಯಾವುದೇ ಹಕ್ಕಿಲ್ಲ.

ವಾಚಕರ ವಾಣಿ

ಧರ್ಮದ ವಿಷಬೀಜ ಬಿತ್ತಬೇಡಿ

ರವೀಂದ್ರನಾಥ್ ಟ್ಯಾಗೋರ್ ಅವರು, 'ಭಾರತವು ಪವಿತ್ರ ಸ್ಥಳ (ಭರತ ತೀರ್ಥ). ಮಾನವೀಯತೆಯ ಮಹಾಸಾಗರ, ಅಮಾನವೀಯ ದಾಳಿಕೋರರಿಂದ ತಾಯ್ನಾಡನ್ನು ಕಳೆದುಕೊಂಡವರಿಗೆ ಆಶ್ರಯ ನೀಡಿರುವ ತೊಟ್ಟಿಲು' ಎಂದು ಬಣ್ಣಿಸಿದ್ದಾರೆ. ಇಂತಹ ದೇಶದಲ್ಲಿ ಇತ್ತೀಚೆಗೆ ರಾಜಕೀಯ ಪಕ್ಷಗಳು ಮತ್ತು ನಾಯಕರು, ತಮ್ಮ ದುರುದ್ದೇಶಗಳ ಈಡೇರಿಕೆಗಾಗಿ ಜನರ ನಡುವೆ ಧರ್ಮ ಮತ್ತು ಜಾತಿಯ ವಿಷಬೀಜ ಬಿತ್ತಿ, ಶಾಂತಿಯ ಭಾರತವನ್ನು ಅಶಾಂತಿಯ ಕೂಪವನ್ನಾಗಿಸುತ್ತಿದ್ದಾರೆ.

ರಾಜಕೀಯ ಪ್ರೇರಿತ ಕೋಮುವಾದವನ್ನು ಇನ್ನು ಮುಂದೆ 'ರಾಜಕೀಯ ಪ್ರೇರಿತ ಭಯೋತ್ಪಾದನೆ' ಎಂದು ಕರೆಯುವುದು ಸೂಕ್ತ. ಶಾಂತಿ, ಸಹಬಾಳ್ವೆಯಿಂದ ಕೂಡಿದ ಮಂಡ್ಯ ಜಿಲ್ಲೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಕೋಮುಸಂಘರ್ಷದ ತಾಣವಾಗಿ ಬದಲಾಯಿಸಿರುವುದೇ ಇದಕ್ಕೆ ನಿದರ್ಶನ.

ಬಸವರಾಜ ಕರೆಕಲ್, ಮಾವಿನಇಟಗಿ

ಎ.ಐ ಬಳಕೆ ಮತ್ತು ಸಹಜ ಬುದ್ಧಿಮಂಕು

ಮೈಸೂರು ಸೇರಿದಂತೆ ರಾಜ್ಯದ ಹಲವು ನಗರಗಳ ವೃತ್ತಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸಿ.ಸಿ. ಟಿ.ವಿ. ಕ್ಯಾಮೆರಾಗಳಿವೆ. ದೀಪದ ಕೆಳಗೆ ಕತ್ತಲು ಎಂಬಂತೆ ಈ ಕ್ಯಾಮೆರಾಗಳ ಬುಡದಲ್ಲಿಯೇ ಇರುವ ಸಿಗ್ನಲ್ ಲೈಟ್‌ಗಳು ಕೆಟ್ಟುಹೋಗಿರುತ್ತವೆ. ನಂಬರ್ ಪ್ಲೇಟ್ ಇಲ್ಲದ ವಾಹನಗಳು ಸಂಚರಿಸುತ್ತಿರುತ್ತವೆ. ಪಾದಚಾರಿ ಮಾರ್ಗಗಳು ಒತ್ತುವರಿಯಾಗಿರುತ್ತವೆ. ಈ ಎಲ್ಲಾ ಅನ್ಯಾಯ/ ಅಪರಾಧಗಳು ಕೃತಕ ಬುದ್ಧಿಮತ್ತೆಯ ಕ್ಯಾಮೆರಾಗಳ ಕಣ್ಣಿಗೆ ಕಾಣುವುದೇ ಇಲ್ಲ. ಕೇವಲ ಹೆಲ್ಮೆಟ್ ಧರಿಸದ ವಾಹನ ಸವಾರರು ಹಾಗೂ ಸೀಟ್ ಬೆಲ್ಟ್ ಧರಿಸದ ಸವಾರರ ಫೋಟೊ ಕ್ಲಿಕ್ಕಿಸಲು ಮಾತ್ರ ಎ.ಐ ಕ್ಯಾಮೆರಾಗಳನ್ನು ರೂಪಿಸಲಾಗಿದೆಯೇ? ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಮೊರೆಹೋದ ಪೊಲೀಸರ ಸಹಜ ಬುದ್ಧಿಮತ್ತೆ ಮಂಕಾಗುತ್ತದೆ ಎಂಬುದಕ್ಕೆ ಇದೇ ಸಾಕ್ಷಿ.

ಪಿ.ಜೆ. ರಾಘವೇಂದ್ರ, ಮೈಸೂರು

> **ವ್ಯತ್ಯಾಸ**
>
> **ರಾವಣ** ಆಳಿದ ನೆಲದಲ್ಲಿ
> ಆರ್ಥಿಕ ಕುಸಿತದ ವಿರುದ್ಧ,
> ಸೀತೆಯ ತವರುನಾಡಿನಲ್ಲಿ
> ಭ್ರಷ್ಟಾಚಾರದ ವಿರುದ್ಧ
> ಜನರ ಪ್ರತಿಭಟನೆ.
> ರಾಮನ ಜನ್ಮಭೂಮಿಯಲ್ಲಿ
> ಧರ್ಮಗಳ ಹೆಸರಿನಲ್ಲಿ
> ಘರ್ಷಣೆ!
>
> **ಎಚ್. ಆನಂದರಾಮ ಶಾಸ್ತ್ರೀ**
> ಬೆಂಗಳೂರು

ಬೇರೆ ಕ್ಷೇತ್ರದ ಸಾಧಕರು ಕಾಣಲಿಲ್ಲವೇ?

ಚಲನಚಿತ್ರ ಕಲಾವಿದರಾದ ವಿಷ್ಣುವರ್ಧನ್ ಮತ್ತು ಬಿ. ಸರೋಜಾ ದೇವಿ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿರುವುದು ಸರಿಯಷ್ಟೇ. ಆದರೆ, ಈ ಪ್ರಶಸ್ತಿ ಕೇವಲ ಸಿನಿಮಾ ಕಲಾವಿದರಿಗೆ ಮಾತ್ರ ಸೀಮಿತವೇ. ಇತರ ಕ್ಷೇತ್ರಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದವರು ರಾಜ್ಯ ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಎಂ.ಎಸ್. ರಘುನಾಥ್, ಬೆಂಗಳೂರು

ರಾಜಕಾರಣಿಗಳಿಗೂ ನಿವೃತ್ತಿ ಬೇಕು

ಸರ್ಕಾರಿ ನೌಕರರಿಗೆ ನಿವೃತ್ತಿಯ ವಯಸ್ಸನ್ನು ಅರವತ್ತು ವರ್ಷಕ್ಕೆ ನಿಗದಿಪಡಿಸಲಾಗಿದೆ. ರಾಜಕಾರಣಿಗಳಿಗೂ ನಿವೃತ್ತಿ ವಯಸ್ಸನ್ನು ಅರವತ್ತು ವರ್ಷಕ್ಕೆ ಮಾಡಿದರೆ ರಾಜಕಾರಣ ಮಾಡುವುದನ್ನು ಬಿಡುತ್ತಾರೆ. ಇಲ್ಲದಿದ್ದರೆ ಸಾಯುವ ತನಕ ಅವರೇ ಜನಪ್ರತಿನಿಧಿಗಳಾಗಲು ಚುನಾವಣೆಗೆ ಸ್ಪರ್ಧಿಸುತ್ತಾರೆ. ಯುವ ಸಮುದಾಯಕ್ಕೆ ಅವಕಾಶ ಇಲ್ಲದಂತಾಗುತ್ತದೆ. ಒಂದು ಬಾರಿ ಶಾಸಕರಾದವರು ಮತ್ತೆ ಶಾಸಕ ಸ್ಥಾನಕ್ಕೆ ಸ್ಪರ್ಧಿಸಬಾರದು. ಅರವತ್ತು ವರ್ಷ ತುಂಬಿದವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಕಾನೂನು ರೂಪಿಸಬೇಕಿದೆ.

ಶ್ರೀನಿವಾಸ ರಾಂಪುರ, ಚನ್ನಪಟ್ಟಣ

'ಅತಿಥಿ'ಗಳ ಹಗ್ಗದ ಮೇಲಿನ ನಡಿಗೆ

ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರ ಪಾಲಿಗೆ ಈ ವರ್ಷವೂ ಮತ್ತದೇ ಆತಂಕ, ಬೇಸರ ತಂದಿದೆ. ಪ್ರತಿವರ್ಷವೂ ಹಗ್ಗದ ಮೇಲೆ ನಡೆಯುತ್ತಲೇ ಇದ್ದಾರೆ. ಆಯಾ ಕಾಲಕ್ಕೆ ಸಂದ ವಿದ್ಯಾರ್ಹತೆ ಪಡೆದೇ ಉಪನ್ಯಾಸಕರಾಗಿ ಕನಿಷ್ಠ ವೇತನಕ್ಕೆ ದುಡಿಯುತ್ತಾ ಬಂದಿದ್ದಾರೆ. ಅಲ್ಪ ವೇತನವನ್ನು ಹೆಚ್ಚಿಸಿಕೊಳ್ಳಲು ತಿಂಗಳಾನುಗಟ್ಟಲೆ ದುಡ್ಡು ಕಳೆದುಕೊಂಡು, ಸರ್ಕಾರದ ಗಮನ ಸೆಳೆಯಲು ಶಾಂತಿಯುತ ಪ್ರತಿಭಟನೆ ನಡೆಸಿದ್ದಾರೆ.

ಈಗ ಯುಜಿಸಿ ನಿಯಮಾವಳಿಯ ನೆಪವೊಡ್ಡಿ ಮನೆಯಲ್ಲಿ ಕೂರಿಸಲಾಗಿದೆ. ಅತ್ತ ಕಾಲೇಜುಗಳಿಗೆ ಬರುವ ಬಡ ವಿದ್ಯಾರ್ಥಿಗಳಿಗೆ ಪಾಠವಿಲ್ಲ. ಮುಕ್ಕಾಲು ಪಾಲು ಇರುವ ಅತಿಥಿ ಉಪನ್ಯಾಸಕರು ಇಲ್ಲದೆ ಕಾಯಂ ಉಪನ್ಯಾಸಕರು ಪಾಠಗಳನ್ನು ತೂಗಿಸಿಕೊಂಡು ಹೋಗಲಾಗದೆ ಒದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಿರಿಯ ಅತಿಥಿ ಉಪನ್ಯಾಸಕರಿಗೆ ಅನ್ಯಾಯ ಆಗಲು ರಾಜ್ಯ ಸರ್ಕಾರ ಬಿಡಬಾರದು. ವೇತನ ಹೆಚ್ಚಳದ ಜೊತೆಗೆ ಅವರನ್ನೇ ಮರು ಆಯ್ಕೆ ಮಾಡಲು ಒತ್ತು ನೀಡಬೇಕು.

ವೃಂದಾ ಹೆಗ್ಡೆ, ಬೆಂಗಳೂರು

ಮೌಖಿಕ ಸೂಚನೆಗೆ ಮನ್ನಣೆ ಇದೆ

ಕನ್ನಡ ಸಾಹಿತ್ಯ ಪರಿಷತ್ತಿನ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣವು ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಕಸಾಪ ಅಧ್ಯಕ್ಷರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ವೇಳೆ 'ಮೇಲ್ಮನವಿಗೆ ದಂಡ ಹಾಕಿಲ್ಲವಲ್ಲ ಅಂತಾ ಖುಷಿಪಡಿ' ಎಂದು ಹೈಕೋರ್ಟ್ ಮೌಖಿಕವಾಗಿ ಚಾಟಿ ಬೀಸಿದೆ.

'ಇದು ಲಿಖಿತ ಆದೇಶದಲ್ಲಿ ಇಲ್ಲ' ಎಂದು ಪರಿಷತ್‌ನ ಮಾಧ್ಯಮ ವಿಭಾಗದ ಸಂಚಾಲಕರು ಸ್ಪಷ್ಟೀಕರಣ ನೀಡಿದ್ದಾರೆ. ಈ ಸ್ಪಷ್ಟೀಕರಣವು ಬಾಲಿಶ. ಹೈಕೋರ್ಟ್ ಮೌಖಿಕವಾಗಿ ಹೇಳಿದ್ದನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಚುರುಮುರಿ

ಚೋರಿ ಚೋರಿ 2025

• ಆನಂದ

'**ಆಟಂ** ಬಾಂಬ್ ಹಾಕಿದ ರಾಹುಲ್‌ಜಿ ಹೈಡ್ರೋಜನ್ ಬಾಂಬ್ ಸಿಡಿಸ್ತೀನಿ ಅಂತಿದಾರೆ' ಎಂದಳು ಮಡದಿ.

'ಅದೇ ಚೋರಿ ಚೋರಿ ತಾನೆ?'

'ಕರೆಕ್ಟ್. ಮತಗಳ್ಳತನ. ಎಲ್ಲೆಡೆ ಮತಗಳ್ಳರು ಇದ್ದಾರೆ, ಪಿಕ್‌ಪಾಕೆಟರ್‌ಗಳ ತರಹ. ವೋಟ್‌ಗಳೆಲ್ಲ ಚೋರಿ ಆಗ್ತಿದೆ ಎಂದು ಕಳವಳಪಡುತ್ತಿದ್ದಾರೆ.'

'ಅನೇಕ ಕಡೆ ಪಿಕ್‌ಪಾಕೆಟರ್‌ಗಳ ಜತೆ ಪೊಲೀಸಿನವರು ಶಾಮೀಲಾಗಿರೋ ಹಾಗೆ ಇಲ್ಲಿ ಚುನಾವಣಾ ಆಯೋಗ ಅವರಿಗೆ ನೆರವು ನೀಡುತ್ತಿದೆ ಎಂಬುದು ರಾಗಾಜಿ ಅಳಲು. ಆದರೆ, ಬೇರೆ ಚೋರಿಗಳ ಬಗ್ಗೆ ಅವರೇಕೆ ಮಾತಾಡ್ತಿಲ್ಲ?'

'ಚೋರೀನೋ ಚೋರರೊ? ಏನದು?'

'ಬರೀ ವೋಟ್ ಮಾತ್ರ ಚೋರಿ ಆಗ್ತಿದೆಯೆ? ಗಾಳಿ, ನೀರು, ಭೂಮಿ, ರಸ್ತೆ, ಮರ...'

'ತಾಳಿ ತಾಳಿ. ಇವೆಲ್ಲಾ ಚೋರಿ ಆಗ್ತಿದೆಯಾ?'

'ಗಾಳಿ ಮತ್ತು ನೀರು ಮಲಿನಗೊಳ್ಳುತ್ತಿವೆ. ಅದಕ್ಕೆ ಕೈಗಾರಿಕೆಗಳು ಮತ್ತು ವಾಹನಗಳು ಕಾರಣವಾದ್ದರಿಂದ ಅವು ಶುದ್ಧ ಗಾಳಿ ಮತ್ತು ನೀರು ಚೋರಿ ಮಾಡ್ತಿವೆ...'

'ಕ್ಯಾ ಐಡಿಯಾ!'

'ಮತ್ತೆ ಭೂಮಿ. ರಿಯಲ್ ಎಸ್ಟೇಟಿಗರು ಸರ್ಕಾರಿ ಭೂಮೀನ ಚೋರಿ ಮಾಡಿಲ್ಲವೆ? ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಭೂಮಿ ಚೋರಿ ಆಗ್ತಿದೆ. ಒತ್ತರಿಸಿಕೊಂಡ ರಸ್ತೆ ಮತ್ತು ರಾಜಕಾಲುವೆಗಳ ಮೇಲೆ ಬಿಲ್ಡಿಂಗ್ ಕಟ್ಟಿಲ್ಲವೆ? ಅವರೂ ಚೋರರು ತಾನೆ? ಕೆರೆಗಳನ್ನೇ ಆಪೋಶನ ತೊಗೊಂಡು ಅಪಾರ್ಟ್‌ಮೆಂಟುಗಳನ್ನೇ ಕಟ್ಟಿದಾರೆ ಕೆರೆಗಳ್ಳರು'.

'ಮುಂದುವರಿಸಿ...'

'ಕಾವೇರಿ ಲೈನಿಗೆ ಅನಧಿಕೃತವಾಗಿ ಕನೆಕ್ಷನ್ ತೊಗೊಂಡು ನೀರು ಕದಿಯೋರು ನೀರ್ಗಳ್ಳರು. ಮರಗಳನ್ನು ಕಾಡಿನಿಂದ ಸಾಗಿಸೋರು ಮರಗಳ್ಳರು. ಕೆಟ್ಟದಾಗಿ ಸಂಗೀತ ಹಾಡಿ ನಮ್ಮ ನಿದ್ದೆ ಕೆಡಿಸೋರು ನಿದ್ರಾಗಳ್ಳರು... ಇವೆಲ್ಲಾ ಚೋರಿ ತಾನೆ?'

'ಚೋರರ ಮತ್ತು ಚೋರಿಗಳ ಭಾರಿ ಲಿಸ್ಟೇ ಮಾಡಿದೀರ? ಇದೂ ಚೋರೀನಾ?'

'ಹೌದು, ಎಲ್ಲೋ ಐಡಿಯಾ ಸಿಕ್ಕಿತು. ವಿಸ್ತರಿಸಿದೆ. ಭೂಗಳ್ಳರು ಆಸ್ತೀನ ದೊಡ್ಡದು ಮಾಡಿಕೊಂಡಂತೆ. ಹೇಗಿದೆ?'

'ಚೋರೀನೊ? ಐಡಿಯಾನೊ?'

ಸಂಗತ

ಜನಹಿತ ನಿರ್ಲಕ್ಷ್ಯ; ಸಮಸ್ಯೆ ಸೃಷ್ಟಿಯತ್ತ ಲಕ್ಷ್ಯ!

ಸಾಮಾಜಿಕ ಸಾಮರಸ್ಯಕ್ಕೆ ಪೂರಕವಾಗಿದ್ದ ಗಣೇಶೋತ್ಸವ ಮತೀಯ ಉನ್ಮಾದಕ್ಕೆ ಬಳಕೆಯಾಗುತ್ತಿದೆ. ರಾಜಕಾರಣಿಗಳು ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ.

• ಪು.ಸೂ. ಲಕ್ಷ್ಮೀನಾರಾಯಣ ರಾವ್

ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಬಿಜೆಪಿ ನೇತೃತ್ವದಲ್ಲಿ ಆಯೋಜಿಸಿದ್ದ 'ಸಾಮೂಹಿಕ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ'ಯು ಪೊಲೀಸ್ ಸರ್ಪಗಾವಲಿನಲ್ಲಿ ಶಾಂತಿಯುತವಾಗಿ ನಡೆಯಿತು; ಹಿಂದುತ್ವ ಪರವಾದ ಸಾವಿರಾರು ಕಾರ್ಯಕರ್ತರ ಶಕ್ತಿ ಪ್ರದರ್ಶನಕ್ಕೂ ಮೆರವಣಿಗೆ ಸಾಕ್ಷಿಯಾಯಿತು ಎನ್ನುವ ವರದಿ (ಪ್ರ.ವಾ., ಸೆಪ್ಟೆಂಬರ್ 11) ಓದಿದೆ. ತಕ್ಷಣ ನೆನಪಾದುದು: 'ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ದೇವರೂ ಹಿರಿದು' ಎನ್ನುವ ಶಿವರಾಮ ಕಾರಂತರ ಮಾತು. ದೇವರು– ಧರ್ಮಗಳ ವಿಷಯದಲ್ಲಿ ನಾವು ತಲಪಿರುವ ಅಧಃಪತನವನ್ನೂ ಮದ್ದೂರಿನ ವಿದ್ಯಮಾನ ಸೂಚಿಸುತ್ತಿರುವಂತಿದೆ.

ಕೌಟುಂಬಿಕ ಹಬ್ಬವಾಗಿದ್ದ ವಿಘ್ನೇಶ್ವರನ ವ್ರತವನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬಾಲಗಂಗಾಧರ ತಿಲಕರು, ಜನರ ಸಂಘಟನೆಯ ಅಸ್ತ್ರವಾಗಿ ಬಳಸಿಕೊಂಡರು. ಗಣೇಶೋತ್ಸವವನ್ನು ಸಾರ್ವಜನಿಕ ಉತ್ಸವವನ್ನಾಗಿ ರೂಪಿಸುವುದರಲ್ಲಿ ತಿಲಕರು ಯಶಸ್ವಿಯೂ ಆದರು. ಸ್ವಾತಂತ್ರ್ಯಾನಂತರವೂ ಆ ಉತ್ಸವ ದೇಶದಾದ್ಯಂತ ವ್ಯಾಪಿಸಿ, ನಮ್ಮ ಸಮಾಜದ ಸಂಭ್ರಮ ಹಾಗೂ ಭಾವೈಕ್ಯತೆಗೆ ಪೂರಕವಾಗಿ ಜನಪ್ರಿಯತೆ ಪಡೆದುಕೊಂಡಿತು. ಆದರೆ, ಇತ್ತೀಚೆಗೆ ಅದು ಸಮಾಜದ ವಿಭಜನೆಗೆ, ಕೋಮುಗಲಭೆಗೆ ಹಾಗೂ ರಾಜಕೀಯ ಹಿತಾಸಕ್ತಿಗಳಿಗೆ ಬಳಕೆಯಾಗುತ್ತಿದೆ. ಈ ಬೆಳವಣಿಗೆ ದುರದೃಷ್ಟಕರ ಹಾಗೂ ಎಲ್ಲರ ಮುದ್ದಿನ ಗಣೇಶನಿಗೆ ಎಸಗುತ್ತಿರುವ ಅವಮಾನ.

ಜನರ ವೈಯಕ್ತಿಕ ಹಾಗೂ ಸಾಮುದಾಯಿಕ ವಿಘ್ನಗಳು ನಿವಾರಣೆಯಾಗಲು, ವಿದ್ಯಾಬುದ್ಧಿಗಳನ್ನು ದಯಪಾಲಿಸಲು ಗಣೇಶನನ್ನು ಭಕ್ತಿಯಿಂದ ಭಜಿಸುವ, ತನ್ಮೂಲಕ ಆತ್ಮವಿಶ್ವಾಸ ಮತ್ತು ತೃಪ್ತಿಯನ್ನು ಹೊಂದುವ ಆಚರಣೆಯ ಮೂಲ ಉದ್ದೇಶ ಮರೆಯಾಗಿದೆ. ಪ್ರಸ್ತುತ, ಈ ಹಬ್ಬವು ಯುವಪೀಳಿಗೆಯ ಸ್ವೇಚ್ಛಾಚಾರಕ್ಕೆ ಮತ್ತು ರಾಜಕಾರಣಿಗಳ ದ್ವೇಷ ಸಾಧನೆಗೆ ಹೇತುವಾಗಿ ಪರಿಣಮಿಸಿರುವಂತಿದೆ.

'ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವುದು, ನಾವು ವಿಷ ಕುಡಿದು ಅವರು ಸಾಯಲಿ ಎಂದು ಕಾಯುತ್ತಾ ಕುಳಿತಂತೆ' ಎಂಬ ಬುದ್ಧನ ಸತ್ಯವಚನವನ್ನು ಈ ಜನರಿಗೆ ಅರ್ಥ ಮಾಡಿಸುವುದಾದರೂ ಹೇಗೆ? ಅಲ್ಲಮಪ್ರಭುವಿನ, 'ಭಕ್ತಿ ಎಂಬುದು ತೋರಿ ಉಂಬುವ ಲಾಭ, ಗುಹೇಶ್ವರನೆಂಬುದು ಮೀರಿದ ಘನವು' ಎಂಬ ಮಾತು ಇಂದಿನ ಈ ಕ್ಷುಲ್ಲಕ ರಾಜಕೀಯವನ್ನು ಮನಗಾಣಿಸುವಂತಿದೆ. ಇದನ್ನು ಹಿಂದೂ ಧರ್ಮವನ್ನು ಕಾಪಾಡುವ ಕಾಯಕ ಎಂದಾಗಲೀ, ಭಾರತೀಯ ಸಂಸ್ಕೃತಿಯನ್ನು ಸಂರಕ್ಷಿಸುವ ಉಜ್ಜುಗ ಎಂದಾಗಲೀ, ಕರ್ನಾಟಕದಲ್ಲಿ ಸೌಹಾರ್ದತೆಯನ್ನು ನೆಲೆಗೊಳಿಸುವ ಸದುದ್ದೇಶದ ಆಯೋಜನೆ ಎಂದಾಗಲೀ ಸಮಾಜದ ಆರೋಗ್ಯದ ಬಗ್ಗೆ ಕಾಳಜಿಯುಳ್ಳ ಯಾರಾದರೂ ಹೇಳಲು ಸಾಧ್ಯವೆ?

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಗಾದೆಯಂತೆ ಸಮಾಜದ ಶಾಂತಿಯನ್ನು ಕದಡಿ ಹಿಂಸಾಕಾಂಡದ ಸೃಷ್ಟಿಗೆ ಕಾರಣವಾಗುವ ವಿವಿಧ ಹೆಸರುಗಳಲ್ಲಿ ನಡೆಯುವ 'ಚಲೊ' ಕಾರ್ಯಕ್ರಮಗಳು ಅನಪೇಕ್ಷಣೀಯ. 'ನೇಪಾಳದಲ್ಲಿ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯಲು ಅಲ್ಲಿನ ಯುವಜನ ಯತ್ನಿಸಿದಂತೆ ನೀವೂ ನಿಮಗೆ ಬೇಕಾದ ಸರ್ಕಾರವನ್ನು ಆಡಳಿತಕ್ಕೆ ತರಬಹುದು' ಎಂಬ ಮಾಜಿ ಸಂಸದರೊಬ್ಬರ ಅಪ್ರಬುದ್ಧ ಕರೆಯಂತೂ ಶೋಚನೀಯ.

ಯಾರೋ ಅರಿವುಗೇಡಿಗಳು, ನೀಚರು, ದ್ವೇಷಾಸೂಯ ಗುಣವುಳ್ಳವರು ಕಲ್ಲೆಸೆದರು ಎಂದಮಾತ್ರಕ್ಕೆ ಇಷ್ಟೊಂದು ರಣರಂಗವನ್ನು ಉಂಟು ಮಾಡುವುದು ಸಮರ್ಥನೀಯವಲ್ಲ. ಪುಂಡರನ್ನು ಬಂಧಿಸಿ, ಸೂಕ್ತ ಶಿಕ್ಷೆಗೆ ಗುರಿಪಡಿಸುವುದು ಪ್ರಜಾಸತ್ತಾತ್ಮಕ ಕ್ರಮ. ಆ ಕ್ರಮಕ್ಕೆ ಒತ್ತಾಯಿಸುವುದು ಪ್ರಜ್ಞಾವಂತರ ಕರ್ತವ್ಯ. ಸಮುದಾಯಗಳ ನಡುವೆ ಸಾಮರಸ್ಯ ಕಾಪಾಡುವುದು ರಾಜಕಾರಣಿಗಳ ಹೊಣೆಗಾರಿಕೆ. 'ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು' ಎನ್ನುವಂತೆ, ದ್ವೇಷದ ಪ್ರಚೋದನೆಗಳು ಖಂಡನೀಯ.

ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಗೆ ಪೊಲೀಸ್ ಇಲಾಖೆ ಇದೆ, ಹಲವು ರೀತಿಯ ತನಿಖಾ ಸಂಸ್ಥೆಗಳಿವೆ, ಕಾನೂನು ಇದೆ, ನ್ಯಾಯಾಂಗವಿದೆ. ನ್ಯಾಯಾಂಗವಲ್ಲದೆ ಬೇರೆ ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದೆಂದು ಹೇಳಬೇಕಾದವರೇ ಅರಾಜಕತೆಗೆ ಆಮಂತ್ರಣ ಕೊಟ್ಟರೆ, ದ್ವೇಷದ ಕಾಳ್ಗಿಚ್ಚನ್ನು ನಂದಿಸಲಾದೀತೆ? ಜಾತ್ಯತೀತ ನೀತಿಯನ್ನು ಬದಿಗೊತ್ತಿ ಮತೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಅಸಾಂವಿಧಾನಿಕ ಎನ್ನುವುದನ್ನು ಜನಪ್ರತಿನಿಧಿಗಳು ಮರೆತಿರುವಂತಿದೆ.

ಹಸಿವು, ಅಪೌಷ್ಟಿಕತೆ, ಮಹಿಳೆಯರ ಮೇಲಿನ ದೌರ್ಜನ್ಯ, ನಿರುದ್ಯೋಗ, ಶೈಕ್ಷಣಿಕ ಅಸಮಾನತೆ, ದುಬಾರಿ ವೈದ್ಯಕೀಯ ವ್ಯವಸ್ಥೆ, ಔಷಧಗಳ ಮಾಫಿಯಾ, ರೈತರ ನೂರಾರು ಸಮಸ್ಯೆಗಳು, ಮೂಢನಂಬಿಕೆಗಳ ಆರ್ಭಟ, ವಿರಾಟ್ ಸ್ವರೂಪದ ಭ್ರಷ್ಟಾಚಾರ, ಅರಣ್ಯವಾಸಿಗಳ ಬಗೆಗಿನ ಅನಾದರ, ಸಾಮಾನ್ಯನ ಪಾಲಿಗೆ ಉರುಳಾಗಿರುವ ಬೆಲೆಯೇರಿಕೆ, ಬಡತನ, ಆಹಾರ–ಔಷಧಗಳ ಅಪಾಯಕಾರಿ ಕಲಬೆರಕೆ ಸೇರಿದಂತೆ ನೂರಾರು ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಆ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಬೇಕಾದವರು, ಸಮಸ್ಯೆಗಳೇ ಅಲ್ಲದವುಗಳನ್ನು ಸಮಸ್ಯೆಗಳನ್ನಾಗಿ ಸೃಷ್ಟಿಸಿ ಸಮಾಜವನ್ನು ರೋಗಗ್ರಸ್ತವನ್ನಾಗಿ ಮಾಡುತ್ತಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಪತ್ರ ಬಳಸುವ ಕರ್ನಾಟಕ ಸರ್ಕಾರದ ನಿರ್ಧಾರ ಸರಿಯೇ?

ಪ್ರಜಾಪ್ರಭುತ್ವದ ಮೇಲಿನ ನಂಬಿಕೆ ಮರುಸ್ಥಾಪನೆ ಗುರಿ

● ಇಮ್ರಾನ್ ಪ್ರತಾಪ್‌ಗಡಿ

ಕಳೆದ ದಶಕದಿಂದ ಚುನಾವಣೆ ನಡೆಸುವ ರೀತಿ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಒಂದು ಕಾಲದಲ್ಲಿ ನಂಬಿಕೆಗೆ ಅರ್ಹವಾಗಿದ್ದ ಚುನಾವಣಾ ಆಯೋಗವು, ಈಗ ಚುನಾವಣಾ ವ್ಯವಸ್ಥೆಯಲ್ಲಿ ಯಾವುದೇ ಕುತಂತ್ರಗಳು ನಡೆಯುತ್ತಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಲು ಹೆಣಗಾಡುತ್ತಿದೆ. ರಾಹುಲ್ ಗಾಂಧಿ ಅವರು ಸುದ್ದಿಗೋಷ್ಠಿ ನಡೆಸಿದಾಗ ಚುನಾವಣಾ ವ್ಯವಸ್ಥೆಯ ಹುಳುಕುಗಳು ಬಹಿರಂಗವಾದವು. ಮತಪತ್ರದ ವ್ಯವಸ್ಥೆಯನ್ನು ಮರುಸ್ಥಾಪಿಸುವ ಕರ್ನಾಟಕ ಸರ್ಕಾರದ ನಿರ್ಧಾರವು ಮುನ್ನಗತವೇ ವಿನಾ ಹಿಂದೆ ಇಟ್ಟ ಹೆಜ್ಜೆ ಅಲ್ಲ

ಒಬ್ಬ ಕವಿಯಾಗಿ ನಾನು ಕಲ್ಪನೆ ಮತ್ತು ರೂಪಕಗಳ ಲೋಕದಲ್ಲಿ ಜೀವಿಸುತ್ತಿರುತ್ತೇನೆ. ಸಂಸತ್ ಸದಸ್ಯನಾಗಿ ನಾನು ವಾಸ್ತವ ಜಗತ್ತಿನ ನಿಯಮಗಳು, ಪ್ರಕ್ರಿಯೆಗಳು ಮತ್ತು ಮತಗಳ ಬಗ್ಗೆ ಗಮನ ಹರಿಸುತ್ತೇನೆ. ಹಾಗಿದ್ದರೂ, ಇವೆರಡೂ ಮೇಲ್ನೋಟಕ್ಕೆ ಕಾಣಿಸುವಂತೆ ತುಂಬಾ ದೂರವಿಲ್ಲ. ಲಕ್ಷಾಂತರ ಯುವ ಭಾರತೀಯರ ರೀತಿಯಲ್ಲಿ ನನಗೂ ಪ್ರಜಾಪ್ರಭುತ್ವವೇ ಕವಿತೆಯಾಗಿದೆ. ಅದು ಕೆಲವು ಬಾರಿ ದುರ್ಬಲವಾಗ ಬಹುದು, ಇನ್ನೂ ಕೆಲವೊಮ್ಮೆ ಅದಕ್ಕೆ ಅನುಮಾನದ ಕಳಂಕ ಮೆತ್ತಿಕೊಳ್ಳಬಹುದು. ಆದರೆ, ಅದು ಯಾವಾಗಲೂ ಸಮಗ್ರತೆಯ ಕಡೆಗೆ ಸಾಗಲು ಶ್ರಮಿಸುತ್ತಿರುತ್ತದೆ. ದೇಶದ ಆತ್ಮಸಾಕ್ಷಿಯ ಮೇಲೆ ಶಾಯಿಯಲ್ಲಿ ಕವಿತೆಯನ್ನು ಬರೆಯಬೇಕೇ ವಿನಾ, ಪಾರದರ್ಶಕವಲ್ಲದ ಯಂತ್ರದೊಳಗೆ ಅದು ಅಡಗಿರಬಾರದು.

ನಮ್ಮ ಪ್ರಜಾಪ್ರಭುತ್ವವು ಸಂದಿಗ್ಧ ಪರಿಸ್ಥಿತಿಯಲ್ಲಿರುವ ಈ ಹೊತ್ತಿನಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಮತ್ತು ಮತಪತ್ರಗಳ (ಬ್ಯಾಲೆಟ್ ಪೇಪರ್) ನಡುವಣ ಆಯ್ಕೆಯು ತಾಂತ್ರಿಕವಾದ ಸಂಗತಿಯಷ್ಟೇ ಅಲ್ಲ. ಅದು ನಂಬಿಕೆ, ವಿಶ್ವಾಸಾರ್ಹತೆ, ನಾಗರಿಕರನ್ನು ದೇಶದೊಂದಿಗೆ ಬೆಸೆಯುವ ನಂಬಿಕೆಯ ಪ್ರಶ್ನೆಯಾಗಿದೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರ ಈ ವಾಸ್ತವವನ್ನು ಗುರುತಿಸಿ, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತಪತ್ರಗಳ ಬಳಕೆಯನ್ನು ಮತ್ತೆ ಚಾಲ್ತಿಗೆ ತರಲು ಮುಂದಾಗಿದೆ.

ಕಳೆದ ದಶಕದಿಂದ ನಮ್ಮ ಚುನಾವಣೆಗಳ ನಡವಳಿಕೆಯು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಒಂದು ಕಾಲದಲ್ಲಿ ಎಲ್ಲ ಪ್ರಶ್ನೆಗಳನ್ನೂ ಮೀರಿ ನಂಬಿಕೆಗೆ ಅರ್ಹವಾಗಿದ್ದ ಚುನಾವಣಾ ಆಯೋಗವು, ಈಗ ಚುನಾವಣಾ ವ್ಯವಸ್ಥೆಯಲ್ಲಿ ಯಾವುದೇ ಕುತಂತ್ರಗಳು ನಡೆಯುತ್ತಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಲು ಹೆಣಗಾಡುತ್ತಿದೆ. ರಾಹುಲ್ ಗಾಂಧಿ ಅವರು ಆಗಸ್ಟ್ 7ರಂದು ಪತ್ರಿಕಾಗೋಷ್ಠಿ ನಡೆಸಿದಾಗ ಚುನಾವಣಾ ವ್ಯವಸ್ಥೆಯಲ್ಲಿನ ಹುಳುಕುಗಳು ಬಹಿರಂಗಗೊಂಡವು. ಭಾರತವು ಬಯಸಿದಂತಹ ರೀತಿಯಲ್ಲಿ ನ್ಯಾಯಸಮ್ಮತ ಚುನಾವಣೆಗಳು ನಡೆಯುತ್ತಿಲ್ಲ ಎಂಬ ಬಗ್ಗೆ ಲಕ್ಷಾಂತರ ಜನರು ಮೊದಲೇ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ರಾಹುಲ್ ಗಾಂಧಿ ಅವರ ಸುದ್ದಿಗೋಷ್ಠಿಯು ಜನರ ಪಿಸುಮಾತಿಗೆ ದೊಡ್ಡ ಧ್ವನಿ ನೀಡಿದೆ.

ರಾಹುಲ್ ಗಾಂಧಿ ಅವರು ಬೆಂಗಳೂರಿನ ಮಹದೇವಪುರ ಕ್ಷೇತ್ರದಲ್ಲಿನ ಅಕ್ರಮಗಳ ಬಗ್ಗೆ ಮಾತನಾಡಿದ್ದರೂ, ಅದರಲ್ಲಿ ತಿಳಿದು ಬಂದ ಸಂಗತಿಗಳು ಒಂದು ನಗರವನ್ನು ಮೀರಿ ಇತರೆಡೆಗಳಲ್ಲೂ ಪ್ರತಿಧ್ವನಿಸಿವೆ. ಮತದಾರರ ಪಟ್ಟಿಯಲ್ಲಿ ಹೇಳುವಂತೆ 10 ಚದರ ಅಡಿಯ ಒಂದು ಮನೆಯಲ್ಲಿ 80 ಮಂದಿ ನೋಂದಾಯಿತ ಮತದಾರರು ಇರಲು ಸಾಧ್ಯವೇ? ಇಂತಹ ಅಸಂಬದ್ಧಗಳು ಸಣ್ಣ ತಪ್ಪುಗಳಲ್ಲ. ವ್ಯವಸ್ಥಿತ ಭ್ರಷ್ಟಾಚಾರವನ್ನು ಇದು ತೋರಿಸುತ್ತದೆ. ಈ ಭ್ರಷ್ಟಾಚಾರವು ಮತದಾರರು ತಮಗಿರುವ ಒಂದು ಮತದ ಹಕ್ಕನ್ನು ಚಲಾಯಿಸುವುದಕ್ಕೂ ಮೊದಲೇ ಅವರ ವಿಶ್ವಾಸವನ್ನು ಕಸಿದುಕೊಳ್ಳುತ್ತದೆ. ಚುನಾವಣಾ ಆಯೋಗವೇ ನೀಡಿದ್ದ ದತ್ತಾಂಶಗಳನ್ನು ಮಾಧ್ಯಮಗೋಷ್ಠಿಯಲ್ಲಿ ಪ್ರಸ್ತಾಪಿಸಿದ ರಾಹುಲ್ ಗಾಂಧಿ ಅವರು, ಒಂದು ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸಾವಿರಾರು ನಕಲಿ ನೋಂದಣಿ, ನಕಲಿ ವಿಳಾಸಗಳು ಮತ್ತು ಅನುಮಾನಾಸ್ಪದ ಹೆಸರುಗಳು ನೋಂದಣಿ ಆಗಿರುವುದನ್ನು ಉಲ್ಲೇಖಿಸಿದ್ದರು. ಈ ಬಗ್ಗೆ ಕಳವಳಗೊಂಡ ಜನರು, ‘ಮತ ಕಳವಿನ’ ವಿರುದ್ಧ ಕರ್ನಾಟಕದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ಪ್ರತಿಭಟನೆ ನಡೆಸಿದ್ದಾರೆ. ಈ ವರ್ಷದ ಅಂತ್ಯಕ್ಕೆ ಚುನಾವಣೆ ನಡೆಯಲಿರುವ ಬಿಹಾರದಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ‘ಮತ ಅಧಿಕಾರ ಯಾತ್ರೆ’ಯಲ್ಲಿ ಲಕ್ಷಾಂತರ ಜನರು ಪಾಲ್ಗೊಂಡಿದ್ದರು. ನಾನು ಕೂಡ ಈ ಯಾತ್ರೆಯಲ್ಲಿ ಭಾಗವಹಿಸಿ, ತಮ್ಮ ಮತದಾನದ ಹಕ್ಕನ್ನು ಕಳವು ಮಾಡಲಾಗುತ್ತಿದೆ ಎಂಬ ಭಾವನೆ ಹೊಂದಿದ್ದ ಅಸಂಖ್ಯ ಜನರನ್ನು ಭೇಟಿಯಾಗಿದ್ದೇನೆ. ಈ ರೀತಿ ದೇಶದ ಜನರನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸುವುದು ಭಾರತದ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ‘ಮತ ಕಳವು’ ಘೋಷಣೆ ಈಗ ದೇಶದಾದ್ಯಂತ ಅನುರಣಿಸುತ್ತಿದೆ. ಹಕ್ಕುಗಳನ್ನು ರಕ್ಷಿಸಬೇಕಾದ ಸಂಸ್ಥೆಗಳೇ ತಮ್ಮ ಹಕ್ಕನ್ನು ಕಸಿದುಕೊಳ್ಳುತ್ತಿವೆ ಎಂಬ ಅರಿವು ಜನರಲ್ಲಿ ಹೆಚ್ಚುತ್ತಿರುವುದನ್ನೂ ಇದು ಸೂಚಿಸುತ್ತದೆ.

ಚುನಾವಣಾ ಆಯೋಗದ ನಡೆಗಳ ಬಗ್ಗೆ ಅನುಮಾನಗಳು ಹಲವು ವರ್ಷಗಳಿಂದಲೂ ಇವೆ. 2019ರ ಲೋಕಸಭಾ ಚುನಾವಣೆಗಳಲ್ಲಿ, ನಿರ್ದಿಷ್ಟ ಅಭ್ಯರ್ಥಿ/ಪಕ್ಷಕ್ಕೆ ಹಾಕಿದ ಮತವನ್ನು ದೃಢಪಡಿಸುವಂತಹ ವಿವಿಪ್ಯಾಟ್ ಚೀಟಿಗಳನ್ನು ಫಲಿತಾಂಶ ಬಂದ ನಂತರದ ಕೆಲವೇ ತಿಂಗಳಲ್ಲಿ ನಾಶ ಮಾಡಿದಾಗ ಆಯೋಗದ ಮೇಲಿನ ಅಪನಂಬಿಕೆ ಇನ್ನಷ್ಟು ಹೆಚ್ಚಾಯಿತು. 2024ರ ಲೋಕಸಭಾ ಚುನಾವಣೆಯಲ್ಲಿ ಚಲಾವಣೆಗೊಂಡ ಮತಗಳು ಮತ್ತು ಎಣಿಕೆ ಮಾಡಿದ ಮತಗಳಲ್ಲಿ ವ್ಯತ್ಯಾಸ ಇರುವುದನ್ನು ಚುನಾವಣಾ ಆಯೋಗದ ದತ್ತಾಂಶಗಳೇ ತೋರಿಸಿದ್ದವು. ಈ ಬಗ್ಗೆ ವಿವರಣೆ ಕೇಳಿದಾಗ ಅಧಿಕಾರಿಗಳು ಸ್ಪಷ್ಟನೆ ನೀಡದೇ ಮೌನಕ್ಕೆ ಜಾರಿದ್ದರು. ಸಂದೇಹ ಬಂದ ಸಂದರ್ಭದಲ್ಲಿ ಮೌನವಾಗಿದ್ದರೆ, ಅನುಮಾನ ಇನ್ನಷ್ಟು ಹೆಚ್ಚು ಆಗುತ್ತದೆಯೇ ವಿನಾ ಕಡಿಮೆಯಾಗುವುದಿಲ್ಲ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮತಪತ್ರದ ಮೂಲಕ ಮತದಾನದ ವ್ಯವಸ್ಥೆಯನ್ನು ಮರುಸ್ಥಾಪಿಸುವ ಕರ್ನಾಟಕ ಸರ್ಕಾರದ ನಿರ್ಧಾರವು ಹಿಂದಡಿ ಇಟ್ಟಂತಲ್ಲ; ಬದಲಿಗೆ ಇದು ಮುನ್ನಗೆತ. ಚುನಾವಣಾ ಪ್ರಕ್ರಿಯೆಯನ್ನು ಎಲ್ಲರಿಗೂ ಕಾಣುವಂತೆ, ಮನವರಿಕೆಯಾಗುವಂತೆ ಮತ್ತು ವಿವಾದರಹಿತವಾಗಿ ನಡೆಸುವ ಮೂಲಕ ಅದರ ಮೇಲಿನ ನಂಬಿಕೆಯನ್ನು ಮರುಸ್ಥಾಪಿಸುವ ಉದ್ದೇಶಪೂರ್ವಕ ಪ್ರಯತ್ನ ಇದು.

ಇದರಲ್ಲಿ ಕರ್ನಾಟಕ ಏಕಾಂಗಿಯಲ್ಲ. ಜರ್ಮನಿ, ನೆದರ್‌ಲೆಂಡ್ಸ್‌ನಂತಹ ಹಲವು ಪ್ರಜಾಪ್ರಭುತ್ವ ರಾಷ್ಟ್ರಗಳು ಮತಪತ್ರದ ಮೂಲಕ ಮತದಾನ ಮಾಡುವ ವ್ಯವಸ್ಥೆಯನ್ನು ಮುಂದುವರಿಸಿವೆ, ಇಲ್ಲವೇ ಈ ವ್ಯವಸ್ಥೆಗೆ ಮರಳಿವೆ. ಆ ಮೂಲಕ ತ್ವರಿತವಾಗಿ ಫಲಿತಾಂಶ ಘೋಷಣೆಗಿಂತ ಮತದಾರರ ದೃಢನಂಬಿಕೆಗೆ ಗೌರವ ನೀಡುವ ಕೆಲಸ ಮಾಡಿವೆ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತವು ಈ ಉದಾಹರಣೆಗಳಿಂದ ಪಾಠ ಕಲಿಯುವುದಕ್ಕೆ ಹಿಂಜರಿಯಬಾರದು.

ಮತಪತ್ರಗಳು ಶಾಶ್ವತ ಮತ್ತು ದೃಢಪಡಿಸಬಹುದಾದ ದಾಖಲೆಯನ್ನು ಸೃಷ್ಟಿಸುತ್ತವೆ. ವಿವಾದ ಉಂಟಾದ ಸಂದರ್ಭದಲ್ಲಿ, ವೀಕ್ಷಕರ ಸಮ್ಮುಖದಲ್ಲಿ ಮತಪತ್ರಗಳನ್ನು ಬಹಿರಂಗವಾಗಿ ಮತ್ತು ನ್ಯಾಯಸಮ್ಮತವಾಗಿ ಮರು ಎಣಿಕೆ ಮಾಡಬಹುದು. ಕರ್ನಾಟಕದ ನಿರ್ಧಾರವು ದೇಶಕ್ಕೆ ಒಂದು ಮಾದರಿ ಆಗಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಪಾರದರ್ಶಕತೆಯ ಬಗ್ಗೆ ಭಯ ಹೊಂದಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ಗಣತಂತ್ರವನ್ನು ಬಲಪಡಿಸುವುದು, ಅದರ ಮೇಲಿನ ನಂಬಿಕೆಯನ್ನು ಮರುಸ್ಥಾಪಿಸುವುದು ಈಗಿನ ತುರ್ತು ಎನ್ನುವುದು ಎಲ್ಲ ಭಾರತೀಯರಂತೆ ನನ್ನ ಭಾವನೆಯೂ ಹೌದು. ಇದರ ಜೊತೆಗೆ ಪ್ರಜಾಪ್ರಭುತ್ವ ಎನ್ನುವುದು ಯಂತ್ರವಲ್ಲ, ಬದಲಿಗೆ ದೇಶದ ಜನರು ಮತ್ತು ಅವರ ಭವಿಷ್ಯದ ನಡುವಿನ ವರ್ತಮಾನದ ಒಪ್ಪಂದ ಎಂಬುದನ್ನು ನಾವೆಲ್ಲರೂ ನೆನಪಿಟ್ಟುಕೊಳ್ಳಬೇಕು.

ಲೇಖಕ: ಕಾಂಗ್ರೆಸ್ ಪಕ್ಷದ ರಾಜ್ಯಸಭಾ ಸದಸ್ಯ

ಆಯೋಗದ ಪ್ರತಿನಿಧಿಯೇ ಬಿಜೆಪಿ?

ವಿಚಿತ್ರ ನೋಡಿ; ಅಕ್ರಮಗಳನ್ನು ಬಯಲಿಗೆಳೆದಾಗ ಚುನಾವಣಾ ಆಯೋಗ ಏನೂ ಮಾತನಾಡುವುದಿಲ್ಲ. ಬದಲಿಗೆ ಅಂತಹ ಯಾವ ತಪ್ಪ ನಡೆದಿಲ್ಲ ಎಂದು ಹೇಳಲು ಬಿಜೆಪಿ ತರಾತುರಿಯಲ್ಲಿ ಮುಂದೆ ಬರುತ್ತದೆ. ಒಂದು ವೇಳೆ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಸಂಸ್ಥೆಗಳ ಪಾವಿತ್ರ್ಯದ ಮೇಲೆ ಅದು ನಿಜವಾಗಿಯೂ ನಂಬಿಕೆ ಇಟ್ಟಿದ್ದರೆ, ದೇಶದ ಪ್ರಜಾಪ್ರಭುತ್ವವನ್ನು ಬಲಪಡಿಸಲು ಹೊಣೆಗಾರಿಕೆ ನಿಗದಿ ಮತ್ತು ಪರಿಹಾರ ಕ್ರಮಗಳನ್ನು ಹುಡುಕಲು ಅದು ಯತ್ನಿಸಬೇಕು. ಆದರೆ, ಚುನಾವಣಾ ಆಯೋಗದಿಂದ ಪಾರದರ್ಶಕತೆ, ಹೊಣೆಗಾರಿಕೆ ಬಯಸಿದಾಗ ಮತ್ತು ಆಗಿರುವ ತಪ್ಪುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುವಂತೆ ಮಾಡುವ ಯತ್ನಗಳ ವಿರುದ್ಧ ನ್ಯಾಯಾಲಯದ ಮೆಟ್ಟಿಲು ಏರಿ ಪ್ರಯತ್ನಗಳಿಗೆ ತಡೆ ಒಡ್ಡುವ ದಾರಿಯನ್ನು ಬಿಜೆಪಿ ಆಯ್ಕೆ ಮಾಡಿಕೊಂಡಿದೆ. ಚುನಾವಣಾ ಆಯೋಗದ ಪ್ರತಿನಿಧಿಯಂತೆ ಬಿಜೆಪಿ ಯಾಕೆ ವರ್ತಿಸುತ್ತಿದೆ ಎಂಬುದನ್ನು ಜನರು ಯೋಚಿಸಬೇಕು.

ಚುನಾವಣಾ ವೈಫಲ್ಯವನ್ನು ಮುಚ್ಚಿಡುವ ಕಾಂಗ್ರೆಸ್ ಯತ್ನ

● ಶಹಜಾದ್ ಪೂನಾವಾಲಾ



ಕರ್ನಾಟಕದ ನಿರ್ಧಾರದಿಂದ ಒಂದು ಹೆಜ್ಜೆ ಹಿಂದಕ್ಕೆ ಇಟ್ಟಂತಾಗಿದೆ. ಮತಪತ್ರ ಬಳಸುವುದರಿಂದ ಮತಪೆಟ್ಟಿಗೆ ವಶಪಡಿಸಿಕೊಳ್ಳುವುದು, ತಪ್ಪು ಎಣಿಕೆಯಂಥ– ಈ ಹಿಂದೆ ಕಾಂಗ್ರೆಸ್ ಸರ್ಕಾರವೇ ಮಾಡಿರುವಂಥ– ಹಲವು ಅನಾಚಾರಗಳಿಗೆ ಆಸ್ಪದವಿರುತ್ತದೆ. ಕಾಂಗ್ರೆಸ್‌ಗೆ ಇವಿಎಂ ಬಗ್ಗೆ ನಂಬಿಕೆ ಇಲ್ಲದಿದ್ದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ರಾಜ್ಯದ 9 ಸಂಸದರು, 2023ರ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ 135 ಶಾಸಕರು ರಾಜೀನಾಮೆ ನೀಡಿ, ಮತಪತ್ರಗಳ ಮೂಲಕ ಮರು ಚುನಾವಣೆಯಲ್ಲಿ ಆಯ್ಕೆಯಾಗಿ ಬರಲಿ

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತಪತ್ರಗಳನ್ನು ಬಳಸುವ ಕಾಂಗ್ರೆಸ್ ಪಕ್ಷದ ನಿರ್ಧಾರವು ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹೆಚ್ಚಿಸಲು ಮಾಡಲಾಗಿರುವ ನೀತಿ ಬದಲಾವಣೆ ಅಷ್ಟೇ ಅಲ್ಲ; ಜಾಗತಿಕ ಮಟ್ಟದಲ್ಲಿ ಹೆಸರಾಗಿರುವ ಭಾರತದ ಚುನಾವಣಾ ಸಂಸ್ಥೆಗಳ ಬಗ್ಗೆ ಅಪನಂಬಿಕೆ ಬಿತ್ತುವ ಒಂದು ಲೆಕ್ಕಾಚಾರದ ನಡೆಯಾಗಿದೆ.

ಇವಿಎಂ ಕೈಬಿಡುವ ಬಗೆಗಿನ ರಾಜ್ಯ ಚುನಾವಣಾ ಆಯೋಗದ ‘ಫತ್ವಾ’, ಅವರ ಪಕ್ಷದ ಸರ್ವೋಚ್ಚ ನಾಯಕರಾದ ರಾಹುಲ್ ಗಾಂಧಿ ಅವರನ್ನು ಮೆಚ್ಚಿಸುವ ಪ್ರಯತ್ನವಾಗಿದೆ. ರಾಹುಲ್ ಗಾಂಧಿ ಅವರ ‘ಮತ ಕಳವು’ ಅಭಿಯಾನವು ಕಾಂಗ್ರೆಸ್ ಪಕ್ಷದ ಚುನಾವಣಾ ವೈಫಲ್ಯಗಳು ಮತ್ತು ಅಭದ್ರತೆಯನ್ನು ಮುಚ್ಚಿಡಲು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವ ಅವರ ಬಹುಕಾಲದ ಪ್ರವೃತ್ತಿಗೆ ಅತ್ಯುತ್ತಮ ಉದಾಹರಣೆ.

ಅತ್ಯಂತ ಆಷಾಢಭೂತಿತನದ ವಿಚಾರವೇನೆಂದರೆ, ಇವಿಎಂಗಳನ್ನು ಪ್ರಯೋಗಾತ್ಮಕವಾಗಿ ಮೊದಲು ಬಳಸಿದ್ದೇ ಕರ್ನಾಟಕದ 1989ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ. ಆಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಇವಿಎಂಗಳನ್ನು 2004ರ ಲೋಕಸಭಾ ಚುನಾವಣೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಪೂರ್ಣಪ್ರಮಾಣದಲ್ಲಿ ಬಳಸಲಾಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಜಯ ಸಾಧಿಸಿತ್ತು. 2004 ಮತ್ತು 2009ರಲ್ಲಿ ಅವರಿಗೆ ಇವಿಎಂಗಳಲ್ಲಿ ಯಾವುದೇ ದೋಷ ಕಾಣಲಿಲ್ಲ. 2014ರ ನಂತರದ ಚುನಾವಣೆಗಳಲ್ಲಿ ಸೋಲಲು ಆರಂಭಿಸಿದ ನಂತರವಷ್ಟೇ ಅವರಿಗೆ ಇವಿಎಂಗಳಲ್ಲಿ ಸಮಸ್ಯೆಗಳು ಕಾಣತೊಡಗಿದವು.

ಚುನಾವಣೆಗಳಲ್ಲಿ ಸೋಲು ಸಂಭವಿಸಿದಾಗ ಇಲ್ಲವೇ ರಾಜಕೀಯವಾಗಿ ಪ್ರತಿಕೂಲ ಪರಿಸ್ಥಿತಿ ಸೃಷ್ಟಿಯಾದಾಗ, ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿರುವ ನಂಬಿಕೆಯನ್ನು ಹಾಳು ಮಾಡುವ ಇಲ್ಲವೇ ಅವುಗಳನ್ನೇ ನಾಶ ಮಾಡುವ ಕೀಳು ಇತಿಹಾಸ ಕಾಂಗ್ರೆಸ್ ಪಕ್ಷಕ್ಕಿದೆ. ನ್ಯಾಯಾಲಯದ ಪ್ರಕರಣಗಳಲ್ಲಿ ಕಾಂಗ್ರೆಸ್ ಹಿತಾಸಕ್ತಿಯ ಪರವಾಗಿ ತೀರ್ಪು ಬಂದರೆ, ಅವರು ನ್ಯಾಯ ವ್ಯವಸ್ಥೆಯನ್ನು, ಸುಪ್ರೀಂ ಕೋರ್ಟ್ ಅನ್ನು ಶ್ಲಾಘಿಸುತ್ತಾರೆ; ಇಲ್ಲದಿದ್ದರೆ, ಸಿಜೆಐ ಅನ್ನು ಹುದ್ದೆಯಿಂದ ಕೆಳಗಿಳಿಸಲು ಗೊತ್ತುವಳಿ ಮಂಡಿಸುತ್ತಾರೆ.

ಚುನಾವಣಾ ಬಾಂಡ್‌ಗಳು ಮತ್ತು ಚಂಡೀಗಢ ಚುನಾವಣೆ ವಿಚಾರದಲ್ಲಿ ಅವರು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಖರೀದಿಸಿದರು. ಆದರೆ, ಕನಿಷ್ಠ ಎಂದರೂ 40 ಸಂದರ್ಭಗಳಲ್ಲಿ ಸುಪ್ರೀಂ ಕೋರ್ಟ್ ಮತ್ತು ಕೆಲವು ಹೈಕೋರ್ಟ್‌ಗಳು ಇವಿಎಂ ಬಳಕೆಯನ್ನು ಎತ್ತಿಹಿಡಿದಿವೆ. ಆದರೆ, ಕಾಂಗ್ರೆಸ್ ಅದನ್ನೆಲ್ಲ ಮರೆತಿದೆ. ಸುಪ್ರೀಂ ಕೋರ್ಟ್ ಯಾವ ಹಂತಕ್ಕೆ ಹೋಗಿದೆಯೆಂದರೆ, ‘ಇವಿಎಂಗಳು ಸರಳ, ಸುರಕ್ಷಿತ ಮತ್ತು ಬಳಕೆದಾರಸ್ನೇಹಿಯಾಗಿವೆ. ಯಾವುದೇ ಆಧಾರವಿಲ್ಲದಿದ್ದರೂ ಪಟ್ಟು ಹಿಡಿದು, ನಿರಂತರವಾಗಿ ಅವುಗಳ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸುವುದು ವ್ಯತಿರಿಕ್ತ ಪರಿಣಾಮ ಬೀರಿ ಅಪನಂಬಿಕೆಗೆ ಕಾರಣವಾಗಬಲ್ಲದು. ಇದುಆರೋಗ್ಯಕರ ಹಾಗೂ ಸದೃಢ ಪ್ರಜಾಪ್ರಭುತ್ವಕ್ಕೆ ಅಗತ್ಯವಾದ ಚುನಾವಣೆಗಳ ಬಗೆಗಿನ ಜನರ ವಿಶ್ವಾಸ ಮತ್ತು ಪಾಲ್ಗೊಳ್ಳುವಿಕೆ ಯನ್ನು ಕುಂದಿಸಬಹುದು’ ಎಂದಿದೆ.

ಆದರೆ, ರಾಹುಲ್ ಅವರ ‘ಸ್ವಜನ ಪಕ್ಷಪಾತದ ಶಿಶು’ಗಳ (ನೆಪೋ ಕಿಡ್ಸ್) ವ್ಯವಸ್ಥೆಯಲ್ಲಿ ಇದ್ಯಾವುದಕ್ಕೂ ಸ್ಥಾನವಿಲ್ಲ. ಕಾಂಗ್ರೆಸ್ ಚುನಾವಣೆಗಳನ್ನು ಗೆದ್ದಾಗ– ತೆಲಂಗಾಣ, ಜಮ್ಮು ಕಾಶ್ಮೀರ ಮತ್ತು ಜಾರ್ಖಂಡ್– ಚುನಾವಣಾ ಆಯೋಗ ಮತ್ತು ಇವಿಎಂಗಳಲ್ಲಿ ಯಾವ ದೋಷವೂ ಇರಲಿಲ್ಲ.



ರಾಹುಲ್ ಅವರ ಇತ್ತೀಚಿನ ಆರೋಪಗಳು ಕೇಂದ್ರೀಕರಿಸಿರುವುದು ಇವಿಎಂಗಳನ್ನಲ್ಲ; ಮತದಾರರ ಪಟ್ಟಿಗಳನ್ನು. ಈ ದೃಷ್ಟಿಯಿಂದ ನೋಡಿದರೆ ಅವರು ಬಿಹಾರದಲ್ಲಿ ನಡೆಯುತ್ತಿರುವ ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ’ ಯನ್ನು (ಎಸ್‌ಐಆರ್) ಸಮರ್ಥಿಸುತ್ತಿದ್ದಾರೆ. ಕಾಂಗ್ರೆಸ್‌ನ ಸರ್ವಪ್ರಯತ್ನದ ನಂತರವೂ ಸುಪ್ರೀಂ ಕೋರ್ಟ್ ಎಸ್‌ಐಆರ್‌ಗೆ ತಡೆಯಾಜ್ಞೆ ನೀಡಿಲ್ಲ ಎನ್ನುವುದನ್ನು ಗಮನಿಸಬೇಕು.

ಮತಪತ್ರಗಳ ಕಾಲದಲ್ಲಿ ಚುನಾವಣೆಗಳನ್ನು ತಿರುಚಿದ ಇತಿಹಾಸವು ಕಾಂಗ್ರೆಸ್‌ಗಿದ್ದು, ಅವರು ಈಗ ಮತಪತ್ರಗಳಿಗೆ ವಾಪಸ್ ಹೋಗುತ್ತಿರುವುದು ಒಂದು ವ್ಯಂಗ್ಯದಂತೆ ಕಾಣುತ್ತದೆ. ಇವಿಎಂಗಳು ಕಾಲಿಡುವುದಕ್ಕೂ ಹಿಂದೆ ಕಾಂಗ್ರೆಸ್ ವ್ಯಾಪಕ ಅಕ್ರಮ ಮತದಾನದಲ್ಲಿ ತೊಡಗಿತ್ತು ಎಂದು ಕರ್ನಾಟಕದ ಗೃಹ ಮಂತ್ರಿ ಜಿ.ಪರಮೇಶ್ವರ ಅವರು ಇತ್ತೀಚೆಗೆ ಒಪ್ಪಿಕೊಂಡಿದ್ದಾರೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ಅವರ ಪ್ರಕಾರ, ಜಮ್ಮು ಮತ್ತು ಕಾಶ್ಮೀರದ 1987ರ ಚುನಾವಣೆಯಲ್ಲಿ ಅಕ್ರಮ ಮತದಾನ ನಡೆದಿತ್ತು. ಮತ ಪೆಟ್ಟಿಗೆಗಳನ್ನು ಕಾಂಗ್ರೆಸ್ ಹೇಗೆ ಲೂಟಿ ಹೊಡೆದಿತ್ತು ಎನ್ನುವ ಬಗ್ಗೆ ಸಂದೀಪ್ ದೀಕ್ಷಿತ್ ಮತ್ತು ಕೀರ್ತಿ ಆಜಾದ್ ಅವರು ರಹಸ್ಯಗಳನ್ನು ಹೊರಗೆಡವಿರುವ ವಿಡಿಯೊಗಳು ಹರಿದಾಡುತ್ತಿವೆ. ಇಂಥ ಅನೈತಿಕತೆಯ ಹಿನ್ನೆಲೆ ಹೊಂದಿರುವುದರ ನಡುವೆಯೂ, ಚುನಾವಣಾ ವ್ಯವಸ್ಥೆ ಬಗ್ಗೆ ಕಾಂಗ್ರೆಸ್ ಅಪನಂಬಿಕೆ ಮೂಡಿಸುತ್ತಿರುವುದು ಮತ್ತು ನಿರ್ದಿಷ್ಟ ವಿಚಾರಗಳನ್ನು ಮಾತ್ರ ಗುರಿ ಮಾಡುತ್ತಿರುವುದು ಒಂದು ವ್ಯಂಗ್ಯವಾಗಿದೆ.

ಕಾಂಗ್ರೆಸ್ ಪರಿಚಯಿಸಿದ ಇವಿಎಂ ವ್ಯವಸ್ಥೆಯು ಚುನಾವಣಾ ವ್ಯವಸ್ಥೆಯ ಸ್ವರೂಪವನ್ನೇ ಬದಲಾಯಿಸಿತು; ಚುನಾವಣೆಗಳನ್ನು ಹೆಚ್ಚು ಸಮರ್ಥವಾಗಿ, ಪಾರದರ್ಶಕವಾಗಿ ನಡೆಸಲು ಸಾಧ್ಯವಾಗುವಂತೆ ಮಾಡಿದ್ದಲ್ಲದೇ, ಅಕ್ರಮಗಳಿಗೆ ಅವಕಾಶವಿಲ್ಲದಂತೆ ಮಾಡಿತು. ಮತಗಟ್ಟೆ ವಶಪಡಿಸಿಕೊಳ್ಳುವ ದಿನಗಳು ಈಗ ಇತಿಹಾಸ. ಪಶ್ಚಿಮ ಬಂಗಾಳದಲ್ಲಿ ರಾಜ್ಯ ಚುನಾವಣಾ ಆಯೋಗವು ಮತಪತ್ರ ಬಳಸಿ ಪಂಚಾಯತ್ ಚುನಾವಣೆಗಳನ್ನು ಮಾಡುತ್ತಿದ್ದು, ಅಲ್ಲಿ ಮತಗಟ್ಟೆ ವಶಪಡಿಸಿಕೊಳ್ಳುವುದನ್ನು ಈಗಲೂ ಕಾಣಬಹುದಾಗಿದೆ. ಭಾರತದ ಚುನಾವಣಾ ಆಯೋಗವು ನಡೆಸುವ ಇತರ ಚುನಾವಣೆಗಳಲ್ಲಿ ವಿವಿ ಪ್ಯಾಟ್, ಇವಿಎಂ ಪರಿಶೀಲನೆ, ಅಣಕು ಮತದಾನ ಮುಂತಾದವುಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮರ್ಥವಾದ ರಕ್ಷಣಾ ಕ್ರಮಗಳನ್ನು ಕೈಗೊಂಡಿದ್ದು, ಅಕ್ರಮಕ್ಕೆ ಆಸ್ಪದವಿಲ್ಲದಂಥ ವ್ಯವಸ್ಥೆ ರೂಪಿಸಿದೆ.

ಮತಪತ್ರಗಳಿಗೆ ಹಿಂದಿರುಗುವ ಕರ್ನಾಟಕ ಸರ್ಕಾರದ ನಿರ್ಧಾರದಿಂದ ಒಂದು ಹೆಜ್ಜೆ ಹಿಂದಕ್ಕೆ ಇಟ್ಟಂತಾಗಿದೆ. ಮತಪತ್ರಗಳನ್ನು ಬಳಸುವುದರಿಂದ ಮತಪೆಟ್ಟಿಗೆ ವಶಪಡಿಸಿಕೊಳ್ಳುವುದು, ತಪ್ಪು ಎಣಿಕೆಯಂಥ– ಈ ಹಿಂದೆ ಕಾಂಗ್ರೆಸ್ ಸರ್ಕಾರವೇ ಮಾಡಿರುವಂಥ– ಹಲವು ಅನಾಚಾರಗಳಿಗೆ ಆಸ್ಪದವಿರುತ್ತದೆ. ಕಾಂಗ್ರೆಸ್‌ಗೆ ನಿಜಕ್ಕೂ ಇವಿಎಂಗಳ ಬಗ್ಗೆ ನಂಬಿಕೆ ಇಲ್ಲ ಎಂದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ಕರ್ನಾಟಕದ ಒಂಬತ್ತು ಸಂಸದರು ಮತ್ತು 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ 135 ಶಾಸಕರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ, ಮತಪತ್ರಗಳ ಮೂಲಕ ಮರುಚುನಾವಣೆಯಲ್ಲಿ ಆಯ್ಕೆಯಾಗಿ ಬರಲಿ.

ಅನುಕ್ರಮವಾಗಿ ಬಂದ ಸರ್ಕಾರಗಳು, ಅಂತರ ರಾಷ್ಟ್ರೀಯ ವೀಕ್ಷಕರು ಮತ್ತು ನ್ಯಾಯಾಂಗವು ಇವಿಎಂಗಳನ್ನು ಒಪ್ಪಿಕೊಂಡಿದೆ. ಅದರ ಬಗ್ಗೆ ಅವಿಶ್ವಾಸ ವ್ಯಕ್ತಪಡಿಸುವ ಕಾಂಗ್ರೆಸ್‌ನ ಪ್ರಯತ್ನವು ಕೇವಲ ತಂತ್ರಜ್ಞಾನದ ಮೇಲಿನ ದಾಳಿಯಷ್ಟೇ ಅಲ್ಲ, ಸಂವಿಧಾನ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆ ಮೇಲೆ ನಡೆದ ದಾಳಿಯೂ ಆಗಿದೆ. ಆದರೆ, ಸಂವಿಧಾನಕ್ಕಿಂತ ಸ್ವಂತ ಪರಿವಾರವೇ ಮಿಗಿಲು ಎಂದು ಭಾವಿಸಿರುವ ಪಕ್ಷದಿಂದ ಅದಕ್ಕಿಂತ ಬೇರೇನು ನಿರೀಕ್ಷಿಸಲು ಸಾಧ್ಯ.

ಲೇಖಕ: ಬಿಜೆಪಿ ರಾಷ್ಟ್ರೀಯ ವಕ್ತಾರ

ಸೋಲು ಹತ್ತಿರವಾದಾಗ ಬೆದರಿಕೆ

ರಾಹುಲ್ ಗಾಂಧಿ ಅವರು ಒಂದು ವ್ಯವಸ್ಥಿತ ಕಾರ್ಯಶೈಲಿಯನ್ನು ಅನುಸರಿಸುತ್ತಾರೆ. ಚುನಾವಣೆಯಲ್ಲಿ ಗೆಲುವಿನ ಸಾಧ್ಯತೆ ಕ್ಷೀಣಿಸಿದಾಗ, ಪ್ರಜಾಪ್ರಭುತ್ವದ ಬಗೆಗಿನ ನಂಬಿಕೆ ಕುಂದಿಸುವಂತಹ ಸುಳ್ಳುಗಳ ಮೊರೆ ಹೋಗುತ್ತಾರೆ; ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ದೋಷಾರೋಪಣೆ ಮಾಡುತ್ತಾರೆ. ಕೆಲವೊಮ್ಮೆ, ಹಿಂಸೆಯನ್ನು ಪ್ರಚೋದಿಸಿ, ಬೆದರಿಕೆಗಳನ್ನೂ ಒಡ್ಡುತ್ತಾರೆ. ಇದೇ ‘ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುವ’ ವಿಧಾನ ಎನ್ನುವುದಾದರೆ, ಮಹದೇವಪುರ ವಿಧಾನಸಭಾ ಕ್ಷೇತ್ರದ ಬಗ್ಗೆ ರಾಹುಲ್ ಮಾಡಿದ ಆರೋಪಗಳ ಕುರಿತಂತೆ ಅವರದ್ದೇ ಕಾಂಗ್ರೆಸ್ ಸರ್ಕಾರಕ್ಕೆ ನ್ಯಾಯಯುತವಾದ ಪ್ರಶ್ನೆಗಳನ್ನು ಕೇಳಿದರು ಎಂದು ಎಸ್‌ಟಿ ಮುಖಂಡ ಕೆ.ಎನ್. ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟಿದ್ದು ಏಕೆ? ‘ಆಪರೇಷನ್ ಸಿಂಧೂರ’ದ ಬಗ್ಗೆ ಸತ್ಯವನ್ನು ಹೇಳಿದ್ದಕ್ಕೆ ಸಂಸದ ಶಶಿ ತರೂರ್ ಅವರ ಬಾಯಿ ಮುಚ್ಚಿಸಲು ಹೊರಟದ್ದು ಏಕೆ? ಅಂದಹಾಗೆ, ಕಾಂಗ್ರೆಸ್‌ನ ಆಂತರಿಕ ಪ್ರಜಾಪ್ರಭುತ್ವ ಎಂತಹದ್ದು ಎನ್ನುವುದರ ಪ್ರತ್ಯಕ್ಷ ಅನುಭವ ಈ ಲೇಖಕನಿಗೆ ಇದೆ. ರಾಹುಲ್ ಅವರಿಗೆ ಪಕ್ಷದ ಮುಖ್ಯಸ್ಥರನ್ನಾಗಿ ಪಟ್ಟ ಕಟ್ಟುವುದನ್ನು (2017) ವಿರೋಧಿಸಿದ್ದಕ್ಕಾಗಿ ನನ್ನನ್ನು ಪಕ್ಷದಿಂದ ಹೊರಹಾಕಲಾಯಿತು.

ಗುಂಡಣ್ಣ



ಪದಬಂಧ 6163

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ನಾಲ್ಕು ವೇದಗಳಲ್ಲಿ ಮೊದಲನೆಯದು (3)
4.ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6. ದಾರಿಯಲ್ಲಿ ಸಾಗುತ್ತಿರುವಾಗ ವಹಿಸಿಕೊಂಡಿರುವ ಹೊಣೆಗಾರಿಕೆ (5)
7.ಭವನದ ಮೇಲಿಂದ ಕಾಣುತ್ತಿರುವ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆಯಲ್ಲ! (2)
10.ಗುರುವಿಗೆ ತಕ್ಕವನು ಈ ವಿದ್ಯಾರ್ಥಿ (2)
11.ಸುಪ್ರಭಾತದ ಹೊತ್ತಿನಲ್ಲಿ ಬಂದಿಳಿದ ಮಗ (2)
13.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16. ಮಸ್ತಿಷ್ಕ ಇಲ್ಲಿದೆ (3)
17.ಪುನಃ ಪುನಃ ಬಂದಿರುವ ಸ್ಮರಣೆ(3)

ಮೇಲಿಂದ ಕೆಳಕ್ಕೆ

1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ರಾಕ್ಷಸ ಇಲ್ಲಿ ಕಾಣುತ್ತಿದ್ದಾನೆ (3)
3.ಸಾಬೂನು ಬಳಸಲು ಹೇಳಿದ ನೆಪ! (3)
4.ಈತ ತಿರುಗಾಡುವವನು (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ತಲೆ ಬರಹವಿದು (4)
12.ಕನ್ನಡಿಗನು ಧರಿಸಿದ ಹೆಲ್ಮೆಟ್ (4)
13.ಮರುಳನ ಕೈಯ್ಯಲ್ಲಿರುವ ಉಸುಕು (3)
14.ಉತ್ತರ ಮತ್ತು ಪಶ್ಚಿಮ ನಡುವಿನ ದಿಕ್ಕು (3)
15.ಮಾದರಿ ಇಲ್ಲಿ ಕಾಣುತ್ತಿದೆ (3)

6162ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮುನಿ 3.ಪಿಕಾಸಿ 5.ಮಕರಂದ 7.ತಾತಾ 9.ಗುಣಗ್ರಾಹಿ 10.ಅಲೆ 11.ತಡ 12.ಸ್ವಪ್ರೇರಣೆ 13.ಶಂಕೆ 14.ಮಲಯಜ 16.ವರಸೆ 17. ಚಡಿ

ಮೇಲಿಂದ ಕೆಳಕ್ಕೆ: 1.ಭೀಮ 2.ಮುದ 3.ಪಿತಾಮಹಿ 4.ಸಿರಿಗನ್ನಡ 6.ಕರೆಯೋಲೆ 8.ಒಣಹರಟೆ 10.ಅವಿನಾಭಾವ 11.ತಳಪಾಯ 12.ಸ್ವಪ್ರಶಂಸೆ 14.ಮಡಿ 15.ಜಲ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

13 ಸೆಪ್ಟೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಷಷ್ಠಿ ಗಂ. 7-24 ನಂತರ ಸಪ್ತಮಿ ಗಂ.29-05 ನಕ್ಷತ್ರ: ಕೃತಿಕ ಗಂ. 10-12 ಯೋಗ: ಹರ್ಷಣ ಗಂ. 10-33 ಸಿಂಹ ಮಾಸದ 27 ನೇ ದಿನ. ಮಳೆ ನಕ್ಷತ್ರ : ಹುಬ್ಬಾ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 10-30 ,ಸೂರ್ಯೋದಯ : 06-23 ಸೂರ್ಯಾಸ್ತ : 06-30 ಮುಸ್ಲಿಂ ದಿನಾಂಕ : 20 ರಬಿಉಲ್ಲಾವಲ್ ,ಅದೃಷ್ಟ ಸಂಖ್ಯೆ : 2, 3

ಮೇಷ: ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಬಳಸಿಕೊಳ್ಳಲು ಯತ್ನ ಮಾಡಿ. ಸೃಜನಶೀಲ ಯೋಜನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಚಿಂತೆ ಮತ್ತು ತೊಂದರೆಗಳು ದೂರಾಗಲಿವೆ.

ವೃಷಭ: ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯಕ್ಷೇತ್ರದಲ್ಲಿ ಹುಮ್ಮಸ್ಸು ಬರುವುದರ ಜತೆಗೆ ವೃತ್ತಿಪರ ಶತ್ರುಗಳ ಸಂಖ್ಯೆ ಗಗನ ಮುಟ್ಟಲಿದೆ. ಫೋಟೊ ಸ್ಟುಡಿಯೊದವರಿಗೆ ಲಾಭ ಇರಲಿದೆ.

ಮಿಥುನ: ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಯುವುದು. ಕೈಗಾರಿಕಾ ಕ್ಷೇತ್ರದಲ್ಲಿ ಲಾಭ ಪಡೆಯುವಿರಿ. ಮಗಳಿಗೆ ಆಪ್ತರ ಸಹಾಯದಿಂದ ಉದ್ಯೋಗ ಲಭಿಸಲಿದೆ. ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವುದು.

ಕರ್ಕಾಟಕ: ತಾಂತ್ರಿಕ ವಿದ್ಯಾರ್ಥಿಗಳು ವಿನೂತನ ಯೋಜನೆ ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಮನೆಯವರ ಆರೋಗ್ಯದಲ್ಲಿ ಹೊಸ ಔಷಧಿಯಿಂದ ಹಂತ ಹಂತದ ಸುಧಾರಣೆಯನ್ನು ಕಂಡು ಮನಸ್ಸಿಗೆ ನೆಮ್ಮದಿ ಇರುವುದು.

ಸಿಂಹ: ನ್ಯಾಯವಾದಿಗಳು ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಕಾಣುವಿರಿ. ಒಡಹುಟ್ಟಿದವರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸೂಕ್ತ ಕಾಲ. ಕಾಫಿ ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲು ನಿರೀಕ್ಷಿಸಬಹುದು.

ಕನ್ಯಾ: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸು ದೂರಾಗಲಿದೆ. ಶ್ರೀದುರ್ಗೆಯನ್ನು ಮನಃಪೂರ್ವಕವಾಗಿ ಪೂಜಿಸಿಕೊಂಡು ಕೆಲಸವನ್ನು ಮುಂದುವರಿಸಿ ಹೆಚ್ಚಿನ ಆದಾಯವನ್ನು ಕಾಣುವಿರಿ.

ತುಲಾ: ವ್ಯವಹಾರಗಳಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ನೋಡಬಹುದು. ಅವಿವಾಹಿತರಿಗೆ ಮಾತೃ ವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿಯೇ ಸಂಬಂಧ ಅರಸಿ ಬರುವುದು.

ವೃಶ್ಚಿಕ: ಮಕ್ಕಳು ಜೀವನದಲ್ಲಿ ಈ ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಪಡುವಂತಾಗುವುದು. ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಖರ್ಚಿಗೇನೂ ಯೋಚನೆ ಇರುವುದಿಲ್ಲ.

ಧನು: ವೈದ್ಯರ ಸಲಹೆಯಂತೆ ಆಹಾರ ಸೇವನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿ.

ಮಕರ: ಎಂಜಿನಿಯರಿಂಗ್ ಕ್ಷೇತ್ರದಲ್ಲಿರುವರಿಗೆ ಅವಕಾಶಗಳೊಂದಿಗೆ ಹೆಸರಾಂತ ಕಂಪನಿಯಲ್ಲಿ ಕೆಲಸ ಸಿಗುವ ಸಾಧ್ಯತೆಗಳಿವೆ. ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡುವ ಬಗ್ಗೆ ಯೋಚಿಸಿ. ಕಾರ್ಯಗಳು ಕೂಡಿ ಬರಲಿವೆ.

ಕುಂಭ: ಸ್ವಲ್ಪ ಜಾಗ್ರತೆ ವಹಿಸಿದಲ್ಲಿ ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಮಕ್ಕಳ ಆರೋಗ್ಯದಲ್ಲಿ ಏರು-ಪೇರು ಆಗಬಹುದು

ಮೀನ: ಮನೆಯಲ್ಲಿ ಸುಖ ಸಂತೋಷ ನೆಮ್ಮದಿ ಕಂಡುಬರಲಿದೆ. ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು ತೆಗೆದುಹಾಕಿ. ಮನಸ್ಸಿಗೆ ಹಿತ ಅನುಭವಗಳನ್ನು ಹೊಂದುವಿರಿ.

ಸುಡೊಕು 6547

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			5		9		
1			6		4			3
6	5			7			2	4
5		8	9					
	1			3		7	5	2
4		7					8	
2		5		9			3	
	6		3		5	2		7
3	7	9		6			4	5

6546 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,005
ಇಂದಿನ ಅಂತ್ಯ: 25,114
ದಿನದ ಗರಿಷ್ಠ: 25,139
108

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹565
12 ಕ್ಕೆ ₹75
ಮೈಸೂರು: 100 ಕ್ಕೆ ₹565

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹350-653
ದ್ವಿತಳಿ (ಬಿ.ವಿ) ₹463-805

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹184
ಆರ್‌ಎಸ್‌ಎಸ್-5 ₹179
ಗುಡ್ ಲಾಟ್ ₹164

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1360 (1360)
ಸೋಯಾ (ರಿಫೈನ್ಡ್) ₹1275 (1275)
ಸೂರ್ಯಕಾಂತಿ (ರಿಫೈನ್ಡ್) ₹1420 (1420)
ಪಾಮೋಲಿನ್ ₹1270 (1265)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹15900-22100
ದಾವಣಗೆರೆ ₹14800-15000
ತುರುವೇಕೆರೆ ₹26000-28000

ಅಡಿಕೆ ಧಾರಣೆ

ಕುಮಟಾ		ರಾಶಿ	47009-60199	ಚಾಲಿ	38239-44398
ಚಾಲಿ	39569-43598	ಸರಕು	48069-98000	ಕೆಂಪುಗೋಟು	20600-28989
ಚಿಪ್ಪು	26089-31569	**ಸಿದ್ದಾಪುರ**		ರಾಶಿ	45699-49699
ಕೋಕ	7569-25999	ಬಿಳೆಗೋಟು	24289-32609	**ಯಲ್ಲಾಪುರ**	
ಫ್ಯಾಕ್ಟರಿ	5089-29829	ಚಾಲಿ	36219-43399	ಆಪಿ	64221-66821
ಹೊಸಚಾಲಿ	36899-44099	ಕೋಕ	20319-26899	ಬಿಳೆಗೋಟು	18822-35113
ಪುತ್ತೂರು		ಕೆಂಪುಗೋಟು	19619-25119	ಚಾಲಿ	35669-44599
ಕೋಕ	20000-28000	ರಾಶಿ	42319-49099	ಕೋಕ	10009-21069
ಹೊಸತು	26000-49000	ತಟ್ಟಿಬೆಟ್ಟೆ	30319-41999	ಕೆಂಪುಗೋಟು	17099-28317
ಶಿವಮೊಗ್ಗ		**ಶಿರಸಿ**		ರಾಶಿ	40615-56219
ಬೆಟ್ಟೆ	53099-66230	ಬೆಟ್ಟೆ	32118-49299	ತಟ್ಟಿಬೆಟ್ಟೆ	29599-39119
ಗೊರಬಲು	20009-38539	ಬಿಳೆಗೋಟು	24919-36301		

ಚಿಲ್ಲರೆ ಹಣದುಬ್ಬರ ಅಲ್ಪ ಏರಿಕೆ

ಆಹಾರ ಪದಾರ್ಥಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಕಾರಣ: ಎನ್‌ಎಸ್‌ಒ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ದೇಶದ ಚಿಲ್ಲರೆ ಹಣದುಬ್ಬರವು ಆಗಸ್ಟ್ ತಿಂಗಳಿನಲ್ಲಿ ಶೇ 2.07ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ತಿಳಿಸಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 1.61ರಷ್ಟಿತ್ತು. 2024ರ ಆಗಸ್ಟ್‌ನಲ್ಲಿ ಶೇ 3.65ರಷ್ಟಿತ್ತು. 9 ತಿಂಗಳಿನಿಂದ ಇಳಿಕೆ ಕಂಡಿದ್ದ ಹಣದುಬ್ಬರವು ಈಗ ಸ್ವಲ್ಪ ಏರಿಕೆಯಾಗಿದೆ. ನವೆಂಬರ್‌ನಲ್ಲಿಶೇ5.48ದಾಖಲಾಗಿತ್ತು.

ತರಕಾರಿಗಳು, ಮಾಂಸ, ಮೀನು, ಮೊಟ್ಟೆ, ಎಣ್ಣೆ ಮತ್ತು ವೈಯಕ್ತಿಕ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಹಣದುಬ್ಬರ ಏರಿಕೆಯಾಗಿದೆ ಎಂದು ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು, ಅದು ಶೇ 2ಕ್ಕಿಂತ ಕಡಿಮೆ ಆಗಬಾರದು ಎಂಬುದು ಆರ್‌ಬಿಐಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಗುರಿ.

ದೇಶದ ಗ್ರಾಮೀಣ ಪ್ರದೇಶದಲ್ಲಿ ಹಣದುಬ್ಬರವು ಜುಲೈನಲ್ಲಿ ಶೇ 1.18ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ 1.69ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ನಗರ ಪ್ರದೇಶದಲ್ಲಿ ಶೇ 2.1ರಿಂದ ಶೇ 2.47ಕ್ಕೆ ಹೆಚ್ಚಳವಾಗಿದೆ.

'ಆಹಾರ ಮತ್ತು ಪಾನೀಯ ವಿಭಾಗದ ವಸ್ತುಗಳ ದರದಲ್ಲಿನ ಹೆಚ್ಚಳದಿಂದ ಹಣದುಬ್ಬರವು ಆಗಸ್ಟ್‌ನಲ್ಲಿ ಹೆಚ್ಚಾಗಿದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಇತ್ತೀಚೆಗೆ ಸುರಿದ ಹೆಚ್ಚಿನ ಮಳೆ ಮತ್ತು ದೇಶದ ಕೆಲವು ಭಾಗದಲ್ಲಿ ಉಂಟಾದ ಪ್ರವಾಹವು ಬೆಳೆಯ ಇಳುವರಿ ಮೇಲೆ ಪರಿಣಾಮ ಬೀರಬಹುದು. ಇದರಿಂದ ದರವು ಹೆಚ್ಚಳವಾಗಬಹುದು ಎಂದು ತಿಳಿಸಿದ್ದಾರೆ.

ಕರ್ನಾಟಕಕ್ಕೆ ಎರಡನೇ ಸ್ಥಾನ

ಅತಿ ಹೆಚ್ಚು ಹಣದುಬ್ಬರ ಹೊಂದಿರುವ ರಾಜ್ಯಗಳ ಪೈಕಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು, ಶೇ 3.81ರಷ್ಟಿದೆ. ಮೊದಲ ಸ್ಥಾನದಲ್ಲಿ ಕೇರಳ ಶೇ 9.04 ಹೊಂದಿದ್ದರೆ, ಅಸ್ಸಾಂನಲ್ಲಿ ಅತಿ ಕಡಿಮೆ ಹಣದುಬ್ಬರ (–) ಶೇ 0.66 ಇದೆ.



ಸುದ್ದಿ 2 ನಿಮಿಷ

ಸೆನ್ಸೆಕ್ಸ್ 355 ಅಂಶ ಹೆಚ್ಚಳ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 355 ಅಂಶ ಹೆಚ್ಚಳವಾಗಿ, 81,904ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಏರಿಕೆಯಾಗಿ, 25,114ಕ್ಕೆ ಕೊನೆಗೊಂಡಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಅಲ್ಲದೆ, ಭಾರತ ಹಾಗೂ ಅಮೆರಿಕ ನಡುವೆ ವ್ಯಾಪಾರ ಮಾತುಕತೆ ಶೀಘ್ರ ನಡೆಯುವ ನಿರೀಕ್ಷೆಯು ಸಹ ಷೇರು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಭಾರತ್ ಎಲೆಕ್ಟ್ರಾನಿಕ್ಸ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಎಕ್ಸಿಸ್ ಬ್ಯಾಂಕ್, ಮಾರುತಿ ಸುಜುಕಿ ಮತ್ತು ಟಾಟಾ ಮೋಟರ್ಸ್ ಕಂಪನಿಯ ಷೇರಿನ ಮೌಲ್ಯ ಏರಿಕೆಯಾಗಿದೆ. ಎಟರ್ನಲ್, ಹಿಂದೂಸ್ತಾನ್ ಯೂನಿಲಿವರ್, ಟ್ರೆಂಟ್ ಮತ್ತು ಟೈಟನ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಹಾಂಗ್ ಕಾಂಗ್ ಸಕಾರಾತ್ಮಕ ವಹಿವಾಟು ಕಂಡಿವೆ. ಶಾಂಘೈ ನಕಾರಾತ್ಮಕ ವಹಿವಾಟು ನಡೆಸಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹3,472 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹4,045 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.47ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 66.72 ಡಾಲರ್ ಆಗಿದೆ.

ಎ.ಐನಿಂದ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ: ಸಚಿವ ನಿತಿನ್ ಗಡ್ಕರಿ

ನಾಗ್ಪುರ (ಪಿಟಿಐ): 'ಕೃಷಿ ವಲಯದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಕ್ರಾಂತಿಕಾರಕ ಬದಲಾವಣೆ ತರಲಿದ್ದು, ಇದರಿಂದ ರೈತರ ಜೀವನ ಮಟ್ಟ ಸುಧಾರಿಸಲಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯ ದೇಶದಲ್ಲಿ 350ರಿಂದ 400 ಕಾರ್ಖಾನೆಗಳು ಎಥೆನಾಲ್ ಉತ್ಪಾದಿಸುತ್ತಿವೆ. ಜೋಳದಿಂದ ಎಥೆನಾಲ್ ಉತ್ಪಾದಿಸುವುದರಿಂದ ರೈತರಿಗೆ ₹45 ಸಾವಿರ ಕೋಟಿಯಷ್ಟು ಆದಾಯ ಸಿಗುತ್ತಿದೆ. ಮೊದಲು ಜೋಳಕ್ಕೆ ಕ್ವಿಂಟಲ್‌ಗೆ ₹1,200 ದರ ಇತ್ತು. ಈಗ ಅದು ₹2,800ಕ್ಕೆ ಏರಿಕೆಯಾಗಿದೆ' ಎಂದರು.

ದೇಶದಾದ್ಯಂತ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ-20) ಬಳಕೆ ಜಾರಿಯಿಂದ ಗಡ್ಕರಿ ಅವರ ಇಬ್ಬರು ಪುತ್ರರಿಗೆ ಲಾಭ ಆಗುತ್ತದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಇಬಿಪಿ-20' ವಿರೋಧಿಸುತ್ತಿರುವವರಿಗೆ ಬೇರೆಯದೇ ಕಾರಣಗಳಿವೆ' ಎಂದರು.

ಎಥೆನಾಲ್ ವಿಷಯದಲ್ಲಿ ತಮ್ಮನ್ನು ರಾಜಕೀಯವಾಗಿ ಗುರಿಯಾಗಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ವ್ಯವಸ್ಥಿತ ಪ್ರಚಾರ ಮಾಡಲಾಗುತ್ತಿದೆ ಎಂದು ಗಡ್ಕರಿ ಗುರುವಾರ ಆರೋಪಿಸಿದ್ದರು.

ನಾಗ್ಪುರದಲ್ಲಿ ನವೆಂಬರ್ 21ರಿಂದ 24ರವರೆಗೆ ಗಡ್ಕರಿ ಮಾರ್ಗದರ್ಶನದಲ್ಲಿ 'ಅಗ್ರೊವಿಷನ್-2025' ಕೃಷಿ ಉಪಕರಣಗಳ ಪ್ರದರ್ಶನ ಮೇಳ ಆಯೋಜಿಸಲಾಗಿದೆ.

ಕಳಚಿ ಬಿದ್ದ ವಿಮಾನ ಚಕ್ರ

ಮುಂಬೈ (ಪಿಟಿಐ): ಗುಜರಾತಿನ ಕಾಂಡ್ಲಾ ವಿಮಾನ ನಿಲ್ದಾಣದಿಂದ ಟೇಕ್‌ಆಫ್ ಆಗಿ ಮುಂಬೈಗೆ ಹೊರಟಿದ್ದ ಸ್ಪೈಸ್‌ಜೆಟ್ ಕ್ಯೂ400 ವಿಮಾನದ ಚಕ್ರವೊಂದು ಕಳಚಿ ಬಿದ್ದ ಪ್ರಸಂಗ ಶುಕ್ರವಾರ ನಡೆದಿದೆ. 75 ಜನರನ್ನು ಹೊಂದಿದ್ದ ಈ ವಿಮಾನವನ್ನು ಮುಂಬೈನ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಧ್ಯಾಹ್ನ 2.38ಕ್ಕೆ ಕಾಂಡ್ಲಾದಿಂದ ಹೊರಟ ವಿಮಾನ ಮಧ್ಯಾಹ್ನ 3.51ಕ್ಕೆ ಮುಂಬೈನಲ್ಲಿ ಸುರಕ್ಷಿತವಾಗಿ ಇಳಿದಿದೆ. ಎಲ್ಲ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತರಾಗಿದ್ದಾರೆ ಎಂದು ಮುಂಬೈನ ವಿಮಾನ ನಿಲ್ದಾಣ ನಿರ್ವಾಹಕರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)	
12-09-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಪಾಮ್ ವಾರದ ಡೆಲಿವರಿ	1268 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,200 (1,08,800)
ಬೆಳ್ಳಿ ಕೆ.ಜಿಗೆ	1,27,800 (1,24,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಟ್ರಂಪ್ ಆರ್ಥಿಕ ನೀತಿ–ಅಮೆರಿಕಕ್ಕೇ ವಿನಾಶಕಾರಿ'

ಹೈದರಾಬಾದ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕೆಲವು ಆರ್ಥಿಕ ನೀತಿಗಳು ಜಾಗತಿಕ ಆರ್ಥಿಕ ಪ್ರವೃತ್ತಿಗಳನ್ನು ನಿಶ್ಚಲಗೊಳಿಸಿರುವುದು ಮಾತ್ರವಲ್ಲ, ಉತ್ತರ ಅಮೆರಿಕ ದೇಶಕ್ಕೂ 'ಸ್ವಯಂ ವಿನಾಶಕಾರಿ'ಯಾಗಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ಸಿ.ರಂಗರಾಜನ್ ಶುಕ್ರವಾರ ಆತಂಕ ವ್ಯಕ್ತಪಡಿಸಿದ್ದಾರೆ.

ಉನ್ನತ ಶಿಕ್ಷಣ ಕ್ಷೇತ್ರದ ಐಸಿಎಫ್‌ಎಐ ಫೌಂಡೇಷನ್‌ನ 15ನೇ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದ ಅವರು, 'ಮುಕ್ತ ವ್ಯಾಪಾರ ಹೊಂದಿರುವ ವಿವಿಧ ದೇಶಗಳ ಗುಂಪುಗಳ ಹೊರಹೊಮ್ಮುವಿಕೆ ಇಂದು ಅನಿವಾರ್ಯವಾಗಿದೆ. ಇದರ ಅಂತಿಮ ಗುರಿಯು ಮುಕ್ತ ವ್ಯಾಪಾರ ಕೇಂದ್ರೀಕರಿಸುವ ವಿಶಾಲ ಜಗತ್ತನ್ನು ಹೊಂದುವುದು ಆಗಿರಬೇಕು' ಎಂದು 'ಬ್ರಿಕ್ಸ್' ಹೆಸರು ಪ್ರಸ್ತಾಪಿಸದೇ ಅವರು ಹೇಳಿದರು.

ಬೆಳ್ಳಿ ದರ ₹4 ಸಾವಿರ ಜಿಗಿತ

8 ತಿಂಗಳಿನಲ್ಲಿ ಚಿನ್ನದ ಬೆಲೆ ಶೇ 44, ಬೆಳ್ಳಿ ಶೇ 47ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿವೆ.

ಬೆಳ್ಳಿ ಧಾರಣೆ ಕೆ.ಜಿಗೆ ₹4 ಸಾವಿರ ಏರಿಕೆಯಾಗಿದ್ದು, ₹1.32 ಲಕ್ಷವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹700 ಹೆಚ್ಚಳವಾಗಿ, ₹1,13,800ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,13,300 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ಡಿಸೆಂಬರ್ 31ರಿಂದ ಇದುವರೆಗೆ ಚಿನ್ನದ ಬೆಲೆ ಶೇ 44ರಷ್ಟು ಏರಿಕೆ ಆಗಿದ್ದರೆ, ಬೆಳ್ಳಿ ದರವು ಶೇ 47ರಷ್ಟು ಹೆಚ್ಚಳವಾಗಿದೆ. ಮೌಲ್ಯದ ಲೆಕ್ಕದಲ್ಲಿ ಕ್ರಮವಾಗಿ ₹34,850 ಮತ್ತು ₹42,300 ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಶೀಘ್ರದಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಇದು ಹೂಡಿಕೆದಾರರು ಚಿನ್ನವನ್ನು ಖರೀದಿಸಲು ಉತ್ತೇಜನ ನೀಡಿದ್ದರಿಂದ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಕೈಗಾರಿಕೆಗಳಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಹೀಗಾಗಿ ಬೆಳ್ಳಿ ದರ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಚಿನ್ನದ ದರ ಹೆಚ್ಚಳ ಸಾಧ್ಯತೆ: ಯುಬಿಎಸ್

ಬೆಂಗಳೂರು (ರಾಯಿಟರ್ಸ್): ಪ್ರಸಕ್ತ ವರ್ಷದ ಅಂತ್ಯದ ವೇಳೆಗೆ ಜಾಗತಿಕ ಮಾರುಕಟ್ಟೆಯಲ್ಲಿ ಒಂದು ಔನ್ಸ್ (28.34 ಗ್ರಾಂ) ಚಿನ್ನದ ಬೆಲೆ ಸುಮಾರು ₹26 ಸಾವಿರ ಹೆಚ್ಚಳವಾಗಿ, ₹3.35 ಲಕ್ಷವಾಗಲಿದೆ ಎಂದು ಸ್ವಿಟ್ಜರ್ಲೆಂಡ್‌ನ ಬ್ರೋಕರೇಜ್ ಸಂಸ್ಥೆ ಯುಬಿಎಸ್ ಅಂದಾಜಿಸಿದೆ.

2026ರ ಮಧ್ಯದ ವೇಳೆಗೆ ₹3.44 ಲಕ್ಷವಾಗಬಹುದು ಎಂದು ಸಂಸ್ಥೆ ಹೇಳಿದೆ. ಡಾಲರ್ ಮೌಲ್ಯ ಇಳಿಕೆ ಮತ್ತು ಭೌಗೋಳಿಕ ರಾಜಕೀಯ ಬಿಕ್ಕಟ್ಟು ಹಳದಿ ಲೋಹದ ದರ ಏರಿಕೆಗೆ ಕಾರಣವಾಗಿವೆ ಎಂದು ಶುಕ್ರವಾರ ಹೇಳಿದೆ. ಇದು ಭಾರತ ಸೇರಿ ಜಾಗತಿಕ ಮಾರುಕಟ್ಟೆ ಮೇಲೂ ಪರಿಣಾಮ ಬೀರಬಹುದು ಎಂದಿದೆ.

ಸ್ವಿಸ್ ಬ್ಯಾಂಕ್ ಕೂಡ ಗೋಲ್ಡ್ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ (ಇಟಿಎಫ್) ದಾಸ್ತಾನಿನ ಅಂದಾಜನ್ನು ಪರಿಷ್ಕರಿಸಿದ್ದು, 2025ರ ಅಂತ್ಯದ ವೇಳೆಗೆ 3,900 ಟನ್ ಮೀರುವ ನಿರೀಕ್ಷೆಯಿದೆ. 2020ರ ಅಕ್ಟೋಬರ್‌ನಲ್ಲಿ 3,915 ಟನ್ ಚಿನ್ನ ಹೊಂದಿತ್ತು.

ಜಾಗತಿಕ ಮಟ್ಟದಲ್ಲಿನ ಆರ್ಥಿಕ ಅನಿಶ್ಚಿತತೆ ಮತ್ತು ಭೌಗೋಳಿಕ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಚಿನ್ನವು ಸುರಕ್ಷಿತ ಹೂಡಿಕೆ ಎಂದು ಪರಿಗಣಿಸಿದ್ದು, ಹೂಡಿಕೆಗೆ ಮುಂದಾಗಿದ್ದಾರೆ. ಇದರಿಂದ ಹಳದಿ ಲೋಹದ ದರ ಹೆಚ್ಚಳವಾಗಿದೆ.

ಛತ್ತೀಸಗಢ: ಎನ್‌ಕೌಂಟರ್ ಇಬ್ಬರು ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಶುಕ್ರವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ನಕ್ಸಲರು ಮೃತಪಟ್ಟಿದ್ದಾರೆ.

ಭದ್ರತಾ ಸಿಬ್ಬಂದಿ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ವೇಳೆ ಈ ಎನ್‌ಕೌಂಟರ್ ನಡೆದಿದೆ. ನಕ್ಸಲರ ಮೃತದೇಹಗಳು, ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಘಟನಾ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುರುವಾರ ನಡೆದ ಪ್ರಮುಖ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ, ನಾಲ್ವರು ಮಹಿಳೆಯರು ಸೇರಿದಂತೆ 10 ನಕ್ಸಲರನ್ನು ಗರಿಯಾಬಂದ್ ಜಿಲ್ಲೆಯಲ್ಲಿ ಎನ್‌ಕೌಂಟರ್ ಮಾಡಲಾಗಿದ್ದು, ಸಿಪಿಐ (ಮಾವೋವಾದಿ) ಸದಸ್ಯ ಮೋಡೆಂ ಬಾಲಕೃಷ್ಣ ಸಹ ಹತ್ಯೆಯಾಗಿದ್ದಾನೆ. ಈ ಎಲ್ಲರ ಸುಳಿವು ನೀಡಿದವರಿಗೆ ಒಟ್ಟು ₹5.25 ಕೋಟಿ ಬಹುಮಾನ ಘೋಷಿಸಲಾಗಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

19ನೇ ವಾರ್ಷಿಕ ಚಿರಸ್ಮರಣೆ



ಶ್ರೀ ಸೂದಾ ಕೃಷ್ಣಪ್ಪ, ಆನೇಕಲ್
ನಿಧನ: 13.09.2006
ನೀವು ನಮ್ಮನ್ನಗಲಿ ಇಂದಿಗೆ ಹತ್ತೊಂಬತ್ತು ವರ್ಷವಾಯಿತು. ನಿಮ್ಮ ಸವಿನೆನಪೇ ನಮಗೆ ದಿವ್ಯ ಚೇತನ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಸದಾ ಪ್ರಾರ್ಥಿಸುವ ಹಾಗೂ ನಿಮ್ಮ ಸವಿನೆನಪಿನಲ್ಲಿರುವ
ಮಕ್ಕಳು, ಕುಟುಂಬ ಹಾಗೂ ಬಂಧು–ಮಿತ್ರರು



₹882 ಕೋಟಿ ವೆಚ್ಚದಲ್ಲಿ ಸೌರಕೋಶ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಪಾನಿನ ಹೊಸಾಡಾ ಹೋಲ್ಡಿಂಗ್ಸ್ ಕಂಪನಿಯು ರಾಜ್ಯದಲ್ಲಿ ಸೌರಕೋಶ ತಯಾರಿಕಾ ಘಟಕವನ್ನು ಸ್ಥಾಪಿಸಲು ₹882 ಕೋಟಿ ಹೂಡಿಕೆ ಮಾಡಲಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಬಂಡವಾಳ ಆಕರ್ಷಣೆಗಾಗಿ ಜಪಾನ್ ಪ್ರವಾಸದಲ್ಲಿರುವ ಎಂ.ಬಿ.ಪಾಟೀಲರು ಹೋಸಾಡಾ ಹೋಲ್ಡಿಂಗ್ಸ್ ಅಧ್ಯಕ್ಷ ನಕಾಮುರಾ ಸ್ಯಾನ್ ಅವರ ಭೇಟಿಯ ನಂತರ ಈ ಮಾಹಿತಿ ನೀಡಿದ್ದಾರೆ.

'ತೋಂಗ್ ತರ್ ಎನರ್ಜಿ ಸೊಲ್ಯೂಷನ್ಸ್ (ಟಿಟಿಇಎಸ್) ಸಹಯೋಗದಲ್ಲಿ ಈ ಯೋಜನೆ ಕಾರ್ಯಗತವಾಗಲಿದೆ. ಫೆಬ್ರುವರಿಯಲ್ಲಿ ನಡೆದಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಟಿಟಿಇಎಸ್ ಕಂಪನಿಯು ₹490 ಕೋಟಿ ವೆಚ್ಚದಲ್ಲಿ ಘಟಕ ಆರಂಭಿಸಲು ಒಪ್ಪಂದಕ್ಕೆ ಸಹಿ ಹಾಕಿತ್ತು. ಈಗ ಹೊಸಾಡಾ ಹೋಲ್ಡಿಂಗ್ಸ್ ಸಹಯೋಗದಲ್ಲಿ ಒಟ್ಟು ₹882 ಕೋಟಿ ಹೂಡಿಕೆ ಆಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಹೊಸಾಡಾ ಹೋಲ್ಡಿಂಗ್ಸ್‌ನ ಅಧ್ಯಕ್ಷ ನಕಾಮುರಾ ಸ್ಯಾನ್ ಅವರಿಗೆ ಎಂ.ಬಿ. ಪಾಟೀಲ ಅವರು ಉಡುಗೊರೆ ನೀಡಿದರು

'ಸೌರಫಲಕಗಳಲ್ಲಿ ಬಳಸುವ ಸೌರಕೋಶಗಳ ತಯಾರಿಕೆಯಲ್ಲಿ ಇದು ಮಹತ್ವದ ಮೈಲುಗಲ್ಲಾಗಲಿದೆ. ದೇಶದ ಸೌರಕೋಶಗಳ ಬೇಡಿಕೆ ಪೂರೈಸುವಲ್ಲಿ ರಾಜ್ಯಕ್ಕೆ ಮಹತ್ವದ ಸ್ಥಾನ ದೊರೆಯಲಿದೆ. ಈ ಘಟಕದಿಂದ 500 ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದಿದ್ದಾರೆ.

'ಕ್ರೀಡಾ ಪರಿಕರಗಳ ತಯಾರಿಕಾ ಕಂಪನಿ ಇನಾಬತಾವು ರಾಜ್ಯದಲ್ಲಿ ತನ್ನ ಘಟಕ ಸ್ಥಾಪಿಸಲಿದ್ದು, 2027ರಲ್ಲಿ ಅದು ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಡೈ ತಯಾರಿಕಾ ಕಂಪನಿ ಟೆತ್ಸುಜಿಕಾವಾ ರಾಜ್ಯದಲ್ಲಿನ ತನ್ನ ಘಟಕವನ್ನು ವಿಸ್ತರಿಸುವ ಬಗ್ಗೆ ಆಸಕ್ತಿ ತೋರಿಸಿದೆ' ಎಂದು ಹೇಳಿದ್ದಾರೆ.

'ಸಣ್ಣ ವಾಹನದಲ್ಲಿ 4 ಗಂಟೆ ಬಂದಿ'

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತದಿಂದ ನೇಪಾಳಕ್ಕೆ ಭೇಟಿ ನೀಡಿ ಆಂಧ್ರಪ್ರದೇಶಕ್ಕೆ ಮರಳಿದ ಪ್ರವಾಸಿಗರು ಅಲ್ಲಿನ ಹಿಂಸಾಚಾರದ ಕುರಿತ ಕೆಟ್ಟ ಅನುಭವವನ್ನು ಹಂಚಿಕೊಂಡಿದ್ದಾರೆ.

ವಿಶಾಖಪಟ್ಟಣದಿಂದ ನೇಪಾಳಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದ 10 ಮಂದಿ ಅಲ್ಲಿನ ಮುಕ್ತಿನಾಥ ದೇವಾಲಯಕ್ಕೆ ಭೇಟಿ ನೀಡುವ ಮುನ್ನ ಪೋಖರಾದ ಹೋಟೆಲ್‌ನಲ್ಲಿ ಲಗೇಜ್‌ಗಳನ್ನು ಇರಿಸಿದ್ದರು. ದೇವಸ್ಥಾನದಿಂದ ಮರಳುವ ವೇಳೆಗೆ, ಹೋಟೆಲ್ ಅನ್ನು ಸ್ಥಳೀಯ ಗುಂಪೊಂದು ಸುಟ್ಟುಹಾಕಿತ್ತು. ಅದರೊಳಗಿದ್ದ ಪ್ರವಾಸಿಗರ ಲಗೇಜ್‌ಗಳು ಸುಟ್ಟು ಹೋಗಿದ್ದವು. ಬೇರೆಡೆ ಹೋಗಲು ಸಾಧ್ಯವಾಗದ ಸ್ಥಿತಿಯಲ್ಲಿದ್ದ ಅವರಿಗೆ ನೇಪಾಳಿ ಚಾಲಕರು ಸಹಾಯಕ್ಕೆ ಧಾವಿಸಿದ್ದು, ಆಕ್ರಮಣಕಾರರಿಂದ ರಕ್ಷಿಸಿದರು.

'ನಾವೆಲ್ಲಾ ಸಣ್ಣ ವಾಹನದಲ್ಲಿ ನಾಲ್ಕು ಗಂಟೆಗಳವರೆಗೆ ಸಿಕ್ಕಿಕೊಂಡಿದ್ದೆವು. ಕ್ಷಣಕ್ಷಣಕ್ಕೂ ನಮ್ಮ ಹೃದಯ ಬಡಿತ ಹೆಚ್ಚಾಗುತ್ತಿತ್ತು. ವಾಹನದ ಕಿಟಕಿಯ ಗಾಜುಗಳನ್ನು ಇಳಿಸುವಂತೆ ಗುಂಪೊಂದು ಒತ್ತಾಯಿಸಿತ್ತು. ಆ ಸಂದರ್ಭದಲ್ಲಿ, ಅವರು ನಮ್ಮ ಮೇಲೆ ದಾಳಿ ನಡೆಸುತ್ತಾರೆ ಎಂದೇ ಭಾವಿಸಿದ್ದೆವು. ಭಾರತದಿಂದ ಬಂದಿರುವ ಪ್ರವಾಸಿಗರು ಎಂದು ನೇಪಾಳಿ ಚಾಲಕರು ಮನವರಿಕೆ ಮಾಡಲು ಪ್ರಯತ್ನಿಸಿದರು. ನಮ್ಮ ಗುಂಪಿನ ಮಹಿಳೆಯರನ್ನು ನೋಡಿದ ಬಳಿಕ ಆಕ್ರಮಣಕಾರರು ಅಲ್ಲಿಂದ ಹೊರಟರು' ಎಂದು ಎಲ್‌ಐಸಿ ಉದ್ಯೋಗಿ ಲಕ್ಷ್ಮಿ ನಿಟ್ಟುಸಿರು ಬಿಟ್ಟಿದ್ದಾರೆ.

ಭಾರತೀಯರಿದ್ದ ಬಸ್ ಮೇಲೆ ದಾಳಿ

ಮಹಾರಾಜ್‌ಗಂಜ್ (ಯುಪಿ) (ಪಿಟಿಐ): ನೇಪಾಳದಲ್ಲಿ ನಡೆಯುತ್ತಿರುವ ಹಿಂಸಾಚಾರದ ನಡುವೆ ಕಠ್ಮಂಡುವಿನ ಪಶುಪತಿನಾಥ ದೇವಾಲಯದಿಂದ ಹಿಂದಿರುಗುತ್ತಿದ್ದ ಭಾರತದ ಪ್ರವಾಸಿ ಬಸ್ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದ್ದರಿಂದ ಕೆಲ ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಬಸ್ ಚಾಲಕ ಆರೋಪಿಸಿದ್ದಾರೆ.

ಭಾರತ–ನೇಪಾಳ ಗಡಿಯಲ್ಲಿ ಸೋನೌಲಿ ಬಳಿ ಸೆ.9ರಂದು 49 ಭಾರತೀಯರಿದ್ದ ಬಸ್ ಮೇಲೆ ಕಲ್ಲು ತೂರಾಟ ನಡೆಸಿದ್ದು, ಕಿಟಕಿ ಗಾಜುಗಳು ಒಡೆದಿವೆ. ಬಸ್‌ನಲ್ಲಿದ್ದ ಮಹಿಳೆಯರು, ವೃದ್ಧರು ಸೇರಿದಂತೆ ಪ್ರಯಾಣಿಕರು ಗಾಯಗೊಂಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

EXCITING CARRIER Opportunity. Sahakar Nagara & Koramangala For financial Sector (MNC) Retired Bankers, Govt. CASA Employees, Mutual Fund Brokers, Sales Managers or any other Financial Institution professionals also Graduate House makers. Age above 35-65yrs, Good Salary, Incentives. Fast track carrier growth. Contact:7795883094 / 8277059719

ತಕ್ಷಣ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/-ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/-25000/- 7th, 10th, AnyDegree. 9019427194

Marketing & Sales

WANTED A Operation Executive for a Transport Co. in Bengaluru. Send CV at sgupta@kalayatancargo.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಯುರೋಪ್ ಅಡ್ಡಿ: ಮಾತುಕತೆ ಸ್ಥಗಿತ'

ಮಾಸ್ಕೊ (ರಾಯಿಟರ್ಸ್): 'ರಷ್ಯಾ–ಉಕ್ರೇನ್ ಸಂಘರ್ಷ ಕೊನೆಗೊಳಿಸಿ, ಶಾಂತಿ ಸ್ಥಾಪಿಸುವ ಮಾತುಕತೆಯೂ ಸ್ಥಗಿತಗೊಂಡಿದ್ದು, ಐರೋಪ್ಯ ದೇಶಗಳು ಈ ಪ್ರಕ್ರಿಯೆಗೆ ಅಡ್ಡಿಪಡಿಸುತ್ತಿವೆ' ಎಂದು ಕ್ರೆಮ್ಲಿನ್ ಶುಕ್ರವಾರ ತಿಳಿಸಿದೆ.

ಮಾತುಕತೆಗೆ ರಷ್ಯಾವೂ ಈಗಲೂ ಸಿದ್ಧವಿದೆ ಎಂದು ಸ್ಪಷ್ಟಪಡಿಸಿದೆ.

ರಷ್ಯಾ ಹಾಗೂ ಉಕ್ರೇನ್‌ನ ಸಂಧಾನಕಾರರು ಈ ವರ್ಷದಲ್ಲಿ ಇಸ್ತಾಂಬುಲ್‌ನಲ್ಲಿ ಮೂರು ಸುತ್ತಿನ ಮಾತುಕತೆ ನಡೆಸಿದ್ದರು. ಜುಲೈ 23ರಂದು ನಡೆದ ಕೊನೆಯ ಮಾತುಕತೆಯಲ್ಲಿ ಯುದ್ಧದಲ್ಲಿ ಸಿಕ್ಕಿಬಿದ್ದ ಯುದ್ಧ ಕೈದಿಗಳು ಹಾಗೂ ಮೃತಪಟ್ಟ ಯೋಧರ ದೇಹಗಳ ಹಸ್ತಾಂತರ ಸಂಬಂಧ ಹಲವು ಮಾತುಕತೆಗಳು ನಡೆದಿದ್ದವು.

ಉಕ್ರೇನ್ 'ವಾಸ್ತವ ಸ್ಥಿತಿಗಳನ್ನು ಒಪ್ಪಿಕೊಳ್ಳುತ್ತಿಲ್ಲ' ಎಂದು ರಷ್ಯಾ ಆರೋಪಿಸಿದೆ. ತನಗೆ ಸೇರಿದ ಜಾಗವನ್ನು ವಶಕ್ಕೆ ಪಡೆಯಲು ರಷ್ಯಾವು ಹೆಚ್ಚು ಆಸಕ್ತಿ ತೋರಿಸುತ್ತಿದೆ ಎಂದು ಉಕ್ರೇನ್ ದೂರಿದೆ.

ಈ ಮಧ್ಯೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉಭಯ ರಾಷ್ಟ್ರಗಳ ನಡುವೆ ಕದನ ವಿರಾಮ ಒಪ್ಪಂದ ಏರ್ಪಡಿಸಲು ನಡೆಸಿದ ಪ್ರಯತ್ನಗಳು ಕೂಡ ಫಲ ನೀಡಿಲ್ಲ.

'ಮಾತುಕತೆ ಮಾರ್ಗವೂ ಸಿದ್ಧ ಗೊಂಡಿದ್ದು, ಕಾರ್ಯನಿರ್ವಹಿಸುತ್ತಿವೆ. ಆದರೆ, ಯುರೋಪ್ ರಾಷ್ಟ್ರಗಳು ಇದಕ್ಕೆ ಅಡ್ಡಿಯಾಗುತ್ತಿವೆ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ತಿಳಿಸಿದ್ದಾರೆ.

ಚಾರ್ಲಿ ಕಿರ್ಕ್ ಹತ್ಯೆ: ಶಂಕಿತನ ಸೆರೆ

ಒರೆಮ್, ಉತಾಹ್/ ವಾಷಿಂಗ್ಟನ್ (ರಾಯಿಟರ್ಸ್/ ಎಎಫ್‌ಪಿ): ಅಮೆರಿಕದ ಪ್ರಮುಖ ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಅವರನ್ನು ಗುಂಡಿಕ್ಕಿ ಕೊಲೆ ಮಾಡಿದ ಶಂಕಿತ ಆರೋಪಿ ಟೈಲರ್ ರಾಬಿನ್‌ಸನ್ (22) ಎಂಬಾತನನ್ನು ಬಂಧಿಸಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

'ಅವನ ಹತ್ತಿರದವರು ನೀಡಿದ ಸುಳಿವು ಆಧರಿಸಿ ಬಂಧಿಸಲಾಗಿದೆ' ಎಂದು ಟ್ರಂಪ್ ಅವರು ಫಾಕ್ಸ್ ನ್ಯೂಸ್‌ಗೆ ಶುಕ್ರವಾರ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ್ದ ಉತಾಹ್ ರಾಜ್ಯಪಾಲ ಸ್ಪೆನ್ಸರ್ ಕಾಕ್ಸ್ ಹಾಗೂ ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್, 'ಕಿರ್ಕ್ ಅವರನ್ನು ಕೊಂದ ಯುವಕನನ್ನು ಪತ್ತೆ ಮಾಡಲು ಸಾರ್ವಜನಿಕರು ಸಹಕರಿಸಬೇಕು' ಎಂದು ಕೋರಿದ್ದರು.

ಕೊಲೆಗಾರನ ಬಗ್ಗೆ ಮಾಹಿತಿ ನೀಡಿದವರಿಗೆ ಒಂದು ಲಕ್ಷ ಡಾಲರ್ ಬಹುಮಾನ ನೀಡುವುದಾಗಿ ಎಫ್‌ಬಿಐ ಘೋಷಿಸಿತ್ತು.

ಒರೆಮ್ ನಗರದ ಉತಾಹ್ ವ್ಯಾಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ 'ದಿ ಅಮೆರಿಕನ್ ಕಮ್‌ಬ್ಯಾಕ್ ಟೂರ್' ಕಾರ್ಯಕ್ರಮ ಆಯೋಜಿಸಲಾಗಿತ್ತು. ಸುಮಾರು 3 ಸಾವಿರ ಜನ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಟೆಂಟ್ ರೀತಿಯ ವೇದಿಕೆಯಲ್ಲಿ ಕೂತಿದ್ದ ಚಾರ್ಲಿ ಕಿರ್ಕ್ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಿದ್ದರು. ಮಧ್ಯಾಹ್ನ 12.20ರ ವೇಳೆ ಅವರು ಅಮೆರಿಕದಲ್ಲಿ ಮಾಸ್ ಶೂಟಿಂಗ್ ಬಗ್ಗೆ ಬಂದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಿದ್ದರು. ಆಗ ಕಟ್ಟಡದ ಚಾವಣಿಯಿಂದ ಕಿರ್ಕ್ ಕಡೆಗೆ ಗುಂಡು ಹಾರಿದ್ದು, ಕಿರ್ಕ್ ಅವರ ಕುತ್ತಿಗೆ ಭಾಗಕ್ಕೆ ತಗುಲಿ ತೀವ್ರ ರಕ್ತಸ್ರಾವವಾಗಿತ್ತು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆಯೇ ಅವರು ಅಸುನೀಗಿದ್ದರು.



ಚಾರ್ಲಿ ಕಿರ್ಕ್

31 ವರ್ಷದ ಕಿರ್ಕ್, ಅಮೆರಿಕದ ಅತ್ಯಂತ ಪ್ರಮುಖ ಬಲಪಂಥೀಯ ಯುವ ಸಂಘಟನೆ 'ಟರ್ನಿಂಗ್ ಪಾಯಿಂಟ್'ನ ಸ್ಥಾಪಕರಾಗಿದ್ದರು. ಬಲಪಂಥೀಯ ವಿಚಾರಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದರು. ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಪರ ಯುವ ಅಲೆ ಎದ್ದೇಳಲು ಕಿರ್ಕ್ ಪ್ರಮುಖ ಕಾರಣ ಎನ್ನಲಾಗಿದೆ.

2026ರ ಮಾರ್ಚ್‌ನಲ್ಲಿ ಸಾರ್ವತ್ರಿಕ ಚುನಾವಣೆ: ಅಧ್ಯಕ್ಷ ಪೌಡೆಲ್

ನೇಪಾಳ: ಸುಶೀಲಾ ಕಾರ್ಕಿ ಪ್ರಧಾನಿ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕಾರ್ಕಿ (73) ಅವರು ನೂತನ ಪ್ರಧಾನಿಯಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ.

'ಜೆನ್–ಝಿ' ಪ್ರತಿಭಟನೆಯಿಂದಾಗಿ ಈ ವಾರದ ಆರಂಭದಲ್ಲಿ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಅವರ ದಿಢೀರ್ ರಾಜೀನಾಮೆಯ ನಂತರ ನೇಪಾಳದಲ್ಲಿ ತಲೆತೋರಿದ್ದ ರಾಜಕೀಯ ಅನಿಶ್ಚಿತತೆಗೆ ಇದರೊಂದಿಗೆ ತೆರೆಬಿದ್ದಂತಾಗಿದೆ.

'ಅಭಿನಂದನೆಗಳು... ನಿಮಗೆ ಹಾಗೂ ಈ ದೇಶಕ್ಕೆ ಯಶಸ್ಸನ್ನು ಬಯಸುತ್ತೇವೆ' ಎಂದು ದೇಶದ ಮೊದಲ ಮಹಿಳಾ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕಾರ್ಕಿ ಅವರಿಗೆ ಅಧ್ಯಕ್ಷ ರಾಮಚಂದ್ರ ಪೌಡೆಲ್ ಶುಭ ಹಾರೈಸಿದ್ದಾರೆ.

ಪೌಡೆಲ್ ಅಲ್ಲದೆ ಉಪಾಧ್ಯಕ್ಷ ರಾಮ ಸಹಾಯ್ ಯಾದವ್, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಮಾನ್ ಸಿಂಗ್ ರಾವತ್ ಅವರು ಶುಕ್ರವಾರ ರಾತ್ರಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಇದ್ದರು.

ಸಂಸತ್ತು ವಿಸರ್ಜನೆ: ನೇಪಾಳ ಸಂಸತ್ತನ್ನು ಶುಕ್ರವಾರ ತಡರಾತ್ರಿ ವಿಸರ್ಜಿಸಲಾಯಿತು. 'ಪ್ರಧಾನ ಮಂತ್ರಿಯ ಶಿಫಾರಸಿನ ಮೇರೆಗೆ ಸಂಸತ್ತನ್ನು ವಿಸರ್ಜಿಸಲಾಗಿದೆ. 2026ರ ಮಾರ್ಚ್ 5ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ' ಎಂದು ಅಧ್ಯಕ್ಷರ ಕಚೇರಿ ತಿಳಿಸಿದೆ.

ಕಠ್ಮಂಡುವಿನಲ್ಲಿ ಶುಕ್ರವಾರ ನಿಷೇಧಾಜ್ಞೆ ಸಡಿಲಗೊಳಿಸಿದ ಸಂದರ್ಭದಲ್ಲಿ ತರಕಾರಿ ಹಾಗೂ ಅಗತ್ಯ ವಸ್ತುಗಳ ಖರೀದಿಗಾಗಿ ಜನರು ಮಾರುಕಟ್ಟೆಗಳತ್ತ ಹೆಜ್ಜೆಹಾಕಿದ್ದರು — ಎಎಫ್‌ಪಿ ಚಿತ್ರ

ಸಹಜಸ್ಥಿತಿಯತ್ತ ರಾಜಧಾನಿ: ನಿರ್ಬಂಧಗಳನ್ನು ಸಡಿಲಗೊಳಿಸಿದ ಬೆನ್ನಲ್ಲೇ ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ನಿಧಾನವಾಗಿ ಪುನರಾರಂಭಗೊಂಡಿವೆ. ಇದರೊಂದಿಗೆ ಕಣಿವೆ ಪ್ರದೇಶದ ಪೊಲೀಸರು ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ.

ಇಲ್ಲಿನ ಸುಪ್ರೀಂಕೋರ್ಟ್ ಮತ್ತು ಬ್ಯಾಂಕ್‌ಗಳು ಕಾರ್ಯಾರಂಭಿಸಲು ಸಿದ್ಧವಾಗಿವೆ. ಸರ್ಕಾರದ ವಿರುದ್ಧದ ಪ್ರತಿಭಟನೆ ವೇಳೆ ಸಂಸತ್ ಕಟ್ಟಡ ಸೇರಿದಂತೆ ಪ್ರಮುಖ ಕಟ್ಟಡಗಳು, ಹತ್ತಾರು ಪೊಲೀಸ್ ಠಾಣೆಗಳು, ಚೆಕ್‌ಪೋಸ್ಟ್‌ಗಳ ಮೇಲೆ ಪ್ರತಿಭಟನಕಾರರು ದಾಳಿ ಮಾಡಿ ಹಾನಿಗೊಳಿಸಿದ್ದರು. ಅದರಲ್ಲೂ ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಬ್ಯಾಂಕ್ ಕಚೇರಿಗಳು ಪೂರ್ಣಪ್ರಮಾಣದಲ್ಲಿ ಹಾನಿಗೊಳಗಾಗಿದೆ.

'ನ್ಯಾಯಾಲಯ ಕಲಾಪವನ್ನು ಮತ್ತೆ ಆರಂಭಿಸುವ ನಿರ್ಧಾರವನ್ನು ತುರ್ತು ಸಭೆಯಲ್ಲಿ ಕೈಗೊಳ್ಳಲಾಗಿದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಮಾನ್ ಸಿಂಗ್ ಹೇಳಿದ್ದಾರೆ. 'ನ್ಯಾಯಾಲಯದ ಪ್ರಮುಖ ದಾಖಲೆಗಳಿಗೆ ಶಾಶ್ವತ ಹಾನಿಯಾಗಿದೆ' ಎಂದು ತಿಳಿಸಿದ್ದಾರೆ.

'ಪೊಲೀಸ್ ಠಾಣೆ ಮತ್ತು ಚೆಕ್‌ಪೋಸ್ಟ್‌ಗಳು ಮತ್ತೆ ಕಾರ್ಯಾಚರಣೆ ಆರಂಭಿಸಿವೆ. ಪೊಲೀಸರು ಮತ್ತು ಸಶಸ್ತ್ರ ಪೊಲೀಸ್ ಪಡೆಯ ಸಿಬ್ಬಂದಿ ಚೆಕ್‌ಪೋಸ್ಟ್ ಮತ್ತು ರಸ್ತೆಗಳಲ್ಲಿ ಗಸ್ತು ನಡೆಸುತ್ತಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ ಎಂಬ ಬಗ್ಗೆ ನಿಖರ ಮಾಹಿತಿ ಲಭ್ಯವಿಲ್ಲ. ಉಳಿದಿರುವ ಮೂಲಸೌಕರ್ಯಗಳನ್ನು ಬಳಸಿಕೊಂಡು ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ' ಎಂದು ಪೊಲೀಸ್ ಇಲಾಖೆಯ ವಕ್ತಾರ ಎಸ್‌ಎಸ್‌ಪಿ ಶೇಖರ್ ಖನಾಲ್ ಅವರು ತಿಳಿಸಿದ್ದಾರೆ.

ಭಾರತದ ಮಹಿಳೆ ಸೇರಿ 51 ಸಾವು

ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಒಬ್ಬ ಭಾರತದ ಮಹಿಳೆ ಸೇರಿದಂತೆ ಒಟ್ಟು 51 ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸರು ಗುಂಡು ಹಾರಿಸಿದ ಪರಿಣಾಮ 19 ಮಂದಿ ಮೃತಪಟ್ಟಿದ್ದಾರೆ. ಅವರು ವಿದ್ಯಾರ್ಥಿಗಳು ಎನ್ನಲಾಗುತ್ತಿದೆ.

'ಸುಮಾರು 1,700 ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ 1,000 ಜನರು ಚಿಕಿತ್ಸೆ ಪಡೆದು ತಮ್ಮ ಮನೆಗೆ ಮರಳಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

‘ಭಾರತದ ಸದೃಢ ಆರ್ಥಿಕತೆ: ಅಮೆರಿಕಕ್ಕೆ ಆತಂಕ’



ಮನುಷ್ಯರು ತಮ್ಮ ಮನೋಭಾವವನ್ನು ‘ನಾನು’ ಎನ್ನುವ ಬದಲು, ‘ನಮಗೆ’ ಎಂದು ಬದಲಾಯಿಸಿಕೊಂಡರೆ, ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ

ಮೋಹನ್ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ

ನಾಗಪುರ (ಪಿಟಿಐ): ‘ದೇಶವು ಆರ್ಥಿಕವಾಗಿ ಸದೃಢವಾಗಬಹುದು ಎಂಬ ಆತಂಕದಿಂದಲೇ, ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸಲಾಗುತ್ತಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದರು.

‘ಇಂತಹ ಕ್ರಮಗಳು ಸ್ವಯಂ ಕೇಂದ್ರಿತ ವಿಧಾನದ ಪರಿಣಾಮಗಳಾಗಿವೆ’ ಎಂದು ಯಾವುದೇ ದೇಶದ ಹೆಸರನ್ನು ಉಲ್ಲೇಖ ಮಾಡದೆ ಅವರು ಪ್ರಸ್ತಾಪಿಸಿದರು.

ಇಲ್ಲಿ ನಡೆದ ಬ್ರಹ್ಮಕುಮಾರಿಯ ‘ವಿಶ್ವಶಾಂತಿ ಸರೋವರ’ದ 7ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಭಾರತವು ಹೆಚ್ಚು ಶಕ್ತಿಶಾಲಿಯಾಗಿ ಬೆಳೆದರೆ ಏನಾಗಬಹುದೋ ಎಂದು ಇಡೀ ಜಗತ್ತು ಆತಂಕದಲ್ಲಿದೆ. ಹೀಗಾಗಿಯೇ, ಭಾರತದ ವಸ್ತುಗಳಿಗೆ ಹೆಚ್ಚು ಸುಂಕ ವಿಧಿಸಲಾಗುತ್ತಿದೆ. ಆದರೆ ನಾವೇನೂ ಮಾಡಿಲ್ಲ. ನೀವು ಏಳು ಸಮುದ್ರದಿಂದ ದೂರವಿರುವಾಗ, ಯಾವುದೇ ಸಂಪರ್ಕ ಇಲ್ಲದಿರುವಾಗ ನಮಗೇಕೆ ಭಯ’ ಎಂದು ಮೋಹನ್ ಭಾಗವತ್ ಅವರು ಪ್ರಶ್ನಿಸಿದರು.

ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿರುವ ಭಾರತದ ಮೇಲೆ ಅಮೆರಿಕವು ಶೇಕಡ 50ರಷ್ಟು ಸುಂಕ ವಿಧಿಸುತ್ತಿದೆ. ಆದರೆ, ಇದು ಅನ್ಯಾಯ, ಅಸಮಂಜಸ ಎಂದು ಭಾರತವು ತಿರುಗೇಟು ನೀಡಿದೆ.

‘ಮನುಷ್ಯರು ಹಾಗೂ ದೇಶಗಳು ಸಮಸ್ಯೆಗಳನ್ನು ಎದುರಿಸುತ್ತಿವೆ. ತಮ್ಮ ಬಗ್ಗೆ ತಿಳಿದುಕೊಳ್ಳುವವರೆಗೂ, ಈ ಸಮಸ್ಯೆಗಳಿಗೆ ಪರಿಹಾರ ದೊರಕುವುದಿಲ್ಲ. ನಾವು ಸಹಾನುಭೂತಿ ತೋರಿಸಿ, ಜಯಿಸಿದರೆ, ನಮಗೆ ಯಾರೂ ಕೂಡ ಶತ್ರುಗಳು ಇರುವುದಿಲ್ಲ’ ಎಂದು ಭಾಗವತ್ ತಿಳಿಸಿದರು.

‘ಎಫ್‌ಆರ್‌ಎ ಉಲ್ಲಂಘಿಸಿದ ಅದಾನಿ ಸಮೂಹ’

ನವದೆಹಲಿ: ಅದಾನಿ ಸಮೂಹ, ಮಧ್ಯ ಪ್ರದೇಶದಲ್ಲಿ ಕಲ್ಲಿದ್ದಲು ಗಣಿ ಯೋಜನೆಗೆ ಸರ್ಕಾರಿ ಮತ್ತು ಅರಣ್ಯ ಪ್ರದೇಶದಲ್ಲಿನ ಮರಗಳನ್ನು ಕಡಿದು ಅರಣ್ಯ ಹಕ್ಕುಗಳ ಕಾಯ್ದೆ (ಎಫ್‌ಆರ್‌ಎ) ಉಲ್ಲಂಘಿಸಿದೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ಮಧ್ಯಪ್ರದೇಶ ಸರ್ಕಾರ ಈ ಆರೋಪ ಆಧಾರರಹಿತ ಎಂದಿದ್ದು, ಕೇಂದ್ರ ಪರಿಸರ ಇಲಾಖೆ ಈ ಯೋಜನೆಗೆ ಅಂತಿಮ ಅನುಮೋದನೆ ನೀಡಿದೆ ಎಂದು ಹೇಳಿದೆ. ‘ಮೋದಿ ಸರ್ಕಾರ 2019ರಲ್ಲಿ ಅದಾನಿ ಸಮೂಹಕ್ಕೆ ಯೋಜನೆಯನ್ನು ಹಂಚಿತು. 2025ರಲ್ಲಿ ಕಾನೂನು ಅನುಮತಿ ಇಲ್ಲದೆ ಯೋಜನೆ ಜಾರಿಗೊಳಿಸುತ್ತಿದೆ. ಇದು ‘ಮೋದಾನಿ’ ಕಾನೂನು ವ್ಯವಸ್ಥೆ’ ಎಂದು ಜೈರಾಮ್ ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

TNPL — TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.

NOTICE INVITING TENDER

Tender No.	Material Description	Due date
252613 004197	Procurement of Debarked Acacia pulpwood from open market sources of Karnataka to TNPL Unit - I at Kagithapuram.	26.09.2025

Corrigendum if any will be issued in TNPL Website only. For further details please visit website: **www.tnpl.com**

DIPR/5062/Tender/2025 — *TNPL - Maker of bagasse based eco-friendly Paper*

CENTRAL UNIVERSITY OF KARNATAKA
(Established by an Act of the Parliament in 2009)
Kadaganchi, Aland road, Kalaburagi-585 367., Phone (08477)-226722
Website: www.cuk.ac.in, Email: registrar@cuk.ac.in

No.CUK/CD/F-2023/05/54 — Date :11 September, 2025

NOTIFICATION

EMPANELMENT OF CONTRACTORS FOR MISCELLANEOUS PETTY CIVIL, SANITARY, PLUMBING, ELECTRICAL WORKS/REPAIR ETC. FOR FINANCIAL YEARS 2025-2026 & 2026-2027.

Central University of Karnataka invites applications for empanelment of contractors registered with Govt of Karnataka and or Central Government, CPWD, All India Radio, Department of Post, BSNL, NBCC, Kalaburagi Urban/Rural Development Authority (KUDA) etc. for empanelment as Civil and/or Electrical contractors and who have registered offices in the 100 Km vicinity of Kalaburagi for carrying out repair/minor works in the University, For Financial Years 2025-2026 & 2026-2027.

The application form for empanelment shall be downloaded from the **CENTRAL UNIVERSITY OF KARNATAKA** website www.cuk.ac.in the completed application for empanelment with necessary documents shall be submitted in a sealed envelope super scribing thereon "Application for empanelment of Civil and Electrical contractors" to The Registrar, Central University of Karnataka, Kalaburagi on or **before 15.00 hours on 13-10-2025.**

Place : Kalaburagi — **Sd/- REGISTRAR**

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ,
ಬೆಂಗಳೂರು–560023. email id: pdrch-hfws@karnataka.gov.in

No. HFWS-e-HOOTHR/74/2024(1581638) — Date: 12/09/2025

ಇ–ಪ್ರೊಕ್ಯುರ್ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

"PROCUREMENT, SUPPLY & INSTALLATION OF ICT EQUIPMENTS (An Active and Passive Components for networking) under e-Health NHM funds

ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ "PROCUREMENT, SUPPLY & INSTALLATION OF ICT EQUIPMENTS (An Active and Passive Components for networking) under e-Health NHM funds" ಗಳನ್ನು ಸರಬರಾಜು ಮಾಡಲು ಮೂಲ ತಯಾರಕರು/ಅಧಿಕೃತ ಸರಬರಾಜುದಾರರು ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

IND NO : NHM/2025-26/IND00034

ಆಸಕ್ತಿಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ : 12.09.2025 ರಿಂದ ಮತ್ತು ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.10.2025 ಅಪರಾಹ್ನ 5.30 ರ ಒಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 AM ರಿಂದ ಅಪರಾಹ್ನ 04.00 PM ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/2801/Zen/2025-26

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2025–26 — ದಿನಾಂಕ:09–09–2025

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳ ವ್ಯಾಪ್ತಿಯಲ್ಲಿ ಒಳಪಡುವ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ, 4059–80–051–0–32–383 ನ್ಯಾಯಾಲಯ ಕಟ್ಟಡಗಳು ಹಾಗೂ ನ್ಯಾಯಾಲಯ ಅಧಿಕಾರಿಗಳ ವಸತಿ ಸಮುಚ್ಚಯ ನಿರ್ಮಾಣ, 5054–03–337–0–17–154 ರಾಜ್ಯ ಹೆದ್ದಾರಿ – ಸುಧಾರಣೆಗಳ ಅಡಿಯಲ್ಲಿನ ಒಟ್ಟು 04 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ (Standard Tender Document KW-2 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿಗೆ ಒಳಪಟ್ಟಿದ್ದಲ್ಲಿ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.29.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.200.00 ಲಕ್ಷಗಳು ಆಗಿರುತ್ತದೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 04 ಕಾಮಗಾರಿಗಳಿಗೆ (ಇಂ. ಸಂಖ್ಯೆ:27657 ದಿನಾಂಕ: 16.09.2025, ಇಂ.ಸಂಖ್ಯೆ:21488 (3ನೇ ಕರೆ), 24018 ದಿನಾಂಕ:26.09.2025, ಇಂ.ಸಂಖ್ಯೆ:22720 ದಿನಾಂಕ:29.09.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com, — ದೂರವಾಣಿ: 08272–228800

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರದಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ ಕು. ಕಾರ್ತಿಕ್ ಎಂಬ ಬಾಲಕನ ತಂದೆ, ತಾಯಿ ಹಾಗೂ ಸಂಬಂಧಿಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಬಾಲಕನ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೊಡಗು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಾಂತಿನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ದೂರವಾಣಿ: 08272–228800ನ್ನು ಸಂಪರ್ಕಿಸಬಹುದು. ಮಾಹಿತಿ ದೊರೆಯದಿದ್ದಲ್ಲಿ ಬಾಲಕನನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು. ಪ್ರಸ್ತುತ ವಯಸ್ಸು ಅಂದಾಜು 16 ರಿಂದ 17 ವರ್ಷ. ಈ ಬಾಲಕನು ದಿನಾಂಕ 20–08–2025ರಂದು ಕುಶಾಲನಗರ ಪೊಲೀಸ್ ಠಾಣೆಯಿಂದ ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಿಸಿದ್ದು, ಪೋಷಣೆ ಮತ್ತು ರಕ್ಷಣೆ ಪಡೆಯುತ್ತಿದ್ದಾನೆ. ಬಾಲಕನಿಗೆ ಮಾತು ಬರುವುದಿಲ್ಲ, ಹಲ್ಲು ಸ್ವಲ್ಪ ಉಬ್ಬು ಇದ್ದು, ಬಾಲಕನನ್ನು ಹಾಜರುಪಡಿಸಿದ ಸಂದರ್ಭದಲ್ಲಿ ಮಿಲಿಟರಿ ಸಮವಸ್ತ್ರದಂತಿರುವ ಪ್ಯಾಂಟ್ ಮತ್ತು ಷರ್ಟು ಹಾಗೂ ಕನ್ನಡಕ ಧರಿಸಿರುತ್ತಾನೆ. ಪ್ರಸ್ತುತ 17 ವರ್ಷದ ಕೋಲು ಮುಖ, ಕಪ್ಪು ಮೈಬಣ್ಣ, ತೂಕ:36.8 ಕೆ.ಜಿ ಹಾಗೂ 165 ಸೆಂಮೀ. ಎತ್ತರವಿರುತ್ತಾನೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಮಡಿಕೇರಿ, ಕೊಡಗು ಜಿಲ್ಲೆ

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ,
ಧಾರವಾಡ – 580 005. ದೂರವಾಣಿ : 0836 – 2214291
ಮಿಂಚಂಚೆ : spo@uasd.in

ಸಂಖ್ಯೆ: ನಿ.ಅ./ಆ.ಅ./ಟೆಂಡರ್ ಇ–ಪ್ರೋಕ್–07/25–26 — ದಿನಾಂಕ: 11–09–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವೈಜ್ಞಾನಿಕ ಉಪಕರಣಗಳು ಹಾಗೂ ಕೃಷಿ ಸಲಕರಣೆಗಳ ಖರೀದಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದು, ನೋಂದಾಯಿತ ಅಧಿಕೃತ ಸರಬರಾಜುದಾರರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟ್‌ನ್ನು ಆನ್‌ಲೈನ್ ಮುಖಾಂತರ ಸಂಪರ್ಕಿಸುವುದು **http://kppp.karnataka.gov.in ಹಾಗೂ ಟೆಂಡರ್ ದಸ್ತಾವೇಜುಗಳನ್ನು ಡೌನಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 27–09–2025 (ಶನಿವಾರ) ಸಂಜೆ 6.00 ಗಂಟೆಯವರೆಗೆ. ಟೆಂಡರ್ ವೇಳಾಪಟ್ಟಿಯ ಇತರ ಮಾಹಿತಿಯನ್ನು ಇ–ಪೋರ್ಟಲ್ ನಲ್ಲಿ ಪಡೆಯಬಹುದು.**

ಟೆಂಡರಿನಲ್ಲಿ ಭಾಗವಹಿಸಲಿಚ್ಚಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. **ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 – 4601 0000.** ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ಹೆಚ್ಚಿನ ವಿವರಗಳಿಗಾಗಿ 0836 – 2214291 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಆಸ್ತಿ ಅಧಿಕಾರಿಗಳು, ಕೃ.ವಿ.ವಿ., ಧಾರವಾಡ.

ಡಿಐಪಿಆರ್/ಧಾರವಾಡ/657/ಮಣಿಪಾಲ್/2025–26

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778 &234747
THESE WORKS ARE CATAGEORY WISE CONTRACTORS

ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/2179 ದಿಃ 14–08–2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2 & 4)

1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/2501 ದಿನಾಂಕಃ 04–09–2025 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 59 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 326283.96 ಗರಿಷ್ಠ ರೂ. 21007818.39 4) **ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 4100.00 ಗರಿಷ್ಠ ರೂ. 315200.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 9 (ಒಂಭತ್ತು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 15/09/2025 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:** 16/09/2025 ಸಂಜೆ 4.30 ಗಂಟೆಯವರೆಗೆ

ಯಾವುದೇ ಅನುಬಂಧಗಳು, ಸ್ಪಷ್ಟೀಕರಣಗಳು, ದಿನಾಂಕಗಳನ್ನು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

DIP/RCR/399/KSMCA/400/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338/273859 — ಇ–ಮೇಲ್: eepwdckd@gmail.com

ಕ್ರ.ಸಂ.ಲೋ.ಇ/ಚಿ.ವಿ/ಸ.ಇಂ–1/ಟೆಂಡರ/2025–26/3227 — ದಿನಾಂಕ: 11.09.2025

ಅವಧಿ ವಿಸ್ತರಣೆ–1/ತಿದ್ದುಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ/ಚಿ.ವಿ/ಸ.ಇಂ–1/ಟೆಂಡರ್/2025–26/3097 ದಿನಾಂಕ 02.09.2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು ಸದರಿ ಪ್ರಕಟಣೆಯಲ್ಲಿನ ಕ್ರ.ಸಂ.1 ರಿಂದ 5 ಹಾಗೂ 7 ರಿಂದ 15 ರಲ್ಲಿನ ಕಾಮಗಾರಿಗಳಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–1/ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1. ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 17.09.2025 (ಸಾಯಂಕಾಲ 5.00ಗಂಟೆಯವರೆಗೆ)
2. ತಾಂತ್ರಿಕ ಬಿಡ್‌ನ್ನು ತೆರೆಯುವ (Two Cover System) ದಿನಾಂಕ: 19.09.2025 (ಸಾಯಂಕಾಲ 4.30 ಗಂಟೆಗೆ)
3. ಹಣಕಾಸು ಬಿಡ್ ನ್ನು ತೆರೆಯುವ (Two Cover System) ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
4. ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆ ಯಾಗುವುದು.

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO.NO 1014/2025-26

ಕರ್ನಾಟಕ ಸರ್ಕಾರ
Office of the Executive Engineer,
Panchayat Raj Engineering Division, HAVERI-581 110
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಹಾವೇರಿ–581110

ಇ–ಟೆಂಡರ್ ಪ್ರಕಟಣೆ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ. 23/ಪಂ.ರಾ.ಇಂ/ವಿ.ಹಾ/ಪಿ.ಬಿ–1&2/ಟೆಂಡರ್/2025–26/3195 ದಿನಾಂಕ: 09–09–2025

ದಿನಾಂಕ: 09–09–2025 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ **18560(SC), 18458, 18667, 18161, 17297/Call-2, 13759/Call-4 1,2 & 4** ನೇ ಕರೆ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹನೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17–09–2025 (ಮಧಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬಸೈಟ್ **http://www.kppp.karnatak.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ಕಾರ್ಯ ನಿರ್ವಾಹಕ ಇಂಜಿನೀಯರರು,
ಪಂಚಾಯತರಾಜ ಇಂಜನೀಯರರು ವಿಭಾಗ, ಹಾವೇರಿ

dipr/hvr/dipo/386/25-26

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563 103
Email:bnuregistrar@karnataka.gov.in
web:www.bnu.karnataka.gov.in

ದಿನಾಂಕ: 11.09.2025

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಇಲ್ಲಿಗೆ ಮೂಲಭೂತ ಸೌಕರ್ಯ ವಸ್ತುಗಳು **(Infrastructure Items)** ಸರಬರಾಜು ಮಾಡುವ ಬಗ್ಗೆ. **ಟೆಂಡರ್ ನಂ: BNU/2025-26/IND0054.** (2) ವಿಶ್ವವಿದ್ಯಾಲಯದ ಶಿಕ್ಷಣ ಕಾಲೇಜು ಚಿಕ್ಕಬಳ್ಳಾಪುರ ಇಲ್ಲಿ ಕ್ಯಾಂಪಸ್ ವೈರ್‌ಲೆಸ್ ಮತ್ತು ಲ್ಯಾನ್ ನೆಟ್‌ವರ್ಕ್ ಮಾನಿಟರಿಂಗ್ ಸ್ಥಾಪಿಸುವ ಬಗ್ಗೆ. **ಟೆಂಡರ್ ನಂ: BNU/2025-26/IND0055.** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು **ದಿನಾಂಕ: 11.09.2025** ರಿಂದ **http://kppp.karnataka.gov.in** ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/–
ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ–563103

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:275/ಕೆಎಸ್‌ಎಂಸಿಎ/2025–26

OFFICE OF THE COMMISSIONER FOR SERICULTURE DEVELOPMENT & DIRECTOR OF SERICULTURE
Department of Sericulture M.S. Building, 5th floor,
Dr. Ambedkar Veedhi, Bengaluru - 560001
Phone: 080-22252611, e-mail: teamsilk.tech2@gmail.com

NO: REF:DOS:EPRO:RFIX:1:2025 — DATE: 12-09-2025

TENDER NOTIFICATION

APPOINTING ASSAYER AGENCY TO CARRYOUT SAMPLING, QUALITY CHECKING AND GRADING OF COCOONS AT COCOON MARKETS ACROSS KARNATAKA STATE

The Commissioner for Sericulture Development & Director of Sericulture, Department of Sericulture, invites proposal in two cover system for appointing Assayer Agency to carryout sampling, quality checking and grading of Cocoons at Cocoon Markets across Karnataka State under 4 independent packages.

Calender of Events: (1) Tender Reference No. & Date: **DOS/EPRO/RFIX/1 /2025 Dt: 12-09-2025. (2)** Date of publishing: **12.09.2025. (3)** Pre-Bid Meeting Date & Time: **26-09-2025 at 11.30 A.M. (4)** Last date & Time for submission of Queries: **25-09-2025 upto 5.30 P.M. (5)** Last date & Time for submission of Tender: **13-10-2025 upto 5.30 P.M. (6)** Date & Time of opening of the technical bid: **15 -10-2025 at 11.00 A.M. (7)** Tentative Date & Time of opening of Financial bid: **27-10-2025 at 11.00 A.M. (8)** Tender Processing Fee: **As indicated in the e-procurement portal. (9)** EMD Amount: **As per Schedule of requirement. (10)** Address for communication: **Office of the Commissioner for Sericulture Development & Director of Sericulture, Department of Sericulture M.S. Building, 5th Floor, Dr. B.R. Ambedkar Veedhi Bengaluru-560001.**

Prospective bidders willing to participate in this tender can download the bid documents with visiting the web site **http://kppp.karnataka.gov.in.**

Sd/-
Additional Director of Sericulture (Tech)
& Tender Inviting Authority

DIPR/CP/2795/SPAN/2025-26

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.
web:http://www.hassancity.mrc.gov.in Email: commn_hassan@yahoo.com ದೂರವಾಣಿ: 08172– 268276
ಸಹಾಯವಾಣಿ: 08172–233702 ಫ್ಯಾಕ್ಸ್: 08172–234792

ನಂ:ಪೌಅ/ಹಾಮನಪಾ/ತಾಂತ್ರಿಕ ಶಾಖೆ/06/2025–26ದಿನಾಂಕ:10/09/2025

ಟೆಂಡರ್ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

2025–26ನೇ ಸಾಲಿನ ವಿವಿಧ ಅನುದಾನದಡಿಯಲ್ಲಿ, ವಿವಿಧ ಕಾಮಗಾರಿ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್(http://www.kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಸದರಿ ಟೆಂಡರ್‌ನಲ್ಲಿ ಕನಿಷ್ಠ ಟೆಂಡರ್ ಮೊತ್ತರೂ.5.00 ಲಕ್ಷ ಹಾಗೂ ಗರಿಷ್ಠ ಮೊತ್ತರೂ.75.00 ಲಕ್ಷಗಳ ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ಕಡೆಯ ದಿನಾಂಕವನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ಅಧಿಸೂಚನೆಯಲ್ಲಿ ಯಾವುದೇ ಲೋಪಗಳು ಅಥವಾ ಬದಲಾವಣೆಗಳು ಬಂದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಕ್ಕಾಗಿ ಹಾಸನ ಮಹಾನಗರ ಪಾಲಿಕೆಯ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಸನ ಮಹಾನಗರ ಪಾಲಿಕೆ, ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172–268276. ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/–ಆಯುಕ್ತರು, ಹಾಸನ
ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/556/ಕೆಎಸ್‌ಎಂಸಿಎ/2025–26

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು

ನಂ. ಆಇ 03 ಬಿಎಂಬಿ 2025 — ಬೆಂಗಳೂರು, 12ನೇ ಸೆಪ್ಟಂಬರ್ 2025

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2015, ದಿನಾಂಕ: 09ನೇ ಅಕ್ಟೋಬರ್ 2015ರ ನಿಬಂಧನೆಯ ಮೇರೆಗೆ ಹೊರಡಿಸಲಾದ 7.98% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ದಿನಾಂಕ : 13ನೇ ಅಕ್ಟೋಬರ್ 2025 ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 14ನೇ ಅಕ್ಟೋಬರ್ 2025 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 14ನೇ ಅಕ್ಟೋಬರ್ 2025 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ– ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 7.98% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

“ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ.”

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– (ಡಾ.ಪಿ.ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/2785/Zen/2025-26

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ – 1, 2/ಟೆಂಡರ್/2025–26/2636 ದಿನಾಂಕ : 11–09–2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣಿ
(ಏಕ-ಲಕೋಟೆ) ಕೆ.ಡಬ್ಲ್ಯೂ. 1, 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ **ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ **ಏಕ–ಲಕೋಟೆ ಪದ್ಧತಿಯನ್ವಯ** ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

2022–23 ನೇ ಸಾಲಿನ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಯೋಜನೆ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಶೌಚಾಲಯ ನಿರ್ಮಾಣದ ಅಡಿಯಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ಅಡಿಯಲ್ಲಿ ಕಾಮಗಾರಿಗಳ ಮಂಜೂರಾಗಿರುತ್ತವೆ. ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಕಾಮಗಾರಿಗಳ ತಾಲೂಕಿನ ವ್ಯಾಪ್ತಿಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/BD/WORK_INDENT18423, RDPR/2025-26/BD/WORK_INDENT18422, RDPR/2025-26/BD/WORK_INDENT18409. ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/BD/WORK_INDENT18426, RDPR/2025-26/BD/WORK_INDENT18424. ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/BD/WORK_INDENT18406. ಪ್ರವರ್ಗ–2ಎ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/BD/WORK_INDENT18427. ಇದ್ದು, ಟೆಂಡರ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 10.40 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 24–09–2025. ರ ಸಂಜೆ 5.30 ಗಂಟೆವರೆಗೆ. 2) ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 26–09–2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/275/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–1,ಎಇ1,2:ಟೆಂಡರ್–28:2025–26 — ದಿನಾಂಕ: 12.09.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. **ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:–ಸಾಮಾನ್ಯ:–ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ರಸ್ತೆಗಳು ಸುಧಾರಣೆ:–** (1) ಹಿರಿಯೂರು ತಾಲ್ಲೂಕು ಐಮಂಗಲ ಹೊರಕೆದೇವಪುರ ರಸ್ತೆ ಮಾರ್ಗ ದಾಸನಮಾಳಿಗೆ ರಸ್ತೆ ಕಿ.ಮೀ 1.00 ರಿಂದ 3.50 ಮತ್ತು ಕಿ.ಮೀ 6.00 ರಿಂದ 10.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ (ವ.ಇಂ. 19324)/5ನೇ ಕರೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–250.00 (2) ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ–ಉಡೇವು ಜಿಲ್ಲಾ ಮುಖ್ಯ ರಸ್ತೆಯಿಂದ ರಾಜ್ಯ ಹೆದ್ದಾರಿ–65ರ ರಸ್ತೆ ವಯಾ ಚೌಡಿಪುರ, ತಿಪ್ಪೇರುದ್ರಸ್ವಾಮಿ ದೇವಸ್ಥಾನ, ಕೊಡ್ಲಹಳ್ಳೀ, ಮಾರಮ್ಮನಹಳ್ಳಿ ರಸ್ತೆ ಕಿ.ಮೀ. 11.90 ರಿಂದ 15.30 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ. 23250) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–200.00 (3) ಹೊಳಲ್ಕೆರೆ ತಾಲ್ಲೂಕು ಕೊಳಾಳು ಗ್ರಾಮದಿಂದ ಗೌಜನಹಳ್ಳಿ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ (ಸಿಗೆಹಟ್ಟಿ ಯಿಂದ (ಎಸ್.ಹೆಚ್. 243) ಕೊಳಾಳು ಕ್ರಾಸ್ ವಯಾ ಕುಣಿಕೆರೆ ಬಿರೇನಹಳ್ಳಿ ಗೌನಹಳ್ಳಿ ಕಿ.ಮೀ. 18.37 ರಿಂದ 19.62 ರವರೆಗೆ) (ವ.ಇಂ. 26592) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–100.00

ಕ್ರ.ಸಂ. 1 ರ ಕಾಮಗಾರಿ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 26–09–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 29–09–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 30–09–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 04–10–2025 ಸಮಯ 11–00

ಕ್ರ.ಸಂ. 2 ಮತ್ತು 3ರ ಕಾಮಗಾರಿಗಳ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 19–09–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 20–09–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 22–09–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 25–09–2025 ಸಮಯ 11–00

DIPR/CTA/KSMCA/368/2025-26 — ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂಡಿ, ಚಿತ್ರದುರ್ಗ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
ನಂ. 34, 1ನೇ ಮಹಡಿ, ಲೋಟಸ್ ಟವರ್ಸ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001. ದೂರವಾಣಿ: 080–22261787

ಸಂಖ್ಯೆ:ಪವಕಇ:ಸಿಬ್ಬಂದಿ–1:ವಾಜ:ಸಿಆರ್–09:2025–26 — ದಿನಾಂಕ: 12.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವತಿಯಿಂದ 2025ನೇ ಸಾಲಿನ ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಗೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವ ಸಂಬಂಧ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಈ ಕೆಳಕಂಡ ವಿವರದಂತೆ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರ್‌ದಾರರು ಸದರಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ವಿವರ	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ಅಂದಾಜು ಟೆಂಡರ್ ಮೌಲ್ಯ ರೂ.ಗಳಲ್ಲಿ
1	2025ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಕಾರ್ಯಕ್ರಮಗಳಾದ ಬ್ಯಾಂಕ್ವೆಟ್ ಹಾಲ್ ಕಾರ್ಯಕ್ರಮ, ಶ್ರೀ ಮಹರ್ಷಿ ವಾಲ್ಮೀಕಿ ತಪೋವನ ಕಾರ್ಯಕ್ರಮ, ಆಮಂತ್ರಣ ಪತ್ರಿಕೆ, ಬ್ಯಾಡ್ಜ್‌ಗಳು, ಪಾಸುಗಳ ಮುದ್ರಣ, ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ, ಉಪಹಾರ ಮತ್ತು ಊಟ ಹಾಗೂ ಇತರೆ ಕಾರ್ಯಕ್ರಮಗಳ ವ್ಯವಸ್ಥೆ	20.09.2025	1,20,00,000/–

ವಿಶೇಷ ಸೂಚನೆ: ಹೆಚ್ಚಿನ ವಿವರಗಳನ್ನು **https://kppp.karnataka.gov.in** ಅಥವಾ ನಿರ್ದೇಶಕರ ಕಚೇರಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು, ದೂರವಾಣಿ ಸಂಖ್ಯೆ:080–22261787 ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು,
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.

ವಾಸಾಸಂಇ/ವಾಪ್ರ/ಜೆಎ/2791/2025–26

₹80 ಕೋಟಿ ಗಳಿಸಿದ 'ಪರಮ್ ಸುಂದರಿ'

ಸಿದ್ದಾರ್ಥ್ ಮಲ್ಹೋತ್ರ ಹಾಗೂ ಜಾಹ್ನವಿ ಕಪೂರ್ ನಟನೆಯ ಹಿಂದಿ ಸಿನಿಮಾ 'ಪರಮ್ ಸುಂದರಿ' ವಿಶ್ವದಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ ₹80 ಕೋಟಿ ಗಳಿಸಿದೆ ಎಂದು ನಿರ್ಮಾಣ ಸಂಸ್ಥೆ ತಿಳಿಸಿದೆ.

ಮಾಸ್ ಮನರಂಜನೆಯ ಸರ್ಕಸ್

ರವಿಶಂಕರ್ ಮತ್ತು ಅಚ್ಯುತ್ ಕುಮಾರ್ ಒಳ್ಳೆ ಸ್ನೇಹಿತರು. ಇಬ್ಬರದ್ದು ಎದುರುಬದುರು ಮನೆ. ಆದರೆ ಅವರ ಪತ್ನಿಯರು ಬದ್ಧ ವೈರಿಗಳು. ಎರಡು ಕುಟುಂಬಗಳ ನಡುವೆ ಕೌಟುಂಬಿಕ ದ್ವೇಷ. ಹೀಗಾಗಿ ಎರಡೂ ಮನೆಯ ಮಕ್ಕಳನ್ನು ಪರಸ್ಪರ ನೆರಳು ಬೀಳದಂತೆ ಬೆಳೆಸಬೇಕೆಂಬುದು ತಾಯಂದಿರ ಹಟ. ಇಂಥ ಸನ್ನಿವೇಶದಲ್ಲಿ ನಡೆಯುವ ಪ್ರೇಮಕಥೆಯೇ 'ಜಂಬೂ ಸರ್ಕಸ್'. ಕಮರ್ಷಿಯಲ್ ಸಿನಿಮಾಗಳನ್ನೇ ಮಾಡಿರುವ ನಿರ್ದೇಶಕ ಎಂ.ಡಿ. ಶ್ರೀಧರ್ ಕಥೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಇಡೀ ಚಿತ್ರವನ್ನು ಮನರಂಜನಾತ್ಮಕವಾಗಿ ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಚಿತ್ರದುದ್ದಕ್ಕೂ ಕಥೆ ಹೀಗೆ ಆಗುತ್ತದೆ ಎಂದು ಊಹಿಸಬಹುದಾದಷ್ಟು ಸರಳ ಕಥೆ. ಹೆಚ್ಚೇನು ತಿರುವುಗಳಿಲ್ಲ. ಪ್ರಾರಂಭದಲ್ಲಿಯೇ ಒಂದು ಟ್ವಿಸ್ಟ್ ಅನ್ನು ಪ್ರೇಕ್ಷಕರಿಗೆ ಗೊತ್ತುಮಾಡಿಸಿ ಬಿಟ್ಟಿದ್ದಾರೆ. ಚಿತ್ರದ ಮೊದಲಾರ್ಧ ನಾಯಕ ಆಕಾಶ್ ಮತ್ತು ನಾಯಕಿ ಅಂಕಿತಾ ಕಥೆಯಲ್ಲಿಯೇ ಮುಗಿದುಹೋಗುತ್ತದೆ. ಅಲ್ಲಲ್ಲಿ ಕೌಟುಂಬಿಕ ಹಿನ್ನೆಲೆ ಬರುತ್ತದೆ. ಒಂದೇ ಕಾಲೇಜಿನಲ್ಲಿ ಓದುವ ಆಕಾಶ್ ಮತ್ತು ಅಂಕಿತಾ ತಮ್ಮ ತಾಯಂದಿರಂತೆ ಬದ್ಧ ವೈರಿಗಳು. ಅವರ ಜಗಳ, ಕಿತ್ತಾಟವೇ ಮೊದಲಾರ್ಧದ ಚಿತ್ರಕಥೆ. ಆದರೆ ಆ ಸನ್ನಿವೇಶಗಳನ್ನು ಹಾಸ್ಯಮಯವಾಗಿ ಕಟ್ಟಿಕೊಟ್ಟಿದ್ದಾರೆ. ಜಗಪ್ಪ ಮತ್ತು ನಯನಾ ನಗಿಸಲೆಂದೇ ಇರುವ ಪಾತ್ರಗಳು. ದರ್ಶನ್, ಸುದೀಪ್‌ರಂಥ ಸ್ಟಾರ್‌ಗಳ ಸಿನಿಮಾಗಳಲ್ಲಿ ಸಾಮಾನ್ಯವಾಗಿ ಕಾಣಿಸುವಂಥ ಹಾಸ್ಯಪಾತ್ರಗಳನ್ನು ಇವರಿಬ್ಬರು ನಿಭಾಯಿಸಿದ್ದಾರೆ. ಸನ್ನಿವೇಶಕ್ಕಿಂತ ಹೆಚ್ಚಾಗಿ ಮಾತು ಮತ್ತು ಹಾವಭಾವಗಳಿಂದಲೇ ನಗಿಸುತ್ತಾರೆ.

ದ್ವಿತೀಯಾರ್ಧ ಹಾಸ್ಯದ ಜತೆಜತೆಗೆ ಭಾವುಕವಾಗುತ್ತದೆ. ಈ ಯುವಜೋಡಿ ಎರಡೂ ಕುಟುಂಬಗಳನ್ನು ಹೇಗೆ ಒಂದು ಮಾಡುತ್ತವೆ ಎಂಬುದೇ ದ್ವಿತೀಯಾರ್ಧ. ಕೌಟುಂಬಿಕ ಮೌಲ್ಯಗಳನ್ನು ಹೇಳುತ್ತ, ಪ್ರೇಮಕಥೆಯೊಂದಿಗೆ ಒಡೆದ ಮನಸುಗಳನ್ನು ಒಂದು ಮಾಡುವ ಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಆಕಾಶ್ ಆಗಿ ಪ್ರವೀಣ್ ತೇಜ್, ಅಂಕಿತಾ ಆಗಿ ಅಂಜಲಿ ಅನೀಶ್ ತಮ್ಮ ತರಲೆ, ತುಂಟಾಟಗಳೊಂದಿಗೆ ಇಷ್ಟವಾಗುತ್ತಾರೆ. ನಾಯಕಿಯ ತಾಯಿಯಾಗಿ ಲಕ್ಷ್ಮಿ ಸಿದ್ಧಯ್ಯ, ನಾಯಕನ ತಾಯಿಯಾಗಿ ಸ್ವಾತಿ ಗುರುದತ್ತ ಬಜಾರಿಯರ ಪಾತ್ರಕ್ಕೆ ಜೀವ ತುಂಬಿದ್ದಾರೆ. ತಾತನಾಗಿ ಅವಿನಾಶ್ ಆಗೀಗ ಕಾಣಿಸುತ್ತಾರೆ. ರವಿಶಂಕರ್ ಮತ್ತು ಅಚ್ಯುತ್ ಕುಮಾರ್‌ಗು ಕಥೆಯಲ್ಲಿ ಹೆಚ್ಚು ಕೆಲಸವಿಲ್ಲ.

ಅಂಜಲಿ ಅನೀಶ್, ಪ್ರವೀಣ್ ತೇಜ್

ಜಂಬೂ ಸರ್ಕಸ್

- ನಿರ್ಮಾಣ: ಎಚ್.ಸಿ. ಸುರೇಶ್
- ನಿರ್ದೇಶನ: ಎಂ.ಡಿ. ಶ್ರೀಧರ್
- ತಾರಾಗಣ: ಪ್ರವೀಣ್ ತೇಜ್, ಅಂಜಲಿ ಅನೀಶ್, ಅವಿನಾಶ್, ಅಚ್ಯುತ್ ಕುಮಾರ್ ಮತ್ತಿತರರು

ಕೃಷ್ಣಕುಮಾರ್ ಅವರ ಛಾಯಾಚಿತ್ರಗ್ರಹಣ ಸೊಗಸಾಗಿದೆ. ಆದರೆ ಅಲ್ಲಲ್ಲಿ ಚಿತ್ರ ಕೆಲವು ವರ್ಷಗಳಷ್ಟು ಹಳೆಯದು ಎಂಬುದು ಗೊತ್ತಾಗುತ್ತದೆ. ಹಿನ್ನೆಲೆ ಸಂಗೀತ ಕಥೆಗೆ ಪೂರಕವಾಗಿದೆ. ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಕೆಲವು ಹಾಸ್ಯ ಸನ್ನಿವೇಶಗಳು ನಗು ತರಿಸಿದರೂ ಹಳಸಲು ಎನ್ನಿಸುತ್ತವೆ. ಬಹುಶಃ ಚಿತ್ರದಲ್ಲಿ ದೊಡ್ಡ ಸ್ಟಾರ್ ನಟರಿದಿದ್ದರೆ ಅವರ ಅಭಿಮಾನಿಗಳಿಗೆ ಒಟ್ಟಾರೆ ಕಥೆ ಹೆಚ್ಚು ಆಪ್ತವಾಗುತ್ತಿತ್ತು. ಇಲ್ಲಿ ಯುವಜೋಡಿ ಇರುವುದರಿಂದ ಕಥೆಯನ್ನು ಅವರಿಗೆ ಒಗ್ಗುವಂತೆ ಮಾಡುವತ್ತ ನಿರ್ದೇಶಕರು ಗಮನಹರಿಸಬಹುದಿತ್ತು.

ವಿನಾಯಕ ಕೆ.ಎಸ್.

ನೋಡಬಹುದಾದ ಚಿತ್ರ

ನಾವು ನೋಡಿದ ಸಿನಿಮಾ

ಕಾಲ್ಪನಿಕ ಕಥೆಯಲ್ಲಿ ಕಣ್ಣಿಗೆ ಹಬ್ಬ

2024ರಲ್ಲಿ ತೆರೆಕಂಡಿದ್ದ 'ಹನುಮಾನ್' ಚಿತ್ರದ ಮೂಲಕ ಖ್ಯಾತಿ ಪಡೆದ ನಟ ತೇಜ್ ಸಜ್ಜಾ ಮುಖ್ಯಭೂಮಿಕೆಯಲ್ಲಿರುವ ಸಿನಿಮಾವಿದು. 'ಮಿರಾಯ್' ಪೌರಾಣಿಕ, ಐತಿಹಾಸಿಕ ಹಾಗೂ ಪ್ರಸ್ತುತ ಕಾಲದ ಕಾಲ್ಪನಿಕ ಕಥೆಯ ಸಮ್ಮಿಶ್ರಣ. 'ಹನುಮಾನ್'ನಲ್ಲಿ ಸೂಪರ್ ಹೀರೊ ಆಗಿದ್ದ ತೇಜ್ 'ಮಿರಾಯ್'ನಲ್ಲಿ ಸೂಪರ್ ಯೋಧನಾಗಿದ್ದಾರೆ. ಉತ್ಕೃಷ್ಟವಾದ ಗ್ರಾಫಿಕ್ಸ್ ದೃಶ್ಯಗಳಿಂದಾಗಿ ಈ ಸಿನಿಮಾ ಹೊಸ ಲೋಕ ತೆರೆದಿಟ್ಟಿದೆ.

ಕಳಿಂಗ ಯುದ್ಧದ ಬಳಿಕ ಸಾಮ್ರಾಟ ಅಶೋಕ ತನ್ನಲ್ಲಿರುವ ದೈವಿಕ ಶಕ್ತಿಗೆ ಒಂಬತ್ತು ಗ್ರಂಥಗಳ ರೂಪ ನೀಡುತ್ತಾನೆ. ಈ ಗ್ರಂಥಗಳು ನಾನಾ ತಂತ್ರ ವಿದ್ಯೆಗಳ ಜೊತೆಗೆ ಮನುಷ್ಯನಿಗೆ ದೇವರ ಶಕ್ತಿ ನೀಡುವ ಸಾಮರ್ಥ್ಯ ಹೊಂದಿರುವವು. ಇವುಗಳ ರಕ್ಷಣೆಯ ಜವಾಬ್ದಾರಿಯನ್ನು ಒಂಬತ್ತು ಯೋಧರಿಗೆ ಹಸ್ತಾಂತರಿಸುತ್ತಾನೆ. ಈ ಪೈಕಿ ಅಮರ ಗ್ರಂಥವು ಪ್ರಸ್ತುತ ಅಂಬಿಕಾ (ಶ್ರಿಯಾ ಶರಣ್) ಎಂಬಾಕೆಯ ರಕ್ಷಣೆಯಲ್ಲಿರುತ್ತದೆ. ಎಲ್ಲಾ ಗ್ರಂಥಗಳನ್ನು ಪಡೆಯಲು ಮಾಂತ್ರಿಕ ವಿದ್ಯೆಯಲ್ಲಿ ಪರಿಣತಿ ಹೊಂದಿರುವ ಮಹಾಭೀರ್ ಲಾಮಾ(ಮಂಚು ಮನೋಜ್) ಮುಂದಾಗುತ್ತಾನೆ. ಈ ಭವಿಷ್ಯವನ್ನು ತನ್ನ ಶಕ್ತಿಯಿಂದಲೇ ಕಂಡ ಅಂಬಿಕಾ, ಲಾಮಾನನ್ನು ತಡೆಯಲು ತನ್ನ ಮಗುವನ್ನೇ ದೇವರಿಗೆ ಅರ್ಪಿಸುತ್ತಾಳೆ. ಹೆತ್ತ ಮಗುವನ್ನು ವಾರಾಣಸಿಯಲ್ಲಿ ಶಿವಲಿಂಗದೆದುರಿಗೆ ಇರಿಸಿ ತೆರಳುತ್ತಾಳೆ. ಈ ಮಗುವೇ ವೇದ ಪ್ರಜಾಪತಿಯಾಗಿ(ತೇಜ್ ಸಜ್ಜಾ) ಬೆಳೆಯುತ್ತದೆ. ಈತನ ಕಥೆಯೇ 'ಮಿರಾಯ್'.

ತೇಜ್ ಸಜ್ಜಾ

ಪ್ರೇಕ್ಷಕರಿಗೆ ವಿಷ್ಯುವಲ್ ಟ್ರೀಟ್ ನೀಡುವ ಎಲ್ಲಾ ಅಂಶಗಳು ಸಿನಿಮಾದುದ್ದಕ್ಕೂ ಇವೆ. ಪೌರಾಣಿಕ ಹಾಗೂ ಐತಿಹಾಸಿಕ ಕಥೆಗಳನ್ನು ಮಿಶ್ರಣ ಮಾಡಿ ಅವುಗಳಿಗೆ ಕಾಲ್ಪನಿಕ ಕಥೆಯ ಸ್ಪರ್ಶ ನೀಡಿ ಸಿನಿಮಾ ಕಥೆ ಹೆಣೆದಿರುವ ನಿರ್ದೇಶಕರ ಯೋಚನೆ ಬಹಳ ಭಿನ್ನವಾದದ್ದು. ಸಿನಿಮಾದ ಮೊದಲಾರ್ಧ ಕುತೂಹಲಕಾರಿಯಾಗಿದ್ದು, ಗ್ರಾಫಿಕ್ಸ್ ಮೂಲಕ ಕಥೆಗೆ ನಿರ್ದೇಶಕರು ಜೀವ ತುಂಬಿದ್ದಾರೆ. ಮಧ್ಯಂತರದಲ್ಲಿ ಶ್ರೀರಾಮನ ಕೋದಂಡದ ರಕ್ಷಣೆ ಮಾಡುತ್ತಿರುವ ಸಂಪಾತಿಯ ಜೊತೆ ವೇದನ ಮುಖಾಮುಖಿ ಮೈನವಿರೇಳಿಸುತ್ತದೆ. ದ್ವಿತೀಯಾರ್ಧದಲ್ಲಿ ಸಿನಿಮಾ ಕೊಂಚ ನಿಧಾನವಾಗುತ್ತದೆ. ಕ್ಲೈಮ್ಯಾಕ್ಸ್‌ನಲ್ಲಿ ಶ್ರೀರಾಮನ ದೃಶ್ಯಗಳು ಚಿತ್ರಕಥೆಗೆ ಹೊಸ ತಿರುವನ್ನೇ ನೀಡಿ ವೇಗ ಹೆಚ್ಚಿಸುತ್ತವೆ. ಮಧ್ಯಂತರದ ಹಾಗೂ ಕ್ಲೈಮ್ಯಾಕ್ಸ್ ದೃಶ್ಯಗಳು ಕಣ್ಣಿಗೆ ಹಬ್ಬ. ಭರ್ಜರಿ ಆ್ಯಕ್ಷನ್ ದೃಶ್ಯಗಳೂ ಸಿನಿಮಾದುದ್ದಕ್ಕೂ ಇವೆ. ಖಳನಾಯಕನ ಹಿನ್ನೆಲೆಯ ಕಥೆಯನ್ನು ನಿರ್ದೇಶಕರು ಸಮರ್ಪಕವಾಗಿ ತೆರೆಗೆ ತಂದಿದ್ದಾರೆ.

ಮಿರಾಯ್ (ತೆಲುಗು: ಕನ್ನಡ ಅವತರಣಿಕೆ)

- ನಿರ್ಮಾಣ: ಟಿ.ಜಿ. ವಿಶ್ವಪ್ರಸಾದ್
- ನಿರ್ದೇಶನ: ಕಾರ್ತಿಕ್ ಗಟ್ಟಮ್ನೇನಿ
- ತಾರಾಗಣ: ತೇಜ್ ಸಜ್ಜಾ, ಮಂಚು ಮನೋಜ್, ಜಯರಾಮ್, ಶ್ರಿಯಾ ಶರಣ್, ಜಗಪತಿ ಬಾಬು, ರಿತಿಕಾ ನಾಯಕ್

ಕಥೆಯ ಮಾದರಿಯ ಕಾರಣದಿಂದ 'ಹನುಮಾನ್'ನಂತೆಯೇ 'ಮಿರಾಯ್' ಭಾಸವಾಗುವುದು ಸಹಜ. 'ಹನುಮಾನ್'ನಲ್ಲಿ ಹನುಮಂತನ ದೃಶ್ಯಗಳು ಸೆಳೆದಂತೆ, 'ಮಿರಾಯ್'ನಲ್ಲಿ ಶ್ರೀರಾಮನ ದೃಶ್ಯಗಳು ವೀಕ್ಷಣೆಗೆ ಹುರುಪು ನೀಡುತ್ತವೆ. ನಟನೆಯಲ್ಲಿ ತೇಜ್ ಸಜ್ಜಾ, ಶ್ರಿಯಾ ಶರಣ್, ಮಂಚು ಮನೋಜ್, ಜಯರಾಮ್ ಹೆಚ್ಚಿನ ಅಂಕ ಪಡೆಯುತ್ತಾರೆ. ಕೆಲವು ಪಾತ್ರಗಳು ಕಥೆಗೆ ಅಗತ್ಯವೇ ಇರಲಿಲ್ಲ ಎನಿಸುತ್ತವೆ. ಕನ್ನಡದಲ್ಲಿ ಡಬ್ಬಿಂಗ್ ಇನ್ನಷ್ಟು ಪಕ್ವವಾಗಬೇಕಿತ್ತು. 'ವೈಬ್ ಉಂದಿ' ಹಾಡು ಸಿನಿಮಾದಲ್ಲಿಲ್ಲ. ಗೌರ ಹರಿ ಸಂಗೀತ ಹಾಗೂ ಕಾರ್ತಿಕ್ ಗಟ್ಟಮ್ನೇನಿ ಛಾಯಾಚಿತ್ರಗ್ರಹಣ ಚೆನ್ನಾಗಿದೆ. ಸೀಕ್ವೆಲ್‌ನ ಸುಳಿವೂ ನೀಡಲಾಗಿದೆ.

ಅಭಿಲಾಷ್ ಪಿ.ಎಸ್.

ನೋಡಬಹುದಾದ ಚಿತ್ರ

'ಪಾಕ್ ಅಧಿಕಾರಿ ಹಾಜರಿಗೆ ಸೂಚನೆ'

ಚೆನ್ನೈ (ಪಿಟಿಐ): ಭಯೋತ್ಪಾದನೆ ಸಂಚು ಪ್ರಕರಣಕ್ಕೆ ಸಂಬಂಧಿಸಿದಂತೆ, ಅಕ್ಟೋಬರ್ 15ರ ಒಳಗಾಗಿ ವಿಚಾರಣೆಗೆ ಹಾಜರಾಗುವಂತೆ ಪಾಕಿಸ್ತಾನದ ಗುಪ್ತಚರ ಇಲಾಖೆಯ ಅಧಿಕಾರಿ ಅಮೀರ್ ಜುಬೇರ್ ಸಿದ್ದಿಕಿಗೆ ಎನ್‌ಐಎ ನ್ಯಾಯಾಲಯವು ಸೂಚನೆ ನೀಡಿದೆ.

'ಚೆನ್ನೈನಲ್ಲಿರುವ ಅಮೆರಿಕದ ದೂತಾವಾಸ, ಬೆಂಗಳೂರಿನ ಇಸ್ರೇಲ್ ದೂತಾವಾಸ ಕಚೇರಿ ಮೇಲೆ ದಾಳಿ ನಡೆಸಿದ ಆರೋಪದ ಮೇಲೆ ಸಿದ್ದಿಕಿ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅನ್ವಯ ಪ್ರಕರಣ ದಾಖಲಿಸಿದ್ದು, ಬಳಿಕ ಅವರು ತಲೆಮರೆಸಿಕೊಂಡಿದ್ದರು. ಎರಡೂ ದಾಳಿ ನಡೆದ ವೇಳೆ ಶ್ರೀಲಂಕಾದ ಪಾಕಿಸ್ತಾನಿ ಹೈ ಕಮಿಷನ್ ಕಚೇರಿಯಲ್ಲಿ ವೀಸಾ ಕೌನ್ಸಲರ್ ಆಗಿ ಸಿದ್ದಿಕಿ ಕೆಲಸ ಮಾಡುತ್ತಿದ್ದರು. ಪ್ರಕರಣದ ಕುರಿತು ನ್ಯಾಯಾಲಯಕ್ಕೆ ಹಾಜರಾಗಿ, ಉತ್ತರಿಸುವಂತೆ ಸೂಚನೆ ನೀಡಲಾಗಿದೆ' ಎಂದು ಎನ್‌ಐಎ ನ್ಯಾಯಾಲಯವು ಸೆ.2ರಂದು ಪ್ರಕಟಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

ಕ್ರಿಮಿನಲ್ ಸಂಚು, ನಕಲಿ ನೋಟು ಚಲಾವಣೆ ಮಾಡಿದ ಆರೋಪದ ಮೇಲೆ ಸಿದ್ದಿಕಿ ವಿರುದ್ಧ ಐಪಿಸಿ ಹಾಗೂ ಯುಎಪಿಎ ವಿವಿಧ ಕಲಂನ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ತಲೆಮರೆಸಿಕೊಂಡಿದ್ದಾನೆ.

'ಅಕ್ಟೋಬರ್ 15ರ ಬೆಳಿಗ್ಗೆ 10.30ರ ಒಳಗಾಗಿ ವಿಚಾರಣೆಗೆ ಹಾಜರಾಗಬೇಕು' ಎಂದು ಎನ್‌ಐಎ ನ್ಯಾಯಾಲಯ ಸೂಚನೆ ನೀಡಿದೆ.

'ದೇಶದಾದ್ಯಂತ ಪಟಾಕಿ ನಿಷೇಧಿಸಿ'

ಪರಿಸರ ರಕ್ಷಣೆಯ ಕಾಳಜಿ ದೆಹಲಿಗೆ ಏಕೆ ಸೀಮಿತಗೊಳ್ಳಬೇಕು: 'ಸುಪ್ರೀಂ' ಪ್ರಶ್ನೆ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಮಾತ್ರ ಪಟಾಕಿ ನಿಷೇಧ ಮಾಡಿರುವುದನ್ನು ಪ್ರಶ್ನಿಸಿದ ಸುಪ್ರೀಂ ಕೋರ್ಟ್, ದೇಶದಾದ್ಯಂತ ಈ ಬಗ್ಗೆ ನಿಯಮ ರೂಪಿಸುವ ಅಗತ್ಯವಿದೆ ಎಂದು ಗುರುವಾರ ಅಭಿಪ್ರಾಯಪಟ್ಟಿದೆ.

'ಶುದ್ಧ ಗಾಳಿಯನ್ನು ಪಡೆಯುವುದು ದೆಹಲಿ ಜನರ ಹಕ್ಕಾಗಿದ್ದರೆ, ದೇಶದ ಇತರ ನಾಗರಿಕರಗೂ ಆ ಹಕ್ಕು ಇರುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠ ತಿಳಿಸಿದೆ.

ದೆಹಲಿಯಲ್ಲಿ ಪಟಾಕಿ ನಿಷೇಧ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, 'ಈ ರೀತಿಯ ನಿಯಮಗಳು ದೇಶದಾದ್ಯಂತ ಇರಬೇಕು. ಇದನ್ನು ಕೇವಲ ದೆಹಲಿಗೆ ಸೀಮಿತಗೊಳಿಸಬಾರದು. ಯಾಕೆಂದರೆ, ಉಳಿದವರೂ ಈ ದೇಶದ ನಾಗರಿಕರು' ಎಂದು ನ್ಯಾಯಪೀಠ ಹೇಳಿದೆ.

'ಕಳೆದ ಚಳಿಗಾಲದಲ್ಲಿ ನಾನು ಅಮೃತಸರದಲ್ಲಿ ಇದ್ದೆ. ವಾಯುಮಾಲಿನ್ಯವು ದೆಹಲಿಗಿಂತ ಅಲ್ಲಿ ಹೆಚ್ಚಾಗಿದೆ. ಪಟಾಕಿಯನ್ನು ನಿಷೇಧಿಸುವುದಾದರೆ ದೇಶದಾದ್ಯಂತ ನಿಷೇಧಿಸಬೇಕು' ಎಂದು ಗವಾಯಿ ಹೇಳಿದರು.

ಮುಖ್ಯಾಂಶಗಳು

- 'ಶುದ್ಧ ಗಾಳಿಯನ್ನು ಪಡೆಯುವುದು ದೇಶದ ಎಲ್ಲ ನಾಗರಿಕರ ಹಕ್ಕು'
- ಸೆಪ್ಟೆಂಬರ್ 22ಕ್ಕೆ ವಿಚಾರಣೆ ಮುಂದೂಡಿಕೆ

ಈ ಬಗ್ಗೆ ವಾಯುಗುಣಮಟ್ಟ ನಿರ್ವಹಣಾ ಆಯೋಗದಿಂದ ಸಮಗ್ರ ವರದಿ ಪಡೆಯುವಂತೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ಸೂಚಿಸಿದ ನ್ಯಾಯಪೀಠ, ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 22ಕ್ಕೆ ಮುಂದೂಡಿತು.

ಪಕ್ಷಗಳ ನಿಯಂತ್ರಣಕ್ಕೆ ನಿಯಮ: ಆಯೋಗಕ್ಕೆ ನೋಟಿಸ್

ಜಾತ್ಯತೀತ, ಪಾರದರ್ಶಕ ಮತ್ತು ನ್ಯಾಯವನ್ನು ಉತ್ತೇಜಿಸಲು ರಾಜಕೀಯ ಪಕ್ಷಗಳ ನೋಂದಣಿ ಮತ್ತು ನಿಯಂತ್ರಣಕ್ಕಾಗಿ ನಿಯಮಗಳನ್ನು ರೂಪಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಶುಕ್ರವಾರ ನಿರ್ಧರಿಸಿತು. ಅಲ್ಲದೆ ಅರ್ಜಿಯು ನೋಂದಾಯಿತ ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಒಳಗೊಳ್ಳುವಂತೆ ಉಲ್ಲೇಖಿಸಲು ಪೀಠವು ಅರ್ಜಿದಾರ ಅಶ್ವಿನಿ ಉಪಾಧ್ಯಾಯ ಅವರಿಗೆ ಹೇಳಿತು.

ಈ ಅರ್ಜಿ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ, ಭಾರತ ಕಾನೂನು ಆಯೋಗಕ್ಕೂ ಪೀಠ ನೋಟಿಸ್ ಜಾರಿ ಮಾಡಿತು.

ದೇಶದಲ್ಲಿ ರಾಜಕೀಯ ಪಕ್ಷಗಳಿಗೆ ಯಾವುದೇ ನಿಯಮ ಮತ್ತು ನಿಬಂಧನೆಗಳಿಲ್ಲ. ಇದರಿಂದಾಗಿ ಅನೇಕ ಪ್ರತ್ಯೇಕತಾವಾದಿಗಳು ದೇಣಿಗೆ ಸಂಗ್ರಹಿಸಲು ತಮ್ಮದೇ ಆದ ರಾಜಕೀಯ ಪಕ್ಷಗಳನ್ನು ರಚಿಸಿಕೊಂಡಿದ್ದಾರೆ. ಈ ಪಕ್ಷಗಳ ಕೆಲ ಪದಾಧಿಕಾರಿಗಳು ಪೊಲೀಸರ ರಕ್ಷಣೆಯನ್ನೂ ಪಡೆಯುತ್ತಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಮಗಳ ವಿವಾಹದ ವೆಚ್ಚ ಭರಿಸುವುದು ತಂದೆಯ ಕರ್ತವ್ಯ'

ಮಗಳ ವಿವಾಹದ ವೆಚ್ಚ ಭರಿಸುವುದು ತಂದೆಯ ಕರ್ತವ್ಯವಾಗಿದೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. ದಂಪತಿಯ ವಿಚ್ಛೇದನಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಮಗಳ ಮದುವೆಯ ಖರ್ಚಿಗಾಗಿ ₹10 ಲಕ್ಷ ನೀಡುವಂತೆ ತಂದೆಗೆ ಸೂಚಿಸಿದ ಪೀಠ, ದಂಪತಿಯ ವಿಚ್ಛೇದನಕ್ಕೆ ಕುಟುಂಬ ನ್ಯಾಯಾಲಯವು ನೀಡಿದ್ದ ಅನುಮತಿಯನ್ನು ಎತ್ತಿಹಿಡಿಯಿತು.

ವಿಚ್ಛೇದನದ ವಿರುದ್ಧ ಮಹಿಳೆಯೊಬ್ಬರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ ನಡೆಸಿತು. 1996ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದ ಜೋಡಿಯ ಸಂಬಂಧ ಸಂಪೂರ್ಣ ಬೇರ್ಪಟ್ಟಿರುವುದು ಮತ್ತು ಮಧ್ಯಸ್ಥಿಕೆಯ ಪ್ರಯತ್ನ ವಿಫಲವಾಗಿರುವುದನ್ನು ಪೀಠವು ಗಮನಿಸಿತು.

'ಸಂಗಾತಿಯೊಂದಿಗಿನ ಭಿನ್ನಾಭಿಪ್ರಾಯದ ಹೊರತಾಗಿಯೂ ತನ್ನ ಮಗಳ ವಿವಾಹದ ವೆಚ್ಚಗಳನ್ನು ಭರಿಸುವುದು ಪುರುಷನ ಕರ್ತವ್ಯವಾಗಿದೆ. ಆದ್ದರಿಂದ ಈ ಉದ್ದೇಶಕ್ಕಾಗಿ ₹10 ಲಕ್ಷವನ್ನು ನೀಡಬೇಕೆಂದು ಬಯಸುತ್ತೇವೆ' ಎಂದು ಪೀಠ ತಿಳಿಸಿತು.

ದಂಪತಿಯ ವಿಚ್ಛೇದನಕ್ಕೆ ಅನುಮತಿ ನೀಡಿ ಕುಟುಂಬ ನ್ಯಾಯಾಲಯವು 2019ರಲ್ಲಿ ಹಾಗೂ ದೆಹಲಿ ಹೈಕೋರ್ಟ್ 2023ರಲ್ಲಿ ನೀಡಿದ್ದ ತೀರ್ಪಿನಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿತು.

ದೆಹಲಿ, ಬಾಂಬೆ ಹೈಕೋರ್ಟ್‌ಗಳಿಗೆ ಹುಸಿ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗಳಿಗೆ ಶುಕ್ರವಾರ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದಿದ್ದು ತೀವ್ರ ಆತಂಕಕ್ಕೆ ಕಾರಣವಾಗಿತ್ತು. ಇದರಿಂದಾಗಿ ನ್ಯಾಯಾಲಯಗಳಲ್ಲಿ ವಿಚಾರಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು ಎಂದು ಪೊಲೀಸರು ತಿಳಿಸಿದರು.

ದೆಹಲಿ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಬೆಳಿಗ್ಗೆ 8.39ಕ್ಕೆ ಬಂದ ಇ-ಮೇಲ್‌ನಲ್ಲಿ, ಕೋರ್ಟ್ ಕಾಂಪ್ಲೆಕ್ಸ್‌ನಲ್ಲಿ ಮೂರು ಬಾಂಬ್‌ಗಳನ್ನು ಇರಿಸಿರುವುದಾಗಿ ಬೆದರಿಸಲಾಗಿತ್ತು. ಬಾಂಬೆ ಹೈಕೋರ್ಟ್‌ನ ಅಧಿಕೃತ ಇ-ಮೇಲ್ ಐಡಿಗೆ ಬಂದ ಸಂದೇಶದಲ್ಲಿ, ಬಾಂಬ್ ಇಟ್ಟು ಕಟ್ಟಡವನ್ನು ಸ್ಫೋಟಿಸುವುದಾಗಿ ಹೇಳಲಾಗಿತ್ತು ಎಂದು ಅಧಿಕಾರಿಯೊಬ್ಬರು ಹೇಳಿದರು.

ಮಾಹಿತಿ ಲಭ್ಯವಾದ ಕೂಡಲೇ ಪೊಲೀಸರು ಮತ್ತು ಇತರ ಸಂಸ್ಥೆಗಳು ಶೋಧ ಕಾರ್ಯಾಚರಣೆ ಆರಂಭಿಸಿದವು. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳ, ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳದಲ್ಲಿ ಪರಿಶೀಲನೆ ನಡೆಸಿದರು.

ಸ್ಥಳಕ್ಕೆ ಧಾವಿಸಿದ ಪೊಲೀಸರು, ಪ್ರಾಥಮಿಕ ಮುನ್ನೆಚ್ಚರಿಕೆ ಕ್ರಮವಾಗಿ ನ್ಯಾಯಮೂರ್ತಿಗಳು, ವಕೀಲರು, ಸಿಬ್ಬಂದಿ ಮತ್ತು ವೀಕ್ಷಕರನ್ನು ಕೋರ್ಟ್‌ಗಳ ಆವರಣದ ಆಚೆಗೆ ಕಳುಹಿಸಿದರು.

ಹುಸಿ ಕರೆ: ಪರಿಶೀಲನೆ ಬಳಿಕ ಎರಡೂ ನ್ಯಾಯಾಲಯಗಳಲ್ಲಿ ಯಾವುದೇ ಸ್ಫೋಟಕ ಅಥವಾ ಶಂಕಾಸ್ಪದ ವಸ್ತುಗಳು ಪತ್ತೆಯಾಗಲಿಲ್ಲ. ನಂತರ 'ಹುಸಿ ಬಾಂಬ್ ಬೆದರಿಕೆ' ಎಂದು ಪೊಲೀಸರು ಘೋಷಿಸಿದರು.

ನವದೆಹಲಿ ಡಿಸಿಪಿ ದೇವೇಶ್ ಕುಮಾರ್ ಮಹ್ಲಾ ಅವರು, 'ಈ ಬೆದರಿಕೆ ಸಂದೇಶಕ್ಕೂ ಕೆಲವು ವಾರಗಳ ಹಿಂದೆ ಶಾಲೆಗಳಿಗೆ ಕಳುಹಿಸಲಾಗಿದ್ದ ಬೆದರಿಕೆ ಸಂದೇಶಕ್ಕೂ ಸಂಬಂಧ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಕಂಗನಾ ಅರ್ಜಿ ಸ್ವೀಕರಿಸಲು ನಕಾರ

ನವದೆಹಲಿ: ರೈತರ ಪ್ರತಿಭಟನೆ ಕುರಿತ ಟ್ವೀಟ್ ಸಂಬಂಧ ತಮ್ಮ ವಿರುದ್ಧ ದಾಖಲಾಗಿರುವ ಮಾನನಷ್ಟ ಪ್ರಕರಣ ರದ್ದುಪಡಿಸುವಂತೆ ಕೋರಿದ್ದ ಅರ್ಜಿ ವಜಾ ಮಾಡಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ನಟಿ ಮತ್ತು ಬಿಜೆಪಿ ಸಂಸದೆ ಕಂಗನಾ ರನೌತ್ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಸಿರುವ ವಿಶೇಷ ಅರ್ಜಿ ವಾಪಸ್ ಪಡೆಯುವಂತೆ ಕಂಗನಾ ಪರ ವಕೀಲರಿಗೆ ನ್ಯಾಯಾಲಯ ಸೂಚಿಸಿತು.

ಸಭಾಪತಿಯಾಗಿ ರಾಧಾಕೃಷ್ಣನ್ ಪದಗ್ರಹಣ

ನವದೆಹಲಿ (ಪಿಟಿಐ): ನೂತನ ಉಪರಾಷ್ಟ್ರಪತಿಯಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದ ಸಿ.ಪಿ.ರಾಧಾಕೃಷ್ಣನ್ ಅವರು, ರಾಜ್ಯಸಭೆಯ ಸಭಾಪತಿಯಾಗಿ ಪದಗ್ರಹಣ ಮಾಡಿದರು.

ಸಂಸತ್ ಭವನದ ಪ್ರೇರಣಾ ಸ್ಥಳದಲ್ಲಿ ಭಾರತದ ಮೇರು ನಾಯಕರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಾಮಾಜಿಕ ಸುಧಾರಕರ ಪ್ರತಿಮೆಗಳಿಗೆ ಗೌರವ ನಮನ ಸಲ್ಲಿಸಿದ ರಾಧಾಕೃಷ್ಣನ್ ಅವರನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವರಾದ ಕಿರಣ್ ರಿಜಿಜು ಮತ್ತು ಅರ್ಜುನ್ ರಾಮ್ ಮೇಘ್ವಾಲ್ ಅವರು ಸ್ವಾಗತಿಸಿದರು.

ರಾಜ್ಯಸಭೆ ಸಭಾಪತಿಗಳ ಕಚೇರಿಗೆ ತೆರಳಿದ ರಾಧಾಕೃಷ್ಣನ್ ಅವರು ಮೇಲ್ಮನೆಯ ಚುನಾವಣಾಧಿಕಾರಿ ಕಚೇರಿಯಲ್ಲಿ ಪದಗ್ರಹಣ ದಾಖಲೆಗಳಿಗೆ ಸಹಿ ಮಾಡಿದರು. ಗೃಹ ಇಲಾಖೆಯೂ ಶುಕ್ರವಾರ ಉಪರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಅವರ ಪದಗ್ರಹಣ ಸಂಬಂಧ ಪ್ರತ್ಯೇಕ ಅಧಿಸೂಚನೆಯನ್ನೂ ಹೊರಡಿಸಿತು.

ಪ್ರಮಾಣವಚನ ಸ್ವೀಕರಿಸಿದ ನಂತರ ರಾಧಾಕೃಷ್ಣನ್ ಅವರು ಮಹಾತ್ಮ ಗಾಂಧಿ ಅವರ ಸಮಾಧಿ ಸ್ಥಳ ರಾಜಘಾಟ್, ಮಾಜಿ ಪ್ರಧಾನಿಗಳಾದ ವಾಜಪೇಯಿ ಅವರ ಸದೈವ ಅಟಲ್ ಮತ್ತು ಚರಣ್ ಸಿಂಗ್ ಅವರ ಕಿಸಾನ್ ಘಾಟ್‌ಗಳಿಗೆ ತೆರಳಿ ನಮನ ಸಲ್ಲಿಸಿದರು.

ಸಿ.ಪಿ.ರಾಧಾಕೃಷ್ಣನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ನಮಸ್ಕರಿಸಿದರು ಪಿಟಿಐ ಚಿತ್ರ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು– 560001 ಫೋನ್ ಸಂ. 080–22265383 ವೆಬ್‌ಸೈಟ್: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇ–ಸೇವೆ 1/663/2025–26 ದಿನಾಂಕ: 12.09.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಸಮಾಲೋಚಕರ ಆಯ್ಕೆಗಾಗಿ ಸೇವೆಗಳನ್ನು ಒದಗಿಸಲು
(ಜಿ.ಓ.ಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು, ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ಪ್ರತ್ಯೇಕ ಪ್ಲಾಟ್ ಸಮೀಕ್ಷೆ ಹಾಗೂ ಸ್ವತ್ತುಗಳಿಗೆ ಭೂಮಿ ಪರಿಶೋಧನೆ ಸೇವೆಗಳನ್ನು ಒದಗಿಸಲು ಇದೇ ರೀತಿಯ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿ ಸಾಕಷ್ಟು ಅನುಭವ ಹೊಂದಿರುವ ಪ್ರತಿಷ್ಠಿತ ಸಮಾಲೋಚಕರಿಂದ/ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಕಾರ್ಯನಿರ್ವಾಹಕ ಅಭಿಯಂತರರು – ಧಾರವಾಡ ಇವರ ವ್ಯಾಪ್ತಿಯಲ್ಲಿ ಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ಪ್ರತ್ಯೇಕ ಪ್ಲಾಟ್ ಸಮೀಕ್ಷೆ ಹಾಗೂ ಸ್ವತ್ತುಗಳಿಗೆ ಭೂಮಿ ಪರಿಶೋಧನೆ ಸೇವೆಗಳನ್ನು ಒದಗಿಸುವುದು (9 ಕೈಗಾರಿಕಾ ಪ್ರದೇಶ – ಒಟ್ಟು ವಿಸ್ತರಣೆ 4246.12 ಎಕರೆಗಳು).

- ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.09.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ

DIPR/CP/2796/AKAR/2025-26

ಅತ್ಯಾಚಾರ ಪ್ರಕರಣ: ನಟಿಯ ಕ್ಷಮೆ ಕೋರಿ– ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದಾರೆ ಎಂಬ ಪ್ರಕರಣದಲ್ಲಿ ನಟಿಯ ಕ್ಷಮೆ ಕೋರುವಂತೆ ತಮಿಳು ಚಲನಚಿತ್ರ ನಿರ್ದೇಶಕ ಹಾಗೂ ರಾಜಕಾರಣಿ ಸೀಮನ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ತನ್ನ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದ ಮದ್ರಾಸ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸೀಮನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಹಾಗೂ ಆರ್. ಮಹದೇವನ್ ಅವರಿದ್ದ ಪೀಠವು ನಡೆಸಿತು.

'ನಟಿಯ ವಿರುದ್ಧ ನಾನು ಮಾಡಿದ್ದ ಆರೋಪಗಳನ್ನು ಹಿಂಪಡೆಯುವೆ. ಭವಿಷ್ಯದಲ್ಲಿ ಆಕೆಗೆ ತೊಂದರೆ ನೀಡಲ್ಲ. ಕ್ಷಮೆ ಯಾಚಿಸುವೆ ಎಂದು ಅಫಿಡವಿಟ್‌ನಲ್ಲಿ ತಿಳಿಸಿದ್ದೀರಿ. ಈ ಎಲ್ಲವನ್ನೂ ಪಾಲಿಸುವುದಾದರೆ, ನಾವು ದೂರನ್ನು ರದ್ದುಗೊಳಿಸಬಹುದು' ಎಂದು ಪೀಠ ಹೇಳಿದೆ.

ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವಂತೆ ಹೈಕೋರ್ಟ್ ಪೊಲೀಸರಿಗೆ ನಿರ್ದೇಶನ ನೀಡಿತ್ತು.

'ನನ್ನನ್ನು ಭಾವನಾತ್ಮಕವಾಗಿ ನಂಬಿಸಿದ್ದ ಸೀಮನ್, ಮದುವೆಯಾಗುವ ಭರವಸೆ ನೀಡಿದ್ದರಿಂದ 2007ರಿಂದ 2011ರವರೆಗೆ ಆತನ ಜೊತೆ ಸಹವಾಸದಲ್ಲಿದ್ದೆ. ಈ ಅವಧಿಯಲ್ಲಿ ಆತನು ನನ್ನ ಮೇಲೆ ಲೈಂಗಿಕ ಶೋಷಣೆ ನಡೆಸಿದ್ದಾನೆ. ನನ್ನನ್ನು ಮದುವೆ ಆಗದೆ ಬೇರೊಬ್ಬರನ್ನು ಮದುವೆಯಾದ' ಎಂದು ನಟಿ ದೂರು ನೀಡಿದ್ದರು.

ಇಬ್ಬರೂ ಸಾರ್ವಜನಿಕವಾಗಿ ಪರಸ್ಪರ ನಿಂದಿಸಿಕೊಳ್ಳುತ್ತಿರುವುದಕ್ಕೂ ಪೀಠವು ಆಕ್ಷೇಪ ವ್ಯಕ್ತಪಡಿಸಿದೆ.

ನಟಿಯ ಕ್ಷಮೆ ಕೋರದಿದ್ದರೆ ಮಧ್ಯಂತರ ರಕ್ಷಣೆಯನ್ನು ತೆಗೆದು ಹಾಕುವುದಾಗಿ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಎಚ್ಚರಿಕೆ ನೀಡಿದರು. ವಿಚಾರಣೆಯನ್ನು ಸೆ. 24ಕ್ಕೆ ಮುಂದೂಡಿದರು.

ಮಂದಿರಾ ಹೆಸರು ಕೈಬಿಡಲು ಮನವಿ

ನವದೆಹಲಿ (ಪಿಟಿಐ): ದಿವಂಗತ ಉದ್ಯಮಿ ಸಂಜಯ್ ಕಪೂರ್ ಅವರ ಉಯಿಲಿನ ವಿಚಾರಣೆ ವೇಳೆ ಹೊರಡಿಸಿರುವ ಆದೇಶದಲ್ಲಿ ಅವರ ಸಹೋದರಿ ಮಂದಿರಾ ಕಪೂರ್ ಹೆಸರನ್ನು ತೆಗೆಯುವಂತೆ ಸಂಜಯ್ ಪತ್ನಿ ಪ್ರಿಯಾ ಕಪೂರ್ ಸಲ್ಲಿಸಿರುವ ಅರ್ಜಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ ಪುರಸ್ಕರಿಸಿದೆ.

'ಮಂದಿರಾ ಅವರು ಈ ಪ್ರಕರಣದಲ್ಲಿ ಪಕ್ಷಗಾರರಲ್ಲ. ಅವರು ಅರ್ಜಿ ಸಲ್ಲಿಸದೇ ಪ್ರಕರಣದಲ್ಲಿ ಹಿಂಬಾಗಿನಲಿಂದ ಪ್ರವೇಶ ಪಡೆಯಲು ಪ್ರಯತ್ನಿಸಿದಂತಿದೆ. ಅದಕ್ಕೆ ಅವಕಾಶ ನೀಡಬಾರದು' ಎಂದು ಪ್ರಿಯಾ ಮತ್ತು ಅವರ ಅಪ್ರಾಪ್ತ ವಯಸ್ಸಿನ ಮಗನ ಪರ ವಕೀಲ ರಾಜೀವ್ ನಾಯರ್ ಪ್ರತಿಪಾದಿಸಿದರು.

ಸಂಜಯ್ ಅವರ ಮಾಜಿ ಪತ್ನಿ ಕರಿಷ್ಮಾ ಕಪೂರ್ ಅವರ ಇಬ್ಬರು ಮಕ್ಕಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಯುತ್ತಿದೆ.

ಮೋದಿ ತಾಯಿಯ ಎ.ಐ ವಿಡಿಯೊ ಸೃಷ್ಟಿಸಿದ ಕಾಂಗ್ರೆಸ್: ಬಿಜೆಪಿ ಖಂಡನೆ

ಪಾಟ್ನಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಕುರಿತಾಗಿ ಕೃತಕ ಬುದ್ಧಿಮತ್ತೆ(ಎಐ) ಬಳಸಿ ವಿಡಿಯೊ ಸೃಷ್ಟಿಸಿ, ಬಿಹಾರದ ಕಾಂಗ್ರೆಸ್ ಘಟಕವು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ. ಈ ನಡೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ.

'ಅಸಹ್ಯಕರ ವಿಡಿಯೊ ಹಂಚಿಕೊಳ್ಳುವುದರೊಂದಿಗೆ ಬಿಹಾರದ ಕಾಂಗ್ರೆಸ್ ಘಟಕವು ಎಲ್ಲ ಮಿತಿಗಳನ್ನೂ ಮೀರಿದೆ. ಈ ಪಕ್ಷವು ಗಾಂಧಿವಾದಿಯಾಗದೆ, ಗಾಳಿವಾದಿಯಾಗಿದೆ. ಮಹಿಳೆಯರು, ಮಾತೃಶಕ್ತಿಯನ್ನು ಅವಮಾನಿಸುವುದೇ ಕಾಂಗ್ರೆಸ್‌ನ ಗುಣವಾಗಿದೆ. ನಾಚಿಕೆಗೇಡಿನ ವಿಚಾರ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಕಿಡಿಕಾರಿದ್ದಾರೆ.

'ಪ್ರಧಾನಿಯ ತಾಯಿ ಅವರನ್ನು ನಿಂದಿಸಿರುವುದಕ್ಕೆ ಕಾಂಗ್ರೆಸ್ ಪಕ್ಷವು ಪಶ್ಚಾತ್ತಾಪ ವ್ಯಕ್ತಪಡಿಸುತ್ತಿಲ್ಲ. ಆ ಪಕ್ಷದ ತಾರೀಕ್ ಅನ್ವರ್ ವಿಡಿಯೊವನ್ನು ಸಮರ್ಥಿಸಿ ಕೊಳ್ಳುತ್ತಿದ್ದಾರೆ. ಇದು ಮಿತಿ ಮೀರಿದ ವರ್ತನೆ' ಎಂದು ಬರೆದುಕೊಂಡಿದ್ದಾರೆ.

ತಾಯಿ ಹೀರಾಬಾಯಿ ಜೊತೆಗೆ ಪ್ರಧಾನಿ ಮೋದಿ –ಪಿಟಿಐ ಚಿತ್ರ

ಎಐನಿಂದ ರಚಿಸಿದ ವಿಡಿಯೊವನ್ನು ಬಿಹಾರದ ಕಾಂಗ್ರೆಸ್ ಘಟಕವು ಸೆ.10ರಂದು ಹಂಚಿಕೊಂಡಿದೆ. 'ಬಿಹಾರದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಮತಕಳವು ಮಾಡುತ್ತಿರುವೆಯಲ್ಲ' ಎಂದು ತನ್ನನ್ನು ತಾಯಿ ಟೀಕಿಸುತ್ತಿರುವ ಕನಸೊಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಿತ್ತು ಎನ್ನುವ ದೃಶ್ಯವನ್ನು ಎ.ಐ ವಿಡಿಯೊ ಒಳಗೊಂಡಿದೆ.

'ರಾಜಕೀಯವು ಎಷ್ಟು ಕೀಳುಮಟ್ಟಕ್ಕೆ ಇಳಿದಿದೆ ಎಂಬುದನ್ನು ಆರ್‌ಜೆಡಿ ಹಾಗೂ ಕಾಂಗ್ರೆಸ್ ಪಕ್ಷಗಳು ತೋರಿಸುತ್ತಿವೆ. ರಾಜಕೀಯ ಕೆಸರೆರೆಚಾಟದಲ್ಲಿ ತೊಡಗಿ, ಬೇರೆಯವರ ತಾಯಿಯನ್ನು ನಿಂದಿಸುತ್ತಿರುವ ಬೆಳವಣಿಗೆಯು ಬಿಹಾರದ ನೆಲದಲ್ಲಿ ನಡೆಯುತ್ತಿದೆ. ರಾಜ್ಯದ ಜನರು ಯಾವುದೇ ಕಾರಣಕ್ಕೂ ಇದನ್ನು ಕ್ಷಮಿಸುವುದಿಲ್ಲ' ಎಂದು ಬಿಜೆಪಿಯ ಹಿರಿಯ ಮುಖಂಡ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

'ತಾಯಿಯು ಮಗುವಿಗೆ ಬುದ್ಧಿ ಹೇಳುವ ಪ್ರಸಂಗದಲ್ಲಿ ಟೀಕಿಸಲು ಏನಿದೆ' ಎಂದು ತಾರೀಕ್ ಅನ್ವರ್ ಪ್ರಶ್ನಿಸಿದ್ದಾರೆ.

ಮುಖ್ಯಾಂಶಗಳು

- ಬಿಹಾರ ಕಾಂಗ್ರೆಸ್ ಘಟಕದ ಪೋಸ್ಟ್ ವಿರುದ್ಧ ಆಕ್ರೋಶ
- ಜನರು ಇದನ್ನು ಕ್ಷಮಿಸುವುದಿಲ್ಲ: ಬಿಜೆಪಿ

ದೆಹಲಿ ಗಲಭೆ ಪ್ರಕರಣ ಆರೋಪ: ಜಾಮೀನು ಕೋರಿ ಆರೋಪಿಗಳ ಅರ್ಜಿ

ಉಮರ್ ಅರ್ಜಿ 19ಕ್ಕೆ ವಿಚಾರಣೆ

ನವದೆಹಲಿ: 2020ರ ದೆಹಲಿ ಗಲಭೆಗೆ ಪಿತೂರಿ ನಡೆಸಿದ ಆರೋಪದಡಿ ಪ್ರಕರಣ ದಲ್ಲಿ ಬಂಧನದಲ್ಲಿರುವ ಸಾಮಾಜಿಕ ಹೋರಾಟಗಾರರಾದ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್, ಗುಲ್ಫಿಶಾ ಫಾತಿಮಾ ಮತ್ತು ಮೀರನ್ ಹೈದರ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 19ಕ್ಕೆ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಅರವಿಂದ ಕುಮಾರ್ ಮತ್ತು ಎನ್.ವಿ.ಅಂಜಾರಿಯಾ ಅವರನ್ನು ಒಳಗೊಂಡ ನ್ಯಾಯ ಪೀಠವು ಶುಕ್ರವಾರ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ತಡವಾಗಿ ಸ್ವೀಕರಿಸಿತು.

ಜಾಮೀನು ನಿರಾಕರಿಸಿದ್ದ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಖಾಲಿದ್ ಸೇರಿ ಒಂಬತ್ತು ಮಂದಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಸಿಎಎ ಮತ್ತು ಎನ್‌ಆರ್‌ಸಿ ವಿರೋಧಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಹಿಂಸಾಚಾರ ನಡೆದಿತ್ತು. ಖಾಲಿದ್ ಸೇರಿ ಇತರೆ ಆರೋಪಿಗಳ ವಿರುದ್ಧ ಕಾನೂನು ಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಾಗಿದೆ. 2020ರಿಂದಲೂ ಜೈಲಿನಲ್ಲಿರುವ ಆರೋಪಿಗಳು ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ.

ಎಫ್‌ಐಆರ್ ಒಂದು ಜೋಕ್: ಟೀಕೆ

ನವದೆಹಲಿ (ಪಿಟಿಐ): ದೆಹಲಿ ಗಲಭೆ ಪಿತೂರಿ ಆರೋಪದಲ್ಲಿ ತಮ್ಮ ವಿರುದ್ಧ ದೋಷಾರೋಪ ನಿಗದಿ ಮಾಡಿರುವ ರೀತಿಗೆ ಸಾಮಾಜಿಕ ಹೋರಾಟಗಾರ ಉಮರ್ ಖಾಲಿದ್ ಅವರು ಗುರುವಾರ ವಿರೋಧ ವ್ಯಕ್ತಪಡಿಸಿದರು.

'ದೆಹಲಿ ಪೊಲೀಸ್ ದಾಖಲಿಸಿರುವ ಎಫ್‌ಐಆರ್ ಒಂದು ಜೋಕ್. ಇದರಿಂದಾಗಿ ಐದು ವರ್ಷ ಜೈಲಿನಲ್ಲಿ ಕಳೆದಿದ್ದೇನೆ' ಎಂದು ಅವರು ದೆಹಲಿ ಕೋರ್ಟ್‌ಗೆ ತಿಳಿಸಿದರು.

ಪ್ರಕರಣದಲ್ಲಿ ತಮ್ಮನ್ನು ಸಿಲುಕಿಸಲು ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿರುವುದಾಗಿ ಅವರು ಆರೋಪಿಸಿದರು.

ದೋಷಾರೋಪ ನಿಗದಿಗೆ ಸಂಬಂಧಿಸಿದ ಅರ್ಜಿಯನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಮೀರ್ ಬಾಜಪೈ ಅವರು ವಿಚಾರಣೆ ನಡೆಸಿದರು. ವಾದ–ಪ್ರತಿವಾದ ಆಲಿಸಿದ ನಂತರ ನ್ಯಾಯಾಲಯವು ಅರ್ಜಿ ವಿಚಾರಣೆಯನ್ನು ಸೆಪ್ಟೆಂಬರ್ 17ಕ್ಕೆ ಮುಂದೂಡಿತು.

ರಜತ್, ರಾಥೋಡ್ ಶತಕ ಭರಾಟೆ

ದುಲೀಪ್ ಟ್ರೋಫಿ ಕ್ರಿಕೆಟ್ ಫೈನಲ್
ಕೇಂದ್ರ ವಲಯಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

• ಗಿರೀಶ ದೊಡ್ಡಮನಿ

ಮುಖ್ಯಾಂಶಗಳು

- ದಕ್ಷಿಣ ವಲಯದ ಗುರ್ಜಪನೀತ್ ಸಿಂಗ್‌ಗೆ ಮೂರು ವಿಕೆಟ್
- ಟೂರ್ನಿಯಲ್ಲಿ ರಜತ್ ಪಾಟೀದಾರ್‌ಗೆ ಎರಡನೇ ಶತಕ
- ಕೇಂದ್ರ ವಲಯ 104 ಓವರ್‌ಗಳಲ್ಲಿ 5ಕ್ಕೆ 384 ರನ್

ಕೇಂದ್ರ ವಲಯದ ನಾಯಕ ರಜತ್ ಪಾಟೀದಾರ್ (ಬಲ) ಮತ್ತು ಯಶ್ ರಾಥೋಡ್ ಜೊತೆಯಾಟ ಚಿತ್ರ : ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಇಂದೋರ್ ಹುಡುಗ ರಜತ್ ಪಾಟೀದಾರ್ ಮತ್ತು ನಾಗಪುರದ ಆಟಗಾರ ಯಶ್ ರಾಥೋಡ್ ಜೊತೆಯಾಟದ ಭರಾಟೆಯಲ್ಲಿ ದಕ್ಷಿಣ ವಲಯ ಮಂಕಾಯಿತು. ಸ್ಪಿನ್ ಬೌಲರ್‌ಗಳ ಕೊರತೆಯು ಮೊಹಮ್ಮದ್ ಅಜರುದ್ದೀನ್ ನಾಯಕತ್ವದ ತಂಡವನ್ನು ಭಾರಿ ಹಿನ್ನಡೆಯತ್ತ ತಳ್ಳಿತು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಫೈನಲ್ ಪಂದ್ಯದ ಎರಡನೇ ದಿನದಾಟದ ಮುಕ್ತಾಯಕ್ಕೆ ಕೇಂದ್ರ ವಲಯವು ಮೊದಲ ಇನಿಂಗ್ಸ್‌ನಲ್ಲಿ 235 ರನ್‌ಗಳ ಮುನ್ನಡೆ ಸಾಧಿಸಿತು.

ಪಂದ್ಯದ ಮೊದಲ ದಿನದಾಟದಲ್ಲಿ ದಕ್ಷಿಣ ವಲಯ ತಂಡವು 149 ರನ್‌ಗಳಿಗೆ ಕುಸಿಯಲು ಕೇಂದ್ರ ತಂಡದ ಸ್ಪಿನ್ ಜೋಡಿ ಕುಮಾರ ಕಾರ್ತಿಕೇಯ ಮತ್ತು ಸಾರಾಂಶ್ ಜೈನ್ ಕಾರಣರಾಗಿದ್ದರು. ಆದರೆ ಅವರಿಬ್ಬರಷ್ಟು ಪರಿಣಾಮಕಾರಿಯಾದ ಸ್ಪಿನ್ನರ್‌ಗಳು ದಕ್ಷಿಣ ವಲಯದಲ್ಲಿ ಇಲ್ಲ. ನಂತರ ಇನಿಂಗ್ಸ್ ಆರಂಭಿಸಿದ್ದ ಕೇಂದ್ರವು ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 50 ರನ್ ಸೇರಿಸಿತ್ತು.

ದಕ್ಷಿಣ ತಂಡದ ವೇಗದ ಜೋಡಿ ಗುರ್ಜಪನೀತ್ ಸಿಂಗ್ (74ಕ್ಕೆ3) ಮತ್ತು ಕೌಶಿಕ್ (55ಕ್ಕೆ1) ಶುಕ್ರವಾರ ಬೆಳಿಗ್ಗೆ ಉತ್ತಮ ಆರಂಭ ಮಾಡಿದರು. 43 ರನ್‌ಗಳ ಅಂತರದಲ್ಲಿ ಮೂರು ವಿಕೆಟ್ ಗಳಿಸಿದರು. ಕೌಶಿಕ್ ಅವರು ಅಕ್ಷಯ್ ವಾಡಕರ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ಶುಭಂ ಶರ್ಮಾ (6) ಮತ್ತು ಅರ್ಧಶತಕ ಹೊಡೆದ ದನೀಶ್ (53; 120ಎ) ಅವರನ್ನು ಗುರ್ಜಪನೀತ್ ಅವರು ಹೆಡೆಮುರಿ ಕಟ್ಟಿದರು. ಆದರೆ ತಮ್ಮ ಮೂರನೇ ವಿಕೆಟ್ ಪಡೆಯಲು ಸುಮಾರು ಎರಡು ಗಂಟೆ ಕಾಯಬೇಕಾಯಿತು. ಇನಿಂಗ್ಸ್‌ನ 68ನೇ ಓವರ್‌ನಲ್ಲಿ ಸಿಂಗ್ ಅವರಿಗೆ ವಿಕೆಟ್ ಒಪ್ಪಿಸುವ ಮುನ್ನ ರಜತ್ ಶತಕ ಬಾರಿಸಿದರು. ಯಶ್ ರಾಥೋಡ್ ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 167 ರನ್ (205 ಎಸೆತ) ಸೇರಿಸಿದರು.

112 ಎಸೆತಗಳಲ್ಲಿ ಶತಕ ಪೂರ್ಣಗೊಳಿಸಿದ ರಜತ್ ಅವರ ಬ್ಯಾಟಿಂಗ್ ಸೊಗಸಾಗಿತ್ತು. ತಮ್ಮ ಅರ್ಧಶತಕ ಪೂರೈಸಲು ಅವರು 73 ಎಸೆತ ಆಡಿದರು. ಆದರೆ ನಂತರದ ಐವತ್ತು ರನ್‌ಗಳನ್ನು ಕೇವಲ 39 ಎಸೆತಗಳಲ್ಲಿ ಗಳಿಸಿದರು. ಮೈದಾನದ ಎಲ್ಲ ದಿಕ್ಕುಗಳಿಗೂ ಚೆಂಡನ್ನು ಕಳಿಸಿದರು.

ರಿಕಿ ಭುಯ್ ಅವರ ಬೌಲಿಂಗ್‌ನಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಅಪಾರ ಆತ್ಮವಿಶ್ವಾಸ ಅವರ ಆಟದಲ್ಲಿತ್ತು. ಅವರು ಶತಕ ಸನಿಹ ಇದ್ದಾಗಲೂ ಗುರ್ಜಪನೀತ್ ಓವರ್‌ನಲ್ಲಿ ಒಂದು ಬೌಂಡರಿ ಮತ್ತು ಸಿಕ್ಸರ್ ಎತ್ತಿದರು. ಇನ್ನೊಂದು ಬದಿಯಲ್ಲಿ ಯಶ್ ಕೂಡ ಚೆಂದದ ಆಟವಾಡಿದರು. 25 ವರ್ಷದ ಎಡಗೈ ಬ್ಯಾಟರ್ 84 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ನಂತರದ 50 ರನ್‌ಗಳನ್ನು 48 ಎಸೆತಗಳಲ್ಲಿ ಗಳಿಸಿದರು. ರಜತ್ ಔಟಾದ ನಂತರವೂ ಇನಿಂಗ್ಸ್ ಹೊಣೆ ಹೊತ್ತರು.

ಸಾರಾಂಶ್ ಜೈನ್ ಜೊತೆಗೆ ಮುರಿಯದ 6ನೇ ವಿಕೆಟ್ ಜತೆಯಾಟದಲ್ಲಿ 118 ರನ್ ಸೇರಿಸಿದ್ದಾರೆ. ಯಶ್ (ಬ್ಯಾಟಿಂಗ್ 137) ಮತ್ತು ಸಾರಾಂಶ್ (ಬ್ಯಾಟಿಂಗ್ 47) ಶನಿವಾರಕ್ಕೂ ತಮ್ಮ ಆಟ ಕಾಯ್ದಿರಿಸಿಕೊಂಡಿದ್ದಾರೆ. ಬ್ಯಾಟರ್‌ಗಳಿಗೆ ಸಹಕರಿಸುತ್ತಿರುವ ಪಿಚ್‌ನಲ್ಲಿ ಮತ್ತಷ್ಟು ರನ್‌ಗಳನ್ನು ಸೂರೆ ಮಾಡುವ ಛಲದಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ; 63 ಓವರ್‌ಗಳಲ್ಲಿ 149. ಕೇಂದ್ರ ವಲಯ: 104 ಓವರ್‌ಗಳಲ್ಲಿ 5ಕ್ಕೆ 384 (ದನೀಶ್ ಮಾಳೆವರ್ 53, ಅಕ್ಷಯ್ ವಾಡಕರ್ 22, ರಜತ್ ಪಾಟೀದಾರ್ 101, ಯಶ್ ರಾಥೋಡ್ ಬ್ಯಾಟಿಂಗ್ 137, ಸಾರಾಂಶ್ ಜೈನ್ ಬ್ಯಾಟಿಂಗ್ 47, ಗುರ್ಜಪನೀತ್ ಸಿಂಗ್ 74ಕ್ಕೆ3)

ಪಾಕಿಸ್ತಾನಕ್ಕೆ ನಿರಾಯಾಸ ಗೆಲುವು

ಏಷ್ಯಾ ಕಪ್ 2025

ಅರ್ಧಶತಕ ದಾಖಲಿಸಿದ ಮೊಹಮ್ಮದ್ ಹ್ಯಾರಿಸ್ ಎಪಿ ಚಿತ್ರ

ದುಬೈ (ಪಿಟಿಐ): ಮೊಹಮ್ಮದ್ ಹ್ಯಾರಿಸ್ (66, 43ಎ) ಅವರ ಅರ್ಧಶತಕದ ನೆರವಿನಿಂದ ಪಾಕಿಸ್ತಾನ ತಂಡ, ಏಷ್ಯಾ ಕಪ್ ಟಿ20 ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಅನನುಭವಿ ಒಮಾನ್ ವಿರುದ್ಧ 93 ರನ್‌ಗಳ ನಿರಾಯಾಸ ಗೆಲುವು ಸಾಧಿಸಿತು.

ಪಾಕಿಸ್ತಾನ ನೀಡಿದ್ದ 161 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಒಮಾನ್ ತಂಡವು 16.4 ಓವರ್‌ಗಳಲ್ಲಿ 67 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಹಮದ್ ಮಿರ್ಜಾ (27) ಹೊರತುಪಡಿಸಿ ಉಳಿದವರು ಬೇಗನೆ ಪೆವಿಲಿಯನ್ ಸೇರಿಕೊಂಡರು. ಪಾಕ್‌ನ ಸಯ್ಯದ್ ಅಯೂಬ್, ಸೂಫಿಯಾನ್ ಮುಖೀಮ್ ಮತ್ತು ಫಹೀಮ್ ಅಶ್ರಫ್ ತಲಾ ಎರಡು ವಿಕೆಟ್ ಪಡೆದರು.

ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಪಾಕ್ ತಂಡವು ಆರಂಭ ಆಟಗಾರ ಸಯಿಮ್ ಅಯೂಬ್ (0) ಅವರನ್ನು ಬೇಗನೇ ಕಳೆದುಕೊಂಡಿತು. ನಂತರ ಹ್ಯಾರಿಸ್ ಮತ್ತು ಸಾಹಿಬ್‌ಝಾದಾ ಪರ್ಹಾನ್ (29, 29ಎ) ಎರಡನೇ ವಿಕೆಟ್‌ಗೆ 85 ರನ್ ಸೇರಿಸಿ ತಂಡಕ್ಕೆ ಆಸರೆಯಾದರು.

ಈ ಹಂತದಲ್ಲಿ ಎಡಗೈ ಸ್ಪಿನ್ನರ್ ಅಮೀರ್ ಕಲೀಮ್ (31ಕ್ಕೆ3) ಪಾಕಿಸ್ತಾನ ತಂಡವನ್ನು ಕಟ್ಟಿಹಾಕಿದರು. 11ನೇ ಓವರಿನಲ್ಲಿ ಪರ್ಹಾನ್ ರಿವರ್ಸ್ ಸ್ವೀಪ್ ಯತ್ನದಲ್ಲಿ ಬೌಲ್ಡ್ ಆದರು. ನಾಯಕ ಸಲ್ಮಾನ್ ಆಘಾ ಫುಲ್ಟಾಸ್ ಎಸೆತದಲ್ಲಿ ಹಮದ್ ಮಿರ್ಜಾ ಅವರಿಗೆ ಕ್ಯಾಚಿತ್ತರು. ಕಲೀಮ್ ತಮ್ಮ ಮುಂದಿನ ಓವರಿನಲ್ಲಿ ಹ್ಯಾರಿಸ್ ಅವರ ವಿಕೆಟ್ ಕೂಡ ಪಡೆದು ಮಿಂಚಿದರು.

ಎಡಗೈ ವೇಗಿ ಶಾ ಫೈಸಲ್ (34ಕ್ಕೆ3) ಅವರು ಪಾಕಿಸ್ತಾನದ ಮಧ್ಯಮ ಕ್ರಮಾಂಕದ ಮೂರು ವಿಕೆಟ್‌ಗಳನ್ನು ಪಡೆದರು. ಪಾಕ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 160 ರನ್ ಗಳಿಸಿತು.

ಸ್ಕೋರುಗಳು: ಪಾಕಿಸ್ತಾನ: 20 ಓವರುಗಳಲ್ಲಿ 7ಕ್ಕೆ 160 (ಸಾಹಿಬ್‌ಝಾದ ಪರ್ಹಾನ್ 29, ಮೊಹಮ್ಮದ್ ಹ್ಯಾರಿಸ್ 66, ಫಖರ್ ಜಮಾನ್ ಔಟಾಗದೇ 23, ಶಾ ಫೈಸಲ್ 34ಕ್ಕೆ3, ಆಮೀರ್ ಕಲೀಮ್ 31ಕ್ಕೆ3). ಒಮಾನ್: 16.4 ಓವರ್‌ಗಳಲ್ಲಿ 67 (ಹಮ್ಮದ್ ಮಿರ್ಜಾ 27; ಸಯ್ಯದ್ ಅಯೂಬ್ 8ಕ್ಕೆ 2, ಸೂಫಿಯಾನ್ ಮುಖೀಮ್ 7ಕ್ಕೆ 2, ಫಹೀಮ್ ಅಶ್ರಫ್ 6ಕ್ಕೆ 2). **ಫಲಿತಾಂಶ:** ಪಾಕಿಸ್ತಾನಕ್ಕೆ 93 ರನ್‌ಗಳ ಜಯ

ಲಂಕಾಕ್ಕೆ ಬಾಂಗ್ಲಾ ಸವಾಲು

ಅಬುಧಾಬಿ (ಪಿಟಿಐ): ಹಾಂಗ್‌ಕಾಂಗ್ ವಿರುದ್ಧ ಸುಲಭ ಗೆಲುವು ಸಾಧಿಸಿದ ಬಾಂಗ್ಲಾದೇಶ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಶನಿವಾರ ಆರು ಬಾರಿಯ ಚಾಂಪಿಯನ್ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ನಾಯಕ ಲಿಟನ್ ದಾಸ್ ಅವರ ಅರ್ಧಶತಕದ ಬಲದಿಂದ ಬಾಂಗ್ಲಾದೇಶ ತಂಡವು ಗುರುವಾರ ನಡೆದ ತನ್ನ ಮೊದಲ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ 'ಅನನುಭವಿ' ಹಾಂಗ್‌ಕಾಂಗ್ ತಂಡವನ್ನು ಮಣಿಸಿ, ಶುಭಾರಂಭ ಮಾಡಿತ್ತು.

ಚರಿತ್ ಅಸಲಂಕಾ ನಾಯಕತ್ವದ ಲಂಕಾ ಪಡೆಯು ಗೆಲುವಿನೊಡನೆ ಅಭಿಯಾನ ಆರಂಭಿಸುವ ಛಲದಲ್ಲಿದೆ. ಗಾಯದಿಂದ ಚೇತರಿಸಿಕೊಂಡಿರುವ ಸ್ಪಿನ್ನರ್ ವನಿಂದು ಹಸರಂಗ ಮರಳಿರುವುದು ತಂಡದ ಬಲವನ್ನು ಹೆಚ್ಚಿಸಿದೆ.

ಪಂದ್ಯ ಆರಂಭ: ರಾತ್ರಿ 8

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಸೆಮಿಗೆ ಸಾತ್ವಿಕ್–ಚಿರಾಗ್ ಜೋಡಿ

ಹಾಂಗ್‌ಕಾಂಗ್ ಓಪನ್ ಬ್ಯಾಡ್ಮಿಂಟನ್: ಲಕ್ಷ್ಯ ಸೇನ್ ಮುನ್ನಡೆ

ಲಕ್ಷ್ಯ ಸೇನ್ ಆಟದ ವೈಖರಿ ಬ್ಯಾಡ್ಮಿಂಟನ್ ಚಿತ್ರ

ಹಾಂಗ್‌ಕಾಂಗ್ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಯುಷ್ ಶೆಟ್ಟಿ ಅವರನ್ನು ಮಣಿಸಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು. ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಯೂ ನಾಲ್ಕರ ಘಟ್ಟ ಪ್ರವೇಶಿಸಿತು.

ಸೇನ್ ಅವರು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ವದೇಶದ ಉದಯೋನ್ಮುಖ ಆಟಗಾರ ಆಯುಷ್ ವಿರುದ್ಧ 21–16, 17–21, 21–13 ರಿಂದ ಗೆಲುವು ಸಾಧಿಸಿದರು. ತುರುಸಿನ ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ ಸೇನ್ ಅವರು ತಮ್ಮ ಅನುಭವವನ್ನು ಬಳಸಿ ಮೇಲುಗೈ ಸಾಧಿಸಿದರು.

2023ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಕೊಡೈ ನರವೋಕಾ ಅವರಿಗೆ ಗುರುವಾರ ಆಘಾತ ನೀಡಿದ್ದ ಕನ್ನಡಿಗ ಆಯುಷ್ ಅವರು ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯ ಜೊತೆಗಾರನಿಗೆ ಮಣಿದರು.

ಲಕ್ಷ್ಯ ಅವರು ನಾಲ್ಕರ ಘಟ್ಟದಲ್ಲಿ ಚೀನಾ ತೈಪೆಯ ಶೌ ಟಿಯನ್ ಶೆನ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಸಾತ್ವಿಕ್-ಚಿರಾಗ್ ಜೋಡಿ ಮುನ್ನಡೆ: ಯಶಸ್ಸಿನ ಓಟವನ್ನು ಮುಂದುವರಿಸಿರುವ ಎಂಟನೇ ಶ್ರೇಯಾಂಕದ ಸಾತ್ವಿಕ್–ಚಿರಾಗ್ ಜೋಡಿಯು ಡಬಲ್ಸ್ ಎಂಟರ ಘಟ್ಟದ ಪಂದ್ಯದಲ್ಲಿ 21–14, 20–22, 21–16 ರಿಂದ ಮಲೇಷ್ಯಾದ ಜುನ್ಯೆದಿ ಅರಿಫ್–ರಾಯ್ ಕಿಂಗ್ ಯಾಪ್ ಅವರನ್ನು ಮಣಿಸಿತು.

ತಾಳ್ಮೆಯಿಂದಲೇ ಆಟ ಆರಂಭಿಸಿದ ಭಾರತದ ಜೋಡಿ, ಲಯ ಕಂಡುಕೊಂಡ ಮೇಲೆ ಪ್ರಬಲ ಸ್ಮ್ಯಾಶ್‌ಗಳ ಮೂಲಕ ಮೊದಲ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಮಲೇಷ್ಯಾದ ಆಟಗಾರರು ತಿರುಗೇಟು ನೀಡಿದರು. ತೀವ್ರ ಪೈಪೋಟಿಯಿಂದ ಕೂಡಿದ್ದ ಈ ಗೇಮ್‌ಅನ್ನು ಗೆದ್ದು ಸಮಬಲ ಸಾಧಿಸಿದರು. ನಿರ್ಣಾಯಕವಾಗಿದ್ದ ಮೂರನೇ ಗೇಮ್‌ನಲ್ಲಿ ಎದೆಗುಂದದೇ ಆಡಿದ ಭಾರತದ ಆಟಗಾರರು ಪೂರ್ಣ ಮೇಲುಗೈ ಸಾಧಿಸಿದರು.

ನಾಲ್ಕರ ಘಟ್ಟದಲ್ಲಿ ಈ ಜೋಡಿಯು ಚೀನಾ ತೈಪೆಯ ಶೆನ್ ಶೆಂಗ್ ಕುವಾನ್–ಲಿನ್ ಬಿಂಗ್ ವೈ ಅವರ ಸವಾಲನ್ನು ಎದುರಿಸಲಿದೆ.

ಈ ಟೂರ್ನಿಯು ಸುಮಾರು ₹4 ಕೋಟಿ ಬಹುಮಾನ ಹೊಂದಿದೆ.

ಸೌತ್ ಯುನೈಟೆಡ್ ಜಯಭೇರಿ

ಪ್ರಜಾವಾಣಿ ವಾರ್ತೆ

ಸೌತ್ ಯುನೈಟೆಡ್ ತಂಡದ ಹುಜಾಫ ಅಹ್ಮದ್ ದಾರ್ (ಎಡ) ಮತ್ತು ಎಂಎಫ್‌ಎಆರ್ ತಂಡದ ರಕ್ಷಿತ್ ಚೆಂಡಿಗಾಗಿ ಸೆಣಸಾಟ ನಡೆಸಿದರು ಚಿತ್ರ: ಬಿ.ಕೆ. ಜನಾರ್ದನ

ಬೆಂಗಳೂರು: ಸೌತ್ ಯುನೈಟೆಡ್ ಎಫ್‌ಸಿ ತಂಡವು ಶುಕ್ರವಾರ ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಲೀಗ್ ಪಂದ್ಯದಲ್ಲಿ 3–1 ಗೋಲುಗಳಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡವು 1–0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸೋಲಿಸಿತು.

ಕೊಡಗು ಎಫ್‌ಸಿ ತಂಡವು ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ಜೊತೆ ಗೋಲು ರಹಿತವಾಗಿ ಡ್ರಾ ಮಾಡಿಕೊಂಡಿತು.

ಅಗ್ರಸ್ಥಾನದಲ್ಲಿ ನಿಹಾಲ್, ಮಥಾಯಸ್

ಐಲ್ ಆಫ್ ಮ್ಯಾನ್ (ಪಿಟಿಐ): ಭಾರತದ ನಿಹಾಲ್ ಸರಿನ್ ಮತ್ತು ಜರ್ಮನಿಯ ಬ್ಲೂಬಾಮ್ ಮಥಾಯಸ್, ಫಿಡೆ ಗ್ರ್ಯಾಂಡ್ ಸ್ವಿಸ್ ಓಪನ್ ವಿಭಾಗದ ಎಂಟನೇ ಸುತ್ತಿನ ನಂತರ ತಲಾ ಆರು ಪಾಯಿಂಟ್‌ಗಳೊಡನೆ ಮುನ್ನಡೆ ಹಂಚಿಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲಿ ರಷ್ಯಾದ ಕ್ಯಾಥರಿನಾ ಲಾಗ್ನೊ (6.5) ಶುಕ್ರವಾರ ಅಗ್ರಸ್ಥಾನಕ್ಕೇರಿದರು.

ಕೇರಳದ ನಿಹಾಲ್ ಮತ್ತು ಮಥಾಯಸ್ ಮೊದಲ ಬೋರ್ಡ್‌ನಲ್ಲಿ ನಡೆದ ತಮ್ಮ ಪಂದ್ಯವನ್ನು ಡ್ರಾ ಮಾಡಿಕೊಂಡರು. ಫ್ರಾನ್ಸ್‌ನ ಅಲಿರೇಝಾ ಫಿರೋಜ, ಹ್ಯಾನ್ಸ್ ನೀಮನ್, ಅಮೆರಿಕದ ಅಭಿಮನ್ಯು ಮಿಶ್ರಾ ಸೇರಿ ಎಂಟು ಮಂದಿ ಆಟಗಾರರು ತಲಾ ಐದೂವರೆ ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ ತಮ್ಮ ಎದುರಾಳಿಗಳ ವಿರುದ್ಧ (ಕ್ರಮವಾಗಿ ರಿಚರ್ಡ್ ರ್‍ಯಾಪೋರ್ಟ್ ಮತ್ತು ಶಾಂತ್ ಸೆರ್ಗ್‌ಸ್ಯಾನ್ ವಿರುದ್ಧ) ಡ್ರಾ ಮಾಡಿಕೊಂಡಿದ್ದು ತಲಾ 5 ಅಂಕ ಹೊಂದಿದ್ದಾರೆ. ಸತತ ಹಿನ್ನಡೆ ಕಾಣುತ್ತಿರುವ ವಿಶ್ವ ಚಾಂಪಿಯನ್ ಗುಕೇಶ್ (3.5), ಮಹಿಳಾ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ (4) ಜೊತೆ ಡ್ರಾ ಮಾಡಿಕೊಂಡು ಸೋಲಿನ ಸರಪಣಿ ಕಡಿದರು.

ಟೇಬಲ್ ಟೆನಿಸ್ ಟೂರ್ನಿ 25ರಿಂದ

ಬೆಂಗಳೂರು: ಜಯನಗರ ಟೇಬಲ್ ಟೆನಿಸ್ ಸಂಸ್ಥೆ ಹಾಗೂ ಬಿ.ಎಂ.ಎಸ್ ಕಾಲೇಜು ಜಂಟಿ ಆಶ್ರಯದಲ್ಲಿ ಎಂಟನೇ ಆವೃತ್ತಿಯ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯನ್ನು ಇದೇ 25ರಿಂದ 28ರವರೆಗೆ ಆಯೋಜಿಸಲಾಗಿದೆ.

ಬಸವನಗುಡಿಯಲ್ಲಿರುವ ಬಿ.ಎಂ.ಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪಂದ್ಯಗಳು ನಡೆಯಲಿವೆ. 11, 13, 15, 17 ಮತ್ತು 19 ವರ್ಷದೊಳಗಿನ ಬಾಲಕ–ಬಾಲಕಿಯರ ಹಾಗೂ ಪುರುಷ, ಮಹಿಳೆಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧಿಗಳು ಹೆಸರು ನೋಂದಣಿಗೆ https://karnatakatabletennis.web.appಗೆ ಭೇಟಿ ನೀಡಬಹುದು. ಸೆಪ್ಟೆಂಬರ್ 20 (ಶನಿವಾರ) ಅಂತಿಮ ದಿನವಾಗಿದೆ.

ಹೆಚ್ಚಿನ ಮಾಹಿತಿಗೆ ಮೊ. 8217796386 ಅನ್ನು ಸಂಪರ್ಕಿಸಬಹುದು.

ಟೋಕಿಯೊ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಇಂದಿನಿಂದ: ಭಾರತದ 19 ಸ್ಪರ್ಧಿಗಳು ಕಣಕ್ಕೆ

ನೀರಜ್ ಚೋಪ್ರಾ ಮೇಲೆ ನಿರೀಕ್ಷೆಯ ಭಾರ

ನೀರಜ್ ಚೋಪ್ರಾ ಎಎಫ್‌ಪಿ ಸಂಗ್ರಹ ಚಿತ್ರ

ಟೋಕಿಯೊ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಜಾವೆಲಿನ್ ಥ್ರೊನಲ್ಲಿ ಇದುವರೆಗೆ ಇಬ್ಬರು ಮಾತ್ರ ಸತತವಾಗಿ ಎರಡು ಸಲ ಚಿನ್ನ ಗೆದ್ದುಕೊಂಡಿದ್ದಾರೆ. ಭಾರತದ ನೀರಜ್ ಚೋಪ್ರಾ, ಶನಿವಾರ ಆರಂಭವಾಗುವ ಈ ಪ್ರತಿಷ್ಠಿತ ಕೂಟದಲ್ಲಿ ಆ ಸಾಲಿಗೆ ಸೇರುವ ಗುರಿಯಲ್ಲಿದ್ದಾರೆ.

ಭಾರತದ 19 ಸ್ಪರ್ಧಿಗಳು ಈ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಆದರೆ, ಪದಕದ ಪ್ರಬಲ ಭರವಸೆ ಆಗಿರುವ ಕಾರಣ ನೀರಜ್ ಅವರ ಮೇಲೆ ಇಲ್ಲಿ ನಿರೀಕ್ಷೆಯ ಭಾರ ಇದೆ. 2023ರ ಬುಡಾಪೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ನೀರಜ್ 88.17 ಮೀ. ಎಸೆದು ಸ್ವರ್ಣ ವಿಜೇತರಾಗಿದ್ದರು. ಪಾಕಿಸ್ತಾನದ ಅರ್ಷದ್ ನದೀಮ್ (87.62 ಮೀ.) ಮತ್ತು ಝೆಕ್ ರಿಪಬ್ಲಿಕ್‌ನ ಯಾಕೂಬ್ ವಾಡ್ಲೆಚ್ (86.67 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದರು.

ಇದೇ 18ರಂದು ನಡೆಯುವ ಜಾವೆಲಿನ್ ಥ್ರೊ ಫೈನಲ್‌ನಲ್ಲಿ ಚಿನ್ನ ಗೆದ್ದರೆ ನೀರಜ್ ಅವರು ಸತತ ಕೂಟಗಳಲ್ಲಿ ಚಿನ್ನ ಗೆದ್ದಂತಾಗಲಿದೆ. ಈಗ ಅವರ ಕೋಚ್ ಆಗಿ ಇಲ್ಲಿಗೆ ಬಂದಿರುವ ಝೆಕ್ ದಿಗ್ಗಜ ಯಾನ್ ಜೆಲ್ನೆಝ್ನಿ (1993, 1995) ಮತ್ತು ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (2019 ಮತ್ತು 2022) ಮಾತ್ರ ಈ ಹಿಂದೆ ಸತತ ಕೂಟಗಳಲ್ಲಿ ಚಿನ್ನ ಗೆದ್ದಿದ್ದರು.

ಒಂದು ವರ್ಷದ ನಂತರ ನೀರಜ್ ಮತ್ತು ನದೀಮ್ ಮುಖಾಮುಖಿಯಾಗುತ್ತಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ತಮ್ಮನ್ನು ಎರಡನೇ ಸ್ಥಾನಕ್ಕೆ ತಳ್ಳಿದ ಪಾಕ್ ಸ್ಪರ್ಧಿಯ ವಿರುದ್ಧ ಪ್ರತಿಕಾರ ತೀರಿಸಲು ಅವರಿಗೆ ಇದು ಅವಕಾಶ ಸಹ.

ಇಲ್ಲಿಯೇ 2021ರಲ್ಲಿ ಒಲಿಂಪಿಕ್ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ ನೀರಜ್ ಅವರಿಗೆ ಈ ಬಾರಿ ಪದಕದ ಹಾದಿ ಸುಲಭವಾಗಿಲ್ಲ. ನದೀಮ್, ಪೀಟರ್ಸ್ ಜೊತೆಗೆ ಡೈಮಂಡ್ ಲೀಗ್ ನೂತನ ಚಾಂಪಿಯನ್ ಜೂಲಿಯನ್ ವೆಬರ್ ಸೇರಿದಂತೆ ದಿಗ್ಗಜ ಥ್ರೋವರ್‌ಗಳು ಕಣದಲ್ಲಿದ್ದಾರೆ. 2015ರ ವಿಶ್ವ ಚಾಂಪಿಯನ್ ಜೂಲಿಯಸ್ ಯೇಗೊ, 2012ರ ಒಲಿಂಪಿಕ್ ಚಾಂಪಿಯನ್ ಕಿಶೋರ್ನ್ ವಾಲ್ಕಾಟ್, ಅನುಭವಿ ವಾಡ್ಲೆಚ್, ಬ್ರೆಜಿಲ್‌ನ ಲೂಯಿಸ್ ಡಸಿಲ್ವ ಸಹ ಅನುಭವಿಗಳೇ.

ಜಾವೆಲಿನ್‌ನಲ್ಲಿ ಭಾರತದ ನಾಲ್ವರು ಕಣದಲ್ಲಿರುವುದು ವಿಶೇಷ. ನೀರಜ್ ಬಿಟ್ಟರೆ ಸಚಿನ್ ಯಾದವ್, ಯಶವೀರ್ ಸಿಂಗ್ ಮತ್ತು ರೋಹಿತ್ ಯಾದವ್ ಅವರೂ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಸಜ್ಜಾಗಿದ್ದಾರೆ. ಹಾಲಿ ಚಾಂಪಿಯನ್ ಆಗಿ ಚೋಪ್ರಾ ವೈಲ್ಡ್ ಕಾರ್ಡ್ ಪಡೆದಿದ್ದಾರೆ. ಉಳಿದ ಮೂವರು ರ‍್ಯಾಂಕಿಂಗ್ ಆಧಾರದಲ್ಲಿ ಅರ್ಹತೆ ಸಂಪಾದಿಸಿದ್ದಾರೆ.

ಡುಪ್ಲಾಂಟಿಸ್, ಕಿಪ್ಯೆಗಾನ್ ಮೇಲೆ ಕಣ್ಣು

ಟೋಕಿಯೊ (ರಾಯಿಟರ್ಸ್): ಪೋಲ್‌ವಾಲ್ಟ್ ದಿಗ್ಗಜ ಮೊಂಡೊ ಡುಪ್ಲಾಂಟಿಸ್ ಟೋಕಿಯೊದಲ್ಲೇ ತಮ್ಮ ಮೊದಲ ಪ್ರಮುಖ ಜಾಗತಿಕ ಪ್ರಶಸ್ತಿ ಗೆದ್ದುಕೊಂಡಿದ್ದರು. ಅದು 2021ರ ಒಲಿಂಪಿಕ್ಸ್‌ನಲ್ಲಿ. ಈಗ ಸ್ವೀಡನ್‌ನ ಈ ವಿಶ್ವದಾಖಲೆ ವೀರ ಐದು ವರ್ಷಗಳಲ್ಲಿ ಐದನೇ ಪ್ರಮುಖ ಪ್ರಶಸ್ತಿಗಾಗಿ– 20ನೇ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಶನಿವಾರ ಆರಂಭವಾಗುವ ವಿಶ್ವ ಚಾಂಪಿಯನ್‌ಷಿಪ್ 9 ದಿನಗಳ ಕಾಲ ನಡೆಯಲಿದೆ. ನಾಲ್ಕು ವರ್ಷಗಳ ಹಿಂದೆ ಜಪಾನ್ ರಾಜಧಾನಿಯಲ್ಲಿ ನಡೆದ ಒಲಿಂಪಿಕ್ಸ್– ಕೋವಿಡ್ ಪಿಡುಗಿನ ಕಾರಣ ವೈಭವ ಕಂಡಿರಲಿಲ್ಲ. ಅಥ್ಲೀಟುಗಳಿಗೆ ಕಟ್ಟುನಿಟ್ಟು ವಿಧಿಸಲಾಗಿತ್ತು. ಈಗ ಇಲ್ಲಿ ಲವಲವಿಕೆ ಮೂಡಿದೆ.

ಮಧ್ಯಮ ದೂರದ ಓಟಗಾರ್ತಿ ಫೇತ್ ಕಿಪ್ಯೆಗಾನ್, ಅಮೆರಿಕದ ಷಾಟ್‌ಪುಟ್ ಸ್ಪರ್ಧಿ ರಯಾನ್ ಕ್ರೌಸರ್ ಮತ್ತು ಮೊರಾಕೊದ ಸ್ಟೀಪಲ್‌ಚೇಸರ್ ಸೌಫಿಯಾನ್ ಎಲ್ ಬಕ್ಕಲಿ ಅವರು ಸತತ ಐದನೇ ಬಾರಿ ಕಣಕ್ಕಿಳಿದಿದ್ದಾರೆ. ಕಿಪ್ಯೆಗಾನ್ 1,500 ಮೀ. ಓಟದಲ್ಲಿ ಬಲವಾದ ಹಿಡಿತ ಸಾಧಿಸಿದ್ದಾರೆ. ಬುಡಾಪೆಸ್ಟ್‌ನಲ್ಲಿ ಅವರು 1500 ಮತ್ತು 5000 ಮೀ. ಓಟದಲ್ಲಿ ಚಾಂಪಿಯನ್ ಆಗಿದ್ದರು.

ಇತರ ಅಥ್ಲೀಟುಗಳು: ಅನ್ನು ರಾಣಿ (ಮಹಿಳೆಯರ ಜಾವೆಲಿನ್ ಥ್ರೊ), ಪಾರುಲ್ ಚೌಧರಿ (ಮಹಿಳೆಯರ 3000 ಮೀ. ಸ್ಟೀಪಲ್ ಚೇಸ್), ಮುರಳಿ ಶ್ರೀಶಂಕರ್ (ಪುರುಷರ ಲಾಂಗ್‌ಜಂಪ್), ಗುಲ್ವೀರ್ ಸಿಂಗ್ (ಪುರುಷರ 5000 ಮೀ) ಮತ್ತು ಪ್ರವೀಣ್ ಚಿತ್ರವೇಲ್ (ಪುರುಷರ ಟ್ರಿಪಲ್ ಜಂಪ್) ಅವರು ಅಂತಿಮ ಸುತ್ತಿಗೆ ತಲುಪುವ ನಿರೀಕ್ಷೆ ಹೊಂದಿದ್ದಾರೆ. ಅನ್ನು ರಾಣಿ ಅವರಿಗೆ ಇದು ಸತತ ಐದನೇ ವಿಶ್ವ ಚಾಂಪಿಯನ್‌ಷಿಪ್. 2019 ಮತ್ತು 2022ರಲ್ಲಿ ಅವರು ಅಂತಿಮ ಸುತ್ತಿಗೆ ತಲುಪಿದ್ದರು. ಇನ್ನೆರಡಲ್ಲಿ ಅರ್ಹತಾ ಸುತ್ತಿನಲ್ಲೇ ಎಡವಿದ್ದರು. ಈ ವರ್ಷ ಅವರ ಉತ್ತಮ ಥ್ರೊ 62.59 ಮೀ.ಗಳಾಗಿವೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರ ಉತ್ತಮ ಸಾಧನೆ ಏಳನೇ ಸ್ಥಾನ (2022).

ಶನಿವಾರ ಪುರುಷರ ಮತ್ತು ಮಹಿಳೆಯರ 35 ಕಿ.ಮೀ. ರೇಸ್ ವಾಕ್ ಸ್ಪರ್ಧೆಗಳೊಂದಿಗೆ ಭಾರತದ ಅಭಿಯಾನ ಆರಂಭವಾಗಲಿದೆ. ಪುರುಷರ ವಿಭಾಗದಲ್ಲಿ ರಾಮ್ ಬಾಬೂ ಮತ್ತು ಸಂದೀಪ್ ಕುಮಾರ್, ಮಹಿಳೆಯರ ವಿಭಾಗದಲ್ಲಿ ಪ್ರಿಯಾಂಕ ಗೋಸ್ವಾಮಿ ಕಣದಲ್ಲಿದ್ದಾರೆ. ಸಂಜೆ 1500 ಮೀ. ಹೀಟ್ಸ್‌ನಲ್ಲಿ ಪೂಜಾ ಸ್ಪರ್ಧಿಸಲಿದ್ದಾರೆ.

ಬೆಂಗಳೂರು ಬುಲ್ಸ್‌ಗೆ ಹ್ಯಾಟ್ರಿಕ್ ಜಯ

ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ರೇಡರ್‌ನನ್ನು ಟ್ಯಾಕಲ್ ಮಾಡಿದ ಬೆಂಗಳೂರು ಬುಲ್ಸ್ ಆಟಗಾರರು 'ಎಕ್ಸ್' ಚಿತ್ರ

ವಿಶಾಖಪಟ್ಟಣ: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಬುಲ್ಸ್ ತಂಡವು 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡವು 28–23ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು.

ಆರಂಭದ ಮೂರು ಪಂದ್ಯಗಳಲ್ಲಿ ಸೋತಿದ್ದ ಬುಲ್ಸ್ ಪಡೆ, ನಂತರದ ಮೂರು ಪಂದ್ಯಗಳಲ್ಲಿ ಜಯಭೇರಿ ಬಾರಿಸಿತು. ಒಟ್ಟು 6 ಅಂಕ ಗಳಿಸಿರುವ ಬೆಂಗಳೂರು ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಪಂದ್ಯದ ಮೊದಲಾರ್ಧದಲ್ಲಿ 7 ಅಂಕಗಳ ಮುನ್ನಡೆ (16–9) ಪಡೆದ ಬುಲ್ಸ್ ತಂಡವು ದ್ವಿತೀಯಾರ್ಧದಲ್ಲೂ ಪಾರಮ್ಯ ಮೆರೆಯಿತು. ಟ್ಯಾಕಲ್‌ನಲ್ಲೇ 13 ಅಂಕಗಳನ್ನು ಗಳಿಸಿ, ಎದುರಾಳಿ ತಂಡವನ್ನು ಕಟ್ಟಿಹಾಕಿತು.

ಪಟ್ನಾ ಪೈರೇಟ್ಸ್ ಮತ್ತು ಹರಿಯಾಣ ಸ್ಟೀಲರ್ಸ್ ವಿರುದ್ಧ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಲಿರೆಜಾ ಮಿರ್ಜೈಯನ್ ಈ ಪಂದ್ಯದಲ್ಲೂ ರೇಡಿಂಗ್ ಮೂಲಕ 8 ಅಂಕ ಕಲೆಹಾಕಿದರು. ದೀಪಕ್ ಶಂಕರ್ (5), ಸತ್ಯಪ್ಪ ಮಟ್ಟಿ (4) ಮತ್ತು ಸಂಜಯ್ ಧುಲ್ (3) ಟ್ಯಾಕಲ್‌ನಲ್ಲಿ ಮಿಂಚಿದರು.

ತಲೈವಾಸ್‌ಗೆ ಗೆಲುವು: ಮತ್ತೊಂದು ಪಂದ್ಯದಲ್ಲಿ ತಮಿಳು ತಲೈವಾಸ್ ತಂಡವು 46–36ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆಲುವು ಸಾಧಿಸಿತು.

ಕೆಎಸ್‌ಸಿಎ ಕೋಲ್ಟ್ಸ್‌ಗೆ ಗೆಲುವು

ಮೈಸೂರು: ಮೊಹಸಿನ್ ಖಾನ್ (73ಕ್ಕೆ 6) ಅವರ ಸ್ಪಿನ್ ಮೋಡಿಯ ಬಲದಿಂದ ಕೆಎಸ್‌ಸಿಎ ಕೋಲ್ಟ್ಸ್ ತಂಡವು ಆಂಧ್ರ ಕ್ರಿಕೆಟ್ ಸಂಸ್ಥೆ ವಿರುದ್ಧ 141 ರನ್‌ಗಳ ಭರ್ಜರಿ ಜಯ ಸಾಧಿಸಿತು.

ಇಲ್ಲಿನ ಎಸ್‌ಜೆಸಿಇ ಕ್ರೀಡಾಂಗಣದಲ್ಲಿ ನಡೆದ ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದ ಕಡೆಯ ದಿನವಾದ ಶುಕ್ರವಾರ ಗೆಲುವಿಗೆ 417 ರನ್ ಬೆನ್ನತ್ತಿದ ಆಂಧ್ರ ತಂಡವು 9 ವಿಕೆಟ್‌ಗೆ 275 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಕೆಎಸ್‌ಎನ್ ರಾಜು ಗಾಯದಿಂದ ಕಣಕ್ಕಿಳಿಯಲಿಲ್ಲ.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಮೈದಾನ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 106.5 ಓವರ್‌ಗಳಲ್ಲಿ 450. ಆಂಧ್ರ ಕ್ರಿಕೆಟ್ ಸಂಸ್ಥೆ: 64.3 ಓವರ್‌ಗಳಲ್ಲಿ 223. ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 48.5 ಓವರ್‌ಗಳಲ್ಲಿ 8 ವಿಕೆಟ್‌ಗೆ 189 ಡಿಕ್ಲೇರ್. ಆಂಧ್ರ ಕ್ರಿಕೆಟ್ ಸಂಸ್ಥೆ: 73.4 ಓವರ್‌ಗಳಲ್ಲಿ 9 ವಿಕೆಟ್‌ಗೆ 275 (ಕೆ. ಮಹೀಪ್ ಕುಮಾರ್ 93, ಗಿರಿನಾಥ್ ರೆಡ್ಡಿ 43. ಮೊಹಸಿನ್ ಖಾನ್ 73ಕ್ಕೆ 6). ಫಲಿತಾಂಶ: ಕೆಎಸ್‌ಸಿಎ ಕೋಲ್ಟ್ಸ್ ತಂಡಕ್ಕೆ 141 ರನ್ ಜಯ

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ, ಮೈಸೂರು: ಮೊದಲ ಇನಿಂಗ್ಸ್: ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 158.2 ಓವರ್‌ಗಳಲ್ಲಿ 8 ವಿಕೆಟ್‌ಗೆ 515 ಡಿಕ್ಲೇರ್. ಬರೋಡ ಕ್ರಿಕೆಟ್ ಸಂಸ್ಥೆ: 119.3 ಓವರ್‌ಗಳಲ್ಲಿ 440ಕ್ಕೆ ಆಲೌಟ್. ಎರಡನೇ ಇನ್ನಿಂಗ್ಸ್: ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 16. ಫಲಿತಾಂಶ: ಡ್ರಾ

ಬಿಜಿಎಸ್ ಕ್ರೀಡಾಂಗಣ: ವಿದರ್ಭ ಕ್ರಿಕೆಟ್ ಸಂಸ್ಥೆ: 383 ಮತ್ತು 18.5 ಓವರ್‌ಗಳಲ್ಲಿ 103. ಕೆಎಸ್‌ಸಿಎ ಅಧ್ಯಕ್ಷರ ಇಲೆವೆನ್: 75.3 ಓವರ್‌ಗಳಲ್ಲಿ 250 (ಅಧೋಕ್ಷ್ ಹೆಗ್ಡೆ 50; ಗಣೇಶ್ ಭೋಂಸ್ಲೆ 53ಕ್ಕೆ 4, ಲಲಿತ್ ಯಾದವ್ 46ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ.

ಆಲೂರು 1 ಕ್ರೀಡಾಂಗಣ: ತ್ರಿಪುರ ಕ್ರಿಕೆಟ್ ಸಂಸ್ಥೆ: 113.5 ಓವರ್‌ಗಳಲ್ಲಿ 314. ಚಂಡೀಗಢ ರಾಜ್ಯ ಕ್ರಿಕೆಟ್ ಸಂಸ್ಥೆ: 106 ಓವರ್‌ಗಳಲ್ಲಿ 5 ವಿಕೆಟ್‌ಗೆ 337. ಫಲಿತಾಂಶ: ಪಂದ್ಯ ಡ್ರಾ.

ಆಲೂರು 2 ಕ್ರೀಡಾಂಗಣ: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ: 136 ಮತ್ತು 125.6 ಓವರ್‌ಗಳಲ್ಲಿ 6 ವಿಕೆಟ್‌ಗೆ 388. ಗೋವಾ ಕ್ರಿಕೆಟ್ ಸಂಸ್ಥೆ: 90.3 ಓವರ್‌ಗಳಲ್ಲಿ 333. ಫಲಿತಾಂಶ: ಪಂದ್ಯ ಡ್ರಾ.

ಆರ್‌ಎಸ್‌ಐ ಕ್ರೀಡಾಂಗಣ: ಗುಜರಾತ್ ಕ್ರಿಕೆಟ್ ಸಂಸ್ಥೆ: 102.5 ಓವರ್‌ಗಳಲ್ಲಿ 262. ಮುಂಬೈ ಕ್ರಿಕೆಟ್ ಸಂಸ್ಥೆ: 75 ಓವರ್‌ಗಳಲ್ಲಿ 6 ವಿಕೆಟ್‌ಗೆ 222. ಫಲಿತಾಂಶ: ಪಂದ್ಯ ಡ್ರಾ.

ಸ್ವಿಟ್ಜರ್ಲೆಂಡ್ ವಿರುದ್ಧ ಮೇಲುಗೈ • ಸಿಂಗಲ್ಸ್ ಗೆದ್ದ ದಕ್ಷಿಣೇಶ್ವರ, ನಗಾಲ್

ಡೇವಿಸ್ ಕಪ್: ಭಾರತಕ್ಕೆ 2–0 ಮುನ್ನಡೆ

ದಕ್ಷಿಣೇಶ್ವರ ಸುರೇಶ್

ಬೀಲ್ (ಸ್ವಿಟ್ಜರ್ಲೆಂಡ್) (ಪಿಟಿಐ): ಯುವ ಟೆನಿಸ್ ಆಟಗಾರ ದಕ್ಷಿಣೇಶ್ವರ ಸುರೇಶ್ ಅವರು ಶುಕ್ರವಾರ ತಮಗಿಂತ ಮೇಲಿನ ಕ್ರಮಾಂಕದ ಜೆರೋಮ್ ಕಿಮ್ ಅವರಿಗೆ ನೇರ ಸೆಟ್‌ಗಳಿಂದ ಆಘಾತ ನೀಡಿ, ಸ್ವಿಟ್ಜರ್ಲೆಂಡ್ ವಿರುದ್ಧದ ಡೇವಿಸ್ ಕಪ್ ವಿಶ್ವ ಗುಂಪು 1ರ ಪಂದ್ಯದಲ್ಲಿ ಭಾರತಕ್ಕೆ ಶುಭಾರಂಭ ನೀಡಿದರು.

ಅದರ ಬೆನ್ನಲ್ಲೇ ಅನುಭವಿ ಆಟಗಾರ ಸುಮಿತ್ ನಗಾಲ್ ಕೂಡ ಎರಡನೇ ಸಿಂಗಲ್ಸ್ ಪಂದ್ಯ ಗೆದ್ದರು. ಹೀಗಾಗಿ, ಭಾರತಕ್ಕೆ 2–0 ಮುನ್ನಡೆ ದೊರೆಯಿತು.

ಎಟಿಪಿ ಕ್ರಮಾಂಕದಲ್ಲಿ 626ನೇ ಸ್ಥಾನದಲ್ಲಿರುವ ನೀಳಕಾಯದ ದಕ್ಷಿಣೇಶ್ವರ ಅವರು ಮೊದಲ ಸಿಂಗಲ್ಸ್ ಸ್ಪರ್ಧೆಯಲ್ಲಿ 7-6 (4) 6-3ಯಿಂದ 155ನೇ ಕ್ರಮಾಂಕದ ಆಟಗಾರನನ್ನು ಹಿಮ್ಮೆಟ್ಟಿಸಿದರು. ಈ ಮೂಲಕ ಭಾರತ ತಂಡದ ನಾಯಕ ರೋಹಿತ್ ರಾಜಪಾಲ್ ಅವರು ತಮ್ಮ ಮೇಲೆ ಇಟ್ಟಿದ್ದ ಭರವಸೆಯನ್ನೂ ದಕ್ಷಿಣೇಶ್ವರ ಉಳಿಸಿಕೊಂಡರು. ಡೇವಿಸ್ ಕಪ್‌ನಲ್ಲಿ ಚೊಚ್ಚಲ ಅವಕಾಶ ಪಡೆದಿರುವ ಮದುರೈ ಮೂಲದ ದಕ್ಷಿಣೇಶ್ವರ ಅವರು ಅಮೆರಿಕದಲ್ಲಿ ನೆಲೆಸಿದ್ದಾರೆ.

ಪಂದ್ಯದ ಮೊದಲ ಗೇಮ್‌ನಲ್ಲಿ ಭಾರತದ ಆಟಗಾರ ಕೆಲವೊಂದು ತಪ್ಪುಗಳನ್ನು ಎಸಗಿದ್ದರಿಂದ (0–40) ಎದುರಾಳಿ ಆಟಗಾರ ಮೇಲುಗೈ ಸಾಧಿಸುವ ಮುನ್ಸೂಚನೆ ಗೋಚರಿಸಿತು. ಆದರೆ, ನಂತರ ಸತತ ಐದು ಪಾಯಿಂಟ್ಸ್ ಬಾಚಿಕೊಂಡ ದಕ್ಷಿಣೇಶ್ವರ ಅವರು ಲಯ ಕಂಡುಕೊಂಡರು. ಮೊದಲ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಗಳಿಸಿದ ದಕ್ಷಿಣೇಶ್ವರ ಅವರು ಎರಡನೇ ಸೆಟ್‌ನಲ್ಲೂ ಹಿಡಿತ ಮುಂದುವರಿಸಿದರು. ಆಗಾಗ ಬಿರುಸಿನ ಹೊಡೆತ ಮತ್ತು ಭರ್ಜರಿ ಸರ್ವ್‌ಗಳ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು.

'ಮೊದಲ ಬಾರಿಗೆ ದೇಶಕ್ಕಾಗಿ ಆಡುತ್ತಿರುವುದರಿಂದ ಸಾಕಷ್ಟು ಒತ್ತಡವಿತ್ತು. ಆದರೆ, ಪರಿಸ್ಥಿತಿಯನ್ನು ಸಂಯಮದಿಂದ ನಿಭಾಯಿಸಿದೆ. ನನ್ನ ನೈಜ ಆಟದ ಪ್ರದರ್ಶನಕ್ಕೆ ಅವಕಾಶ ಸಿಕ್ಕಿತು' ಎಂದು ಗೆಲುವಿನ ಬಳಿಕ ದಕ್ಷಿಣೇಶ್ವರ ಪ್ರತಿಕ್ರಿಯಿಸಿದರು.

ನಗಾಲ್‌ಗೆ ಗೆಲುವು: 2023ರಲ್ಲಿ ಮೊರಾಕೊ ವಿರುದ್ಧದ ಪಂದ್ಯದ ನಂತರ ಡೇವಿಸ್ ಕಪ್‌ಗೆ ಮರಳಿರುವ 290ನೇ ಕ್ರಮಾಂಕದ ಸುಮಿತ್ ನಗಾಲ್ ಅವರು ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲಿ 6-3, 7-6 (4)ರಿಂದ ತನಗಿಂತ 68 ಸ್ಥಾನ ಮೇಲಿರುವ ಮಾರ್ಕ್ ಆ್ಯಂಡ್ರಿಯಾ ಹ್ಯೂಸ್ಲರ್ ಅವರನ್ನು ಮಣಿಸಿದರು.

ಬಾಕ್ಸಿಂಗ್: ಫೈನಲ್‌ಗೆ ಜಾಸ್ಮಿನ್

ಜಾಸ್ಮಿನ್

ಲಿವರ್‌ಪೂಲ್ (ಪಿಟಿಐ): ಭಾರತದ ಜಾಸ್ಮಿನ್ ಲಂಬೋರಿಯಾ ಮತ್ತು ನೂಪುರ್ ಶ್ಯೊರಾನ್ ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಫೈನಲ್ ಪ್ರವೇಶಿಸಿದರು.

ಇದಕ್ಕೆ ಮೊದಲು ಮೀನಾಕ್ಷಿ ಹೂಡಾ ಸೆಮಿಫೈನಲ್ ಪ್ರವೇಶಿಸಿಸುವ ಮೂಲಕ ಭಾರತಕ್ಕೆ ನಾಲ್ಕನೇ ಪದಕ ಖಚಿತಪಡಿಸಿದ್ದರು. ಆದರೆ, ಪುರುಷರು 12 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಬರಿಗೈಲಿ ವಾಪಸಾಗಬೇಕಾಯಿತು.

ಮಹಿಳೆಯರ 57 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಜಾಸ್ಮಿನ್ 5-0ರಿಂದ ವೆನೆಜುವೆಲಾದ ಒಮೈಲಿನ್ ಅಲ್ಕಾಲಾ ಅವರನ್ನು ಮಣಿಸಿ, ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು. ಶ್ಯೊರಾನ್ (80 + ಕೆ.ಜಿ.) ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಟರ್ಕಿಯ ಸೆಮಾ ಡುಜ್ತಾಸ್ ಅವರನ್ನು 5–0ರಿಂದ ಹಿಮ್ಮೆಟ್ಟಿಸಿದರು.

48 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದಿರುವ ಮೀನಾಕ್ಷಿ ಅವರು ಎಂಟರ ಘಟ್ಟದ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್‌ನ ಅಲೈಸ್ ಪಾಂಫ್ರೆ ಅವರನ್ನು 5–0ಯಿಂದ ಸುಲಭವಾಗಿ ಮಣಿಸಿದರು. ಮುಂದಿನ ಸುತ್ತಿನಲ್ಲಿ ಮಂಗೋಲಿಯಾದ ಲೂತ್ಸೈಖನಿ ಅಲ್ಟಾಂತ್‌ಸೆಟ್ಸೆಗ್ ಅವರ ಸವಾಲು ಎದುರಿಸಲಿದ್ದಾರೆ.

ಮೀನಾಕ್ಷಿ ಅವರು ಅಂತಿಮ ನಾಲ್ಕರ ಸುತ್ತಿನಲ್ಲಿ 2023ರ ಬೆಳ್ಳಿ ಪದಕ ವಿಜೇತ ಮಂಗೋಲಿಯಾದ ಲೂತ್ಸೈಖನಿ ಅಲ್ಟಾಂತ್‌ಸೆಟ್ಸೆಗ್ ಅವರ ಸವಾಲು ಎದುರಿಸಲಿದ್ದಾರೆ.

ಪುರುಷರಿಗೆ ನಿರಾಸೆ: ಪುರುಷರ ವಿಭಾಗದಲ್ಲಿ ಸ್ಪರ್ಧೆಯಲ್ಲುಳಿದಿದ್ದ ಭಾರತದ ಏಕೈಕ ಸ್ಪರ್ಧಿ ಜಾದುಮಣಿ ಸಿಂಗ್ ಅವರು 50 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಂಝಾರ್ ತಾಷ್ಕೆಂಬೆ (ಕಜಾಕಸ್ತಾನ) ವಿರುದ್ಧ 0–4ರಿಂದ ಪರಾಭವಗೊಂಡರು. ಅದರೊಂದಿಗೆ, ಟೂರ್ನಿಯಲ್ಲಿ ಭಾಗವಹಿಸಿದ್ದ ಭಾರತದ 10 ಪುರುಷ ಬಾಕ್ಸರ್‌ಗಳು ಪದಕ ಗೆಲ್ಲದೆ ಅಭಿಯಾನ ಮುಗಿಸಬೇಕಾಯಿತು.

SIREESH AUTO PVT LTD: SILK BOARD, BOMMASANDRA, HOSUR ROAD, RAJAJINAGAR, YELAHANKA, DEVANAHALLI**:** 8884499046. **INDIA GARAGE BANGALORE:** LALBAGH, PALACE CROSS ROAD, WHITEFIELD, CHIKKABALLAPURA**:** 9785513333. **PPS MAHINDRA**: HEBBAL, INDIRANAGAR, KALYAN NAGAR, KANAKPURA ROAD, KORAMANGALA, LAVELLE ROAD, NELAMANGALA, KOLAR: 6309555517. **ANANT CARS AUTO PVT LTD**: BANNERGHATTA ROAD, KR PURAM, MARATHAHALLI, MYSORE ROAD, MYSORE: 9900077177. **HD MOTORS**: TIPTUR, TUMKUR, CHITRADURGA: 9513353925. **SANTOSH AUTO WINGS:** BIJAPUR, BAGALKOT, JAMKHANDI, 9513353931. **SHAH MOTORS:** KALABURGI, BIDAR, RAICHUR, YADGIR: 9071524777. **SUTARIA AUTO CENTRE**: HUBLI, GADAG, HAVERI, BELGAUM, KARWAR, 8884499052. **KARNATAKA AGENCIES**: MANGALORE, UDUPI, PUTTUR, CHIKMAGALUR, HASSAN: 8884499047. **INDIA GARAGE MYSORE**: MYSORE, HUNSUR, KUVEMPUNAGAR, MADEKERI, KUSHALNAGAR, MANDYA, PONNAMPET, CHAMRAJNAGAR: 7411511684. **MAHANTH MOTORS**: SHIMOGA, DAVANGERE, CHANNAGIRI, SAGARA: 8861452525.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER
ಕ್ಲಾಸಿಫೈಡ್ಸ್

REAL ESTATE SELLING

Sites

Banashankari

AVAILABLE BANASHANKARI 6th Stage, 6th Block 30x40, W/F,Near 100" Road Budget Friendly Call Lingaraju: 9663393533

BDA SITES Available @`Banashankari 6th_Stage all_Blocks 20x30, 30x40, 40x60 50x80 In_Good Location Contact: 99722-06988

BDA SITE SALE Banashankari 6th_Stage,4th B'Block 40x60,W/F,40" Road 1Km From Talaghattapura Metro Station:9945835569

Bannerghatta Road

SALE: BDA SITE No.90 BTM 1st Stage, North Facing 40x60, 60'Road, Semi-Commercial, Adjacent to JALA BHAVAN, Approx 100Mtrs to Bannerghatta Main Road. Genuine Buyers Call: Muralidhar-9741929567

Chikkaballapura

DC CONVERTED,TOWN Planning Approved Sites for Sale at Chikkaballapur Near Isha Foundation. Contact:9008817966, 9591346969

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A_Katha, Full White. Owner: 9845088449/ 9845249799"

Kengeri

***30X40 E/F** BBMP* 'A' Khata Site-Sale KENGERI SATELLITE TOWN, Arunachalam Layout,Clear Title.₹.10000/-. 9742681666/ 9886634578

SUNCITY PROPERTY 40X60 West Rs.8500 Sft BALAJI LAYOUT Vishweshwaraiya1st BLOCK 55X40 East Rs.9500 sft Contact: 9448793428

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar- 9945119449

DIRECT OWNER Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

Mysore

GOVERNMENT EMPLOYEES Society, Ilawala, Meghalapura, 40x60, West, Allottee, Clear Title, For Sale, Immediate Registration, Contact-7795494932

POLICE LAYOUT, Lalithadripura, 40x60, West, Well Developed, Allottee, Clear Title, For Sale, Immediate Registration, Contact-7795494932

Nandini Layout

SALE 40X60 Site Near Nandhini Layout 1.5km From Metro Station @ 8500/- sqft Call 9008018844

Uttarahalli

BHCS LAYOUT Uttarahalli Road 40x60 Site with 4000 Sq.ft Building in Good Condition. 40Ft Semi-Commercial Road-9986055474

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweswariah Layout

'VISHVESWARAIAH 1ST_BLOCK 50x80_North, 6th_Block 40x60_North, 7th_Block 30x40, Good_location. 9448733456/ 7259675150"

VISHWESHWARAIAH LAYOUT 9th 50x60 NW Site. 2145 Commercial 60ft RTO Road Rs. 24000/- Sqft: 9845793121

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

Electronic City

KHB Sites
in Surya City
Near Jigani
STRRA & BMRDA
Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Nagarabhavi

40X60 BDA SITE SALE Nagarbhavi Health Layout, Oppsite Park, South Facing Semi Commercial Contact: 9980409820

Intl Airport Road

INTERNATIONAL AIRPORT Road Commercial Land 11,500 Sqft For Sale Broker's Pls Excuse Mob: 9845623970/ 9739400838

Anjanapura

ANJANAPURA BDA Site for Sale at 5th G Block 30x40sft, North facing.Contact: 9686094278

House

Sanjaynagar

NAGASHETTIHALLI SANJAYNAGAR Near Boopasandra Main Road House for Sale 30X40 South G+1 1.6 crores Negotiable 9880886377

Cookes Town

NORTH ROAD excellent location old two adjacent houses 1) 28x70, 2) 30x70 both together 58x70 for sale 26,000/ Sft Negotiable :98451-84220

Rajarajeshwari Nagar

BEML 5TH-STAGE SALE 40x60_ULTRA MODERN 5BHK HOUSE 1yr_OLD LIFT, HOME THETRE Rs.8cr NEGO SHIVU 9880004149/ 9035441234

Moodalpalya

15X40 SOUTH G+2 Building 5 Houses, East Door, SVG Nagar, Moodalapalya, E-Katha 83L Owner 9448673482

Shivajinagar And Around

800 SQFT DUPLEX HOUSE SALE VACANT POSITION LOCATED GANGENAHALLI WITH EASTHI KHATHA 56 LAKHS 9035883017

Basaweshwaranagar

3000 SQFT BUILDING SALE BBMP NEW EASTHI KHATHA VACANT POSITION READY REGISTRATION 2 CRORES 9035883017

Agricultural Land Converted

Kanakapura Road

KANAKAPURA ROAD 5acare Suitable For Layout, MALAVALLI 20acare Suitable For Farmland development Call:9741040748

Flat

Banashankari

FOR SALE New Ready to move Luxury 3 BHK 1750 sft 2.54 Cr & 2000 sft 2.90 Cr with individual E-Khatha Flats for Sale @ Banashankari 2nd stage near BDA complex Brokers excuse Call 9741868566

J P Nagar

FLRWISE _3BHK Flats 2150/2200sft,1.65cr,1.90cr/ 770sft,3bhkDplx1.70cr/ 20x30_1BHK3Units90L.1175 Sft 2BHK Flat Metro70L_ks lyt 20x40,14k/-8904210201

Uttarahalli

3 BHK_FLAT FOR SALE 1350 Sqft. North Facing, Nearby Arehalli Arch, UTTARAHALLI Kengeri Main Road. Call 7760019494

Farm House/ Land/ Resorts

Out-Station

27 ACRES land for sale in Sira Taluk, 141 KM FROM BANGALORE, 1 KM FROM NH48 (BANGALORE-MUMBAI) SUITABLE FOR WAREHOUSE INDUSTRY RESORTS. GENUINE BUYERS CALL- 9845397798

Residential/ Commercial

Devanahalli

NANDIHILLS BENGALURUNORTH 19602 Sqft converted eKhata gated 15furnished rooms rental income 6L Sale 10Cr Ph:9900106706

REAL ESTATE BUYING

Sites

Kanakapura Road

WANT SITE_40X60 (smaller/bigger site_is also_fine) at BCCHS_Layout, off_Kanakapura Road. Immediate settlement. Dr.Roopak 9880299011.

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA_Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED VISHWESHWARAIAH Layout 30x40 & 40x60 BDA Property Contact: 7899570235

Flat

General

HOSKEREHALLI Wanted 4BHK gated community_Flat 3000sft, W/N facing. Tata_Promont preferable. 3.50CR. Immediate Registration. durga824@gmail.com

Industrial & Factory

Multiple Locations

WANTED CITY Limits Private Industrial Land from 10,000sq.ft. upto 2_Acres and KIADB Land measuring 10,000sq.ft. to 4_Acres in Bangalore Urban & Rural District. Call Verna Developers, Barton Center, MG Road, BLR. 9353128035/ 9916310226.

Resedential/ Commercial

Multipal Locations

WANTED RESIDENTIAL Property 1200 to 10,000sft in Jayanagar, Basavanagudi, Chamrajpet, JP Nagar, Banashankari 2nd Stage, Koramangala and Indiranagar. Call Verna Developers, Barton Centre, MG Road. 9916310226/ 9353128035. (Brokers Excuse)

RENTAL PROPERTIES

Accommodation Available

Commercial

BANASHANKARI 6TH_STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call 9945724472

WAREHOUSE/ OFFICE_SPACE available for rent, near_Hoodi, Whitefield, Bangalore. Area Gf-20,000`sqft. 1st_floor-20,000`sqft. Call_8150943158

House

3 BHK Duplex (FF), Car Parking D Group Layout Annapurneshwari Nagar Rent 45K Negotiable: 9448505498

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

THE IDEAL HOMES CO-OPERATIVE BUILDING SOCIETY LIMITED
Ideal Homes Township, Mysore Road, Bangalore - 560 098. Ph: 28600892.
Email : ihcbs.idealhomes@gmail.com
(Reg. No. DYR 352 of 1964)

MEETING NOTICE

Notice is hereby given that the 55th Annual General Meeting of the Society will be held on **14-9-2025** (Sunday) at 11.00 a.m. in the premises of the Society's Office. We have posted the Meeting Notice to all the Members well in advance i.e., on 29-8-2025 itself. All the Members are requested to attend the Meeting.

By Order of the Board of Management
Sd/-
SECRETARY

BUSINESS

Business to Business

Business

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu- Vamshadhara Projects And Services. 9342247637.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Business Offers

Finance

ALL TYPE of Loans from Bank/ Pvt., Mortgage, MSME 30% Subsidy loans. Cibil no issue. (Freelancers, DSA, Mediators, referral welcome- good income) Ct: 9019388175

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

General

WE_BUY INDUSTRIES, Industrial Metal Scraps, Copper, Alluminium, Building Dismantle/ Demolition contract in and around Bengaluru and Karnataka immediate payment. Call Verna Metals, Barton Centre, MG Road. 9620253180.

PERSONAL

Change of Name

I, AZRA TABBASUM W/O. ABDUL RUB Hulidurga Rawoof, No. 9/10, 18th Cross, 20th main, Kapila Road, SMS layout, JP Nagar 5th phase, Bangalore-78. Have changed my name to AZRA TABBASUM, Affidavit Dated 11.09.25 Mohammed Hussain.K Bangalore.

DH DECCAN HERALD
Classifieds
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS

www.dhclassifieds.com
BOOK NOW
Book your ad with us now! For more details contact:
+91 9845114560| +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD
Classifieds
More value, more impact
ಪ್ರಜಾವಾಣಿ
EDUCATION

Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277 | 9886213331
9845114560 | 9900428036
080- 45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

VISIT

SOUTH INDIA'S LARGEST EXHIBITION FOR GIFTS SOURCING

MEX
MEX Exhibitions Pvt. Ltd.

GIFTS WORLD expo® BENGALURU

11 - 13 SEPTEMBER, 2025
Tripura Vasini, Palace Grounds, Bengaluru
Hall: A & B

8,000+ Products | 800+ Brands | 225+ Exhibitors

KEY EXHIBIT SEGMENTS
- CUSTOMIZED GIFTS & PROMOTIONAL PRODUCTS
- BEAUTY HEALTH & WELLNESS GIFTS
- HANDICRAFTS, HOME DECOR & FURNISHINGS
- GOURMET HAMPERS
- ELECTRONIC GADGETS & HOME APPLIANCES
- STATIONERY & OFFICE SUPPLIES
- INNOVATIVE GIFTING BOXES
- AWARDS & REWARDS
- HOUSEWARE & KITCHEN APPLIANCES
- LUXURY GIFTS & LIFESTYLE PRODUCTS
- PREMIUM GIFTS / GOLD & SILVER GIFTS
- CUSTOM BRANDING MACHINERY

REGISTER TO VISIT

GIFTS BY OCCASION
- CORPORATE GIFTS & PROMOTIONS
- CELEBRATION & FESTIVE GIFTS
- WEDDING GIFTS

SHOW TIMINGS
10:00 AM - 06:00 PM

Organiser
MEX Exhibitions Pvt. Ltd.

+91-11-46464848 info@mexexhibits.com
www.giftsworldexpo.com

This is a B2B trade exhibition | No Retail Sales at the Show | Infants in arms & Children below 16 years are not permitted

DH DECCAN HERALD ಪ್ರಜಾವಾಣಿ

https://dhclassifieds.com

Book your Ad in 4 Easy Steps --Select Category-- Book ad

1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

COLLATERAL

ಶಿಕ್ಷ ಸಂಕಲ್ಪ ಸೊಸೈಟಿ

ಯುವ ಸಾಧಕರಿಗೆ ಪ್ರೇರಣೆ

ಲ್ಯಾಪ್‌ಟಾಪ್ ಪ್ರದಾನ ಸಮಾರಂಭ

ಅಭಿನಂದನೆಗಳು

ಸಂಯುಕ್ತ ರಾಷ್ಟ್ರದಲ್ಲಿ ನೋಂದಾಯಿತ ಶಿಕ್ಷ ಸಂಕಲ್ಪ ಸೊಸೈಟಿಯು ಒಂದು ಲಾಭರಹಿತ ಸಂಸ್ಥೆಯಾಗಿದ್ದು, ಭಾರತದಾದ್ಯಂತ ಆರ್ಥಿಕವಾಗಿ ಹಿಂದುಳಿದಿರುವ ಸೌಲಭ್ಯವಂಚಿತ ಹಿನ್ನಲೆಯುಳ್ಳ, ಶೈಕ್ಷಣಿಕವಾಗಿ ಪ್ರತಿಭಾವಂತರಾಗಿರುವ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತದೆ. ಸಂಸ್ಥೆಯು ತನ್ನ ಪ್ರತಿಭೆ ಆಧಾರಿತ ಶಿಷ್ಯವೇತನಗಳ ಮೂಲಕ, 12ನೇ ತರಗತಿಯಲ್ಲಿ ಗರಿಷ್ಠ ಸಾಧನೆಗೈಯುವ ವಿದ್ಯಾರ್ಥಿಗಳಿಗೆ ವೃತ್ತಿಪರ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ನೆರವಾಗುತ್ತದೆ. ಸಂಸ್ಥೆಯ ಲಕ್ಷ್ಯ ಸ್ಕಾಲರ್‌ಶಿಪ್ ಪ್ರೊಗ್ರಾಮ್ ಎಂಬ ಪ್ರಮುಖ ಕಾರ್ಯಕ್ರಮವು, ವಿದ್ಯಾರ್ಥಿಗಳಿಗೆ ಕೇವಲ ಆರ್ಥಿಕ ಬೆಂಬಲ ನೀಡುವುದಷ್ಟೇ ಅಲ್ಲದೆ, ನಿಯಮಿತ ಮಾರ್ಗದರ್ಶನ, ಆಪ್ತ ಸಲಹೆ ಸೂಚನೆಗಳನ್ನು ನೀಡುತ್ತ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ, ವ್ಯಕ್ತಿತ್ವ ಮತ್ತು ವೃತ್ತಿ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಂತೆ ಸಿದ್ಧಗೊಳಿಸುತ್ತದೆ.

ಪ್ರತಿಭೆಗೆ ಪುರಸ್ಕಾರ, ಭವಿಷ್ಯಕ್ಕೆ ಬುನಾದಿ

ಶಿಕ್ಷ ಸಂಕಲ್ಪ ಸೊಸೈಟಿಯು ಸೆಪ್ಟಂಬರ್ 4, 2025ರಂದು ಬೆಂಗಳೂರಿನ ನಾಗರಭಾವಿಯಲ್ಲಿರುವ ಮಾತಾ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಶಿಷ್ಯವೇತನಕ್ಕೆ ಭಾಜನರಾದ ಇಂಜಿನಿಯರಿಂಗ್ ವಿದ್ಯಾರ್ಥಿ ಹೇಮಂತ್ ವೈ, ಉದಯ್ ರಾಜ್ ಮತ್ತು ಮನೀಷ್ ಆರ್ ಪಿ ಇವರನ್ನು ಸನ್ಮಾನಿಸಲಾಯಿತು. ಈ ಪ್ರತಿಭೆಗಳಲ್ಲಿನ ಶೈಕ್ಷಣಿಕ ಶ್ರೇಷ್ಠತೆ, ಕಠಿಣ ಸವಾಲುಗಳನ್ನು ಎದುರಿಸುವಲ್ಲಿನ ಸಾಮರ್ಥ್ಯ ಹಾಗೂ ಉನ್ನತ ಶಿಕ್ಷಣದ ಕಡೆಗಿರುವ ಅಚಲ ಶ್ರದ್ಧೆಯನ್ನು ಗುರುತಿಸಿ, ಇವರುಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು. ಇವರ ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಪ್ರಾಯೋಜಕತ್ವ ಒದಗಿಸುವಿಕೆಯನ್ನು ಕೂಡ ಸೊಸೈಟಿ ಮುಂದುವರಿಸುತ್ತದೆ.

ಈ ಕಾರ್ಯಕ್ರಮದಲ್ಲಿ ಮಾತಾ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀಮತಿ ದೇವಿಕಾ ಪಿ ಆರ್ ಮತ್ತು ಶಿಕ್ಷ ಸಂಕಲ್ಪ ಸೊಸೈಟಿಯ ಭಾರತದ ಪ್ರತಿನಿಧಿ ಶ್ರೀ ರಾಘವೇಂದ್ರ ಬಿ ರವರು ಉಪಸ್ಥಿತರಿದ್ದರು.

ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ: resolve4education.org
ಇ-ಮೇಲ್: support@resolve4education.org

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331